ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶೀಘ್ರದಲ್ಲೇ ಮಂಧಾನಾ ವಿವಾಹ

ಭಾರತ ಮಹಿಳಾ ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂಧಾನಾ ತಮ್ಮ ಬಹುಕಾಲದ ಪ್ರಿಯಕರ, ಸಂಗೀತ ಸಂಯೋಜಕ ಪಲಾಶ್ ಮುಚ್ಚಲ್ ಅವರನ್ನು ಶೀಘ್ರದಲ್ಲೇ ವಿವಾಹ ಆಗಲಿದ್ದಾರೆ. ಸದ್ಯದಲ್ಲೇ ಮಂಧಾನಾ ಇಂದೋರ್ ಸೊಸೆ ಆಗಲಿದ್ದಾರೆ ಎಂಬ ವಿಷಯವನ್ನು ಪಲಾಶ್ ಮುಚ್ಚಲ್ ಹೇಳಿಕೊಂಡಿದ್ದಾರೆ.



ದಾರಿದೀಪೋಕ್ತಿ

ಎಷ್ಟೋ ಸಲ ನೀವು ಭೇಟಿ ಮಾಡುವ ಯಶಸ್ವಿ ವ್ಯಕ್ತಿಗಳು ಭಾರೀ ಬುದ್ಧಿವಂತರು ಎಂದು ನಿಮಗೆ ಅನಿಸುವುದಿಲ್ಲ. ಆದರೆ ಅವರು ಬೇಗ ನಿರ್ಧಾರ ತೆಗೆದುಕೊಳ್ಳುವವರೂ, ರಿಸ್ಕ್ ತೆಗೆದುಕೊಳ್ಳುವವರೂ, ಪರಿಶ್ರಮ ಜೀವಿಗಳೂ ಆಗಿರುತ್ತಾರೆ. ಇವೇ ಅವರನ್ನು ಯಶಸ್ವಿ ವ್ಯಕ್ತಿಗಳನ್ನಾಗಿ ಮಾಡಿರುತ್ತವೆ.

ವಕ್ರತುಂಡೋಕ್ತಿ

ಯಾರು ಬೇಕಾದರೂ ಬರೆಯುವ ಪುಸ್ತಕದಲ್ಲಿ ಪುಟಗಳ ಸಂಖ್ಯೆ ಮಾತ್ರ ಇರುತ್ತವೆ.

ಸಂಘ ಪರಿವಾರ ಕಟ್ಟಿಹಾಕಲು ಸಿದ್ಧವಾಗಿತ್ತು ಕರಡು ವಿಧೇಯಕ

ಸಂಘದ ಚಟುವಟಿಕೆಗೆ ಕಡಿವಾಣ ಮಂತ್ರಿಗಳಿಂದಲೇ ಮೂಗುದಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ಅಧಿಕಾರಾವಧಿಯಲ್ಲಿನ ಆದೇಶವನ್ನು ಮುಂದಿಟ್ಟುಕೊಂಡು ಸಂಘ ಪರಿವಾರದ ಚಟುವಟಿಕೆಗಳನ್ನು ನಿರ್ಬಂಧಿಸಲು ಸಚಿವ ಸಂಪುಟ ತೀರ್ಮಾನಿಸುವ ಮೊದಲು, ಸಚಿವರೊಬ್ಬರು 'ಕರಡು ವಿಧೇಯಕ'ವನ್ನೇ ಸಿದ್ಧಪಡಿಸಿದ್ದರು ಎನ್ನುವ ವಿಷಯ ಇದೀಗ ಬಹಿರಂಗವಾಗಿದೆ.

ಕಳೆದ ಗುರುವಾರ ನಡೆದ ಸಚಿವ ಸಂಪುಟದಲ್ಲಿ ಸಂಘ–ಸಂಸ್ಥೆಗಳು ಸರಕಾರಿ ಜಾಗಗಳಲ್ಲಿ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಕಡ್ಡಾಯವಾಗಿ ಅನುಮತಿ ಪಡೆಯಬೇಕೆಂಬ ತೀರ್ಮಾನ ಕೈಗೊಂಡಿತ್ತು. ಆದರೆ ಈ ತೀರ್ಮಾನಕ್ಕೂ ಮೊದಲು ಕಠಿಣ ಕರಡು ವಿಧೇಯಕವೊಂದನ್ನು ಸಚಿವರೊಬ್ಬರು ಸಿದ್ಧಪಡಿಸಿಕೊಂಡು ತಂದಿದ್ದರು. ಆದರೆ ಬಹುತೇಕ ಸಚಿವರು ಈ ತೀರ್ಮಾನ ಕೈಗೊಳ್ಳುವುದು ಬೇಡ ಎನ್ನುವ ಸಲಹೆ ನೀಡಿದ್ದಾರೆ. ಆದ್ದರಿಂದ ಪ್ರತ್ಯೇಕ ವಿಧೇಯಕವನ್ನು ಜಾರಿಗೊಳಿಸುವ ಬದಲಿಗೆ, ಈ ಹಿಂದೆ ಬಿಜೆಪಿ ಸರಕಾರದ ಅವಧಿಯಲ್ಲಿ ಜಾರಿಗೊಳಿಸಿದ್ದ ವಿಧೇಯಕವನ್ನೇ ಮತ್ತೊಮ್ಮೆ ಜಾರಿಗೊಳಿಸುವ ತೀರ್ಮಾನ ಕೈಗೊಳ್ಳಲಾಯಿತು ಎಂದು ತಿಳಿದುಬಂದಿದೆ.

ಸಚಿವರು ಸಿದ್ಧಪಡಿಸಿದ್ದ ಕರಡು ಪ್ರತಿಯಲ್ಲಿ ಅನುಮತಿಯಿಲ್ಲದೇ ಕಾರ್ಯಕ್ರಮ ನಡೆಸಿದರೆ ಜಾಮೀನು ರಹಿತ ಬಂಧನ, 50 ಸಾವಿರ ದಂಡ, ಎರಡು ವರ್ಷ ಜೈಲು ಸೇರಿದಂತೆ ಹಲವು ಅಂಶಗಳನ್ನು ಅಳವಡಿಸಲಾಗಿತ್ತು. ಈ ಕರಡಿನಲ್ಲಿಯೂ ಕೇವಲ ಆರ್‌ಎಸ್‌ಎಸ್ ಎಂದು ಉಲ್ಲೇಖಿಸಿರಲಿಲ್ಲ. ಬದಲಿಗೆ ಎಲ್ಲ ಸಂಘ–ಸಂಸ್ಥೆಗಳಿಗೆ ಅನ್ವಯವಾಗುವಂತೆ ಸಿದ್ಧಪಡಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಸಂಘದ ವಿಷಯದಲ್ಲಿ ಒಂಟಿಯಾದರೆ ಖರ್ಗೆ?:

ಸಂಘ ಪರಿವಾರವನ್ನು ಟಾರ್ಗೆಟ್ ಮಾಡಿಕೊಂಡು ಸರಕಾರಿ ಜಾಗಗಳಲ್ಲಿ ಯಾವುದೇ ಸಂಘಟನೆ ಕಾರ್ಯಕ್ರಮ ನಡೆಸಲು ಪೂರ್ವಾನುಮತಿ ಕಡ್ಡಾಯಗೊಳಿಸಬೇಕು ಎಂದು ಪತ್ರ ಬರೆದಿದ್ದ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪಕ್ಷದಲ್ಲಿಯೇ ನಿರೀಕ್ಷಿತ ಬೆಂಬಲ ಸಿಕ್ಕಿಲ್ಲ ಎನ್ನಲಾಗಿದೆ. ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ಹೇರುವಂತೆ ಬರೆದ ಪತ್ರ, ಬಳಿಕ ನಡೆದ ಘಟನಾವಳಿಗಳಲ್ಲಿ ಎಲ್ಲಿಯೂ ಕಾಂಗ್ರೆಸ್ ನಾಯಕರು ಪ್ರಿಯಾಂಕ್ ಖರ್ಗೆ ಬೆಂಬಲಕ್ಕೆ ನಿಲ್ಲುತ್ತಿಲ್ಲ. ಇದು ಸರಿಯಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮುಂದೆ ಬೇಸರ ವ್ಯಕ್ತಪಡಿಸಿದ್ದರು.

→ 4

ಸರಕಾರ ಆರ್‌ಎಸ್‌ಎಸ್ ನಿಷೇಧ ಮಾಡಿಲ್ಲ. ಶಾಲಾ–ಕಾಲೇಜು ಆವರಣದಲ್ಲಿ ಸಂಘ ಸಂಸ್ಥೆಗಳು ಅನುಮತಿ ಪಡೆಯಬೇಕೆಂದು ಹೊರಡಿಸಿರುವ ಆದೇಶದಲ್ಲಿ ಆರ್‌ಎಸ್‌ಎಸ್ ಎಂದು ಎಲ್ಲಿಯೂ ಉಲ್ಲೇಖವಾಗಿಲ್ಲ. ಆದೇಶದಲ್ಲಿ ಯಾವುದೇ ಸಂಘ ಅಥವಾ ಸಂಸ್ಥೆ ಎಂದಿದೆ. 2013ರಲ್ಲಿ ಜಗದೀಶ್ ಶೆಟ್ಟರ್ ಅವರ ಬಿಜೆಪಿ ಸರಕಾರ ಆದೇಶ ಮಾಡಿದ್ದನ್ನೇ ನಾವು ಪುನರುಚ್ಚರಿಸಿದ್ದೇವೆ. ಅವರು ಮಾಡಬಹುದು, ನಾವು ಮಾಡಬಾರದೇ?

–ಸಿದ್ದರಾಮಯ್ಯ ಮುಖ್ಯಮಂತ್ರಿ

ನ್ಯಾಯಾಲಯದ ಆದೇಶದಂತೆ ಆರ್‌ಎಸ್‌ಎಸ್‌ನವರು ಅರ್ಜಿ ಸಲ್ಲಿಸಲಿ. ಸ್ಥಳೀಯ ಅಧಿಕಾರಿಗಳು ಒಪ್ಪಿಗೆ ಕೊಟ್ಟರೆ, ಕಲಬುರಗಿಗೆ ಅವರಿಗೆ ಸ್ವಾಗತ. ನ್ಯಾಯಾಲಯ ಮತ್ತೊಂದು ಅರ್ಜಿ ಸಲ್ಲಿಸಿ ಎಂದು ಹೇಳಿದೆ. ಅವರು ಮೊದಲು ಅರ್ಜಿ ಹಾಕಬೇಕಲ್ವಾ? ಅರ್ಜಿ ಹಾಕುವುದಿಲ್ಲ, ಪರವಾನಗಿ ತೆಗೆದುಕೊಳ್ಳುವುದಿಲ್ಲ ಅಂದರೆ ಹೇಗಾಗುತ್ತದೆ?

–ಪ್ರಿಯಾಂಕ್ ಖರ್ಗೆ ಸಚಿವ

ರಾಜ್ಯದೆಲ್ಲೆಡೆ ಪಥಸಂಚಲನ ಮುಕ್ತಾಯ

ಪಥಸಂಚಲನ ವಿಷಯ ಸದ್ದು ಮಾಡುತ್ತಿದ್ದಂತೆ ರಾಜ್ಯದ ಹಲವು ಭಾಗಗಳಲ್ಲಿ ಪಥ ಸಂಚಲನವನ್ನು ಆಯೋಜಿಸಲು ಆರ್‌ಎಸ್‌ಎಸ್ ಚಿಂತನೆ ನಡೆಸಿದೆ ಎಂದು ಹೇಳಲಾಗಿತ್ತು. ಆದರೆ ಸಂಘದ ಅಧಿಕೃತ ಮೂಲಗಳ ಪ್ರಕಾರ, ಈ ರೀತಿಯ ಯಾವುದೇ ಹೊಸ ಪಥ ಸಂಚಲನದ ಆಲೋಚನೆಯಿಲ್ಲ. ಆದರೆ ಚಿತ್ತಾಪುರ, ಸೇಡಂ ಹಾಗೂ ಯಡ್ರಾಮಿಯಲ್ಲಿ ಪಥ ಸಂಚಲನ ನಡೆಯದೇ ಇರುವುದರಿಂದ ಅಲ್ಲಿ ಮಾತ್ರ ಆಯೋಜನೆ ಮಾಡಲಾಗುವುದು. ಈಗಾಗಲೇ ನ.2ಕ್ಕೆ ಪಥ ಸಂಚಲನ ನಡೆಸಲು ಹೈಕೋರ್ಟ್ ಅವಕಾಶ ನೀಡಿರುವುದರಿಂದ ಸರಕಾರದ ಮಾರ್ಗಸೂಚಿಯನ್ವಯ ಅರ್ಜಿ ಸಲ್ಲಿಸಿ ಪಥ ಸಂಚಲನ ಆಯೋಜಿಸಲು ತೀರ್ಮಾನಿಸಲಾಗಿದೆ.



ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು. ಈ ವೇಳೆ ಭಗೀರಥ ಪೀಠದ ಡಾ.ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್, ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ, ಹಿಲ್‌ಸೈಡ್ ಗ್ರೂಪ್ ಆಫ್ ಇನ್ಸಿಟ್ಯೂಟ್‌ನ ಅಧ್ಯಕ್ಷ, ಕೆಪಿಸಿಸಿ ಒಬಿಸಿ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ಉಮೇಶ್ ಬಾಬು ಇದ್ದರು.

ಹಿಟ್ ಆ್ಯಂಡ್ ರನ್ ಹೇಳಿಕೆ ಆಗದಿರಲಿ: ಡಿಕೆಶಿ | ದಾಖಲೆ ಕೊಡಿ: ಪ್ರಿಯಾಂಕ್ ಖರ್ಗೆ

ಚುನಾವಣೆಗೆ ವಸೂಲಿ; ಕೈ ಕೆಂಡ

ಬೆಂಗಳೂರು: ಬಿಹಾರ ಚುನಾವಣೆಗೆ ಸರಕಾರಿ ಅಧಿಕಾರಿಗಳಿಂದ ವಸೂಲಿ ಮಾಡಲಾಗುತ್ತಿದೆ ಎನ್ನುವ ಸಂಸದ ಬಿ.ವೈ. ರಾಘವೇಂದ್ರ ಹೇಳಿಕೆಗೆ ಕಾಂಗ್ರೆಸ್ ನಾಯಕರು ತೀವ್ರ ಆಕ್ಷೇಪವ್ಯಕ್ತಪಡಿಸಿದ್ದು, ಹಿಟ್ ಆ್ಯಂಡ್ ರನ್ ಮಾಡುವುದನ್ನು ಬಿಡಲಿ ಎಂದು ವ್ಯಂಗ್ಯವಾಡಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಬಿ.ವೈ. ರಾಘವೇಂದ್ರ ಅವರು ಹಿಟ್ ಆ್ಯಂಡ್ ರನ್ ನಾಯಕರ ಪಟ್ಟಿಗೆ ಸೇರುವುದು ಬೇಡ. ಅವರ ಬಳಿ ದಾಖಲೆಗಳಿದ್ದರೆ ಅದನ್ನು ಬಿಡುಗಡೆ ಮಾಡಿ ಆರೋಪ ಮಾಡಲಿ. ಹಿಟ್ ಆ್ಯಂಡ್ ರನ್ ಮಾಡುವ ಒಂದಷ್ಟು ನಾಯಕರಿದ್ದಾರಲ್ಲಾ ಅವರಂತೆ ರಾಘವೇಂದ್ರ ಅವರು ಆಗುವುದು ಬೇಡ. ರಾಘವೇಂದ್ರ ಅವರ ಹೆಸರು ಸುಳ್ಳಿಗೆ ಮತ್ತೊಂದು ಉದಾಹರಣೆಯಂತಾಗುವುದು ಬೇಡ ಎಂದು ತಿರುಗೇಟು ನೀಡಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿ, ಬಿಜೆಪಿ ಅವರು ಅವರ ಇತಿಹಾಸದಲ್ಲಿಯೇ ವೀಕ್ ಇದ್ದಾರೆ. ಅವರ ತಂದೆ ಯಡಿಯೂರಪ್ಪ ಅವರು ದಿವಂಗತ ಅನಂತ್ ಕುಮಾರ್ ಜತೆ ವೇದಿಕೆ ಹಂಚಿಕೊಂಡಾಗ, ಕಪ್ಪ ಕೊಟ್ಟ ಮೇಲೆ ಸಿಎಂ ಮಾಡಿದ್ದಾರೆ ಎಂದು ಬಿಎಸ್‌ವೈ ಹೇಳಿದ್ದರು.

ಅದು ಸರಿಯಾಗಿ ಹೈಕಮಾಂಡ್‌ಗೆ ತಲುಪಿರಲಿಲ್ಲ ಅನಿಸುತ್ತೆ. ಸದಾನಂದಗೌಡರು, ಜಗದೀಶ್ ಶೆಟ್ಟರ್ ಅವರನ್ನು ಸಿಎಂ ಮಾಡಿದ್ದರು. ಅವರ ಪದ್ಧತಿ ಹಾಗೆ ಇರಬೇಕು. ಬಿಹಾರಕ್ಕೆ ದುಡ್ಡು ಕಳಿಸಿದ್ದರೆ ಅದರ ದಾಖಲೆ ಕೊಡಿ. ಆಪರೇಷನ್ ಕಮಲ ಆಯ್ತಲ್ಲಾ, ಎಲ್ಲಿಂದ ಬಂತು ದುಡ್ಡು? ಆಪರೇಷನ್ ಕಮಲದಿಂದ ಇಡೀ ದೇಶಕ್ಕೆ ಮಾದರಿಯಾದರು ಎಂದು ಟೀಕಿಸಿದರು.

ರಾಘವೇಂದ್ರ ಹೇಗೆ ಗೆದ್ದರು ಎಂದು ಗೊತ್ತಾ? ಬಂಗಾರಪ್ಪನವರ ಮುಂದೆ ಇವರ ಸಾಧನೆ ಏನೂ ಇಲ್ಲ. ಚುನಾವಣೆಯಲ್ಲಿ ಪೊಲೀಸ್ ಜೀಪ್ ಹಾಗೂ ಆಂಬ್ಯುಲೆನ್ಸ್‌ನಲ್ಲಿ ಹಣ ತರಿಸಿದರು. ಅವರು ಮುನ್ಸಿಪಾಲಿಟಿ ಯಿಂದ ಬಂದವರು. ಹಾಗಾಗಿ ಆ ಯೋಚನೆ, ಆ ಚಿಂತನೆ ಅವರಿಗೆ ಬಾರದೇ ಇನ್ನೇನು?

–ಮಧು ಬಂಗಾರಪ್ಪ, ಶಿಕ್ಷಣ ಸಚಿವ

ರಾಘವೇಂದ್ರ ಹೇಳಿದ್ದೇನು?

ಬಿಹಾರ ಚುನಾವಣೆ ಹೆಸರಲ್ಲಿ ಅಧಿಕಾರಿಗಳಿಂದ ಸಚಿವರು ಹಣ ವಸೂಲಿ ಮಾಡುತ್ತಿದ್ದಾರೆ. ಸಚಿವರ ವಸೂಲಿಗೆ ಅಧಿಕಾರಿಗಳು ಕಣ್ಣೀರು ಹಾಕಿಕೊಂಡು ನಮ್ಮ ಎದುರಿಗೆ ಹೇಳುತ್ತಿದ್ದಾರೆ. ವರ್ಗಾವಣೆ ದಂಧೆ ಮುಗಿದಿದೆ. ಈಗ ರಿನಿವಲ್ ಅಂತ ಎಲ್ಲಾ ಇಲಾಖೆಯ ಮಂತ್ರಿಗಳು ವಸೂಲಿ ಮಾಡಿ ಬಿಹಾರ ಚುನಾವಣೆಗೆ ಹಣ ಸಂಗ್ರಹ ಮಾಡುತ್ತಿದ್ದಾರೆ. ಈಗ ದಂಧೆ ಆಗಿದೆ. ಅದು ಬಿಹಾರಕ್ಕೆ ತಲುಪಲ್ಲ, ಅದು ಎಲ್ಲಿ ತಲುಪಬೇಕೋ ಅಲ್ಲಿಗೆ ತಲುಪುತ್ತದೆ. ಬಿಹಾರದ ಚುನಾವಣೆ ಇಟ್ಟುಕೊಂಡು ರಾಜ್ಯದಲ್ಲಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಭಾನುವಾರ ಸಂಸದ ಬಿ. ವೈ. ರಾಘವೇಂದ್ರ ಆರೋಪ ಮಾಡಿದ್ದರು.

ಸೊಂಪಾದ ಪುಟಗಳು

ನಿರ್ಬಂಧದ ತೀರ್ಮಾನ; ಲಾಭಕ್ಕಿಂತ ನಷ್ಟವೇ ಹೆಚ್ಚು!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಬಾಸ್ಟರ್ಡ್ಸ್ ಆಫ್ ಬಾಲಿವುಡ್ ಹುಯಿಲಿನ ಸುತ್ತಮುತ್ತ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ತೈಲ ಖರೀದಿ ನಿಲ್ಲಿಸುವವರೆಗೂ ಸುಂಕ ಹೆಚ್ಚಳ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿವಿಧ ದೇಶಗಳ ಮೇಲಿನ ಸುಂಕ ಸಮರ ಮುಂದುವರಿಸಿದ್ದು, ಭಾರತಕ್ಕೆ ಮತ್ತಷ್ಟು ದಂಡ ಸುಂಕ ಹಾಕುವ ಬೆದರಿಕೆ ಹಾಕಿ ದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಜತೆ ಮಾತನಾ ಡಿರುವೆ. ಭಾರತ ರಷ್ಯಾದಿಂದ ತೈಲ ಖರೀದಿ ನಿಲ್ಲಿಸಲಿದೆ ಎಂದು ಹೇಳಿದ್ದ ಟ್ರಂಪ್, ತಮ್ಮ ಮಾತು ನಡೆಯುತ್ತಿಲ್ಲ ಎಂಬ ಕಾರಣಕ್ಕೆ ಭಾರತ 'ಮಾಸಿವ್ ಟ್ಯಾರಿಫ್' (ಭಾರೀ ತೆರಿಗೆ) ಪಾವತಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.



ಒಂದು ವಾರ ಮಳೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ ರಾಜ್ಯದಲ್ಲಿ ಮುಂದಿನ ಒಂದು ವಾರ ವ್ಯಾಪಕವಾಗಿ ಮಳೆಯಾಗಲಿದ್ದು, ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಅ.21ರಿಂದ 27ರವರೆಗೆ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು, ಬಹುತೇಕ ಎಲ್ಲಾ ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೊ ಅಲರ್ಟ್ ನೀಡಿದೆ. ಮಂಗಳವಾರ ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಹಾವೇರಿ, ಗದಗ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮಳೆ ಪ್ರಮಾಣ ಅಧಿಕವಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಟ ಅಸ್ರಾನಿ ನಿಧನ



ಮುಂಬೈ: ಬಾಲಿವುಡ್‌ನ ಖ್ಯಾತ ಹಾಸ್ಯನಟ ಗೋವರ್ಧನ್ ಅಸ್ರಾನಿ (84) ಸೋಮವಾರ ನಿಧನರಾಗಿದ್ದಾರೆ. ಅಸ್ರಾನಿ ಅವರು ಬಾಲಿವುಡ್‌ನ ಯಶಸ್ವಿ ಸಿನಿಮಾ ಭೂಲ್ ಭುಲೈಯಾ ಸೇರಿದಂತೆ ಬರೋಬ್ಬರಿ 350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದರು. ಸಾವಿಗೂ ಮುನ್ನ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ದೀಪಾವಳಿ ಹಬ್ಬದ ಶುಭಾಶಯ ತಿಳಿಸಿದ್ದರು. ಅಸ್ರಾನಿ ನಿಧನಕ್ಕೆ ಬಾಲಿವುಡ್‌ನ ನಟ, ನಟಿಯರು, ನಿರ್ದೇಶಕರು, ನಿರ್ಮಾಪಕರು, ರಾಜಕೀಯ ಕ್ಷೇತ್ರದ ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

ರಾಷ್ಟ್ರಪತಿ ಮುರ್ಮು ನಾಳೆ ಶಬರಿಮಲೆಗೆ

ದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು 4 ದಿನ ಕೇರಳ ಪ್ರವಾಸ ಕೈಗೊಳ್ಳಲಿದ್ದು, ಮಂಗಳವಾರದ ಸಂಜೆ ರಾಜ್ಯ ರಾಜಧಾನಿ ತಿರುವನಂತಪುರಂ ತಲುಪ ಲಿದ್ದಾರೆ. ದೀಪಾವಳಿ ಹಬ್ಬದ ದಿನವಾದ ಬುಧವಾರ ಶಬರಿಮಲೆ ದೇವಸ್ಥಾನಕ್ಕೂ ಭೇಟಿ ನೀಡಲಿದ್ದಾರೆ. ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿಯ ದರ್ಶನ ಪಡೆದು ಆರತಿ ಮಾಡಲಿದ್ದಾರೆ. ಗುರುವಾರ ತಿರುವನಂತಪುರದ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಪ್ರತಿಮೆ ಯನ್ನು ದ್ರೌಪದಿ ಮುರ್ಮು ಅನಾವರಣಗೊಳಿಸಲಿದ್ದಾರೆ. ನಂತರ, ವರ್ಕಲಾದ ಶಿವಗಿರಿ ಮಠದಲ್ಲಿ ನಾರಾಯಣ ಗುರುಗಳ ಮಹಾಸಮಾಧಿ ಶತಮಾನೋತ್ಸವ ಉದ್ಘಾಟಿಸಲಿದ್ದಾರೆ ಎಂದು ರಾಷ್ಟ್ರಪತಿ ಭವನ ಸೋಮವಾರ ತಿಳಿಸಿದೆ.

ನೌಕಾಪಡೆಯ ಯೋಧರೊಂದಿಗೆ ದೀಪಾವಳಿ ಹಬ್ಬ ಆಚರಿಸಿದ ಪ್ರಧಾನಿ ಮೋದಿ

ಪಾಕಿಗಳ ನಿದ್ರೆಗೆಡಿಸಿದ್ದ ಐಎನ್‌ಎಸ್ ವಿಕ್ರಾಂತ್

ಪಣಜಿ: ಪ್ರಧಾನಿ ನರೇಂದ್ರ ಮೋದಿ ಗೋವಾದಲ್ಲಿರುವ ಐಎನ್‌ಎಸ್ ವಿಕ್ರಾಂತ್ ಯುದ್ಧ ನೌಕೆಯಲ್ಲಿ ಸೈನಿಕರೊಂದಿಗೆ ದೀಪಾವಳಿ ಹಬ್ಬದ ಆಚರಣೆ ಮಾಡಿದರು. ಈ ವೇಳೆ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ ಮೋದಿ, ನಮ್ಮ ಸರಕಾರವು ಭಾರತವನ್ನು ಜಗತ್ತಿನ ಅತಿದೊಡ್ಡ ಆಯುಧ ರಫ್ತು ದೇಶವನ್ನಾಗಿಸುವ ಗುರಿಯನ್ನು ಹೊಂದಿದೆ. 2014 ರಿಂದ 40ಕ್ಕೂ ಅಧಿಕ ಯುದ್ಧ ನೌಕೆ ಹಾಗೂ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಐಎನ್‌ಎಸ್ ವಿಕ್ರಾಂತ್ ಯುದ್ಧ ನೌಕೆ ಕುರಿತು ಮಾತನಾಡಿ, ಇಂದು, ಒಂದು ಕಡೆ ನನಗೆ ಅನಂತ ದಿಗಂತಗಳು ಮತ್ತು ಅನಂತ ಆಕಾಶವಿದೆ, ಮತ್ತು ಇನ್ನೊಂದು ಕಡೆ ಅನಂತ ಶಕ್ತಿಗಳನ್ನು ಸಾಕಾರಗೊಳಿಸುವ ಈ ದೈತ್ಯ ಐಎನ್‌ಎಸ್ ವಿಕ್ರಾಂತ್ ನನ್ನಲ್ಲಿದೆ. ಸಾಗರದ ನೀರಿನ ಮೇಲೆ ಸೂರ್ಯನ ಕಿರಣಗಳ ಹೊಳಪು ಧೈರ್ಯಶಾಲಿ ಸೈನಿಕರು ಬೆಳಗಿದ ದೀಪಾವಳಿ ದೀಪಗಳಂತಿದೆ. ಇಂದು ಅದ್ಭುತ ದಿನ. ಈ ದೃಶ್ಯ ಸ್ಮರಣೀಯವಾಗಿದೆ. ಇಂದು, ಒಂದು ಕಡೆ, ನನ್ನ ಬಳಿ ಸಾಗರವಿದೆ, ಮತ್ತು ಮತ್ತೊಂದೆಡೆ, ಭಾರತ ಮಾತೆಯ ಧೈರ್ಯಶಾಲಿ ಸೈನಿಕರ ಬಲ ನನ್ನಲ್ಲಿದೆ ಎಂದರು.

ಕೆಲವೇ ತಿಂಗಳುಗಳ ಹಿಂದೆ, ವಿಕ್ರಾಂತ್ ಪಾಕಿಸ್ತಾನವನ್ನು ನಿದ್ದೆಗೆಡಿಸುವಂತೆ ಮಾಡಿತು ಎಂದು ನಾವು ನೋಡಿದ್ದೇವೆ. ನೌಕಾಪಡೆಯು ಹುಟ್ಟುಹಾಕಿದ ಭಯ, ವಾಯುಪಡೆಯು ಪ್ರದರ್ಶಿಸಿದ ಅಸಾಧಾರಣ ಕೌಶಲ್ಯ ಮತ್ತು ಸೇನೆಯ ಶೌರ್ಯ, ಜತೆಗೆ ಮೂರೂ ಸೇವೆಗಳ ನಡುವಿನ ಅಸಾಧಾರಣ ಸಮನ್ವಯವು ಆಪರೇಷನ್ ಸಿಂದೂರ ಸಮಯದಲ್ಲಿ ಕೆಲವೇ ದಿನಗಳಲ್ಲಿ ಪಾಕಿಸ್ತಾನವನ್ನು ಮಂಡಿಯೂರುವಂತೆ ಮಾಡಿತು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಗೋವಾದಲ್ಲಿರುವ ಐಎನ್‌ಎಸ್ ವಿಕ್ರಾಂತ್ ಯುದ್ಧ ನೌಕೆಯಲ್ಲಿ ಸೈನಿಕರೊಂದಿಗೆ ದೀಪಾವಳಿ ಹಬ್ಬದ ಆಚರಣೆ ಮಾಡಿದರು.

ಭಾರತದ ಮೊದಲ ಸ್ಥಳೀಯ ವಿಮಾನವಾಹಕ ನೌಕೆಯಾದ ಐಎನ್‌ಎಸ್ ವಿಕ್ರಾಂತ್ ಭಾರತದ ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಸ್ವದೇಶಿ ನಿರ್ಮಿತ ಐಎನ್‌ಎಸ್ ವಿಕ್ರಾಂತ್‌ವನ್ನು (ಯುದ್ಧನೌಕೆ) ದೇಶಕ್ಕೆ ಹಸ್ತಾಂತರಿಸುವಾಗ ವಿಕ್ರಾಂತ್ ವಿಶಾಲ, ಅಗಾಧ ಮತ್ತು ಭವ್ಯವಾದದ್ದು ಎಂದು ಹೇಳಿದ್ದೆ. ಇದು ಕೇವಲ ಯುದ್ಧನೌಕೆಯಲ್ಲ 21ನೇ ಶತಮಾನದಲ್ಲಿ ಭಾರತದ ಕಠಿಣ ಪರಿಶ್ರಮ, ಪ್ರತಿಭೆ, ಸಾಮರ್ಥ್ಯ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ.

ನರೇಂದ್ರ ಮೋದಿ, ಪ್ರಧಾನಿ

ಫನ್‌ತರಂಗ

– ರಘುಪತಿ ಶೃಂಗೇರಿ –

ನಾವೇ ರೋಡ್ ಮಾಡಿಸಿಕೊಳ್ತೀವಿ ಬಿಡಿ – ಕಿರಣ್ ಮಜುಂದಾರ್ ಷಾ ನಡೆಗೆ ರಾಜ್ಯ ಸರ್ಕಾರಕ್ಕೆ ಮುಖಭಂಗ ಸುದ್ದಿ





ಸಮಾಚಾರ ಸಣ್ಣದಲ್ಲ

ಜನರಿಲ್ಲದೇ ಬಸ್ ನಿಲ್ದಾಣ ಬಿಕೋ

ಬೆಂಗಳೂರು: ದೀಪಾವಳಿ ಹಿನ್ನೆಲೆ ಬೆಂಗಳೂರಿನಲ್ಲಿದ್ದ ನಿವಾಸಿಗಳು ತಮ್ಮ ಊರುಗಳಿಗೆ ಹಿಂತಿರುಗಿದ ಹಿನ್ನೆಲೆ ಕಳೆದೆರಡು ದಿನಗಳಿಂದ ತುಂಬಿ ತುಳುಕುತ್ತಿದ್ದ ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಬಿಎಂಟಿಸಿ ಬಸ್ ನಿಲ್ದಾಣಗಳು ಸಂಪೂರ್ಣವಾಗಿ ಖಾಲಿ ಹೊಡೆಯುತ್ತಿದೆ. ಶುಕ್ರವಾರ, ಶನಿವಾರ, ಭಾನುವಾರವೇ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಮ ತಮ ಊರುಗಳು, ಪ್ರವಾಸಿತಾಣ ಹಾಗೂ ದೇವಾಲಯಗಳಿಗೆ ತೆರಳಿದ್ದು, ಕಳೆದ ನಾಲ್ಕು ದಿನಗಳಿಂದ ಬಹುತೇಕ ಬಸ್‌ಗಳು ರಶ್ ಆಗಿದ್ದು, ಸೋಮವಾರ ನಗರದಲ್ಲಿ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗಿದ್ದು, ಹಲವು ದಿನಗಳಿಂದ ಬೆಂಗಳೂರಿನಿಂದ ಹಾಸನಾಂಬ ದರ್ಶನಕ್ಕೆ ತೆರಳುವವರ ಸಂಖ್ಯೆಯು ಸಹ ಜೋರಾಗಿದ್ದು, ಈಗ ಅವರೂ ಇಲ್ಲದೆ ನಿಲ್ದಾಣಗಳು ಖಾಲಿ ಹೊಡೆಯುತ್ತಿದೆ. ಈ ಬಾರಿ ಬುಧವಾರ ದೀಪಾವಳಿ ಹಬ್ಬ ಬಂದಿದ್ದು, ಸಾಲು ಸಾಲು ರಜೆ ಹಿನ್ನೆಲೆ ಶುಕ್ರವಾರ ರಾತ್ರಿಯಿಂದಲೇ ಊರುಗಳಿಗೆ ತೆರಳಿದ್ದಾರೆ. ಇನ್ನು ಕೆಲವರು ನರಕ ಚತುರ್ದಶಿ ಹಬ್ಬವನ್ನು ಮುಗಿಸಿಕೊಂಡು ಅವರು ಕೂಡ ಊರುಗಳಿಗೆ ತೆರಳಿದ್ದು, ರಸ್ತೆಗಳು ಖಾಲಿ ಖಾಲಿಯಾಗಿದ್ದವು. ಸದಾ ಜನರಿಂದ ಗಿಜಿಗುಡುತ್ತಿದ್ದ ಮೆಜೆಸ್ಟಿಕ್, ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣ, ತುಮಕೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ಸೋಮವಾರ ವಾಹನಗಳ ಸಂಚಾರ ವಿರಳವಾಗಿತ್ತು.

ಗಣತಿದಾರರಲ್ಲಿ ನಿರಾಸಕ್ತಿ

ಬೆಂಗಳೂರು: ನಗರದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸಲು ಶೇ.15ಕ್ಕಿಂತ ಅಧಿಕ ಮನೆಗಳು ನಿರಾಕರಿಸುತ್ತಿರುವುದರಿಂದ ಗಣತಿದಾರರಿಗೆ ಸಮೀಕ್ಷೆಯ ಕುರಿತು ನಿರಾಸಕ್ತಿ ಮೂಡಿದೆ. ಬನಶಂಕರಿಯಲ್ಲಿರುವ 30 ಫ್ಲಾಟ್‌ನ ಸಮುಚ್ಚಯದಲ್ಲಿ ಕೇವಲ ಎರಡು ಮನೆಯವರು ಮಾತ್ರ ಸಹಕರಿಸಿದ್ದಾರೆ. ಇದು ಕೇವಲ ಒಂದು ಭಾಗದಲ್ಲಿ ಕೇವಲ ಇಬ್ಬರು ಮಾತ್ರ ಸಹಕರಿಸಿದ್ದು, ಕೇವಲ ಒಂದು ಘಟನೆಯಲ್ಲ ಇದು ನಗರದಾದ್ಯಂತ ನಡೆಯುತ್ತಿರುವ ಒಂದು ಮಾದರಿಯಾಗಿದೆ. ನಾವು ಕೆಲವು ಮನೆಗಳಿಗೆ ನಾಲ್ಕೈದು ಬಾರಿ ಭೇಟಿ ನೀಡಿದ್ದೇವೆ. ಅವರು ಬಾಗಿಲು ತೆರೆಯುವುದಿಲ್ಲ, ಕೆಲವರು ಅವಮಾನ ವ್ಯಕ್ತ ಪಡಿಸುತ್ತಾರೆ. ಆದರೆ ನಾವು ನಮ್ಮ ಕೆಲಸವನ್ನು ಮಾತ್ರ ಮಾಡುತ್ತಿದ್ದೇವೆ ಎಂದು ದಣಿದ ಗಣತಿದಾರರು ಹೇಳಿದರು. ಕೆಲವು ಗಣತಿದಾರರ ವಿರುದ್ಧ ಜನರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ರಾಜ್ಯದ ಹೊರಗಿನಿಂದ ಕರ್ನಾಟಕದಲ್ಲಿ ನೆಲೆಸಿರುವವರಿಂದ, ರಾಜ್ಯದ ಅಭಿವೃದ್ಧಿಯಲ್ಲಿ ಯಾವುದೇ ಸ್ಪಷ್ಟ ಪಾಲು ಇಲ್ಲ, ಹೀಗಾಗಿ ನಿಮ್ಮ ಸರಕಾರಕ್ಕೆ ಕೆಲಸವಿಲ್ಲ, ಮತ್ತು ನಿಮಗೂ ಕೆಲಸವಿಲ್ಲ ಅದಕ್ಕಾಗಿಯೇ ನೀವು ನಮಗೆ ತೊಂದರೆ ನೀಡುತ್ತಿದ್ದೀರಿ ಎಂದು ಒಬ್ಬ ವ್ಯಕ್ತಿ ಗಣತಿದಾರರ ಮೇಲೆ ಗುಡುಗಿದ್ದಾರೆ ಎಂದು ವರದಿಯಾಗಿದೆ. ಬೆಂಗಳೂರಿನಲ್ಲಿ ಶೇ.40 ಕ್ಕಿಂತ ಕಡಿಮೆ ಕೆಲಸ ಪೂರ್ಣಗೊಂಡಿರುವುದರಿಂದ, ಅಕ್ಟೋಬರ್ 24 ರಿಂದ 31 ರವರೆಗೆ ಗಡುವನ್ನು ವಿಸ್ತರಿಸಲಾಗಿದೆ.

ಕಿರುಕುಳ ಎಂದು 28 ಪುಟಗಳ ಡೆತ್‌ನೋಟ್ ಬರೆದಿಟ್ಟು ಓಲಾ ಕಂಪನಿ ನೌಕರ ಆತ್ಮಹತ್ಯೆ | ಮೃತನ ಕಟುಂಬಸ್ಥರಿಗೆ ಅಸ್ಪಷ್ಟ ಮಾಹಿತಿ

ಓಲಾ ಸಿಇಒ, ಹಿರಿಯ ಅಧಿಕಾರಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಓಲಾ ಕಂಪನಿ ನೌಕರ ಅನುಮಾನಾಸ್ಪದ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಕಂಪನಿ ಸಿಇಒ ಹಾಗೂ ಹಿರಿಯ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಿಇಓ ಭವೇಶ್, ಹಿರಿಯ ಅಧಿಕಾರಿ ಸುಬ್ರತ್ ಕುಮಾರ್ ದಾಸ್ ವಿರುದ್ಧ ದೂರು ದಾಖಲಾಗಿದೆ. ಓಲಾ ಎಲೆಕ್ಟ್ರಿಕ್ ಕಂಪನಿಯ ಹೋಮೋಲೋಗೇಷನ್ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕೆ.ಅರವಿಂದ್ ಅವರು ಚಿಕ್ಕಲ್ಲಸಂದ್ರ, ಮಂಜುನಾಥ ನಗರದ ನಿವಾಸಿ ಸೆ.28ರಂದು 11.30 ರಿಂದ 12.45ರ ನಡುವೆ ಆತಹತ್ಯೆ ಮಾಡಿಕೊಂಡಿದ್ದರು. ಅಂದು ಪೊಲೀಸರು ಯುಡಿಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು. ಈ ನಡುವೆ ಅರವಿಂದ್ ಅವರ ಖಾತೆಗೆ ಕಂಪನಿಯಿಂದ 17.46 ಲಕ್ಷ ಹಣ ಜಮೆಯಾಗಿರುವುದನ್ನು ಗಮನಿಸಿ ಕುಟುಂಬದವರು ಕಂಪನಿಯವರನ್ನು ಪ್ರಶ್ನಿಸಿದಾಗ, ಕಂಪನಿಯ ಎಚ್‌ಆರ್ ಸೇರಿದಂತೆ ಕೆಲ ಸಿಬ್ಬಂದಿ ಅಸ್ಪಷ್ಟ ಮಾಹಿತಿ ನೀಡಿದ್ದಾರೆ.

ಸಿಬ್ಬಂದಿಯ ವರ್ತನೆಯಿಂದ ಅನುಮಾನಗೊಂಡ ಕುಟುಂಬದವರು ಮನೆಯನ್ನು ಸಂಪೂರ್ಣವಾಗಿ ಪರಿಶೀಲಿಸಿದಾಗ ಸುಮಾರು 28 ಪುಟಗಳ ಡೆತ್‌ನೋಟ್ ಪತ್ತೆಯಾಗಿದೆ. ಡೆತ್‌

ನೋಟ್‌ನಲ್ಲಿ ಕೆಲಸದ ವಿಚಾರವಾಗಿ ಕಂಪನಿಯ ಹಿರಿಯ ಅಧಿಕಾರಿ ಸುಬ್ರತ್‌ಕುಮಾರ್, ಸಿಇಓ ಭವೇಶ್ ಅಗರ್ವಾಲ್ ಇವರಿಬ್ಬರೂ ತೀವ್ರ ಒತ್ತಡ ನೀಡುತ್ತಿದ್ದಾರೆ.

ನನಗೆ ಭತ್ಯೆ ಮತ್ತು ವೇತನ ನೀಡದೇ ಕಿರುಕುಳ ನೀಡುತ್ತಿರುವುದರಿಂದ ಆತಹತ್ಯೆ ಮಾಡಿಕೊಳ್ಳು ತ್ತಿದ್ದೇನೆಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿರುವುದು ಕಂಡು ಬಂದಿದೆ. ಡೆತ್ ನೋಟ್ ಆಧಾರದಲ್ಲಿ ಇದೀಗ ಅರವಿಂದ್ ಕುಟುಂಬ ದವರು ಪೊಲೀಸರಿಗೆ ದೂರು ನೀಡಿದ್ದು, ಇದೀಗ ಪೊಲೀಸರು ಕಂಪನಿಯ ಸಿಇಓ ಹಾಗೂ ಹಿರಿಯ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ದೂರಿನಲ್ಲಿ ಏನಿದೆ?

ಅರವಿಂದ್ ಅವರು ಕೋರಮಂಗಲದಲ್ಲಿ ಇರುವ ಓಲಾ ಎಲೆಕ್ನಿಕ್ ಕಂಪನಿಯ ಹೋಮೊಲೊಗೇಷನ್ ಎಂಜಿನಿಯರಿಂಗ್ ವಿಭಾಗದಲ್ಲಿ 2022ರಿಂದ ಕೆಲಸ ಮಾಡುತ್ತಿದ್ದರು. ಚಿಕ್ಕಲ್ಲಸಂದ್ರದ ಮಂಜುನಾಥ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅರವಿಂದ್ ಬರೆದಿಟ್ಟ ಮರಣಪತ್ರವು ಅವರ ಕೊಠಡಿಯಲ್ಲಿ ದೊರೆತಿದೆ. ಅದರಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಿದ್ದಾರೆ ಎಂದು ದೂರು ನೀಡಲಾಗಿದೆ. ನನ್ನ ತಮ್ಮನ ಸಾವಿನ ನಂತರ ಅಂದರೆ ಸೆ.30ರಂದು ಬ್ಯಾಂಕ್ ಖಾತೆಗೆ ಕಂಪನಿಯರು 17.46 ಲಕ್ಷ ವರ್ಗಾವಣೆ ಮಾಡಿದ್ದರು. ಅದರ ಬಗ್ಗೆ ಅನುಮಾನ ಬಂದಿತ್ತು. ಈ ಸಂಬಂಧ ಓಲಾ ಕಂಪನಿಯ ಹಿರಿಯ ಅಧಿಕಾರಿ ಸುಬ್ರತ್ ಕುಮಾರ್ ದಾಸ್ ಅವರನ್ನು ವಿಚಾರಿಸಲಾಯಿತು. ಅದಾದ ಮೇಲೆ ಕಂಪನಿಯ ಪ್ರತಿನಿಧಿಗಳಾದ ಕೃತೇಶ್ ದೇಸಾಯಿ, ಪರಮೇಶ್, ರೋಷನ್ ಅವರು ಮನೆಗೆ ಬಂದು ಅರವಿಂದ್ ಅವರ ಖಾತೆಗೆ ವರ್ಗಾವಣೆ ಮಾಡಿದ್ದ ಹಣದ ಬಗ್ಗೆ ಅಸ್ಪಷ್ಟ ಮಾಹಿತಿ ನೀಡಿ ಕಂಪನಿಯವರ ತಪ್ಪುಗಳನ್ನು ಮರೆಮಾಚಿದಂತೆ ಕಂಡುಬಂದಿತ್ತು. ಬಳಿಕ ಮರಣಪತ್ರವನ್ನು ಪರಿಶೀಲಿಸಿದಾಗ ಕಂಪನಿಯ ಹೆಡ್ ಆಫ್ ಹೋಮೊಲೇಗೇಷನ್ ಎಂಜಿನಿಯರ್ ಆಗಿರುವ ಸುಬ್ರತ್ ಕುಮಾರ್ ದಾಸ್ ಹಾಗೂ ಕಂಪನಿಯ ಮಾಲೀಕರಾದ ಭವೇಶ್ ಅಗರ್ವಾಲ್ ಅವರು ಒತ್ತಡ ಹೇರಿದ್ದರು. ಅಲ್ಲದೇ ವೇತನ, ಭತ್ಯೆ ನೀಡದೇ ಕಿರುಕುಳ ನೀಡಿದ್ದರು. ಅದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂಬುದಾಗಿ ಆ ಪತ್ರದಲ್ಲಿ ಅರವಿಂದ ಬರೆದಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ರೌಡಿಗಳ ಪುಂಡಾಟ: ಮೂವರ ಸೆರೆ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡರಾಮಣ್ಣ ಮತ್ತು ಚಿಕ್ಕಣ್ಣ

ಬಡಾವಣೆ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ಮಾರಕಾಸ್ತ್ರಗಳನ್ನು ಸಾರ್ವಜನಿಕರತ್ತ ಬೀಸಿ, ಹಲ್ಲೆ ನಡೆಸಿ ಪುಂಡಾಟ ಮೆರೆದಿದ್ದ ಮೂವರು ಆರೋಪಿಗಳನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಅಮೀನ್ ಷರೀಫ್ (24), ಸೈಯದ್ ಅರ್ಬಾಜ್ (20), ಸೈಯದ್ ಖಾದರ್ (21) ಬಂಧಿತರು. ಬಂಧಿತರಿಂದ ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ. ಬಡಾವಣೆ ನಿವಾಸಿ ಕಿರಣ್ ಎಂಬುವವರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ದೃಶ್ಯಾವಳಿ ಆಧರಿಸಿ, ಮೂವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಇಬ್ಬರು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಮಾರಕಾಸ್ತ್ರ ಹಿಡಿದು ಪುಂಡಾಟ ನಡೆಸುತ್ತಿರುವ ಬಗ್ಗೆ ಸ್ಥಳೀಯರೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಆ ಮಾಹಿತಿ ಆಧರಿಸಿ ಸ್ಥಳಕ್ಕೆ ಪೊಲೀಸರು ತೆರಳುವಷ್ಟರಲ್ಲಿ ಇಬ್ಬರು ಪರಾರಿ ಆಗಿದ್ದರು. ಉಳಿದ ಮೂವರನ್ನು ಸ್ಥಳೀಯರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಗೊತ್ತಾಗಿದೆ. ಹೆಣ್ಣೂರು ಭಾಗದಲ್ಲಿ ಡ್ರಗ್ಸ್ ತೆಗೆದುಕೊಂಡು ಹಾಗೂ ಮದ್ಯಪಾನ ಮಾಡಿ ರೌಡಿಗಳು ರಾತ್ರಿ ವೇಳೆ ಪುಂಡಾಟ ನಡೆಸುತ್ತಿದ್ದಾರೆ. ಕಳೆದ ವರ್ಷ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳಿಗೆ ರೌಡಿಗಳು ಬೆಂಕಿಹಚ್ಚಿ ಪರಾರಿ ಆಗಿದ್ದರು. ಭಾನುವಾರ ರಾತ್ರಿ ಪೊಲೀಸರ ಭಯವಿಲ್ಲದೇ ಮಾರಕಾಸ್ತ್ರ ಹಿಡಿದು ಓಡಾಟ ನಡೆಸಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಸ್ಕೂಲ್‌ಗೆ ಬಂದಿಲ್ಲವೆಂದು ಶಿಕ್ಷಕಿ ಥಳಿತ

ಬೆಂಗಳೂರು: ಸ್ಕೂಲ್‌ಗೆ ಬಂದಿಲ್ಲ ಎಂದು ವಿದ್ಯಾರ್ಥಿಗೆ ಶಾಲಾ ಪ್ರಾಂಶುಪಾಲರು, ಶಿಕ್ಷಕರು ಹಿಗ್ಗಾಮುಗ್ಗಾ ಥಳಿಸಿರುವ ಆರೋಪ ಕೇಳಿಬಂದಿದೆ. 9ನೇ ತರಗತಿ ವಿದ್ಯಾರ್ಥಿಗೆ ಪ್ರಿನ್ಸಿಪಾಲ್ ರಾಕೇಶ್ ಕುಮಾರ್ ಮತ್ತು ಶಿಕ್ಷಕರು ಹಲ್ಲೆ ಮಾಡಿರುವ ಘಟನೆ ಬೆಂಗಳೂರಿನ ಸುಂಕದಕಟ್ಟೆ ಬಳಿಯ ಖಾಸಗಿ ಶಾಲೆಯಲ್ಲಿ ನಡೆದಿದೆ.

2 ದಿನ ಶಾಲೆಗೆ ಬರದಿದ್ದಕ್ಕೆ ವಿದ್ಯಾರ್ಥಿಗೆ ಹೊಯ್ಸಳ ನಗರದಲ್ಲಿರುವ ಸೇಂಟ್ ಮೆರೀಸ್ ಪಬ್ಲಿಕ್ ಸ್ಕೂಲ್‌ನ ಪ್ರಿನ್ಸಿಪಾಲ್, ಶಿಕ್ಷಕರು ಪಿವಿಸಿ ಪೈಪ್‌ನಿಂದ ತೀವ್ರವಾಗಿ ಥಳಿಸಿದ ಆರೋಪವಿದೆ. ಅಕ್ಟೋಬರ್ 14ರಂದು ನಡೆದ ಘಟನೆ, ತಡವಾಗಿ ಬೆಳಕಿಗೆ ಬಂದಿದೆ. ಪ್ರಿನ್ಸಿಪಾಲ್ ಹಾಗೂ ಟೀಚರ್, ಬಾಲಕನಿಗೆ ಬಾಸುಂಡೆ ಬರುವಂತೆ ಹೊಡೆದು, ಸ್ಕೂಲ್‌ನ ಡಾರ್ಕ್ ರೂಂನಲ್ಲಿಟ್ಟು ಕಿರುಕುಳ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಶಾಲೆಯ ಸಿಬ್ಬಂದಿ ಹೊಡೆದ ಆಘಾತದಿಂದ ಬಾಲಕ ಇನ್ನೂ ಹೊರಬಂದಿಲ್ಲ. ಈ ಸಂಬಂಧ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ಆದರೂ ಕ್ರಮ ಕೈಗೊಳ್ಳಿಲ್ಲ ಎಂದು ವಿದ್ಯಾರ್ಥಿ ಪೋಷಕರ ಆರೋಪಿಸಿದ್ದಾರೆ

ಜಿಟಿಮಾಲ್‌ನ 3ನೇ ಮಹಡಿಯಿಂದ ಜಿಗಿದು ವ್ಯಕ್ತಿ ಸಾವು

ಬೆಂಗಳೂರು: ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದ ವ್ಯಕ್ತಿಯೋರ್ವ ಮಾಗಡಿ ರಸ್ತೆಯಲ್ಲಿರುವ ಜಿಟಿ ಮಾಲ್‌ನ ಮೂರನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ.

ಸಾಗರ್ (35) ಸಾವನ್ನಪ್ಪಿದ ವ್ಯಕ್ತಿ. ಕೆಎಚ್‌ಬಿ ಕಾಲೋನಿಯ ಪಾಪಯ್ಯ ಗಾರ್ಡನ್‌ನಲ್ಲಿ ವಾಸವಾಗಿದ್ದ. ಬೆಳಗ್ಗೆ 9.30ರ ಸುಮಾರಿಗೆ ಜಿಟಿ ಮಾಲ್‌ಗೆ ಬಂದ ಸಾಗರ್ ಮೂರನೇ ಮಹಡಿಯಿಂದ ಬಿದ್ದು ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದ್ದಾರೆ. ಅವಿವಾಹಿತನಾಗಿದ್ದ ಸಾಗರ್ ತಂದೆ ನಿವೃತ್ತ ಬ್ಯಾಂಕ್ ಉದ್ಯೋಗಿಯಾಗಿದ್ದು, ತಾಯಿ ಗೃಹಿಣಿಯಾಗಿದ್ದರು. ಈತನಿಗೆ ಓರ್ವ ಸಹೋದರಿ ಇದ್ದಾರೆ. ಸಾಗರ್ ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಓದಿ ಅನುತ್ತೀರ್ಣಗೊಂಡಿದ್ದರು. ಇದರಿಂದ ಜುಗುಪ್ಸೆ ಉಂಟಾಗಿ ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮಾನಸಿಕ ಅಸ್ವಸ್ಥೆಯಿಂದ ಬಳಲುತ್ತಿದ್ದ ಸಾಗರ್, ಕಳೆದ 10 ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಸಾಗರ್ ಕಳೆದ ವರ್ಷ ಮೆಟ್ರೊ ರೈಲು ನಿಲ್ದಾಣವೊಂದರ ಟ್ರ್ಯಾಕ್‌ನಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ್ದ. ಇದನ್ನು ಕಂಡು ಮೆಟ್ರೋ ಸಿಬ್ಬಂದಿ ಕ್ಷಣಾರ್ಧದಲ್ಲಿ ಪವರ್ ಬಟನ್ ಆಫ್ ಮಾಡಿ ರಕ್ಷಿಸಿದ್ದರು. ಇದರಿಂದ ಎಚ್ಚೆತ್ತುಗೊಂಡ ಕುಟುಂಬಸ್ಥರು ಒಬ್ಬಂಟಿಯಾಗಿ ಹೊರಗೆ ಹೆಚ್ಚು ಓಡಾಡಲು ಬಿಡುತ್ತಿರಲಿಲ್ಲ. ಇತ್ತೀಚೆಗೆ ಈತನ ಆರೋಗ್ಯದಲ್ಲಿ ಕೊಂಚ ಚೇತರಿಕೆ ಕಂಡುಬಂದಿತ್ತು. ಹೀಗಾಗಿ, ಸೋಮವಾರ ಒಬ್ಬನೇ ಮನೆಯಿಂದ ಬಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಡಿ.9ರಿಂದ ಸೂಪರ್ ಕಂಪ್ಯೂಟಿಂಗ್ ಸಮಾವೇಶ

ಬೆಂಗಳೂರು: ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿಡಾಕ್) ವತಿಯಿಂದ ಡಿ.9ರಿಂದ 13ರವರೆಗೆ ಇಲ್ಲಿನ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೂಪರ್ ಕಂಪ್ಯೂಟಿಂಗ್ ಇಂಡಿಯಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್. ಕೃಷ್ಣನ್ ಹೇಳಿದರು. ಸೂಪರ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಭಾರತವು ಪ್ರಬಲವಾಗುತ್ತಿದ್ದು, ತನ್ನದೇ ಆದ ಸೂ ಪರ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಎಸ್. ಕೃಷ್ಣನ್ ಹೇಳಿದರು.

TEJAS NETWORKS

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಟಿ ನಂಬರ್: L72900KA2000PLC026980
ನೋಂದಾಯಿತ ಕಛೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೆ ನಂ. 13, 14, 17, 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು–560 100, ಕರ್ನಾಟಕ
ದೂರವಾಣಿ: +91 80 4179 4600 | ಫ್ಯಾಕ್ಸ್: +91 80 2852 0201
ವೆಬ್‌ಸೈಟ್: www.tejasnetworks.com | ಇಮೇಲ್: corporate@tejasnetworks.com

ಅಂಚೆ ಮತಪತ್ರ ಸೂಚನೆ

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ("ಕಂಪೆನಿ") ಸದಸ್ಯರಿಗೆ ಕಂಪೆನಿಗಳ ಕಾಯ್ದೆ, 2013 ರ ಸೆಕ್ಷನ್ 108 ಮತ್ತು 110 ರ ನಿಬಂಧನೆಗಳ ಪ್ರಕಾರ, ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, (ನಿಯಮಗಳು)ರ ನಿಯಮ 20 ಮತ್ತು ನಿಯಮ 22ನ್ನು ಓದಿಕೊಂಡಂತೆ, ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಘೋಷಣೆಗಳ ಅವಶ್ಯಕತೆಗಳು) ನಿಯಮಗಳು, 2025ರ ನಿಯಮ 44, ಭಾರತೀಯ ಕಂಪೆನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡಗಳು, ಪ್ರತಿಯೊಂದನ್ನು ತಿದ್ದುಪಡಿ ಮಾಡಿದಂತೆ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ವಿವಿಧ ಸುತ್ತೋಲೆಗಳಿಗೆ ಅನುಗುಣವಾಗಿ (ವಿ–ಮತದಾನದ ಮೂಲಕ ಸಾಮಾನ್ಯ ಸಭೆಯನ್ನು ನಡೆಸಲು / ಅಂಚೆ ಮತಪತ್ರ ಪ್ರಕ್ರಿಯೆಯನ್ನು ನಡೆಸಲು), ಕಂಪೆನಿಯು ತನ್ನ ಸದಸ್ಯರ ಒಪ್ಪಿಗೆಯನ್ನು ಅಂಚೆ ಮತಪತ್ರದ ಮೂಲಕ ಮಾತ್ರ ಸದೂರ ವಿ–ಮತದಾನ ("ವಿ–ಮತದಾನ") ಪ್ರಕ್ರಿಯೆಯ ಮೂಲಕ ಈ ಕೆಳಗಿನ ಸಾಮಾನ್ಯ ನಿರ್ಣಯಕ್ಕಾಗಿ ಕಂಪೆನಿಯ ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ.

ನಿರ್ಣಯದ ವಿಧಾನ	ಸಾಮಾನ್ಯ ನಿರ್ಣಯ
ವಿವರಗಳು	ಕಂಪೆನಿಯ ನಿರ್ದೇಶಕರಾಗಿ (ಕಾರ್ಯನಿರ್ವಾಹಕೇತರ, ಸ್ವತಂತ್ರೇತರ) ಡಾ. ರಣಧೀರ್ ಠಾಕೂರ್ (DIN: 9154242) ಅವರನ್ನು ನೇಮಕ ಮಾಡಲು.

ಕಂಪೆನಿಯು, ಅಕ್ಟೋಬರ್ 17, 2025 ರಂದು, ಡಿಪಾಸಿಟರಿಯಿಂದ (ಎನ್‌ಎಸ್‌ಡಿಎಲ್/ಸಿಡಿಎಸ್‌ಎಲ್) ಸ್ವೀಕರಿಸಿದ ಸದಸ್ಯರ ನೋಂದಣಿ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರುಗಳಿರುವ ಮತ್ತು ಕಟ್–ಆಫ್ ದಿನಾಂಕ, ಅಂದರೆ ಶುಕ್ರವಾರ, 17 ಅಕ್ಟೋಬರ್ 2025 ರಂದು ಕಂಪೆನಿಯಲ್ಲಿ ಲಭ್ಯವಿರುವ ಇಮೇಲ್ ವಿಳಾಸಗಳನ್ನು ಹೊಂದಿರುವ ಎಲ್ಲಾ ಸದಸ್ಯರಿಗೆ, ದಿನಾಂಕ ಅಕ್ಟೋಬರ್ 17, 2025ರ ಅಂಚೆ ಮತಪತ್ರದ ಸೂಚನೆಯನ್ನು ಇಮೇಲ್ ಮೂಲಕ ಸೋಮವಾರ, ಅಕ್ಟೋಬರ್ 20, 2025 ರಂದು ಕಳುಹಿಸಲಾಗಿದೆ. ಅದರಂತೆ, ಈ ಅಂಚೆ ಮತಪತ್ರದ ಉದ್ದೇಶಕ್ಕಾಗಿ ಸೂಚನೆಯ ಭೌತಿಕ ಪ್ರತಿಯೊಂದಿಗೆ, ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ–ಪಾವತಿಸಿದ ವ್ಯವಹಾರ ಲಕೋಟೆಯನ್ನು ಸದಸ್ಯರಿಗೆ ಕಳುಹಿಸುವುದಿಲ್ಲ.

ಅಂಚೆ ಮತಪತ್ರದ ಸೂಚನೆಯು ಕಂಪೆನಿಯ ವೆಬ್‌ಸೈಟ್ www.tejasnetworks.comನಲ್ಲಿ ಲಭ್ಯವಿದ್ದು, ಕಂಪೆನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಬಿಎಸ್‌ಸಿ ಲಿಮಿಟೆಡ್‌ನ ವೆಬ್‌ಸೈಟ್: www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್: www.nseindia.com ನ ಸಂಬಂಧಿತ ವಿಭಾಗದಲ್ಲಿ ಹಾಗೂ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ವೆಬ್‌ಸೈಟ್: www.evoting.nsdl.com ನಲ್ಲಿ ಸೂಚನೆ ಲಭ್ಯವಿರುತ್ತದೆ.

ಕಟ್–ಆಫ್ ದಿನಾಂಕ ಅಂದರೆ, ಶುಕ್ರವಾರ, ಅಕ್ಟೋಬರ್ 17, 2025ರಂತೆ ಡಿಪಾಸಿಟರೀಸ್ (ಅಂದರೆ) ಎನ್‌ಎಸ್‌ಡಿಎಲ್ / ಸಿಡಿಎಸ್‌ಎಲ್‌ನಿಂದ ಸ್ವೀಕರಿಸಿದ ಸದಸ್ಯರ ನೋಂದಣಿ/ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿರುವ ಹೆಸರುಗಳಿಗೆ ಕಂಪೆನಿಯ ಸದಸ್ಯರು ಅಂಚೆ ಮತಪತ್ರದ ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ನಿರ್ಣಯಕ್ಕೆ ಸಂಬಂಧಿಸಿದಂತೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಚಲಾಯಿಸಲು ಅನುಕೂಲವಾಗುವಂತೆ ಸದೂರ ವಿ–ಮತದಾನವನ್ನು ಸುಗಮಗೊಳಿಸಲು ಕಂಪೆನಿಯು ಎನ್‌ಎಸ್‌ಡಿಎಲ್‌ರವರನ್ನು ನೇಮಿಸಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವವರು ಅಥವಾ ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಸೇರಿದಂತೆ ಸದಸ್ಯರು ಅಕ್ಟೋಬರ್ 17, 2025ರ ಅಂಚೆ ಮತಪತ್ರ ಸೂಚನೆಯಲ್ಲಿ ಉಲ್ಲೇಖಿಸಲಾದ ಸೂಚನೆಗಳನ್ನು ಅನುಸರಿಸುವ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು.

ಸದೂರ ವಿ–ಮತದಾನದ ಅವಧಿಯು ಶುಕ್ರವಾರ, ಅಕ್ಟೋಬರ್ 24, 2025ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಮತ್ತು ಶನಿವಾರ, ನವೆಂಬರ್ 22, 2025ರಂದು ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ಸದೂರ ವಿ–ಮತದಾನವನ್ನು ತಿಳಿಸಿದ ದಿನಾಂಕ ಮತ್ತು ಸಮಯದ ನಂತರ ಅನುಮತಿಸಲಾಗುವುದಿಲ್ಲ. ಮತದಾನಕ್ಕಾಗಿ ಸದೂರ ವಿ–ಮತದಾನ ಮಾಡ್ಯೂಲ್ ಅನ್ನು ನಂತರ ನಿಷ್ಕ್ರಿಯಗೊಳಿಸಲಾಗುವುದು. ಒಮ್ಮೆ ಠರಾವಿನ ಮೇಲೆ ಮತವನ್ನು ಸದಸ್ಯರು ಚಲಾಯಿಸಿದರೆ, ತದನಂತರ ಅದನ್ನು ಬದಲಾಯಿಸಲು ಸದಸ್ಯರಿಗೆ ಅನುಮತಿಸಲಾಗುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಅಂದರೆ ಶುಕ್ರವಾರ, ಅಕ್ಟೋಬರ್ 17, 2025ರಂದು ಕಂಪೆನಿಯ ಒಟ್ಟು ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿನ ಅವರ ಷೇರುಗಳಿಗೆ ಅನುಗುಣವಾಗಿರುತ್ತವೆ.

ಮಂಡಳಿಯು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಬದ್ಧ ಹಾಗೂ ಪಾರದರ್ಶಕವಾಗಿ ನಡೆಸಲು ಶ್ರೀ ವಿ. ಶ್ರೀಧರನ್ (ಎಫ್‌ಸಿಎಸ್ ಸಂಖ್ಯೆ 2347; ಸಿಪಿ ಸಂಖ್ಯೆ 833) ಅಥವಾ ಅವರ ಅನುಪಸ್ಥಿತಿಯಲ್ಲಿ, ಮೆ॥ ವಿ ಶ್ರೀಧರನ್ ಅಂಡ್ ಅಸೋಸಿಯೇಟ್ಸ್, ಪ್ರಾಕ್ಟೀಸಿಂಗ್ ಕಂಪೆನಿ ಕಾರ್ಯದರ್ಶಿಗಳಾದ ಶ್ರೀ ಪ್ರದೀಪ್ ಬಿ ಕುಲಕರ್ಣಿ (ಎಫ್‌ಸಿಎಸ್ ಸಂಖ್ಯೆ 7260; ಸಿಪಿ ಸಂಖ್ಯೆ 7835) ಅವರನ್ನು ಪರಿಶೀಲಕರನ್ನಾಗಿ (ಸ್ಕ್ರುಟಿನೈಜರ್) ನೇಮಿಸಿದೆ.

ಅಂಚೆ ಮತಪತ್ರದ ಫಲಿತಾಂಶವನ್ನು ವಿ–ಮತದಾನ ಅವಧಿಯು ಮುಗಿದ 2 (ಎರಡು) ಕೆಲಸದ ದಿನಗಳಲ್ಲಿ ಪ್ರಕಟಿಸಲಾಗುವುದು ಮತ್ತು ಪರಿಶೀಲಕರ ವರದಿಯೊಂದಿಗೆ ಕಂಪೆನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು, ಸ್ಟಾಕ್‌ಎಕ್ಸ್‌ಚೇಂಜ್‌ಗಳಿಗೆ ತಿಳಿಸಲಾಗುವುದು ಮತ್ತು ಕಂಪೆನಿಯ ವೆಬ್‌ಸೈಟ್ www.tejasnetworks.com ನಲ್ಲಿಯೂ ಸಹ ಅಪ್‌ಲೋಡ್ ಮಾಡಲಾಗುವುದು.

ವಿ–ಮತದಾನಕ್ಕೆ ಸಂಬಂಧಿಸಿದಂತೆ, ಯಾವುದೇ ಪ್ರಶ್ನೆಗಳು ಅಥವಾ ಸಮಸ್ಯೆಗಳು ಅಥವಾ ತೊಂದರೆಗಳಿದ್ದಲ್ಲಿ, ಸದಸ್ಯರು www.evoting.nsdl.comನ ಹೆಲ್ಪ್ / ಎಫ್‌ಎಕ್ಯೂ ವಿಭಾಗದಲ್ಲಿ ಅಥವಾ ಟೋಲ್ ಫ್ರೀ ಸಂಖ್ಯೆ: 1800–1020–990 / 1800–224–430ಗೆ ಕರೆ ಮಾಡಬಹುದು ಅಥವಾ evoting@nsdl.co.in ನಲ್ಲಿ ವಿನಂತಿಯನ್ನು ಕಳುಹಿಸಬಹುದು ಅಥವಾ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ಉಪ ವ್ಯವಸ್ಥಾಪಕರಾದ ಫಲ್ಗುಣಿ ಚಕ್ರವರ್ತಿರವರನ್ನು FalguniC@nsdl.com ಅಥವಾ ದೂರವಾಣಿ ಸಂಖ್ಯೆ: +91–22–2499 4545ರ ಮೂಲಕ ಸಂಪರ್ಕಿಸಬಹುದು. ಪರ್ಯಾಯವಾಗಿ, ಸದಸ್ಯರು ಕಂಪೆನಿಯ ಕಂಪೆನಿ ಕಾರ್ಯದರ್ಶಿಗೆ corporate@tejasnetworks.com ನಲ್ಲಿ ಬರೆಯಬಹುದು ಅಥವಾ ದೂರವಾಣಿ ಸಂಖ್ಯೆ: +91–80–41876400 ಮೂಲಕ ಸಂಪರ್ಕಿಸಬಹುದು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/–
ಅನಂತ ಮೂರ್ತಿ ಎನ್
ಕಂಪೆನಿ ಕಾರ್ಯದರ್ಶಿ & ಕಂಪ್ಲೈನ್ಸ್ ಅಧಿಕಾರಿ
ಐಸಿಎಸ್‌ಐ ಸದಸ್ಯತ್ವ ಸಂಖ್ಯೆ: ಎ–17134

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 20, 2025

ಮಕ್ಕಳು ಪಟಾಕಿ ಸಿಡಿಸುವಾಗ ದೊಡ್ಡವರು ಗಮನ ಹರಿಸಲು ಸಲಹೆ

ಪಟಾಕಿ ಸಿಡಿತ; 11ಮಕ್ಕಳ ಕಣ್ಣಿಗೆ ಗಾಯ

ಬೆಂಗಳೂರು: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸುವಾಗ ಮೂರು ವರ್ಷದ ಮಗು ಸೇರಿದಂತೆ 11 ಮಕ್ಕಳು ಗಾಯಗೊಂಡಿದ್ದಾರೆ. ನಗರದ ಮಿಂಟೋ ಆಸ್ಪತ್ರೆಯಲ್ಲಿ ಇಬ್ಬರಿಗೆ, ಶೇಖರ್ ಕಣ್ಣಿನ ಆಸ್ಪತ್ರೆಯಲ್ಲಿ ಐವರು ಮಕ್ಕಳಿಗೆ ಹಾಗೂ ನಾರಾಯಣ ನೇತ್ರಾಲಯದಲ್ಲಿ ಒಬ್ಬ ಹಿರಿಯ ನಾಗರಿಕ ಸೇರಿಂತೆ ಒಟ್ಟು 11 ಜನರಿಗೆ ಚಿಕಿತ್ಸೆ ನೀಡಲಾಗಿದೆ. ಮನೆಯಲ್ಲಿ ಪಟಾಕಿ ಹಚ್ಚುವಾಗ ಮೂರು ವರ್ಷದ ಬಾಲಕನ ಎರಡೂ ಕಣ್ಣುಗ್ಗಳಿಗೆ ಪಟಾಕಿ ಹೊಗೆಯ ಜತೆಗೆ ಸಣ್ಣ ಕಿಡಿಗಳು ತಾಗಿದ ಹಿನ್ನೆಲೆಯಲ್ಲಿ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆಗೆ ನೀಡಲಾಗಿದೆ. ಕಣ್ಣುಗಳನ್ನು ತೊಳೆದು ಔಷಧಗಳನ್ನು ನೀಡಲಾಗಿದ್ದು, ಹೆಚ್ಚಿನ ಆರೈಕೆ ನೀಡಲಾಗುತ್ತಿದೆ ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ. ಮಿಂಟೋ ಆಸ್ಪತ್ರೆಗೆ ಚಿಕಿತ್ಸೆ ಪಡೆದ

12 ವರ್ಷದ ಬಾಲಕನೋರ್ವ ಪಟಾಕಿ ಸಿಡಿಸುವಾಗ ಕಣ್ಣಿಗೆ ಕಿಡಿಯೊಂದು ತಗುಲಿ ಗಾಯಗೊಂಡಿದ್ದರೆ, 14 ವರ್ಷದ ಬಾಲಕನೋರ್ವನಿಗೆ ಪಟಾಕಿ ಸಿಡಿಸುತ್ತಿರುವುದನ್ನು ನೋಡುತ್ತಿರುವಾಗ ಕಿಡಿಯೊಂದು ತಗಲಿ ಗಾಯವಾಗಿದೆ.

''ಇಬ್ಬರನ್ನು ಮಿಂಟೋ ಆಸ್ಪತ್ರೆಯ ಹೊರ ರೋಗಿಗಳ ವಿಭಾಗದಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇಬ್ಬರು ಮಕ್ಕಳಿಗೆ ಹೆಚ್ಚಿನ ಹಾನಿಯಾಗಿಲ್ಲ ಎಂದು ಮಿಂಟೋ ವೈದ್ಯರು'' ಮಾಹಿತಿ ನೀಡಿದ್ದಾರೆ. 12 ವರ್ಷದ ಬಾಲಕಿಯೊಬ್ಬಳ ಕಾರ್ನಿಯಾದ ಮೇಲೆ ಕಿಡಿಗಳು ಬಿದಿದ್ದುಫ, ವೈದ್ಯರು ಈ ಕಣಗಳನ್ನು ಸುರಕ್ಷಿತವಾಗಿ ತೆಗೆದುಹಾಕಿದ್ದಾರೆ. ಸದ್ಯ, ಆಕೆಗೆ ಆ್ಯಂಟಿಬಯಾಟಿಕ್ ಮತ್ತು ಲೂಬ್ರಿಕೆಂಟ್‌ಗಳ (ತೇವಾಂಶ ನೀಡುವ ಹನಿಗಳು) ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಶೇಖರ್ ಕಣ್ಣಿನ ಆಸ್ಪತ್ರೆಯಲ್ಲಿ ದಾಖಲಾದ ಎಲ್ಲಾ ಐದು ಮಕ್ಕಳು 8 ರಿಂದ 12 ವರ್ಷದ ವಯೋಮಾನದವರಾಗಿದ್ದು, ಯಾರಿಗೂ ಗಂಭೀರ ಗಾಯಗಳಾಗಿಲ್ಲ. ಮಕ್ಕಳು ಪಟಾಕಿ ಸಿಡಿಸುವಾಗ ದೊಡ್ಡವರು ಗಮನ ಹರಿಸಬೇಕು. ಯಾವುದೇ ಗಾಯವಾದಲ್ಲಿ ತಡಮಾಡದೆ ಹತ್ತಿರದ ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡಿ ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಪಟಾಕಿ ಮಳಿಗೆ ಮೇಲೆ ದಾಳಿ

ಬೆಂಗಳೂರು: ನಿಗದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪಟಾಕಿ ದಾಸ್ತಾನು ಮಾಡಿಕೊಂಡಿದ್ದ ಮಳಿಗೆಗಳ ಮೇಲೆ ಪೊಲೀಸರು ದಾಳಿ ನಡೆಸಿ, ಮಳಿಗೆಯ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಕಾಟನ್‌ಪೇಟೆ, ಚಿಕ್ಕಪೇಟೆ, ಕೆಆರ್ ಮಾರುಕಟ್ಟೆ ಹಾಗೂ ಹೊಸೂರು ಭಾಗದಲ್ಲಿ ಪೊಲೀಸರು ಸೋಮವಾರ ಮಧ್ಯಾಹ್ನ ಕಾರ್ಯಾಚರಣೆ ನಡೆಸಿದರು. ಈ ವೇಳೆ ಪರವಾನಗಿ ಪಡೆದ ಪ್ರಮಾಣಕ್ಕಿಂತಲೂ ಹೆಚ್ಚಿನ ದಾಸ್ತಾನು ಮಾಡಿಕೊಂಡಿರುವುದು ಕಂಡುಬಂತು. ಹೆಚ್ಚುವರಿ ಪಟಾಕಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು ಎಂದು ಗೊತ್ತಾಗಿದೆ. ಹಸಿರು ಪಟಾಕಿ ಹೆಸರಿನಲ್ಲಿ ಸಾಂಪ್ರದಾಯಿಕ ಪಟಾಕಿಗಳ ಮಾರಾಟ ಮಾಡುತ್ತಿರುವುದು, ಪರವಾನಗಿ ಪಡೆಯದವರೂ ಪಟಾಕಿ ಮಾರಾಟ ನಡೆಸುತ್ತಿರುವುದು ಕಂಡುಬಂತು. ಅಂತಹವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಮಂಗಳವಾರ,ಬುಧವಾರ ಸಹ ವಿವಿಧೆಡೆ ಕಾರ್ಯಾಚರಣೆ ನಡೆಸಲಿದ್ದಾರೆ.

ಬೆಲೆ ಏರಿಕೆ ನಡುವೆ ಹಬ್ಬಕ್ಕೆ ಖರೀದಿ ಭರಾಟೆ | ಕೆ.ಆರ್ ಮಾರುಕಟ್ಟೆಯಲ್ಲಿ ಟ್ರಾಫಿಕ್ ಜಾಮ್

ಹಬ್ಬದ ಖರೀದಿಗೆ ಮುಗಿಬಿದ್ದ ಜನ

ಕೆ.ಆರ್.ಮಾರುಕಟ್ಟೆಯಲ್ಲಿ ಖರೀದಿಗಾಗಿ ಮುಗಿಬಿದ್ದ ಜನ.

ಬೆಂಗಳೂರು: ನಗರದಲ್ಲಿ ಹಬ್ಬದ ಆಚರಣೆಗಾಗಿ ಕೆ.ಆರ್ ಮಾರುಕಟ್ಟೆಯಲ್ಲಿ ಹೂ ಹಣ್ಣು ಹಾಗೂ ಅಗತ್ಯ ವಸ್ತುಗಳ ಖರೀದಿಗೆ ಜನ ಮುಗಿಬಿದ್ದಿದ್ದು, ಹೂ ಹಣ್ಣು ಹಾಗೂ ಅಗತ್ಯ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು.

ಕೆ.ಆರ್ ಮಾರ್ಕೆಟ್‌ನಲ್ಲಿ ಭಾರೀ ಸಂಖ್ಯೆಯಲ್ಲಿ ಗ್ರಾಹಕರು ಸೇರಿ ಹಬ್ಬದ ಆಚರಣೆಗಾಗಿ ವಿವಿಧ ಬಗೆಯ ಹೂ, ಹಣ್ಣುಗ್ಗಳ ಖರೀದಿಯಲ್ಲಿ ಮುಳುಗಿದ್ದರು. ಅವೆನ್ಯೂ ರಸ್ತೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಜನಮಯವಾಗಿತ್ತು. ಭಾರೀ ಜನಸಂಖ್ಯೆ ಹಿನ್ನೆಲೆ ಕೆಆರ್ ಮಾರ್ಕೆಟ್, ಹೂವಿನ ಮಾರ್ಕೆಟ್, ಅವೆನ್ಯೂ ರಸ್ತೆ ಸುತ್ತ ಟ್ರಾಫಿಕ್ ಜಾಮ್ ಉಂಟಾಗಿತ್ತು. ಅಲ್ಲದೇ ಕೆ.ಆರ್.ಮಾರ್ಕೆಟ್ ಮೇಲ್ಸೇತುವೆ ಮೇಲೂ ಕಿ.ಮೀ.ಗಟ್ಟಲೇ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಸತತ ಮಳೆ ಹಿನ್ನೆಲೆ ಹೂಗಳ ಬೆಲೆ ಏರಿಕೆಯಾಗಿದ್ದರೂ ದೀಪಾವಳಿ ಹಬ್ಬದ ಹಿನ್ನೆಲೆ ಕನಕಾಂಬರ, ಮಲ್ಲಿಗೆ, ಸೇವಂತಿಗೆ, ಸುಗಂಧರಾಜ, ಚೆಂಡು ಹೂಗಳ ಖರೀದಿ ಜೋರಾಗಿತ್ತು.

ಯಾವ ಹೂವಿಗೆ ಎಷ್ಟು ದರ?

ಕನಕಾಂಬರ	₹ 1,300-1,600
ಮಲ್ಲಿಗೆ, ಮಳ್ಳೆ ಹೂವು	₹ 700-900
ಕಾಕಡ ಹೂವು	₹ 700-800
ಸೇವಂತಿಗೆ	₹ 800
ಗುಲಾಬಿ	₹ 500
ಕಣಗಲೆ	₹ 500
ಸುಗಂಧರಾಜ	₹ 500
ತಾವರೆ ಹೂವು (ಜೋಡಿ)	₹150
ಬಾಳೆಕಂದು	₹ 150 ರು.

ಅಪಘಾತ ಪ್ರಕರಣ ಸಂಬಂಧ ವಿಮಾ ಕಂಪನಿ ಮೇಲ್ಮನವಿ ಪುರಸ್ಕರಿಸಿದ ಹೈಕೋರ್ಟ್

ಹೆಲ್ಮೆಟ್ ಧರಿಸದಿದ್ದಕ್ಕೆ 7.85 ಲಕ್ಷ ರು. ಪರಿಹಾರ ಕಟ್

ಬೆಂಗಳೂರು: ಅಪಘಾತ ಪ್ರಕರಣದಲ್ಲಿ ಮೃತಪಟ್ಟ ಬೈಕ್ ಸವಾರನೊಬ್ಬ ಹೆಲ್ಮೆಟ್ ಧರಿಸದ ಕಾರಣ ಪರಿಗಣಿಸಿ ಪರಿಹಾರ ಮೊತ್ತದಲ್ಲಿ ಏಳೂವರೆ ಲಕ್ಷ ರು. ಕಡಿತಗೊಳಿಸಿ ಹೈಕೋರ್ಟ್ ಆದೇಶಿಸಿದೆ.

ಹೆಲ್ಮೆಟ್ ಧರಿಸದೆ ಇರುವುದು ಬೈಕ್ ಸವಾರನ ನಿರ್ಲಕ್ಷ್ಯವಾಗಿದೆ ಎಂದು ತೀರ್ಮಾನಿಸಿದ ಹೈಕೋರ್ಟ್, ನಿಗದಿಪಡಿಸಿದ ಒಟ್ಟು 19,64,400 ರು. ಪರಿಹಾರದಲ್ಲಿ ನಿರ್ಲಕ್ಷ್ಯದ ಭಾಗವಾಗಿ ಶೇ.40ರಷ್ಟು ಹಣ ಅಂದರೆ 7,85,760 ರು. ಕಡಿತಗೊಳಿಸಿದೆ. ಅಪಘಾತದಿಂದಾಗಿ 2019ರಲ್ಲಿ ಮೃತಪಟ್ಟ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಚಿಕ್ಕಂದವಾಡಿ ಗ್ರಾಮದ ನಿವಾಸಿ ಅವಿನಾಶ್‌ನ (23) ಕುಟುಂಬದವರಿಗೆ ಒಟ್ಟು 18,03,000 ರು. ಪರಿಹಾರ ನಿಗದಿಪಡಿಸಿ ಮೋಟಾರು ವಾಹನ ಅಪಘಾತ ಪರಿಹಾರ ಕ್ಲೇಮು ನ್ಯಾಯಾಧಿಕರಣ (ಎಂಎಟಿಸಿ) ಆದೇಶಿಸಿತ್ತು. ಈ ಪರಿಹಾರ ಪ್ರಮಾಣ ಹೆಚ್ಚಿದೆ ಎಂದು ಆಕ್ಷೇಪಿಸಿ ಅಘಾತಕ್ಕೆ ಕಾರಣವಾಗಿದ್ದ ಟ್ರ್ಯಾಕ್ಟರ್‌ವೊಂದಕ್ಕೆ ವಿಮಾ ಪಾಲಿಸಿ ನೀಡಿದ್ದ ವಿಮಾ ಕಂಪನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದ ನ್ಯಾಯ ಮೂರ್ತಿ ಡಿ.ಕೆ.ಸಿಂಗ್ ಅವರ ನೇತೃತ್ವದ ವಿಭಾಗೀಯ ಪೀಠ, ಪರಿಹಾರ ಮೊತ್ತ ಕಡಿತಗೊಳಿಸಿ ಆದೇಶಿಸಿದೆ. ಪ್ರಕರಣದಲ್ಲಿ ಅಪಘಾತ ಸಂಭವಿಸಿದ ವೇಳೆ ದ್ವಿಚಕ್ರ ಸವಾರನಾಗಿದ್ದ ಮೃತ ಅವಿನಾಶ್ ಹೆಲ್ಮೆಟ್ ಧರಿಸಿರಲಿಲ್ಲ. ದಾಖಲೆಗಳ ಪ್ರಕಾರ, ಬೈಕ್‌ನಲ್ಲಿ ಅವಿನಾಶ್ ವೇಗದಿಂದ ಮತ್ತು ನಿರ್ಲಕ್ಷ್ಯದಿಂದ ಬಂದು ಟ್ರೈಲರ್ ಹಿಂಬದಿಗೆ ಡಿಕ್ಕಿ ಹೊಡೆದಿದ್ದಾನೆ. ಇದರಿಂದ ಅಪಘಾತದಲ್ಲಿ ಆತನ ನಿರ್ಲಕ್ಷ್ಯ ಪ್ರಮಾಣವು ಶೇ.40ರಷ್ಟಿದೆ. ಟ್ರಾಕ್ಟರ್ ಚಾಲಕನ ನಿರ್ಲಕ್ಷ್ಯ ಶೇ.60ರಷ್ಟಿದೆ ಎಂಬುದಾಗಿ ಪೀಠ ತೀರ್ಮಾನಿಸಿತು. ಅಲ್ಲದೆ, ಮೃತಪಟ್ಟಾಗ ಅವಿನಾಶ್ ವಯಸ್ಸು, ಪಡೆಯುತ್ತಿದ್ದ ಸಂಬಳ, ಅವರ ಕುಟುಂಬದವರು ಅನುಭವಿಸಿದ ಅವಲಂಬನೆ ನಷ್ಟ/ನೋವು, ಅಂತ್ಯಕ್ರಿಯೆ ಖರ್ಚು ಮತ್ತು ಆತ ಭವಿಷ್ಯದಲ್ಲಿ ಗಳಿಸಬಹುದಾಗಿದ್ದ ಸಂಭಾವ್ಯ ಆದಾಯವನ್ನು ಲೆಕ್ಕಹಾಕಿದ ಪೀಠವು ಒಟ್ಟು 19,64,400 ರು. ಪರಿಹಾರ ಪಡೆಯಲು ಅನಿನಾಶ್ ಕುಟುಂಬದವರು ಅರ್ಹರಾಗಿದ್ದಾರೆ. ಆದರೆ, ಅಪಘಾತ ನಡೆದಾಗ ಮೃತ ಹೆಲ್ಮೆಟ್ ಧರಿಸದ್ದಕ್ಕೆ ಶೇ.40ರಷ್ಟು ಅಂದರೆ ಒಟ್ಟು 7,85,760 ರು. ಅನ್ನು ನಿರ್ಲಕ್ಷ್ಯದ ಭಾಗವಾಗಿ ನಿಗದಿಯಾದ ಪರಿಹಾರ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತಿದೆ ಎಂದು ತಿಳಿಸಿತು. ಜತೆಗೆ, ಉಳಿದ 11,78,640 ರು.ಅನ್ನು ಶೇ.6ರಷ್ಟು ವಾರ್ಷಿಕ ಬಡ್ಡಿದರ ದೊಂದಿಗೆ ಆರು ವಾರದಲ್ಲಿ ಮೃತನ ಕುಟುಂಬದವರಿಗೆ ಪಾವತಿಸುವಂತೆ ವಿಮಾ ಕಂಪನಿಗೆ ಆದೇಶಿಸಿದೆ.

ಪ್ರಕರಣವೇನು?

ಯುವಕ ಅವಿನಾಶ್ ರಾತ್ರಿ 8.50 ಸಮಯದಲ್ಲಿ ಹೊಳಲ್ಕೆರೆ ತಾಲೂಕಿನ ಹಿರೇಗುಂಟನೂರು ಗ್ರಾಮದಿಂದ ಅಡನೂರು ಗ್ರಾಮಕ್ಕೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದ. ಚಿಕ್ಕಜಾಜೂರು ಗ್ರಾಮದ ಬಳಿ ಮುಂದೆ ಸಾಗುತ್ತಿದ್ದ ಟ್ರ್ಯಾಕ್ಟರ್ ಮತ್ತು ಟ್ರೈಲರ್‌ನ್ನು ಚಾಲಕ ಯಾವುದೇ ಮುನ್ಸೂಚನೆ ನೀಡದೆ ದಿಢೀರ್ ಬ್ರೇಕ್ ಹಾಕಿ ನಿಲ್ಲಿಸಿದ್ದ. ಇದರಿಂದ ಟ್ರೈಲರ್ ಹಿಂಬದಿಗೆ ಅವಿನಾಶ್ ಬೈಕ್ ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವಿನಾಶ್, ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಮಾರ್ಗಮಧ್ಯೆ ಸಾವನ್ನಪ್ಪಿದ್ದ. ಪರಿಹಾರ ಕೋರಿ ಮೃತನ ತಂದೆ ಬಸರಾಜಪ್ಪ, ಎಂಎಸಿಟಿಗೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ್ದ ಹೊಳಲ್ಕೆರೆಯ ಎಂಎಸಿಟಿ (ನ್ಯಾಯಾಧಿಕರಣ) ಮೃತ ಅವಿನಾಶ್ ಕುಟುಂಬದವರಿಗೆ ಶೇ.6ರಷ್ಟು ವಾರ್ಷಿಕ ಬಡ್ಡಿದರದಲ್ಲಿ ಒಟ್ಟು 18,03,000 ರು. ಪರಿಹಾರ ಪಾವತಿಸುವಂತೆ ಟ್ರ್ಯಾಕ್ಟರ್‌ಗೆ ವಿಮಾ ಪಾಲಿಸಿ ಒದಗಿಸಿದ್ದ ವಿಮಾ ಕಂಪನಿಗೆ ನಿರ್ದೇಶಿಸಿ 2019ರ ಡಿ.5ರಂದು ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ 2021ರಲ್ಲಿ ನ್ಯಾಷನಲ್ ವಿಮಾ ಕಂಪನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಇದೇ ವೇಳೆ ಪರಿಹಾರ ಪ್ರಮಾಣ ಕಡಿಮೆಯಾಗಿದೆ ಎಂದು ಆಕ್ಷೇಪಿಸಿ ಅವಿನಾಶ್ ತಾಯಿ ಹೈಕೋರ್ಟ್‌ಗೆ ಪ್ರತ್ಯೇಕ ಮೇಲ್ಮನವಿ ಸಲ್ಲಿಸಿದ್ದರು.

ಮುಂದಿನ ವರ್ಷಕ್ಕೆ ಗುಲಾಬಿ ಮೆಟ್ರೋ ಕಾರ್ಯಾರಂಭ

ಕಾಳೇನ ಅಗ್ರಹಾರದಿಂದ ನಾಗಾವರದವರೆಗಿನ 21 ಕಿ.ಮೀ ಉದ್ದದ ಮಾರ್ಗ

ಎತ್ತರದ ಗುಲಾಬಿ ಮಾರ್ಗದ ಮಾರ್ಗ

- ಕಾಳೇನ ಅಗ್ರಹಾರ
- ಹುಳಿಮಾವು
- ಐಐಎಂ-ಬೆಂಗಳೂರು
- ಜೆ.ಪಿ. ನಗರ 4ನೇ ಹಂತ
- ಜಯದೇವ
- ತಾವರೆಕೆರೆ

ಐದು ಇಂಟರ್ ಚೇಂಜ್ ನಿಲ್ದಾಣ

ಗುಲಾಬಿ ಮಾರ್ಗದಲ್ಲಿ ಪ್ರಮುಖವಾಗಿ ಇಂಟರ್ ಚೇಂಜ್ ನಿಲ್ದಾಣಗಳಲ್ಲಿ ಜಯದೇವ (ಯೆಲ್ಲೋ ಲೈನ್), ಎಂಜಿ ರಸ್ತೆ (ಪರ್ಪಲ್ ಲೈನ್), ಡೈರಿ ಸರ್ಕಲ್ (ರೆಡ್ ಲೈನ್), ನಾಗವರ (ಬ್ಲೂ ಲೈನ್), ಮತ್ತು ಜೆಪಿ ನಗರ 4 ನೇ ಹಂತ (ಆರೆಂಜ್ ಲೈನ್) ಸೇರಿವೆ. ಇದು ನಗರದ ಮಧ್ಯ ಮತ್ತು ದಕ್ಷಿಣ ಪ್ರದೇಶಗಳ ನಡುವಿನ ಪ್ರಯಾಣವನ್ನು ನಾರ್ಹವಾಗಿ ಸುಗಮಗೊಳಿಸಲಿದೆ.

ಬೆಂಗಳೂರು: ನಮ್ಮ ಮೆಟ್ರೋದ ಗುಲಾಬಿ ಮಾರ್ಗದ ವಾಣಿಜ್ಯ ಕಾರ್ಯಾಚರಣೆಯು 2026ರ ಮೇ ತಿಂಗಳಿನಲ್ಲಿ ಆರಂಭವಾಗುವ ನಿರೀಕ್ಷೆಯಿದ್ದು, ಕಾಳೇನ ಅಗ್ರಹಾರದಿಂದ ನಾಗಾವರದವರೆಗಿನ 21 ಕಿ.ಮೀ ಉದ್ದದ ಮಾರ್ಗ ಇದಾಗಿದೆ.

ಎತ್ತರಿಸಿದ ಮತ್ತು ಅಂಡರ್‌ಗ್ರೌಂಡ್ ಮಾರ್ಗ ಇದಾಗಿರಲಿದ್ದು, ಜಯದೇವ, ಎಂ.ಜಿ ರಸ್ತೆ ಸೇರಿದಂತೆ ಹಲವು ಇಂಟರ್‌ಚೇಂಜ್ ನಿಲ್ದಾಣಗಳ ಮೂಲಕ ಪ್ರಯಾಣಿಕರಿಗೆ ಸುಲಭ ಸಂಚಾರ ಒದಗಿಸಲಿದೆ. ಈಗಾಗಲೇ ನಡೆಯುತ್ತಿರುವ ನಿರ್ಮಾಣ ಕಾರ್ಯವು ಮುಂದಿನ ವರ್ಷ ಪೂರ್ಣಗೊಳ್ಳುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿ ಬಂದಿದೆ. ನಗರದ ಇತರ ಮೆಟ್ರೋ ಮಾರ್ಗಗಳ ಅಭಿವೃದ್ಧಿಯಲ್ಲಿ ಹಲವಾರು

ವಿಳಂಬ ಕಂಡುಬಂದಿದ್ದು, ಇದು ಬೆಂಗಳೂರಿನ ಪ್ರಯಾಣಿಕರನ್ನು ನಿರಾಶೆ ಮಾಡಿತ್ತು. ಎಲೆಕ್ಟ್ರಾನಿಕ್ ಸಿಟಿಗೆ ಹಳದಿ ಬಣ್ಣದ ಮಾರ್ಗವು ಎರಡು ವರ್ಷಗಳಿಗೂ ಹೆಚ್ಚು ವಿಳಂಬವಾಗಿತ್ತು. ಇನ್ನು ಹಸಿರು ಬಣ್ಣ ಮಾರ್ಗ ನಿರ್ಮಾಣಕ್ಕೆ ಐದು ವರ್ಷ ತೆಗೆದುಕೊಂಡಿದ್ದರು ಎಂದು ಹೇಳಲಾಗಿದೆ. ಆದರೆ ಗುಲಾಬಿ ಮಾರ್ಗದ ಕಾಮಗಾರಿಗಳು ವೇಗವಾಗಿ ನಡೆಯುತ್ತಿದೆ. ಗುಲಾಬಿ ಮಾರ್ಗವು ಕಾಳೇನ ಅಗ್ರಹಾರ ಮತ್ತು ತಾವರೆಕೆರೆ (ಸ್ವಾಗತ್ ಕ್ರಾಸ್ ರಸ್ತೆ) ನಡುವಿನ 2.5 ಕಿಮೀ ಎತ್ತರದ ಮತ್ತು 13.76 ಕಿಮೀ ಅಂಡರ್‌ಗ್ರೌಂಡ್ ಮಾರ್ಗವನ್ನು ಒಳಗೊಂಡಿರುವುದರಿಂದ ನಗರದ ಅತ್ಯಂತ ಸಂಕೀರ್ಣ ಮೆಟ್ರೋ ಯೋಜನೆಗಳಲ್ಲಿ ಒಂದಾಗಿದೆ.

ಅಂಡರ್‌ಗ್ರೌಂಡ್ ಮಾರ್ಗಗಳು ಬೆಂಗಳೂರಿನ ಅತಿ ಉದ್ದದ ಸುರಂಗವಾಗಿದ್ದು, ಇದು ಡಿಸೆಂಬರ್ 2026ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ. ಗುಲಾಬಿ ಮಾರ್ಗ ಹಲವಾರು ಪ್ರಮುಖ ಕಾರಿಡಾರ್‌ಗಳೊಂದಿಗೆ ಸಂಪರ್ಕ ಸಾಧಿಸಲಿದ್ದು, ಪ್ರಯಾಣಿಕರಿಗೆ ಸುಲಭವಾಗಿ ಮಾರ್ಗಗಳನ್ನು ಬದಲಾಯಿಸಲು ಅನುವು ಮಾಡಿಕೊಡುತ್ತದೆ. ಈ ಮಾರ್ಗದ ಕಾರ್ಯಾಚರಣೆಗಾಗಿ ನಾಲ್ಕು ರೈಲು ಸೆಟ್‌ಗಳನ್ನು ನಿಯೋಜಿಸಲಾಗುವುದು. ನಮ್ಮ ಮೆಟ್ರೋಗಾಗಿ ಸರಬರಾಜು ಒಪ್ಪಂದದ ಅಡಿಯಲ್ಲಿ 318 ಮೆಟ್ರೋ ಬೋಗಿಗಳನ್ನು ಉತ್ಪಾದಿಸುತ್ತಿರುವ ಬಿಇಎಂಎಲ್ ಈ ರೈಲುಗಳನ್ನು ಪೂರೈಸಲಿದೆ. ಇವುಗಳಲ್ಲಿ 96 ಬೋಗಿಗಳನ್ನು (16 ರೈಲು ಸೆಟ್‌ಗಳಿಗೆ ಸಮ) ಗುಲಾಬಿ ಮಾರ್ಗಕ್ಕಾಗಿ ಮೀಸಲಿಡಲಾಗಿದೆ.

ನಮ್ಮ ಮೆಟ್ರೋಗೆ 14 ವರ್ಷ: ಡಿಕೆಶಿ ವಿಶೇಷ ಪೋಸ್ಟ್

ಬೆಂಗಳೂರು: ರಾಜ್ಯ ರಾಜಧಾನಿಯಲ್ಲಿ ನಮ್ಮ ಮೆಟ್ರೊದ ಸಂಚಾರ ಆರಂಭವಾಗಿ ಇಂದಿಗೆ 14 ವರ್ಷ ಪೂರ್ಣವಾಗುತ್ತಿದ್ದು, ಈ ಹಿನ್ನೆಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಮಾಜಿಕ ಮಾಧ್ಯಮದಲ್ಲಿ ವಿಶೇಷ ಪೋಸ್ಟ್‌ನ್ನು ಹಂಚಿಕೊಂಡು ಶುಭಾಶಯವನ್ನು ಕೋರಿದ್ದಾರೆ. ಬೈಯಪ್ಪನಹಳ್ಳಿಯಿಂದ ಎಂ.ಜಿ. ರಸ್ತೆಯವರೆಗಿನ ಮೊದಲ 6.7 ಕಿ.ಮೀ ಪಯಣದಿಂದ, ಇಂದಿನ 96 ಕಿ.ಮೀಗೂ ಅಧಿಕ ಬೃಹತ್ ಜಾಲದವರೆಗೆ... ನಮ್ಮ ಮೆಟ್ರೊದ 14 ವರ್ಷಗಳ ಕ್ರಾಂತಿಕಾರಿ ಯಾನವಿದು ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದು, 2011ರ ಅಕ್ಟೋಬರ್ 20 ಆರಂಭವಾದ ನಮ್ಮ ಮೆಟ್ರೊ, ಇಂದು ದಿನಕ್ಕೆ 10 ಲಕ್ಷಕ್ಕೂ ಹೆಚ್ಚು ಜನರ ಬದುಕನ್ನು ಸುಲಭಗೊಳಿಸಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿದೆ. ಬೆಂಗಳೂರಿನ ಅಭಿವೃದ್ಧಿಯ 'ಗೇಮ್ ಚೇಂಜರ್' ಆಗಿದೆ ಎಂದು ಹೇಳಿದ್ದಾರೆ.

ದೇಶದ ಎರಡನೇ ಅತಿ ಉದ್ದದ ಮೆಟ್ರೋ ಎನ್ನುವ ಹೆಗ್ಗಳಿಕೆ ಹೊಂದಿರುವ ನಮ್ಮ ಮೆಟ್ರೋ ದಿನನಿತ್ಯ ಅಸಂಖ್ಯಾತ ಮಂದಿಗೆ ಸೇವೆ ನೀಡುತ್ತಿದೆ. ಮೊದಲಿಗೆ 2011 ಅ.20ರಂದು ಬೈಯಪ್ಪನಹಳ್ಳಿ ಮತ್ತು ಎಂ.ಜಿ. ರಸ್ತೆ ನಡುವಿನ ನಮ್ಮ ಮೆಟ್ರೋ ಸಂಚಾರ ಸಾರ್ವಜನಿಕ ಪ್ರಯಾಣಕ್ಕೆ ಮುಕ್ತವಾಗಿತ್ತು. 6.7 ಕಿಲೋ ಮೀಟರ್ ಮಾರ್ಗದಲ್ಲಿ ಮೆಟ್ರೋ ಪ್ರಯಾಣ ಮೊದಲ ಬಾರಿಗೆ ಸಾಗಿತ್ತು. ಕ್ರಮೇಣ ಮೆಟ್ರೋ ತನ್ನ ಜಾಲವನ್ನು ವಿಸ್ತರಿಸುತ್ತಾ ಹೋಯಿತು. ಇದೇ ವೇಳೆ ನಮ್ಮ ಮೆಟ್ರೋ ಜತೆಗೆ 14 ವರ್ಷಗಳ ಅತ್ಯದ್ಭುತ ಪ್ರಯಾಣದಲ್ಲಿ ಭಾಗವಹಿಸಿದ ಎಲ್ಲಾ ಪ್ರಯಾಣಿಕರಿಗೆ ನಮ್ಮ ಮೆಟ್ರೋ ಧನ್ಯವಾದ ತಿಳಿಸಿದೆ. 2003ರಲ್ಲಿ ವಿಸ್ತ್ರತ ಯೋಜನಾ ವರದಿ ಸಿದ್ದಪಡಿಸಲಾಗಿತ್ತು. 2006ರಲ್ಲಿ ಕೇಂದ್ರದ ಅನುಮೋದನೆ ದೊರೆತಿದ್ದು, 2007ರಲ್ಲಿ ಬೈಯಪ್ಪನಹಳ್ಳಿಯಿಂದ ಎಂ.ಜಿ. ರಸ್ತೆಯವರೆಗೆ ಮೊದಲ ಹಂತದ ಕಾಮಗಾರಿ ಪ್ರಾರಂಭವಾಯಿತು. 2011 ಅಕ್ಟೋಬರ್ 20ರಂದು ಸಾರ್ವಜನಿಕರ ಪ್ರಯಾಣಕ್ಕೆ ಮುಕ್ತಗೊಳಿಸಲಾಯಿತು.

ರಾಮಚಂದ್ರಾಪುರ ಮಠದಲ್ಲಿ ಗೋದೀಪ-ಗೋಪೂಜೆ

ಬೆಂಗಳೂರು: ಗಿರಿನಗರದ ರಾಮಚಂದ್ರಾಪುರ ಮಠದ ರಾಮಾಶ್ರಯದಲ್ಲಿ ಬುಧವಾರ ಗೋಸಂರಕ್ಷಣೆ ಹಾಗೂ ಲೋಕ ಕಲ್ಯಾಣದ ಮಹಾಸಂಕಲ್ಪದೊಂದಿಗೆ ವಿಶ್ವಜನನಿಯ ವಿಶಿಷ್ಟ ಪೂಜಾ ಕಾರ್ಯಕ್ರಮ ಗೋದೀಪ - ದೀಪಾವಳಿ ವಿಶೇಷ ಗೋಪೂಜೆಯನ್ನು ಆಯೋಜಿಸಲಾಗಿದೆ.

ಸಂಜೆ 5 ಗಂಟೆಯಿಂದ ನಡೆಯಲಿರುವ ಗೋಪೂಜೆಗೆ ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ ಚಾಲನೆ ನೀಡಲಿದ್ದು, ಗೋಪೂಜೆಯ ನಂತರ ಗೋಸಂದೇಶವನ್ನು ನೀಡಲಿದ್ದಾರೆ. ಆಹ್ವಾನಿತ ಗಣ್ಯ ದಂಪತಿಗಳಿಂದ ಏಕಕಾಲಕ್ಕೆ ವಿಶೇಷ ರೀತಿಯಲ್ಲಿ ಸಾಲಂಕೃತ ಗೋವುಗಳಿಗೆ ಪೂಜೆ ನಡೆಯಲಿದ್ದು, ಗೋಮಾತೆಯ ಅನುಗ್ರಹ ಪ್ರಾಪ್ತಿಗಾಗಿ ಗೋಸೂಕ್ತ ಪಾರಾಯಣ, ಗೋಸೂಕ್ತ ಹವನ ನಡೆಯಲಿದೆ. ಶಿವಶ್ರೀ ಸ್ಕಂದಪ್ರಸಾದ್ ಹಾಗೂ ತಂಡದವರಿಂದ 'ಗೋ ಗಾನಾಮೃತ' ವಿಶೇಷ ಸಂಗೀತ ಕಾರ್ಯಕ್ರಮ ನಡೆಯಲಿದೆ. ನೂರಾರು ಮಾತೆಯರಿಂದ ಗೋಮಯ ಹಣತೆಯಲ್ಲಿ ಗೋ ಆರತಿ ನಡೆಯಲಿದ್ದು, ಬೆಳಗಿನಿಂದಲೇ ಸಾರ್ವಜನಿಕರಿಗೆ ಸಾಮೂಹಿಕ ಗೋಪೂಜೆಯನ್ನು ನಡೆಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಪಾರಂಪರಿಕ ರೀತಿಯಲ್ಲಿ ಗೋಪೂಜೆ ನಡೆಯಲಿದೆ.

ರಾಮಚಂದ್ರಾಪುರ ಮಠವು ರಾಷ್ಟ್ರಮಟ್ಟದಲ್ಲಿ ಹತ್ತಾರು ಗೋಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದ್ದು, ಇದೀಗ ದೀಪಾವಳಿಯಂದು ವಿಶೇಷವಾಗಿ ಗೋಪೂಜೆಯ ಮೂಲಕ ಗೋಸಂರಕ್ಷಣೆಯ ಸಂದೇಶ ಸಾರಲು ಕಾರ್ಯಕ್ರಮ

ಗಿರಿನಗರದ ರಾಮಚಂದ್ರಾಪುರ ಮಠದ ರಾಮಾಶ್ರಯದಲ್ಲಿ ನಡೆದ ವಿಶಿಷ್ಟ ಪೂಜಾ ಕಾರ್ಯಕ್ರಮಕ್ಕೆ ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ ಚಾಲನೆ ನೀಡಿದರು.

ಆಯೋಜಿಸಿದೆ. ಕಾರ್ಯಕ್ರಮದಲ್ಲಿ ವಿಶ್ರಾಂತ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್, ಸಂಸದ ತೇಜಸ್ವಿ ಸೂರ್ಯ, ಶಾಸಕ ರವಿಸುಬ್ರಹ್ಮಣ್ಯ, ವೈದ್ಯ ಸಾಹಿತಿ ಡಾ.ನಾ.ಸೋಮೇಶ್ವರ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಸಮಾರಂಭದಲ್ಲಿ ಶಿವಶ್ರೀ ಸ್ಕಂದಪ್ರಸಾದ ತಂಡದವರಿಂದ ಗೋ ಗಾನಾಮೃತ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಬಿ ಖಾತಾ ವಿರುದ್ಧ ಹೋರಾಟ

ಬೆಂಗಳೂರು: ದೀಪಾವಳಿ ಕೊಡುಗೆ ನೆಪದಲ್ಲಿ ಬೆಂಗಳೂರು ಜನರಿಗೆ ಕಾಂಗ್ರೆಸ್ ಮಹಾ ದೋಖಾ ಮಾಡುತ್ತಿದೆ. ಕಾಂಗ್ರೆಸ್ ಲೂಟಿಯ ವಿರುದ್ಧ ಜೆಡಿಎಸ್ ಹೋರಾಡುತ್ತೇವೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು. ಈ ಬಗ್ಗೆ ಟ್ವೀಟ್ ಅವರು, ಎಲ್ಲರಿಗೂ ದೀಪಾವಳಿಯ ಶುಭಾಶ ಯಗಳು ನೀವು ದೀಪ ಹಚ್ಚುತ್ತಿರು ವಾಗ,

ಕಾಂಗ್ರೆಸ್ ಬಿ ಖಾತಾ ದಿಂದ ಎ ಖಾತಾ ಮಾಡಲು ಶೇ.5ರಷ್ಟು ತೆರಿಗೆ ಯಿಂದ ಮಧ್ಯಮ ವರ್ಗವನ್ನು ಸುಟ್ಟು ಹಾಕುತ್ತಿದೆ. 7.5 ಲಕ್ಷ ಮನೆ ಮಾಲೀಕರು 100 ದಿನಗಳಲ್ಲಿ ಲಕ್ಷ ಲಕ್ಷ ಪಾವತಿಸುವಂತೆ ಒತ್ತಾಯಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಆದರೆ ಇದರ ಬಗ್ಗೆ ಚಿಂತಿಸಬೇಡಿ, ಜೆಡಿಎಸ್ ಪಕ್ಷವು ಪ್ರತಿಯೊಬ್ಬ ಬಿ ಖಾತಾ ಹೊಂದಿರುವವರ ಪರವಾಗಿ ಹೋರಾಡುತ್ತದೆ. ನಾವು ಪ್ರತಿಭಟನೆ ಮೂಲಕ ಮತ್ತು ನ್ಯಾಯಾಲಯದಲ್ಲಿ ನ್ಯಾಯಕ್ಕಾಗಿ ಹೋರಾಡುತ್ತೇವೆ. ನಿಮ್ಮ ಹಬ್ಬವನ್ನು ಸಂತೋಷದಿಂದ ಆಚರಿಸಿ, ನಾವು ಕಾಂಗ್ರೆಸ್ ಲೂಟಿಯ ವಿರುದ್ಧ ಹೋರಾಡುತ್ತೇವೆ. ಈ ಬಗ್ಗೆ ನಾನು ಗುರುವಾರ ಪೂರ್ಣ ವಿವರಗಳೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತೇನೆ ಎಂದಿದ್ದಾರೆ.



TRUALT BIOENERGY

TRUALT BIOENERGY LIMITED

One of India's largest biofuels producers(*)

Registered Address: Survey No. 166, Kulali Cross, Jamkhandi Mudhol Road, Bagalkot, Karnataka, India - 587313

Corporate Address: Unit No. N-1501, 15th Floor, World Trade Centre, Brigade Gateway Campus, Rajajinagar, Bangalore – 560055

Tel: +91 80 2325 5000
Email: ir@trualtbioenergy.com
Website: www.trualtbioenergy.com

Corporate Identity Number: U15400KA2021PLC145978

EXTRACT OF THE CONSOLIDATED UNAUDITED FINANCIAL RESULTS OF TRUALT BIOENERGY LIMITED FOR THE QUARTER ENDED JUNE 30, 2025, PREPARED IN COMPLIANCE WITH THE INDIAN ACCOUNTING STANDARDS (IND AS).

(All amounts are in ₹ lakhs, unless otherwise stated

Particulars	Quarter Ended			Year Ended
	June 30, 2025	March 31, 2025	June 30, 2024	March 31, 2025
	Unaudited	Audited	Unaudited	Audited
Revenue from operations	**30,389.17**	**90,698.87**	**19,739.93**	**190,772.40**
Cost of goods sold	21,974.94	59,767.85	14,117.30	127,162.06
Profit before tax	579.95	11,089.78	(2,159.08)	15,944.28
Profit for the period	472.52	11,169.36	(2,151.37)	14,663.85
Total Comprehensive Income / (loss) for the period / year (comprising profit for the period/ year after tax and other comprehensive income / (expense) after tax)	472.94	11,164.66	(2,147.29)	14,664.25
Profit / (Loss) attributable to				
- Owners of the company	472.52	11,169.36	(2,151.37)	14,663.85
- Non-Controlling Interest	-	-	-	-
Total Comprehensive Income / (Expense) attributable to				
- Owners of the company	472.94	11,164.66	(2,147.29)	14,664.25
- Non-Controlling Interest	-	-	-	-
Paid up Equity Share Capital (Face Value of ₹ 10 each)	**7,063.16**	**7,063.16**	**7,063.16**	**7,063.16**
Reserves (excluding Revaluation Reserve) as on March 31, 2025				**69836.74**
Earnings Per Equity Share (Face Value of ₹ 10 each)*				
- Basic (₹)	0.67	15.81	(3.04)	20.94
- Diluted (₹)	0.67	15.81	(3.04)	20.94

'*EPS is not annualized for the quarters reported

Notes:

1. The Unaudited Consolidated Financial Results have been prepared in accordance with the recognition and measurement principles laid down in the Indian Accounting Standards ('Ind AS') 34, 'Interim Financial Reporting', as prescribed under section 133 of the Companies Act, 2013 ('the Act'), and other accounting principles generally accepted in India, and are in compliance with the presentation and disclosure requirements of Regulation 33 of the SEBI (Listing Obligations and Disclosure Requirements) Regulations, 2015 (as amended).
2. The Limited Review, as required under Regulation 33 of the SEBI (Listing Obligations and Disclosure Requirements) Regulations, 2015, has been carried out by the Statutory Auditors for the quarter ended June 30, 2025, and they have issued an unmodified limited review report on the same.
3. The Company's Ethanol business has historically been seasonal, in line with the harvesting of the surgarcane crop, with the period between April and October being the off season when there is little / no availability of raw material. Consequently, the quarterly results are not indicative of the annual performance. However, with the commissioning of grain-based capacities in the course of the current financial year, going forward, the business will no longer be seasonal.
4. The above is an extract of the detailed format of Quarterly Unaudited Financial Results filed with Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Unaudited Financial Results are available on the Stock Exchange websites, www.nseindia.com and www.bseindia.com, and on the Company's website (URL: https://www.trualtbioenergy.com/investor-relations). The same can be accessed by scanning the QR code provided below.

Extract of the Standalone unaudited financial results of Trualt Bioenergy Limited for the quarter ended June 30, 2025, prepared in compliance with the Indian Accounting Standards (Ind AS).

(All amounts are in ₹ lakhs, unless otherwise stated

Particulars	Quarter Ended			Year Ended
	June 30, 2025	March 31, 2025	June 30, 2024	March 31, 2025
	Unaudited	Audited	Unaudited	Audited
Revenue from operations	29,393.47	89,927.45	19,140.14	188,011.66
Cost of goods sold	21,894.47	59,608.05	14,274.75	126,797.20
Profit / (loss) before tax	13.19	10,913.60	(2,545.70)	15,215.11
Profit / (loss) after tax	2.57	11,022.81	(2,509.39)	14,061.53
EBITDA	3,489.18	15,092.02	855.77	29,719.38
EBITDA %	11.87%	16.78%	4.47%	15.81%

Date : October 19, 2025
Place : Bangalore

For and on behalf of the Board of Directors
TruAlt Bioenergy Limited
Sd/-
Vijaykumar Murugesh Nirani
Managing Director
(DIN: 07413777)

ಸಮಾಚಾರ ಸಣ್ಣದಲ್ಲ

ಅಪ್ರಾಪ್ತೆ ಮೇಲೆ ಮಲ ತಂದೆ ಅತ್ಯಾಚಾರ

ಉಳ್ಳಾಲ: ಅಪ್ರಾಪ್ತೆ ಮೇಲೆ ಮಲ ತಂದೆಯೇ ಅತ್ಯಾಚಾರಗೈದ ಘಟನೆ ಉಳ್ಳಾಲ ಠಾಣಾ ವ್ಯಾಪ್ತಿಯ ಕುಂಪಲ ಬೈಪಾಸ್ ನಲ್ಲಿ ನಡೆದಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ಅಮೀರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತೆಯ ತಂದೆ ಮೃತಪಟ್ಟ ಬಳಿಕ ಆಕೆಯ ತಾಯಿ ಅಮೀರ್ ಎಂಬಾತನ ಜತೆ ವಿವಾಹವಾಗಿ ಕುಂಪಲದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಈ ಮಧ್ಯೆ ತಾಯಿ ಹಾಗೂ ಅಪ್ರಾಪ್ತೆ ಮಲಗಿದ್ದ ಸಂದರ್ಭದಲ್ಲಿ ಆರೋಪಿ ಅಮೀರ್ ಅತ್ಯಾಚಾರ ಎಸಗಿದ್ದ. ಈ ಸಂದರ್ಭ ಬಾಲಕಿ ಕಿರುಚಾಡಿದಾಗ ಆಕೆಯ ಬಾಯಿಗೆ ತಲೆದಿಂಬು ಇಟ್ಟು ಬಾಯಿ ಮುಚ್ಚಿಸಿದ್ದ ಎಂದು ಆರೋಪಿಸಲಾಗಿದೆ.

...ಮಂತ್ರಿಗಳಿಂದಲೇ ಮೂಗುದಾರ

← ಮೊದಲಪುಟದಿಂದ

ಇಷ್ಟಾದರೂ ಡಿ.ಕೆ.ಶಿವಕುಮಾರ್ ಅವರಾಗಲಿ, ಇತರ ಸಚಿವ ಸಂಪುಟ ಸದಸ್ಯರು ಪ್ರಿಯಾಂಕ್ ಪರವಾಗಿ ನಿಲ್ಲದೇ ಮೌನಕ್ಕೆ ಶರಣಾಗುವ ಮೂಲಕ ಪ್ರಿಯಾಂಕ್ ಅವರನ್ನು ಆರ್‌ಎಸ್‌ಎಸ್ ವಿಷಯದಲ್ಲಿ ಒಂಟಿಯನ್ನಾಗಿ ಮಾಡಿದರೆ ಎನ್ನುವ ಮಾತುಗಳು ಕೇಳಿಬಂದಿವೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದು, ಕಾಂಗ್ರೆಸ್ ಅಧ್ಯಕ್ಷ, ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರಿಗೆ ನನ್ನ ವಿಚಾರದಲ್ಲಿ ವ್ಯತ್ಯಾಸ ಇದೆಯಾ? ಪಕ್ಷದ ಅಧ್ಯಕ್ಷರು ಮಾತನಾಡಿದ್ದಾರೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಗಣವೇಷಧಾರಿಗಳ ಸಂಖ್ಯೆ ಹೆಚ್ಚಳ: ಪ್ರಿಯಾಂಕ್ ಖರ್ಗೆ ಅವರ ನಿರ್ಬಂಧದ ಪತ್ರದಿಂದ ರಾಜ್ಯಾದ್ಯಂತ ನಡೆದಿರುವ ಪಥ ಸಂಚಲನದಲ್ಲಿ ಭಾಗವಹಿಸುವವರ ಗಣವೇಷದಾರಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ ಎನ್ನಲಾಗಿದೆ. ಬೆಂಗಳೂರಿನಲ್ಲಿ ಅ.12ರಂದು ಬೆಂಗಳೂರಿನಲ್ಲಿ ನಡೆದ ನೂರು ಪಥಸಂಚಲನ ಕಾರ್ಯಕ್ರಮ ನಡೆದಿವೆ. ಈ ಪಥ ಸಂಚಲದಲ್ಲಿ ಒಟ್ಟು 32 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದು, ಇದರಲ್ಲಿ 25 ಸಾವಿರಕ್ಕೂ ಹೆಚ್ಚು ಪೂರ್ಣ ಗಣವೇಷಧಾರಿಗಳು ಭಾಗಿಯಾಗಿದ್ದರು ಎಂದು ತಿಳಿದುಬಂದಿದೆ. ಬೆಂಗಳೂರು ಒಂದರಲ್ಲಿಯೇ ಈ ಪ್ರಮಾಣದ ಪ್ರತಿಕ್ರಿಯೆ ಬಂದಿರುವಾಗ, ರಾಜ್ಯಾದ್ಯಂತ ಈ ಬಾರಿ ನಿರೀಕ್ಷೆ ಮೀರಿ ಭಾರಿ ಪ್ರಮಾಣದಲ್ಲಿ ಸ್ವಯಂ ಸೇವಕರು ಪಥ ಸಂಚಲನದಲ್ಲಿ ಭಾಗವಹಿಸಿದ್ದಾರೆ ಎನ್ನಲಾಗಿದೆ.

ಪಥ ಸಂಚಲನಕ್ಕೆ ಮರು ಅರ್ಜಿ: ಹೈಕೋರ್ಟ್ ಆದೇಶದ ಬಳಿಕ ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನ.2ರಂದು ಪಥ ಸಂಚಲನ ನಡೆಸಲು ಅನುಮತಿಗಾಗಿ ಆರ್‌ಎಸ್‌ಎಸ್ ಮರು ಅರ್ಜಿ ಸಲ್ಲಿಸಿದೆ. ಆರ್‌ಎಸ್‌ಎಸ್‌ನ ಕಲಬುರಗಿ ಜಿಲ್ಲಾ ಸಂಚಾಲಕ ಅಶೋಕ್ ಪಾಟೀಲ್ ಅವರು ಕಲಬುರಗಿ ಜಿಲ್ಲಾಧಿಕಾರಿಗಳ ಎರಡು ಅಧಿಕೃತ ಇ-ಮೇಲ್ ವಿಳಾಸ ಮತ್ತು ವಾಟ್ಸಾಪ್‌ಗೆ ಅರ್ಜಿ ರವಾನಿಸಿದ್ದು, ಪಥ ಸಂಚಲನಕ್ಕೆ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ. ಭಾನುವಾರ ಚಿತ್ತಾಪುರದಲ್ಲಿ ನಡೆಯಬೇಕಿದ್ದ ಪಥ ಸಂಚಲನಕ್ಕೆ ತಹಶೀಲ್ದಾರ್ ಅವರು ಕಡಿವಾಣ ಹಾಕಿದ್ದರು. ಅದನ್ನು ಆರ್‌ಎಸ್‌ಎಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಕಲಬುರಗಿ ವಿಭಾಗದ ಹೈಕೋರ್ಟ್ ಪೀಠ, ತುರ್ತು ವಿಚಾರಣೆ ನಡೆಸಿ ನ.2ರಂದು ಪಥ ಸಂಚಲನಕ್ಕೆ ಅವಕಾಶ ನೀಡುವ ಬಗ್ಗೆ ಪರಿಶೀಲಿಸುವಂತೆ ಸರಕಾರಕ್ಕೆ ಆದೇಶಿಸಿತ್ತು. ಜತೆಗೆ ಅನುಮತಿಗಾಗಿ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಆರ್‌ಎಸ್‌ಎಸ್‌ಗೆ ಸೂಚನೆ ನೀಡಿತ್ತು. ಅದನ್ನು ಆಧರಿಸಿ, ಅಶೋಕ್ ಪಾಟೀಲ್ ಅವರು ಮರು ಅರ್ಜಿ ಸಲ್ಲಿಸಿದ್ದಾರೆ.

2013ರಲ್ಲಿ ಬಿಜೆಪಿಯೇ ನಿರ್ಬಂಧಿಸಿ ಆದೇಶ ಮಾಡಿತ್ತು ಎನ್ನುತ್ತಾರೆ. ಆದರೆ ನಾವು ಹೊರಡಿಸಿದ್ದ ಆದೇಶವನ್ನು ಸರಿಯಾಗಿ ಅವರು ಓದಿದ್ದಾರಾ? ಆದೇಶದಲ್ಲಿ ಎಲ್ಲಿಯೂ ಆರ್‌ಎಸ್‌ಎಸ್ ಪದ ಬಳಸಿಲ್ಲ. ನಮ್ಮ ಕ್ಯಾಬಿನೆಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವಲ್ಲ. ಬದಲಿಗೆ ಯಾವುದೋ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆ ಜಾಗ ಕೇಳಿದ್ದರು. ಶಿಕ್ಷಣ ಇಲಾಖೆ ಜಾಗದಲ್ಲಿ ಖಾಸಗಿ ಕಾರ್ಯಕ್ರಮಕ್ಕೆ ಅವಕಾಶವಿಲ್ಲ ಎಂದಿರುವುದು. ಇನ್ನಾದರು ನಾಟಕ ಮಾಡುವುದನ್ನು ಬಿಡಿ.

-**ಜಗದೀಶ್ ಶೆಟ್ಟರ್** ಮಾಜಿ ಮುಖ್ಯಮಂತ್ರಿ

ಚಿತ್ತಾಪುರ ಪಥಸಂಚಲನ ಅನುಮತಿಗೆ ಮರು ಅರ್ಜಿ

ಕಲಬುರಗಿ ಡಿಸಿಗೆ ಮರು ಅರ್ಜಿ ಸಲ್ಲಿಕೆ | ಅನುಮತಿ ನೀಡಲು ಆರ್‌ಎಸ್‌ಎಸ್ ಜಿಲ್ಲಾ ಸಂಚಾಲಕ ಅಶೋಕ್ ಪಾಟೀಲ್ ಮನವಿ

ಕಲಬುರಗಿ: ಹೈಕೋರ್ಟ್ ಆದೇಶದ ಬಳಿಕ ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನ.2 ರಂದು ಪಥ ಸಂಚಲನ ನಡೆಸಲು ಅನುಮತಿಗಾಗಿ ಆರ್‌ಎಸ್‌ಎಸ್ ಮರು ಅರ್ಜಿ ಸಲ್ಲಿಸಿದೆ. ಆರ್‌ಎಸ್‌ಎಸ್‌ನ ಕಲಬುರಗಿ ಜಿಲ್ಲಾ ಸಂಚಾಲಕ ಅಶೋಕ್ ಪಾಟೀಲ್ ಕಲಬುರಗಿ ಜಿಲ್ಲಾಧಿಕಾರಿಗಳಿಗೆ ಎರಡು ಅಧಿಕೃತ ಇ-ಮೇಲ್ ವಿಳಾಸ ಮತ್ತು ವಾಟ್ಸಾಪ್‌ಗೆ ಅರ್ಜಿಯನ್ನು ರವಾನಿಸಿದ್ದು, ಪಥ ಸಂಚಲನಕ್ಕೆ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.

ಭಾನುವಾರ ಚಿತ್ತಾಪುರದಲ್ಲಿ ನಡೆಯಬೇಕಿದ್ದ ಪಥ ಸಂಚಲನಕ್ಕೆ ತಹಸೀಲ್ದಾರ್ ಅವರು ಕಡಿವಾಣ ಹಾಕಿದ್ದರು. ಅದನ್ನು ಆರ್‌ಎಸ್‌ಎಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಕಲಬುರಗಿ ವಿಭಾಗದ ಹೈಕೋರ್ಟ್ ಪೀಠ, ತುರ್ತು ವಿಚಾರಣೆ ನಡೆಸಿ ನವೆಂಬರ್ 2ರಂದು ಪಥ ಸಂಚಲನಕ್ಕೆ ಅವಕಾಶ ನೀಡುವ ಬಗ್ಗೆ ಪರಿಶೀಲಿಸುವಂತೆ ಸರಕಾರಕ್ಕೆ ಆದೇಶಿಸಿತ್ತು. ಜತೆಗೆ ಅನುಮತಿಗಾಗಿ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಆರ್‌ಎಸ್‌ಎಸ್‌ಗೆ ಸೂಚನೆ ನೀಡಿತ್ತು. ಅದನ್ನು ಆಧರಿಸಿ, ಅಶೋಕ್ ಪಾಟೀಲ್ ಅವರು ಮರು ಅರ್ಜಿ ಸಲ್ಲಿಸಿದ್ದಾರೆ.

ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ತಾವು ಮನವಿ ಸಲ್ಲಿಸಲು ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸಕ್ಕೆ ಭೇಟಿ ನೀಡಿದ್ದು, ಅಲ್ಲಿ ನಮ್ಮನ್ನು ಒಳಗೆ ಬಿಡಲಿಲ್ಲ. ಆಪ್ತ ಸಹಾಯಕರಿಗೆ ಅರ್ಜಿ ಸಲ್ಲಿಸಲು ಸೂಚನೆ ನೀಡಲಾಗಿತ್ತು. ಆದರೆ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರು ಕರೆ ಸ್ವೀಕರಿಸಲಿಲ್ಲ, ಹೀಗಾಗಿ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇವೆ. ವಾಟ್ಸಾಪ್ ಮೂಲಕವೂ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಹೈಕೋರ್ಟ್ ಅದೇಶದ ಹಿನ್ನೆಲೆಯಲ್ಲಿ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಆರ್‌ಎಸ್‌ಎಸ್ ಮುಂದಾಗಿದೆ. ಅಕ್ಟೋಬರ್ 19ರಂದು ಚಿತ್ತಾಪುರದಲ್ಲಿ ಪಥ ಸಂಚಲನ ನಡೆಸಲು ಅನುಮತಿ ನೀಡುವಂತೆ ಈ ಮೊದಲು ಅಕ್ಟೋಬರ್ 13 ರಂದು ಅಶೋಕ್ ಪಾಟೀಲ್ ಅವರು ಚಿತ್ತಾಪುರ ಪುರಸಭೆ ಮುಖ್ಯಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು.

ಈ ವೇಳೆ ಚಿತ್ತಾಪುರ ಎಪಿಎಂಸಿ ಯಾರ್ಡ್ ಮತ್ತು ಬಸ್ ನಿಲ್ದಾಣದ ಎದುರುಗಡೆಯಿಂದ ಪಥ ಸಂಚಲನ ಆರಂಭಗೊಂಡು ಅಂಬೇಡ್ಕರ್ ವೃತ್ತ, ಭುವನೇಶ್ವರಿ ವೃತ್ತ, ಪಾಲಪ್‌ಗಲ್ಲಿ, ಹೋಳಿಕಟ್ಟಿ, ಬಸವೇಶ್ವರ ಚೌಕ, ಹಳೇ ಕಪಡ ಬಜಾರ್ ವೃತ್ತ, ಜನತಾಚೌಕ್, ನಾಗಾವಿಚೌಕ್‌ನಿಂದ ನಂದಕಿಶೋರ್ ಬಜಾಜ್ ಮನೆ ಎದುರುಗಡೆ ತಿರುಗಿ ಸೇವಾಲಾಲ್ ಚೌಕ್ ಪುರಸಭೆ ಕಾರ್ಯಾಲಯ ಮುಂಭಾಗ ಹಳೆ ಗಂಜ್ ವೃತ್ತ, ಕಾಶೀಗಲ್ಲಿ, ಗಣೇಶ ಮಂದಿರ ಮೂಲಕ ಬಜಾಜ್ ಕಲ್ಯಾಣ ಮಂಟಪ ತಲುಪಿ ಸಾರ್ವಜನಿಕ ಸಮಾರಂಭ ಆಯೋಜಿಸಿರುವುದಾಗಿ ತಿಳಿಸಲಾಗಿತ್ತು. ಈ ಮಾರ್ಗಗಳಲ್ಲಿ ಸ್ವಚ್ಛ ಮಾಡಿಕೊಡಬೇಕು ಹಾಗೂ ಬ್ಯಾನರ್ ಬಟಿಂಗ್ಸ್‌ಗಳನ್ನು ಕಟ್ಟಲು ಅವಕಾಶ ನೀಡಬೇಕು ಎಂದು ಕೋರಲಾಗಿತ್ತು.

ಹೊಣೆಗಾರಿಕೆಗೆ ನಕಾರ: ಅನುಮತಿ ನಿರಾಕರಣೆ

ಚಿತ್ತಾಪುರ ತಹಸೀಲ್ದಾರ್ ಅವರು ಪಥ ಸಂಚಲನ ನಡೆಸುವ ಉದ್ದೇಶ, ಭಾಗವಹಿಸುವವರ ಹೆಸರು ಮತ್ತು ಈ ಸಂದರ್ಭದಲ್ಲಿ ಕಾನೂನು ಸುವ್ಯಸ್ಥೆಗೆ ಧಕ್ಕೆಯಾದರೆ ಅದರ ಜವಬ್ದಾರಿ ಹೊರುವ ಹೊಣೆಗಾರಿಕಾ ಪ್ರಮಾಣ ಪತ್ರ ಮತ್ತು ಪಥ ಸಂಚಲನ ಆಯೋಜಿಸುವ ಸಂಸ್ಥೆಯ ನೋಂದಣಿ ದಾಖಲಾತಿ ಪತ್ರಗಳನ್ನು ಒದಗಿಸುವಂತೆ ಸೂಚಿಸಿದರು. ಅದ್ಯಾವುದನ್ನು ನೀಡದ ಕಾರಣ ತಹಸೀಲ್ದಾರ್ ನಾಗಯ್ಯ ಹಿರೇಮಠ್ ಪಥ ಸಂಚಲನಕ್ಕೆ ಅನುಮತಿಯನ್ನು ನಿರಾಕರಿಸಿದರು. ಹೈಕೋರ್ಟ್‌ನಲ್ಲಿ ವಾದ-ವಿವಾದದ ಬಳಿಕ ಎರಡನೇ ಅರ್ಜಿ ಸಲ್ಲಿಕೆಯಾಗಿದೆ.

ಗಣವೇಷ ಧರಿಸಿ ವೈದ್ಯಾಧಿಕಾರಿ ಪಥಸಂಚಲನದಲ್ಲಿ ಭಾಗಿ

ಭಾನುವಾರ ಸೇಡಂನಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ತಾಲೂಕು ಆಡಳಿತ ವೈದ್ಯಾಧಿಕಾರಿ ನಾಗರಾಜು ಅವರು, ಗಣವೇಷ ಧರಿಸಿ ಭಾಗವಹಿಸಿದ್ದರು. ಕೆಸಿಎಸ್‌ಆರ್ ನಿಯಮದ ಪ್ರಕಾರ ಸರಕಾರಿ ನೌಕರರು ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ಭಾಗವಹಿಸುವಂತಿಲ್ಲ ಎಂಬ ನಿಬಂಧನೆಯಿದೆ. ಈ ಮೊದಲು ನಡೆದಿದ್ದ ಪಥ ಸಂಚಲನದಲ್ಲಿ ಭಾಗವಹಿಸಿದ್ದರು ಎಂಬ ಕಾರಣಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಿಡಿಒ ಅವರನ್ನು ಅಮಾನತು ಗೊಳಿಸಲಾಗಿತ್ತು. ಅದರ ಬಳಿಕವೂ ತಾಲೂಕು ವೈದ್ಯಾಧಿಕಾರಿ ಅವರು ಪಥ ಸಂಚಲನದಲ್ಲಿ ಭಾಗವಹಿಸಿ ಸರಕಾರಕ್ಕೆ ಸಡ್ಡು ಹೊಡೆದಿದ್ದಾರೆ. ಸೇಡಂ ಪಥ ಸಂಚಲನದಲ್ಲಿ ಕೆಲ ಕಾಂಗ್ರೆಸ್ ಕಾರ್ಯಕರ್ತರೂ ಭಾಗವಹಿಸಿದ್ದರು ಎಂದು ಹೇಳಲಾಗುತ್ತಿದೆ.

ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಅಧಿಕಾರಿಗಳು ಭಾಗಿ

ಬಸವಕಲ್ಯಾಣ (ಬೀದರ್) ಸಂಘ ಪರಿವಾರದ ಪಥ ಸಂಚಲನದಲ್ಲಿ ಭಾಗವಹಿಸಿದ್ದ ಆರೋಪದಲ್ಲಿ ರಾಯಚೂರಿನ ಪಿಡಿಒ ಅಮಾನತುಗೊಂಡ ಬೆನ್ನಲ್ಲೇ ಬೀದರ ಜಿಲ್ಲೆಯ ಬಸವಕಲ್ಯಾಣ ನಗರದಲ್ಲಿ ನಡೆದ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಭಾಗಿಯಾದ ಅಧಿಕಾರಿಗಳ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿದೆ. ಅ.14 ರಂದು ನಗರದಲ್ಲಿ ಜರುಗಿದ ಪಥ ಸಂಚಲನದಲ್ಲಿ ಅಧಿಕಾರಿಗಳು ಭಾಗವಹಿಸಿ ಹೆಜ್ಜೆ ಹಾಕಿರುವುದು ಬೆಳಕಿಗೆ ಬಂದಿದೆ. ಸರಕಾರದ ಆದೇಶಕ್ಕೆ ಸಡ್ಡು ಹೊಡೆದ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಹೇಶ್ ಪಾಟೀಲ್ ಗಣವೇಶ ಧರಿಸಿ ಪಥ ಸಂಚಲನದಲ್ಲಿ ಭಾಗಿಯಾಗಿದ್ದರು. ಅದೇ ರೀತಿ ಸರಕಾರಿ ನೀಲಾಂಬಿಕಾ ಪದವಿ ಪೂರ್ವ ಕಾಲೇಜು, ಪ್ರಾಂಶುಪಾಲ ಕಾಶಿನಾಥ ರೆಡ್ಡಿ ಕೂಡ ಭಾಗಿಯಾಗಿರುವ ಭಾವಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರದಾಡುತ್ತಿವೆ. ಈ ಪಥ ಸಂಚಲನದಲ್ಲಿ ಇನ್ನೂ ಕೆಲ ಸರಕಾರಿ ಶಾಲೆಯ ಶಿಕ್ಷಕರು ಹಾಗೂ ಪಿಡಿಒಗಳು ಭಾಗಿಯಾಗಿದ್ದಾರೆ ಎನ್ನಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ವೈರಲ್ ಆಗುತ್ತಿದ್ದಂತೆ ಸರಕಾರಿ ಅಧಿಕಾರಿಗಳಲ್ಲಿ ನಡುಕ ಶುರುವಾಗಿದೆ.

ಹುಳುಕು ಮುಚ್ಚಿಕೊಳ್ಳಲು ಆರೆಸ್ಸೆಸ್ ಹೆಸರು ಬಳಕೆ

ರಾಜ್ಯ ಸರಕಾರದ ವಿರುದ್ಧ ಪ್ರತಿಪಕ್ಷ ನಾಯಕ ಆರ್.ಅಶೋಕ್ ಗಂಭೀರ ಆರೋಪ

ಹಾಸನ: ರಾಜ್ಯದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಏನನ್ನೂ ಮಾಡದ ಕಾಂಗ್ರೆಸ್ ಸರಕಾರ ಆರ್‌ಎಸ್‌ಎಸ್ ಹೆಸರು ಬಳಸಿ ತನ್ನ ಹುಳುಕು ಮುಚ್ಚಲು ಹೊರಟಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದರು.

ಹಾಸನಾಂಬೆ ದರ್ಶನ ಪಡೆದು ಸುದ್ದಿಗಾರರ ಜತೆ ಮಾತನಾಡಿದ ಅವರು, ಎಲ್ಲವನ್ನೂ ಮುಚ್ಚಿಕೊಳ್ಳಲು ಆರ್‌ಎಸ್‌ಎಸ್ ಹೆಸರು ಹೇಳಿ ಡೈವೋರ್ಟ್ ಮಾಡಲು ರಾಜ್ಯ ಸರಕಾರ ಹುನ್ನಾರ ಮಾಡುತ್ತಿದೆ ಎಂದು ಕಿಡಿ ಕಾರಿದರು.

ಎಸ್‌ಡಿಆರ್‌ಎಫ್ ಅಡಿ 384 ಕೋಟಿ ಕೇಂದ್ರ ಪರಿಹಾರ ಕಡಿಮೆ ಆಗಲಿಲ್ಲವೇ ಎಂಬ ಪ್ರಶ್ನೆಗ ಮಹಾರಾಷ್ಟ್ರದಿಂದಲೇ ನಮಗೆ ಹಾನಿಯಾಗಿರುವುದು. ಅದಕ್ಕೆ ಆ ರಾಜ್ಯಕ್ಕೆ ಹೆಚ್ಚು, ನಮಗೆ ಕಡಿಮೆ. ಅದರೂ ಕೇಂದ್ರ ತಂಡದ ಪರಿಶೀಲಿಸಿ, ವರದಿ ಆಧರಿಸಿ ಪರಿಹಾರ ಹಣ ಬಿಡುಗಡೆ ಮಾಡಲಾಗಿದೆ ಎಂದರು.



ಹಿಂದೆ ಮನಮೋಹನ್ ಸಿಂಗ್ ಸರಕಾರ ಇದ್ದಾಗ ಎಷ್ಟು ಕೊಟ್ಟಿದ್ರು ಎಂದು ಹೇಳಲಿ, ಒಂದೇ ಒಂದು ಸರ್ವಪಕ್ಷ ಸಭೆ ಕರೆದಿಲ್ಲ, ಸಿಎಂ ಜಿಎಸ್‌ಟಿ ಮೀಟಿಂಗ್‌ಗೆ ಹೋಗಿಲ್ಲ ಎಂದು ಲೇವಡಿ ಮಾಡಿದರು. ಹೆಚ್ಚು ಪರಿಹಾರ ಬೇಕಿದ್ರೆ, ಅವರ 9 ಜನ ಸಂಸದರು ಕೇಳಲಿ ಎಂದರು.

ಪೂರ್ವಾಪರ ತಿಳಿದುಕೊಳ್ಳುವ ಯೋಗ್ಯತೆ ಸರಕಾರಕ್ಕಿಲ್ಲ

ಸರಕಾರಿ ಜಾಗ ಬಳಸದಂತೆ ಹಿಂದೆ ಜಗದೀಶ್ ಶೆಟ್ಟರ್ ಅವರು ಆದೇಶ ಮಾಡಿ ಸಹಿ ಹಾಕಿಲ್ಲ. ಅದು ಕ್ಯಾಬಿನೆಟ್ ಮುಂದೆಯೂ ತೀರ್ಮಾನ ಆಗಿಲ್ಲ. ಮಂತ್ರಿಯೂ ಸಹಿ ಹಾಕಿಲ್ಲ. ಆದೇಶ ಮಾಡಿದ್ದರೆ ದಾಖಲೆ ಕೊಡಿ ಎಂದು ಆಗ್ರಹಿಸಿದ ಅಶೋಕ್, ಆದೇಶದ ಪೂರ್ವಾಪರ ತಿಳಿದುಕೊಳ್ಳುವ ಸಣ್ಣ ಜ್ಞಾನ ಸರಕಾರ ಮಾಡುತ್ತಿರುವವರಿಗೆ ಇಲ್ಲ ಎಂದು ಲೇವಡಿ ಮಾಡಿದರು. ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದೆ. ತುಂಬಿದೆ. ಅಲ್ಲಿಂದ ಇಲ್ಲದ್ದು ಈಗ ಬಂದಿರುವುದೇಕೆ, ನಮಾಜ್ ಮಾಡಲು ಎಷ್ಟೋ ಕಡೆ ಟ್ರಾಫಿಕ್ ಬಂದ್ ಮಾಡುತ್ತಾರೆ, ಸರ್ಕಾರ ಏನು ಮಾಡುತ್ತಿದೆ ಎಂದು ಆರ್.ಅಶೋಕ ವಾಗ್ದಾಳಿ ನಡೆಸಿದರು.

ಕಲಬುರಗಿಗೆ ಬರಲಿ, ಸ್ವಾಗತ ಮಾಡುತ್ತೇವೆ ನಾವು ಯಾವುದೇ ಹಸ್ತಕ್ಷೇಪ ಮಾಡೋದಿಲ್ಲ

ರಸ್ತೆ ಮೇಲೆ ನಮಾಜು ಮಾಡಲು ಅರ್ಜಿ ಸಲ್ಲಿಸಿ

ಬೆಂಗಳೂರು: ಪಥಸಂಚಲನ ನಡೆಸಲು ಆರ್‌ಎಸ್‌ಎಸ್ ನವರು ಅನುಮತಿ ಪಡೆಯಬೇಕು ಎನ್ನುವ ನಿಯಮವೇ ಎಲ್ಲರಿಗೂ ಅನ್ವಯ. ರಸ್ತೆ ಮೇಲೆ ಪ್ರಾರ್ಥನೆ ಮಾಡವುದಕ್ಕೂ ಅರ್ಜಿ ಸಲ್ಲಿಸಿ ಅನುಮತಿ ಪಡೆದುಕೊಳ್ಳಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಪ್ರಾರ್ಥನೆಗೆ ಅವಕಾಶ ಕೊಡಬಾರದು ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪತ್ರ ಬರೆದಿದ್ದಾರೆ / ಅವರು (ಮುಸ್ಲಿಮರು) ಕೂಡ ಪರವಾನಗಿ ಪಡೆಯಬೇಕು. ಅವರು ಅರ್ಜಿ ಹಾಕಿ ಅನುಮತಿ ಪಡೆದುಕೊಳ್ಳಬೇಕು. ಈ ಸಂಬಂಧ ಯತ್ನಾಳ್ ಅವರು ಇಂಗ್ಲಿಷ್‌ನಲ್ಲಿ ಪತ್ರ ಬರೆದಿದ್ದೇ ವಿಶೇಷ ಅನಿಸುತ್ತದೆ. ಯಾರಿಗೆ ಸಂದೇಶ ಕೊಡುವುದಕ್ಕೆ ಇಂಗ್ಲಿಷ್‌ನಲ್ಲಿ ಪತ್ರ ಬರೆದಿದ್ದಾರೆ ಗೊತ್ತಿಲ್ಲ. ಸಿಎಂ ಅವರಿಗೆ ಗೊತ್ತಾಗಲಿ ಅಂತಾನೋ, ಅಮಿತ್ ಶಾಗೆ ಗೊತ್ತಾಗಲಿ ಎಂದು ಬರೆದ್ರಾ, ಗೊತ್ತಿಲ್ಲ ಎಂದು ಕಿಡಿ ಕಾರಿದರು.

- **ಪಥ ಸಂಚಲದಲ್ಲಿ ಕೇಂದ್ರ ನೌಕರರು ಭಾಗವಹಿಸಬಹುದು, ರಾಜ್ಯ ಸರಕಾರರಿಗೆ ಅವಕಾಶವಿಲ್ಲ**
- **ಪ್ರಾರ್ಥನೆ ಮಾಡುವುದಕ್ಕೂ ಅರ್ಜಿ ಸಲ್ಲಿಸಿ, ಅನುಮತಿ ಪಡೆಯಬೇಕು**

ಪಥ ಸಂಚಲನ ನಡೆಸಲು ಹೈಕೋರ್ಟ್ ಆದೇಶದಂತೆ ಆರ್‌ಎಸ್‌ಎಸ್ ಹೊಸದಾಗಿ ಅರ್ಜಿ ಸಲ್ಲಿಸಲಿ. ಅನುಮತಿ ನೀಡುವ ಕುರಿತು ಜಿಲ್ಲಾಡಳಿತ ತೀರ್ಮಾನ ಮಾಡಲಿದೆ. ನಾವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ, ಆದರೆ ನಿಮ್ಮ ಸಂಘಟನೆಯ ವ್ಯಕ್ತಿ ಬೆದರಿಕೆ ಹಾಕುತ್ತಾರೆ. ಆರ್‌ಎಸ್‌ಎಸ್ ದೇಶಭಕ್ತರು, ನಿಮ್ಮ ಮನೆಗೂ ಬಂದರೂ ಬರಬಹುದು ಅಂತಾರೆ. ಅವರಿಗೆ ಹೇಳೋ ಶಕ್ತಿ ನಿಮಗೆ ಇಲ್ವಾ?. ತಪ್ಪು ಅಂತಾ ಹೇಳೋ ಶಕ್ತಿ ಇಲ್ವಾ?. ನಮ್ಮ ನಿಮ್ಮ ವಿಚಾರ ಬೇರೆ ಇರಬಹುದು. ಕುಟುಂಬಕ್ಕೆ ಬೆದರಿಕೆ ಹಾಕೋದು ತಪ್ಪಲ್ವಾ? ಇದನ್ನು ಖಂಡಿಸಿದ್ದಾರಾ ಬಿಜೆಪಿಯವರು? ಕಲಬುರಗಿಗೆ ಅವರಿಗೆ ಸ್ವಾಗತ.

ನಮ್ಮದು ಒಕ್ಕೂಟ ವ್ಯವಸ್ಥೆ. ಕೇಂದ್ರ ಸರಕಾರದ ಎಲ್ಲ ನಿಯಮಗಳನ್ನು ನಾವು ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಕೇಂದ್ರ ಸರಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಎಂದು ಕಾನೂನು ತಿದ್ದುಪಡಿ ತಂದಿದೆ. ಆದರೆ, ರಾಜ್ಯ ಸರಕಾರಿ ನೌಕರರು ಆರ್‌ಎಸ್‌ಎಸ್ ಕಾರ್ಯಕ್ರಮ, ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಇಲ್ಲ.

- **ಪ್ರಿಯಾಂಕ್ ಖರ್ಗೆ** ಸಚಿವ

ಮಾಜಿ ಸಿಎಂ ಜಗದೀಶ ಶೆಟ್ಟರ್ ಬಾಲಿಶ ಹೇಳಿಕೆ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಈ ಹಿಂದೆ ಆರ್‌ಎಸ್‌ಎಸ್ ಬಗ್ಗೆ ಏನು ಹೇಳಿದ್ದರು ಎಂದು ನೋಡಲಿ. ಈಗ ಸಿದ್ಧಾಂತ ಬದಲಿಸಿ, ಕುರ್ಚಿಗಾಗಿ ಬಿಜೆಪಿ ಜತೆ ಸೇರಿಕೊಂಡಿದ್ದಾರೆ. ನಾನು ಮುಖ್ಯಮಂತ್ರಿ ಆಗಿದ್ದಾಗ ಹೊರಡಿಸಿದ್ದ ಸುತ್ತೋಲೆಯಲ್ಲಿ ಆರ್‌ಎಸ್‌ಎಸ್ ಹೆಸರು ಪ್ರಸ್ತಾಪಿಸಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಬಾಲಿಶ ಹೇಳಿಕೆ ನೀಡಿದ್ದಾರೆ. ಈಗ ರಾಜ್ಯ ಸರಕಾರ ಹೊರಡಿಸಿರುವ ಆದೇಶದಲ್ಲಿ ಆರ್‌ಎಸ್‌ಎಸ್‌ಗೆ ನಿರ್ಬಂಧ ಎಂದು ಎಲ್ಲೂ ಹೇಳಿಲ್ಲ. ಅವರು ಹೊರಡಿಸಿದ್ದ ಆದೇಶವನ್ನೇ ನಾವು ಮಾಡಿದ್ದೇವೆ' ಎಂದು ಸ್ಪಷ್ಟಪಡಿಸಿದರು.

ಕೋರ್ಟ್ ಏನು ಹೇಳಿದೆ? ಮೊತ್ತೊಮ್ಮೆ ಅರ್ಜಿ ಹಾಕಿ ಎಂದಿದೆ. ಮೊದಲು ಅರ್ಜಿ ಹಾಕಬೇಕಲ್ವಾ?. ಅರ್ಜಿ ಹಾಕುವುದಿಲ್ಲ, ಪರವಾನಗಿ ತೆಗೆದುಕೊಳ್ಳೊಲ್ಲಾ ಅಂದರೆ ಹೇಗೆ? ಎಂದು ಪ್ರಶ್ನಿಸಿದರು.

ಎಂಎಲ್‌ಸಿ ಸಿಟಿ ರವಿ ಅವರು ಚಿಕ್ಕಮಗಳೂರು ಜಿಲ್ಲೆ ಮಲ್ಲೇನಹಳ್ಳಿಯ ಬಿಂಡಿಗಾ ಶ್ರೀದೇವಿರಮ್ಮನವರ ಜಾತ್ರೆ ನಿಮಿತ್ತ ಬೆಟ್ಟ ಹತ್ತಿ ಶ್ರೀ ದೇವಿರಮ್ಮ ದೇವಿಯ ಆಶೀರ್ವಾದ ಪಡೆದರು.

ವಿಶಾಖಪಟ್ಟಣಕ್ಕೆ ವಿಶೇಷ ರೈಲು

ಬೆಂಗಳೂರು: ದೀಪಾವಳಿ ಹಬ್ಬದ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ನೈಋತ್ಯ ರೈಲ್ವೆಯು ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಆಂಧ್ರ ಪ್ರದೇಶದ ವಿಶಾಖಪಟ್ಟಣಕ್ಕೆ ಒಂದು-ಮಾರ್ಗದ ವಿಶೇಷ ರೈಲು ಸೇವೆಯನ್ನು ಓಡಿಸಲಿದೆ.

ರೈಲು ಸಂಖ್ಯೆ 08544 ಅಕ್ಟೋಬರ್ 22, 2025 ರಂದು ಮಧ್ಯಾಹ್ನ 3:50ಕ್ಕೆ ಎಸ್‌ಎಂವಿಟಿ ಬೆಂಗಳೂರಿನಿಂದ ಹೊರಡಲಿದೆ. ಈ ರೈಲು ಕೃಷ್ಣರಾಜಪುರಂ, ಬಂಗಾರಪೇಟೆ, ಕುಪ್ಪಂ, ಜೋಲಾರ್‌ಪೇಟೆ, ಕಾಟ್ಪಾಡಿ, ರೇಣಿಗುಂಟ, ಗೂಡೂರು, ನೆಲ್ಲೂರು, ಗುಡಿವಾಡ, ಕೈಕಲೂರು, ಆಕಿವಿಡು, ಭೀಮಾವರಂ, ತನುಕು, ನಿಡದವೋಲು, ರಾಜಮಂಡ್ರಿ, ಸಾಮಲಕೋಟ, ಎಲಮಂಚಿಲಿ ಮತ್ತು ದುವ್ವಾಡ ನಿಲ್ದಾಣಗಳಲ್ಲಿ ನಿಲುಗಡೆ ಮಾಡಿ, ಅಕ್ಟೋಬರ್ 23, 2025 ರಂದು ಮಧ್ಯಾಹ್ನ 1:30ಕ್ಕೆ ವಿಶಾಖಪಟ್ಟಣಂ ನಿಲ್ದಾಣವನ್ನು ತಲುಪಲಿದೆ.

ಅಂತಿಮ ಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ವಿವಿಧ 184 ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆದಿದ್ದ ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸದರಿ ನೇಮಕ ಪ್ರಕ್ರಿಯೆಯಲ್ಲಿ ಕಲ್ಯಾಣ ಅಧಿಕಾರಿಗಳ-12 ಹುದ್ದೆಗಳು, ಕ್ಷೇತ್ರ ನಿರೀಕ್ಷಕರು-60 ಹುದ್ದೆಗಳು, ಪ್ರಥಮ ದರ್ಜೆ ಸಹಾಯಕರು-12 ಹುದ್ದೆಗಳು, ದ್ವಿತೀಯ ದರ್ಜೆ ಸಹಾಯಕರು-100 ಹುದ್ದೆಗಳ ಆಯ್ಕೆಗೆ ಅರ್ಹತೆ ಪಡೆದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: 18-10-2025 ರಂದು ಮಂಡಳಿಯ https://karbwwb.karnataka.gov.in ಕ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವರದಕ್ಷಣೆ ಕಿರುಕುಳ: ಆತ್ಮಹತ್ಯೆ

ಗಂಡ, ಅತ್ತೆ, ಮಾವ, ಮೈದುನನ ಮೇಲೆ ಆರೋಪ

ಚಿಕ್ಕಬಳ್ಳಾಪುರ: ಗಂಡ ಅತ್ತೆ ಮಾವ ಮೈದುನ ಸೇರಿದಂತೆ ಸಂಬಂಧಿಕರು ವರದಕ್ಷಿಣೆ ಹಾಗೂ ನಿವೇಶನಕ್ಕಾಗಿ ಕಿರಕುಳ ನೀಡಿದ್ದಾರೆ ಎಂದು ಆರೋಪಿಸಿ ಗೃಹಿಣಿಯೊಬ್ಬರು ಸಾಯುವ ಮುನ್ನ ವಿಡಿಯೊ ಮಾಡಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಘಾಟಿ ಬಳಿ ಇರುವ ವಿಶ್ವೇಶ್ವರಯ್ಯ ಪಿಕ್ ಅಪ್ ಡ್ಯಾಂನಲ್ಲಿ ನಡೆದಿದೆ.

ಸ್ವಾತೇನಹಳ್ಳಿ ಗ್ರಾಮದ ಉಪನ್ಯಾಸಕಿ ಪುಷ್ಪ ಎಂಬುವರನ್ನು ತಪಸೀಹಳ್ಳಿ ಗ್ರಾಮದ ವೇಣು ಎಂಬುವವರ ಜತೆ ಕಳೆದ ಒಂದೂವರೆ ವರ್ಷದ ಹಿಂದೆ ವಿವಾಹ ಮಾಡಿಕೊಡಲಾಗಿತ್ತು. ಆದ್ರೆ ವಿವಾಹವಾದ ನಂತರ ಹೆಚ್ಚಿನ ವರದಕ್ಷಿಣೆ ಹಾಗೂ ನಿವೇಶನಕ್ಕಾಗಿ ಗಂಡನ ಮನೆಯ ವರು ಪೀಡಿಸಿ ಕಿರಕುಳ ಕೊಡುತ್ತಿದ್ದರಂತೆ. ಇನ್ನೂ ಗಂಡನಿಗೆ ಎರಡನೇ ಮದುವೆ ಯಾಗುವ ಆಸೆ ಇದ್ದು ಮಾನಸಿಕವಾಗಿ ಕಿರುಕುಳ ಕೊಡ್ತಿದ್ದರು ಎನ್ನಲಾಗಿದೆ. ಇಷ್ಟೇ ಅಲ್ಲದೆ ಊಟದಲ್ಲಿ ವಿಷ ಹಾಕಿ ಕೊಲೆ ಮಾಡಲು ಸಹ ಪ್ಲಾನ್ ಮಾಡಿದ್ದರು. ಇದರ ನಡುವೆ ಮೈದುನನ ಜತೆ ಮಲಗುವಂತೆಯೂ ಬಲವಂತ ಮಾಡಿದ ಆರೋಪ ಮಾಡಿರುವ ಗೃಹಿಣಿ ಪುಷ್ಪ ಸುದೀಪ್ 8 ನಿಮಿಷಗಳ ವಿಡಿಯೊ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂರು ದಿನಗಳ ಹಿಂದೆ ನಾಪತ್ತೆ ಯಾಗಿದ್ದ ಪುಷ್ಪ ಸೋಮವಾರ ವಿಶ್ವೇಶ್ವರಯ್ಯ ಪಿಕ್ ಅಪ್ ಡ್ಯಾಂನಲ್ಲಿ ಶವವಾಗಿ ಪತ್ತೆಯಾಗಿದ್ದಾಳೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ಗಂಡ ಮತ್ತು ಮಾವನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಗಂಡನ ಮನೆಯಲ್ಲಿಯೇ ಮಣ್ಣು ಮಾಡಿ

ವಿಡಿಯೊದಲ್ಲಿ ಗಂಡ ವೇಣು, ಅತ್ತೆ ಭಾರತಿ, ಮಾವ ಗೋವಿಂದಪ್ಪ ಹಾಗೂ ಮೈದುನ ನಾರಾಯಣಸ್ವಾಮಿ ಸೇರಿದಂತೆ ಸಂಬಂಧಿಕರಾದ ಮುತ್ತೇಗೌಡ ಹಾಗೂ ಪಲ್ಲವಿ ಅವರ ಕಿರುಕುಳವೇ ನನ್ನ ಸಾವಿಗೆ ಕಾರಣ ಅವರಿಗೆ ತಕ್ಕ ಶಿಕ್ಷೆ ಕೊಡಿಸಿ. ನನ್ನ ಮೃತದೇಹವನ್ನು ಗಂಡನ ಮನೆಯೊಳಗೆ ಮಣ್ಣು ಮಾಡುವಂತೆ ಗೃಹಿಣಿ ವಿಡಿಯೊದಲ್ಲಿ ಆಗ್ರಹಿಸಿದ್ದಾಳೆ.

ಸಕ್ರೆಬೈಲು ಆನೆ ಬಿಡಾರದ ಆನೆಗಳಿಗೆ ಅನಾರೋಗ್ಯ

ಇಂಜೆಕ್ಷನ್‌ಗಳಿಂದ ರಿಯಾಕ್ಷನ್ | ಶಿವಮೊಗ್ಗ ದಸರಾದಲ್ಲಿ ಪಾಲ್ಗೊಂಡ ಸಾಗರ, ಬಾಲಣ್ಣ ಆನೆಗೆ ಅನಾರೋಗ್ಯ

ಶಿವಮೊಗ್ಗ: ಸಮೀಪದ ಸಕ್ರೆಬೈಲು ಆನೆ ಬಿಡಾರದಲ್ಲಿನ ಆನೆಗಳು ಅನಾರೋಗ್ಯಕ್ಕೆ ಒಳಗಾಗಿದ್ದು, ಈ ಪೈಕಿ ಪ್ರಸಿದ್ಧ ನಾಡಹಬ್ಬ ಶಿವಮೊಗ್ಗ ದಸರಾ ಆಚರಣೆಯಲ್ಲಿ ಅಂಬಾರಿ ಹೊರುವುದಕ್ಕೆ ನಗರಕ್ಕೆ ಕರೆತರಲಾಗಿದ್ದ ಆನೆ ಬಾಲಣ್ಣನ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಇದು ಭಾರೀ ಆತಂಕ ಸೃಷ್ಟಿಸಿದೆ.

ಸಕ್ರೆಬೈಲುಆನೆ ಬಿಡಾರದಲ್ಲೀಗ ಒಟ್ಟು ನಾಲ್ಕು ಆನೆಗಳು ಅನಾರೋಗ್ಯಕ್ಕೆ ಒಳಗಾಗಿವೆ. ಶಿವಮೊಗ್ಗ ದಸರಾ ಆಚರಣೆ ವೇಳೆ ಜಂಬೂ ಸವಾರಿ ಮೆರವಣಿಗೆಗೆ ಸಕ್ರೆಬೈಲು ಆನೆ ಬಿಡಾರದಿಂದ ಕರೆತಲಾಗಿದ್ದ ಬಾಲಣ್ಣ, ಸಾಗರ್, ಬಹದ್ದೂರ್ ಹೆಸರಿನ ಮೂರು ಆನೆಗಳ ಪೈಕಿ ಬಾಲಣ್ಣ ಹಾಗೂ ಸಾಗರ್ ಅನಾರೋಗ್ಯಕ್ಕೆ ಒಳಗಾಗಿವೆ. ಅದರ ಜತೆಗೆ ಆನೆಬಿಡಾರದಲ್ಲಿನ ವಿಕ್ರಾಂತ್ ಹಾಗೂ ಅಡಕ ಪಡಕ ಎನ್ನುವ ಅನೆಗಳು ಕೂಡ ಅನಾರೋಗ್ಯಕ್ಕೆ ಒಳಗಾಗಿವೆ. ಇದಕ್ಕೆ ಆನೆ ಬಿಡಾರದ ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣ ಎನ್ನಲಾಗಿದೆ.

ಅಂಬಾರಿ ಹೊತ್ತಿದ್ದ ಬಾಲಣ್ಣನ ಕಿವಿಯ ಭಾಗದಲ್ಲಿ ಗಾಯವಾಗಿ ಹುಳುಗಳ ಬೀಳುತ್ತಿವೆ. ದಸರಾ ಅಂಬಾರಿಗೆ ಬಾಲಣ್ಣ ಹೋಗುವಂತಿರಲಿಲ್ಲ ಬಾಲಣ್ಣನಿಗೆ ಕಾಲು ನೋವಿತ್ತು ಅರ್ಜುನ ಹೋಗಬೇಕಾಗಿತ್ತು ಆದರೆ ಕೊನೆ ಗಳಿಗೆಯಲ್ಲಿ ಅರ್ಜುನನ ಬದಲಾಗಿ ಕಾಲು ನೋವಿದ್ದ ಬಾಲಣ್ಣನನ್ನು ದಸರಾ ಅಂಬಾರಿ ತಯಾರಿಗೆ ಕಳುಹಿಸಲಾಯಿತು. ಮೊದಲೇ ಕಾಲು ನೋವು ಹೇಳುವುದು ಯಾರ ಹತ್ತಿರ ಮೂಕ ಜೀವಿ ಅಂಬಾರಿಗೆ ಹೋಗಿ ಆಯ್ತು ಆದರೆ ಕಾಲು ನೋವು ಹೆಚ್ಚಾದಾಗ ಬಾಲಣ್ಣನಿಗೆ ಕಿವಿಗೆ ಇಂಜೆಕ್ಷನ್ ನೀಡಲಾಯಿತು ಇಬ್ಬರು ವೈದ್ಯರು ಎರಡು ಇಂಜೆಕ್ಷನ್ ನೀಡಿದ್ದಾರೆ.

ಅದು ರಿಯಾಕ್ಷನ್ ಆಗಿ ಬಾಲಣ್ಣನ ಕಿವಿ ಈಗ ಕೊಳೆತು ಹೋಗಿದೆ ಹೊರಗಿನಿಂದ ವೈದ್ಯರನ್ನು ಕರೆಸಿ ಚಿಕಿತ್ಸೆ ಕೊಡಿಸಿದ್ದು ಅದು ಫಲಕಾರಿಯಾಗುವ ಸಾಧ್ಯತೆ ಕಡಿಮೆ ಇದೆ ಎನ್ನಲಾಗಿದೆ. ಅದೇ ರೀತಿ ಸಾಗರನಿಗೆ ಹೊಟ್ಟೆ ನೋವು ಎಂದು ಕೊಟ್ಟ ಇಂಜೆಕ್ಷನ್‌ನಿಂದ ಆದ ಗಾಯ ದೊಡ್ಡದಾಗಿದೆ. ಉಳಿದಂತೆ ವಿಕ್ರಾಂತ್ ಆನೆಯ ಕಾಲು ಕೊಳೆತು ಹೋಗಿದೆ. ಆಡ್ಕ ಬಡ್ಕಾ ಎನ್ನುವ ಕುಂದಾಪುರದ ಹಾಲಾಡಿ ಹತ್ತಿರ ಹಿಡಿದು ತಂದ ಆನೆ ಪರಿಸ್ಥಿತಿ ಕೂಡ ಸರಿ ಇಲ್ಲ ಎಂದು ಹೇಳಲಾಗಿದೆ.



ಸ್ಪಷ್ಟೀಕರಣ ನೀಡಿದ ಡಿಸಿಎಫ್ ಪಟಗಾರ್

ಸಕ್ರೇಬೈಲು ಆನೆಬಿಡಾರದ ಆನೆಗಳ ಆರೋಗ್ಯದ ಬಗ್ಗೆ ಕೊನೆಗೂ ದೂರವಾಣಿವಲ್ಲಿ ಸಿಕ್ಕು ಸ್ಪಷ್ಟನೆ ನೀಡಿದ ಡಿಸಿಎಫ್ ಪಟಗಾರ್‌ರವರು ಬಾಲಣ್ಣನ ಕಿವಿಗೆ ಗಾಯವಾಗಿರುವುದು ನಿಜ. ಆದರೆ ಯಾವುದೇ ಆತಂಕಪಡಬೇಕಾಗಿಲ್ಲ. ಈಗಾಗಲೇ ಬನ್ನೇರುಘಟ್ಟದಿಂದ ವೈದ್ಯರನ್ನು ಕರೆಯಿಸಿ ಚಿಕಿತ್ಸೆ ನೀಡಲಾಗಿದೆ. ಈ ಹಿಂದೆ ಬಾಲಣ್ಣನ ಕಿವಿಗೆ ಇಂಜಕ್ಷನ್ ನೀಡುವಾಗ ಇಂಜೆಕ್ಷನ್ ಮುಳ್ಳು ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರಿಂದ ರಿಯಾಕ್ಷನ್ ಆಗಿತ್ತು. ಆದ್ದರಿಂದ ಗಾಯವಾಗಿತ್ತು ಈಗ ಅದಕ್ಕೆ ಚಿಕಿತ್ಸೆ ಕೊಡಲಾಗಿದೆ. ಕ್ರಮೇಣ ಗಾಯ ಮಾಯುತ್ತಾ ಬರುತ್ತಿದೆ ಎಂದರು.

ಆನೆಗಳ ಚಿಕಿತ್ಸೆಗಾಗಿ ಆಸ್ಪತ್ರೆ ಇಲ್ಲ

ಇಷ್ಟಾದರೂ ಸಕ್ರೆಬೈಲಿನಲ್ಲಿ ಆನೆಗಳ ಚಿಕಿತ್ಸೆಗಾಗಿ ಆಸ್ಪತ್ರೆ ಇಲ್ಲದಿರುವುದು ಸೋಜಿಗವಾಗಿದೆ. ಹಲವು ವರ್ಷಗಳಿಂದ ಇಲ್ಲಿ ಆನೆಬಿಡಾರವಿದೆ. ಆನೆಗಳೂ ಇವೆ. ಹೋಗಲಿ ಆನೆಗಳ ಆರೋಗ್ಯದ ಬಗ್ಗೆ ಮಾಹಿತಿ ಕೇಳೋಣವೆಂದರೆ ಯಾವ ಅಧಿಕಾರಿಗಳು ಮಾತಿಗೆ ಪ್ರತಿಕ್ರಿಯಿಸುತ್ತಿಲ್ಲ. ಅಲ್ಲಿಗೆ ಹೋದರೂ ಕೂಡ ಪ್ರವೇಶ ನೀಡುತ್ತಿಲ್ಲ. ಇವೆಲ್ಲವೂ ಮತ್ತಷ್ಟು ಅನುಮಾನಕ್ಕೆ ಎಡೆಮಾಡಿಕೊಟ್ಟಿವೆ. ಅಲ್ಲದೆ ಇದಕ್ಕೆ ಸಂಬಂಧಿಸಿದಂತೆ ಮಾವುತರೊಬ್ಬರಿಗೆ ನೋಟೀಸ್ ಕೊಟ್ಟಿರುವುದಾಗಿ ತಿಳಿದು ಬಂದಿದೆ. ಆದರೆ ಕಾವಾಡಿಗರಿಗೆ ನೋಟಿಸ್ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಹಿರಿಯ ಅಧಿಕಾರಿಗಳೆ ಇದರ ಹೊಣೆ ಹೋರಬೇಕು ಎಂದು ಸಾರ್ವಜನಿಕರ ಅಭಿಪ್ರಾಯವಾಗಿದೆ. ಅಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಆನೆಗಳ ದಯನೀಯ ಸ್ಥಿತಿಯನ್ನು ತೋರುವ ಫೋಟೋಗಳು ವೈರಲ್ ಆಗಿದ್ದು, ಸಾರ್ವಜನಿಕರು ಇದನ್ನು ನೋಡಿಯೇ ಕಂಬನಿ ಮಿಡಿಯುತ್ತಾ ಅರಣ್ಯ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಸಾಗರ್ ಆನೆಗೂ ಕೂಡ ಈ ಹಿಂದೆ ಹೊಟ್ಟೆಯಲ್ಲಿ ಸಣ್ಣದೊಂದು ಗಾಯವಾಗಿತ್ತು. ಆ ಕಾರಣಕ್ಕೆ ಅಂದೇ ಚಿಕಿತ್ಸೆ ಕೊಡಲಾಗಿತ್ತು. ಆದರಿಂದಲೂ ರಿಯಾಕ್ಷನ್ ಈಗ ಗಾಯವಾಗಿ ಪಸ್(ಕೀವು) ಬರುತ್ತಾ ಇದೆ. ಅದನ್ನೆಲ್ಲಾ ಸ್ವಚ್ಛಗೊಳಿಸಿ ಈಗ ಚಿಕಿತ್ಸೆ ನೀಡಲಾಗಿದೆ. ಉಳಿದ ಇನ್ನೇರೆಡು ಆನೆಗಳಿಗೆ ಕಾಡಾನೆಗಳಿಂದ ಸಣ್ಣಪುಟ್ಟ ಗಾಯಗಳಾಗಿದ್ದು ಬಿಟ್ಟರೆ ಯಾವುದೇ ಆತಂಕ ಪಡುವ ಅವಶ್ಯಕತೆ ಇಲ್ಲ. ಮತ್ತು ಈ ಸಂಬಂಧ ಯಾರನ್ನೂ ಅಮಾನತು ಮಾಡಿಲ್ಲ ಎಂದು ಸ್ಪಷ್ಟನೆ ಡಿಸಿಎಫ್ ಪಟಗಾರ್ ನೀಡಿದರು.

ಸಮಾಚಾರ ಸಣ್ಣದಲ್ಲ

ದರೋಜಿ: ಅಪರೂಪದ ಸ್ಕ್ಯಾಪ್ಸ್ ಗೂಬೆ ಪತ್ತೆ

ಬಳ್ಳಾರಿ: ವಿಶಿಷ್ಟ ಕಿವಿ ಹೊಂದಿರುವ ಭಾರತೀಯ

ಸ್ಕ್ಯಾಪ್ಸ್ ಗೂಬೆಯು ಮೊದಲ ಬಾರಿ ದರೋಜಿ ಕರಡಿಧಾಮದಲ್ಲಿ ಬಳಿ ಪತ್ತೆಯಾಗಿದೆ. ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ದರೋಜಿ ಕರಡಿಧಾಮದ ಬಳಿ ಪತ್ತೆಯಾಗಿರುವ ಈ ಗೂಬೆಯು, ಗಾತ್ರದಲ್ಲಿ ಚಿಕ್ಕದಾಗಿದ್ದು 20–25 ಸೆ.ಮೀ. ಉದ್ದ ಹಾಗೂ ಬೂದು ಬಣ್ಣದ್ದಾಗಿದೆ. ಕಣ್ಣು ಕಡು ಬಣ್ಣವಿದೆ. ದೇಹದ ಬಣ್ಣ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವುದರಿಂದ ಹಗಲಿನಲ್ಲಿ ಇದನ್ನು ಪತ್ತೆ ಹಚ್ಚುವುದು ಕಷ್ಟ. ಇದರ ವಟ್ ವಟ್ ಸದ್ದಿನಿಂದ ಹಿಂಬಾಲಿಸಿದ ಪಕ್ಷಿ ಪ್ರೇಮಿಗಳಾದ ಸಬ್ಯಸಾಚಿ ರಾಯ್, ಶ್ರೀಧರ್ ಪೆರುಮಾಳ್ ಮತ್ತು ಪಂಪಯ್ಯ ಸ್ವಾಮಿ ಮಳೆಮಠ ಹರಸಾಹಸ ಪಟ್ಟು ಗೂಬೆಯ ಚಿತ್ರ ಸೆರೆಹಿಡಿದ್ದಾರೆ. ಸ್ಕ್ಯಾಪ್ಸ್ ಗೂಬೆ ಈ ಭಾಗದಲ್ಲಿ ಹೊಸದಾಗಿ ಗೋಚರಿಸಿರುವುದು ಅಚ್ಚರಿ ಸಂಗತಿಯಾಗಿದೆ.

ಕಾರು-ಬೈಕ್ ಅಪಘಾತ ಇಬ್ಬರು ದುರ್ಮರಣ

ಹಾಸನ: ಹಾಸನಾಂಬೆಯ ದರ್ಶನ ಪಡೆದು



ವಾಪಸ್ಸಾಗುತ್ತಿದ್ದಾಗ 2 ಬೈಕ್ ಹಾಗೂ ಕಾರಿನ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿರುವ ಘಟನೆ ಚನ್ನರಾಯಪಟ್ಟಣ ತಾಲೂಕಿನ ಕಗ್ಗಲಿಕಾವಲು ಫಾರೆಸ್ಟ್‌ಬಳಿ ನಡೆದಿದೆ. ಬಸವರಾಜು (24), ಅನು (20) ಮೃತ ದುರ್ದೈವಿಗಳು. ಬೆಂಗಳೂರು ಮೂಲದ ಬಸವರಾಜು, ಅನು ಹಾಗೂ ಛಾಯಾ ಎಂಬುವವರು ಯಮಹಾ ಬೈಕ್‌ನಲ್ಲಿ ಬಂದು ಹಾಸನಾಂಬೆ ದರ್ಶನ ಪಡೆದು ಒಂದೆ ಬೈಕ್‌ನಲ್ಲಿ ಮೂವರು ತೆರಳುತ್ತಿದ್ದಾಗ ಚನ್ನರಾಯಪಟ್ಟಣ ಕಡೆಯಿಂದ ವೇಗವಾಗಿ ಬಂದ ಕಾರು ಹೌಸಿಂಗ್ ಬೋರ್ಡ್ ಬಳಿ ಮೊದಲು ಆಕ್ಟಿವಾಗೆ ಡಿಕ್ಕಿ ಹೊಡೆದು ನಂತರ ಬೈಕ್ ಅಪ್ಪಳಿಸಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬಸವಾರಜು ಹಾಗೂ ಅನು ಸ್ಥಳದಲ್ಲೇ ಸಾವನ್ನಪ್ಪಿದರೆ ಛಾಯಾ ಹಾಗೂ ಆಕ್ಟಿವಾ ಸವಾರ ಮೋಹಮದ್ ಎಂಬುವವರಿಗೆ ಗಂಭೀರ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಚನ್ನರಾಯಪಟ್ಟಣ ಆಸ್ಪತ್ರೆಗೆ ದಾಖಲಿಸಲಾಗಿದೆ. ಸುದ್ದಿ ತಿಳಿದ ಕೂಡಲೇ ಚೆನ್ನರಾಯಪಟ್ಟಣ ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮಗಳ ಜತೆ ನದಿಗೆ ಹಾರಿ ತಾಯಿ ಆತ್ಮಹತ್ಯೆ

ಹಾವೇರಿ: ಕೌಟುಂಬಿಕ ಕಲಹಕ್ಕೆ ಬೇಸತ್ತು

ಗೃಹಿಣಿಯೊಬ್ಬರು ತನ್ನ ಮಗಳ ಜತೆ ವರದಾಹಳ್ಳಿ ಬಳಿ ವರದಾ ನದಿಗೆ ಹಾರಿ ಆತ್ಮ ಹತ್ಯೆ ಮಾಡಿಕೊಂಡ ಘಟನೆ ಹಾವೇರಿ ಜಿಲ್ಲೆಯಲ್ಲಿ ನಡೆದಿದೆ. ಗೃಹಿಣಿ ಸವಿತಾ ನಾಗರಾಜ್ ಉಳ್ಳಾಗಡ್ಡಿ (38) ಹಾಗೂ ಮಗಳು ಕಾವ್ಯಾ (12) ಸಾವನ್ನಪ್ಪಿದವರು. ಗಂಡನ ಮನೆಯಲ್ಲಿ ದಿನನಿತ್ಯ ಭಿನ್ನಾಭಿಪ್ರಾಯ ಹಾಗೂ ಕಲಹದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿ ದ್ದಾರೆ. ಭಾನುವಾರ ಮಧ್ಯಾಹ್ನ ಸುಮಾರು 3 ಗಂಟೆಯ ಸುಮಾರಿಗೆ ಘಟನೆ ನಡೆದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಪೊಲೀಸ್ ಇಲಾಖೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ದೋಣಿ ಮೂಲಕ ನದಿಯಲ್ಲಿ ಹುಡುಕಾಟ ಪ್ರಾರಂಭಿಸಿದ್ದರು. ಕಾವ್ಯಾ ಮೃತದೇಹ ಪತ್ತೆಯಾಗಿದ್ದು, ಸವಿತಾ ಅವರ ಮೃತದೇಹಕ್ಕಾಗಿ ಹುಡುಕಾಟ ನಡೆದಿದೆ. ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ಸವಿತಾಗೆ ಇಬ್ಬರು ಗಂಡು, ಒಬ್ಬ ಹೆಣ್ಣು ಮಗಳಿದ್ದಾಳೆ. ಮಗಳು ಕಾವ್ಯಾ ನವೋದಯ ಪರೀಕ್ಷೆ ಪಾಸಾಗಿದ್ದಳು.

ಲಾಡ್ಜ್‌ನಲ್ಲಿ ಹಾಸ್ಟೆಲ್ ವಾರ್ಡನ್ ಆತ್ಮಹತ್ಯೆ

ಕೊಪ್ಪಳ: ಜಿಲ್ಲೆಯ ಲಾಡ್ಜ್‌ವೊಂದರಲ್ಲಿ ಹಾಸ್ಟೆಲ್ ವಾರ್ಡನ್ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರನ್ನು ಗದಗ ಜಿಲ್ಲೆಯ ನಿವಾಸಿಯಾಗಿರುವ ಹಾಮೇಶ್ ಲಮಾಣಿ (39) ಎಂದು ಗುರುತಿಸಲಾಗಿದ್ದು, ಹಾಸ್ಟೆಲ್ ವಾರ್ಡನ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಭಾನುವಾರ (ಅ.20) ಕೊಪ್ಪಳದ ಲಾಡ್ಜ್‌ವೊಂದಕ್ಕೆ ಹಾಮೇಶ್ ಬಂದಿದ್ದರು. ಈ ವೇಳೆ ಬೆಡ್‌ಶೀಟ್‌ನಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಕೊಪ್ಪಳ ನಗರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಸದ್ಯ ಹಾಸ್ಟೆಲ್ ವಾರ್ಡನ್ ಆತ್ಮಹತ್ಯೆ ಮಾಡಿಕೊಂಡಿರುವುದು ಹಲವು ಅನುಮಾನಕ್ಕೆ ಕಾರಣವಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

ಈಜಲು ತೆರಳಿದ ಬಾಲಕರು ಸಾವು

ಮೈಸೂರು: ಈಜಲು ಇಳಿದಿದ್ದ ಮೂವರು ಬಾಲಕರು ಕಾಲುವೆಗೆ ನೀರಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ಸಾಲಿಗ್ರಾಮ ಪಟ್ಟಣದಲ್ಲಿ ಘಟನೆ ನಡೆದಿದೆ. ಅಯಾನ್ (16), ಆಜಾನ್ (13) ಲುಖ್ಮಾನ್ (14) ಮೃತ ಬಾಲಕರು. ಚಾಮರಾಜ ಎಡದಂಡೆ ಕಾಲುವೆಗೆ ಈಜಲು ತೆರಳಿದ್ದ ವೇಳೆ ಈ ದುರಂತ ಸಂಭವಿಸಿದೆ. ಅಯಾನ್ ಹಾಗೂ ಆಜಾನ್ ಕೆ.ಆರ್.ಪೇಟೆಯ ನವೋದಯ ಶಾಲೆಯಲ್ಲಿ ಓದುತ್ತಿದ್ದ ದೀಪಾವಳಿ ಹಬ್ಬದ ರಜೆ ಹಿನ್ನೆಲೆ ಗ್ರಾಮಕ್ಕೆ ಬಂದಿದ್ದರದ್ದಾರೆ. ಈಜಲು ಹೋಗಿದ್ದರು. ಮಕ್ಕಳು ಮನೆಗೆ ಬಾರದಿದ್ದಾಗ ಪೋಷಕರು ಹುಡುಕಾಟ ನಡೆದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ. ಮೂವರ ಮೃತ ದೇಹ ಪತ್ತೆ ಆಗಿವೆ.

ಯಾವ ಧರ್ಮವೂ ಇನ್ನೊಬ್ಬರನ್ನು ದ್ವೇಷ ಮಾಡಿ ಎಂದು ಹೇಳುವುದಿಲ್ಲ | ಪುತ್ತೂರಿನಲ್ಲಿ ಸಿದ್ದರಾಮಯ್ಯ ಸೌಹಾರ್ದತೆಯ ಪಾಠ

ಸರಕಾರದಿಂದ ಕೋಮು ಸಂಘರ್ಷಕ್ಕೆ ಕಡಿವಾಣ

ಮಂಗಳೂರು: ಜಾತಿ, ಧರ್ಮದ ಹೆಸರಿನಲ್ಲಿ ಜಗಳ ಮಾಡುವುದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ನಂ.1 ಇತ್ತು. ಈಗ ಅದಕ್ಕೆ ನಮ್ಮ ಸರಕಾರ ಸಂಪೂರ್ಣ ಕಡಿವಾಣ ಹಾಕಿದೆ ಎಂದು ಪುತ್ತೂರು ತಾಲೂಕಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿದರು.

ಪುತ್ತೂರು ಶಾಸಕ ಅಶೋಕ್ ರೈ ಮಾಲೀಕತ್ವದ ರೈ ಎಸ್ಟೇಟ್ ಮತ್ತು ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅಶೋಕ ಜನಮನ –2025 ಹಾಗೂ ದೀಪಾವಳಿ ಪ್ರಯುಕ್ತ ವಸ್ತ್ರದಾನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಿದ್ದರಾಮಯ್ಯ, ಜನರಿಗೆ ಸೌಹಾರ್ದತೆಯ ಪಾಠ ಮಾಡಿದರು.

ದಕ್ಷ ಅಧಿಕಾರಿಗಳ ನೇಮಕ: ಡಿಜಾತಿ, ಧರ್ಮದ ಹೆಸರಿನಲ್ಲಿ ಜಗಳ ಮಾಡೋವುದರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ನಂಬರ್ ವನ್ ಇತ್ತು. ಆದರೆ ಈಗ ಅದಕ್ಕೆ ನಮ್ಮ ಸರಕಾರ ಸಂಪೂರ್ಣ ಕಡಿವಾಣ ಹಾಕಿದೆ. ಏಕೆಂದರೆ ಎತ್ತಿಕಟ್ಟೋರ ಮಕ್ಕಳು ಯಾರೂ ಈ ಜಗಳದಲ್ಲಿ ಇರಲ್ಲ. ಮೇಲ್ಜಾತಿ, ಶ್ರೀಮಂತರ ಮಕ್ಕಳು ಯಾರೂ ಸಾಯಲ್ಲ, ನಾನು ಯಾರ ಮಾತನ್ನೂ ಕೇಳಿಲ್ಲ, ಕಮಿಷನರ್, ಎಸ್ಪಿ ದಕ್ಷರನ್ನು ನೇಮಕ ಮಾಡಿದೆ. ಈಗ ಸುಧಾರಣೆ ಆಗಿಲ್ವಾ? ದಕ್ಷ ಅಧಿಕಾರಿಗಳು ಇದ್ದರೆ ಬದಲಾವಣೆ ಸಾಧ್ಯ. ಯಾವತ್ತಿಗೂ ನಾವು ಅಮಾಯಕರ ಮಕ್ಕಳನ್ನು ಸಾಯಿಸೋ ಕೆಲಸ ಮಾಡಬಾರದು. ಬೇರೆ ಧರ್ಮದವರನ್ನು ದ್ವೇಷ ಮಾಡೋ ಕೆಲಸ ಮಾಡಬಾರದು. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿ ಮನುಷ್ಯರಾಗೋಕೆ ಪ್ರಯತ್ನ ಮಾಡಬೇಕು. ಕೋಮು ಸೌಹಾರ್ದತೆ ಇದ್ದರೆ ರಾಜ್ಯ, ಜಿಲ್ಲೆ ಅಭಿವೃದ್ಧಿಯಾಗುತ್ತೆ. ಅದಕ್ಕಾಗಿ ನಾವು ಕೋಮು ಸೌಹಾರ್ದ ಕಾಪಾಡ ಬೇಕಿದೆ ಎಂದರು.

ಅಶೋಕ್ ರೈ ಶ್ರೀಮಂತರಿಗೆ ಮಾರ್ಗ ದರ್ಶನವಾಗಲಿ: ಅಶೋಕ್ ರೈ ಶಾಸಕರಾಗಿ ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡ್ತಾ ಇದ್ದಾರೆ. ಜತೆಯಲ್ಲಿ ಟ್ರಸ್ಟ್ ವತಿಯಿಂದ ದೀಪಾವಳಿ ಸಂಧರ್ಭದಲ್ಲಿ ವಸ್ತ್ರದಾನ ಮಾಡ್ತಾ ಇದ್ದಾರೆ. ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿ ಇವತ್ತು ಒಂದು ಲಕ್ಷ ಜನರಿಗೆ ದಾನ ಮಾಡ್ತಾ ಇದ್ದಾರೆ. ಅಶೋಕ್ ರೈ ಸಮಾಜದ ಶ್ರೀಮಂತ ಜನರಿಗೆ ಮಾರ್ಗದರ್ಶಕರಾಗಲಿ, ಮನುಷ್ಯ ತಾನು ಗಳಿಸಿದ್ದನ್ನು ನಿರ್ಗತಿಕರಿಗೆ ಹಂಚುವುದು ಬಹಳ ಒಳ್ಳೆಯ ಕೆಲಸ. ಸಮಾಜದಲ್ಲಿ ಶ್ರೀಮಂತರು, ಬಡವರು, ಮೇಲ್ಜಾತಿ, ಕೆಳ ಜಾತಿ ಎಲ್ಲರೂ ಇದ್ದಾರೆ. ಸಮಾನತೆಯ ಸಮ ಸಮಾಜ ನಿರ್ಮಾಣವಾಗಲು ಉಳ್ಳವರು ಇಲ್ಲದೇ ಇರೋರಿಗೆ ಸಹಾಯ ಮಾಡಬೇಕು. ಬಸವಣ್ಣ ಕೂಡ ಕಾಯಕ ಮತ್ತು ದಾಸೋಹದ ಬಗ್ಗೆ ಹೇಳಿದ್ದಾರೆ. ನಮ್ಮಲ್ಲಿ ಅಸಮಾನತೆ, ತಾರತಮ್ಯ ಇದೆ, ಇಲ್ಲಿ ಸಮ ಸಮಾಜ ನಿರ್ಮಾಣ ಆಗಬೇಕು. ನಾನು ಎಲ್ಲಾ ಶಾಲೆಗಳಲ್ಲಿ ಸಂವಿಧಾನದ ಪೀಠಿಕೆ ಓದಿಸುತ್ತಿದ್ದೇವೆ. ಸಂವಿಧಾನ ಅರಿಯದೇ ಇದ್ದರೆ ಸಮ ಸಮಾಜ ನಿರ್ಮಾಣ ಅಸಾಧ್ಯ ಎಂದು ತಿಳಿಸಿದರು.

ಶಾಸಕ ಅಶೋಕ್ ರೈ ಮಾಲೀಕತ್ವದ ರೈ ಎಸ್ಟೇಟ್ ಮತ್ತು ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪುತ್ತೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಅಶೋಕ ಜನಮನ ಕಾರ್ಯಕ್ರಮವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

ಆದೇಶದಲ್ಲಿ ಆರೆಸ್ಸೆಸ್ ಉಲ್ಲೇಖಿಸಿಲ್ಲ: ಸಿಎಂ ಸಿದ್ದರಾಮಯ್ಯ

ಶಾಲಾ-ಕಾಲೇಜು ಆವರಣದಲ್ಲಿ ಸಂಘ ಸಂಸ್ಥೆಗಳು ಅನುಮತಿ ಪಡೆಯಬೇಕೆಂದು ಹೊರಡಿಸಿರುವ ಆದೇಶದಲ್ಲಿ ಆರ್‌ಎಸ್‌ಎಸ್ ಎಂದು ಎಲ್ಲಿಯೂ ಉಲ್ಲೇಖವಾಗಿಲ್ಲ. ಸರಕಾರ ಆರ್‌ಎಸ್‌ಎಸ್ ನಿಷೇಧ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಆದೇಶದಲ್ಲಿ ಯಾವುದೇ ನಿರ್ದಿಷ್ಟ ಸಂಘ ಅಥವಾ ಸಂಸ್ಥೆ ಎಂದು ಇಲ್ಲ. ಬಿಜೆಪಿ ಸರಕಾರ ಆದೇಶ ಮಾಡಿದ್ದನ್ನೇ ನಾವು ಪುನರುಚ್ಚರಿಸಿದ್ದೇವೆ. ಅವರು ಮಾಡಬಹುದು, ನಾವು ಮಾಡಬಾರದೇ? 2013ರಲ್ಲಿ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳಿದ್ದ ಸಂದರ್ಭದಲ್ಲಿ ಸಂಘ ಸಂಸ್ಥೆಗಳು ಶಾಲಾ ಕಾಲೇಜು ಆವರಣದಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದನ್ನು ನಿಷೇಧಿಸಿದ್ದರು. ಜಗದೀಶ್ ಶೆಟ್ಟರ್ ಅವರು ಶಿಕ್ಷಣ ಇಲಾಖೆ ಆದೇಶ ಮಾಡಿತ್ತು ನಾನಲ್ಲ ಎಂದಿದ್ದಾರೆ. ಇವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿಯೇ ಆದೇಶ ಹೊರಡಿಸಿದ್ದಾರೆ. ಸಂಘ ಸಂಸ್ಥೆಗಳಿಗೆ ಅನುಮತಿ ಕೊಡಲೇಬೇಕು ಎಂದು ಏನಿಲ್ಲ. ಶಾಂತಿ ಸುವ್ಯವಸ್ಥೆ ಮೇಲೆ ಬೀರುವ ಪರಿಣಾಮವನ್ನು ಯೋಚಿಸಿ ಅನುಮತಿ ನೀಡುವುದು, ಬಿಡುವುದು ಅವಲಂಬಿತವಾಗಿದೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

> ದಕ್ಷಿಣ ಕನ್ನಡ ಜಿಲ್ಲೆ ಕೋಮು ಸೌಹಾರ್ದಕ್ಕೆ ವಿಶೇಷ ಗಮನ ಕೊಡಬೇಕು. ವದಂತಿಗಳನ್ನು ಹಬ್ಬಿಸಿ ಕೋಮು ಗಲಭೆ ಸೃಷ್ಟಿಸಲು ಯತ್ನಿಸಿದರೆ ಕಾನೂನು ತಂದು ಕೇಸ್ ಹಾಕ್ತೀವಿ. ಪ್ರಿಯಾಂಕ್ ಖರ್ಗೆ ಮತ್ತು ಎಚ್.ಕೆ.ಪಾಟೀಲ್ ಆ ಕೆಲಸದಲ್ಲಿ ತೊಡಗಿದ್ದಾರೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ನೂಕುನುಗ್ಗಲು: 11 ಮಂದಿ ಅಸ್ವಸ್ಥ

ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದ ಪುತ್ತೂರು ಶಾಸಕ ಅಶೋಕ್ ರೈ ಅವರ ಜನಮನ ಕಾರ್ಯಕ್ರಮದಲ್ಲಿ ನೂಕು ನುಗ್ಗುಲು ಉಂಟಾಗಿದ್ದು, 11ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿದ್ದಾರೆ. ಮೂವರು ಮಹಿಳೆಯರು ಆಸ್ಪತ್ರೆಗೆ ದಾಖಲಾಗಿದ್ದು, ಏಳು ಮಂದಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಪುತ್ತೂರು ತಾಲೂಕು ಕ್ರೀಡಾಂಗಣದಲ್ಲಿ ಈ ಒಂದು ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಮುಖ್ಯಮಂತ್ರಿ ಗಳ ಸಮ್ಮುಖದಲ್ಲಿ ಅಶೋಕ್ ರೈ ಅವರು ನೀಡುವ ಉಡುಗೊರೆಗಳಿಗಾಗಿ ಬಹಳಷ್ಟು ಹೊತ್ತಿನಿಂದ ಕಾದು ಕುಳಿತಿದ್ದ ಮಹಿಳೆಯರು ನೀರು ಸಿಗದೇ ಡಿಹೈಡ್ರೇಶನ್ ಆಗಿ ಅಸ್ವಸ್ಥರಾದರು. ಈ ವೇಳೆ ತಕ್ಷಣ ಅವರಿಗೆ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದ್ದು, ಗುಣಮುಖರಾಗಿದ್ದಾರೆ.

ದೇವಿರಮ್ಮ ಬೆಟ್ಟದಲ್ಲಿ ಅಸ್ವಸ್ಥರ ರಕ್ಷಣೆ

ಚಿಕ್ಕಮಗಳೂರು: ದೇವಿರಮ್ಮ ಬೆಟ್ಟ ಹತ್ತಿದ್ದ ಇಬ್ಬರು ಭಕ್ತರು ಅಸ್ವಸ್ಥರಾಗಿದ್ದಾರೆ. ಒಬ್ಬ ಯುವತಿ ಹಾಗೂ ಪುರುಷ ಅಸ್ವಸ್ಥರಾಗಿದ್ದಾರೆ. ಬೆಟ್ಟ ಏರಲಾಗದೆ ಯುವತಿ ಮಧ್ಯದಲ್ಲೇ ಕುಸಿದು ಬಿದ್ದಿದ್ದಾಳೆ. ಯುವತಿ ಯನ್ನು ಬೆಟ್ಟದ ಕೆಳಭಾಗಕ್ಕೆ ಅಗ್ನಿಶಾಮಕ ಸಿಬ್ಬಂದಿ ಹೊತ್ತು ತಂದಿದ್ದಾರೆ.

ವ್ಯಕ್ತಿಯೊಬ್ಬರು ಜಾರಿಕೆಯಲ್ಲಿ ಕಾಲು ಉಳುಕಿಸಿಕೊಂಡು ಪರದಾಡಿದ್ದಾರೆ. ಅವರನ್ನು ಸ್ಟ್ರೆಚರ್‌ನಲ್ಲಿ ಅಗ್ನಿಶಾಮಕ ಸಿಬ್ಬಂದಿ ಮೇಲಿಂದ ಬೆಟ್ಟದ ಕೆಳಗೆ ಹೊತ್ತು ತಂದಿದ್ದಾರೆ. ಬೆಟ್ಟ ಹತ್ತಿದ ಭಕ್ತರು ಇಳಿಯುವಾಗ ಭಾರೀ ಜಾರಿಕೆಯಿಂದ ತೆವಳಿಕೊಂಡು ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅರ್ಧ ಬೆಟ್ಟಕ್ಕೆ ಹಗ್ಗ ಹಾಕಿ, ಕಾವಲಿಗೆ ಪೊಲೀಸರು ನಿಂತಿದ್ದಾರೆ. ಹಗ್ಗ ಹಾಕದೇ ಇದ್ದಿದ್ದರೆ ಸಾಕಷ್ಟು ಜನ ಜಾರಿ ಬೀಳುವ ಸಾಧ್ಯತೆ ಇತ್ತು. ಏನಾದರೂ ಆರೋಗ್ಯ ಸಮಸ್ಯೆ ಹಾಗೂ ಅವಘಡ ಸಂಭವಿಸಿದರೆ ತಕ್ಷಣ ಕ್ರಮ ಕೈಗೊಳ್ಳಲು ಸ್ಥಳದಲ್ಲೇ ಐದು ಆಂಬುಲೆನ್ಸ್‌ಗಳನ್ನು ಇರಿಸಲಾಗಿದೆ.

ಚೆಲುವನಾರಾಯಣಸ್ವಾಮಿಗೆ ರಾಜಮುಡಿ

ಮೇಲುಕೋಟೆ: ಯದುಗಿರಿಯ ಆರಾಧ್ಯದೈವ ಶ್ರೀಚೆಲುವನಾರಾಯಣಸ್ವಾಮಿಗೆ ರಾಜಮುಡಿ ಉತ್ಸವ ಮತ್ತು ಅಷ್ಟ ತೀರ್ಥೋತ್ಸವ ಅ.31ರಂದು ಒಂದೇ ದಿನ ನಡೆಯಲಿದ್ದು, ಹಲವು ದಶಕಗಳ ನಂತರ ಅತ್ಯಂತ ಅಪರೂಪವಾಗಿ ನಕ್ಷತ್ರ ಸಂಯೋಗದ ಕಾರಣ ಎರಡೂ ವಿಶೇಷ ಉತ್ಸವಗಳು ಒಂದೇ ದಿನ ನಡೆಯುತ್ತಿರುವುದು ಭಕ್ತರಪಾಲಿಗೆ ಅತ್ಯಂತ ಪವಿತ್ರವಾಗಿದೆ. ಈ ಬಾರಿ ಜಾತ್ರೆ ವಿಶೇಷವಾಗಿದೆ. ಅ.31ರಂದು ಬೆಳಗ್ಗೆ ನಡೆಯುವ ಅಷ್ಟ ತೀರ್ಥೋತ್ಸವ ಹಾಗೂ ರಾತ್ರಿ ನಡೆಯುವ ರಾಜಮುಡಿ ಉತ್ಸವದ ಎರಡೂ ವೇಳೆಯೂ ಚೆಲುವನಾರಾಯಣಸ್ವಾಮಿಯನ್ನು ಮೈಸೂರು ಮಹಾರಾಜರು ಭಕ್ತಿಪೂರ್ವಕವಾಗಿ ಸಮರ್ಪಿಸಿದ ಸಿಂಹಲಾಂಛನ ವಿರುವ ಅಪರೂಪದ ವಜ್ರಗಳಿಂದ ಕೂಡಿದ ರಾಜಮುಡಿ ಕಿರೀಟ, ರಾಜಲಾಂಛನ ಗಂಡುಬೇರುಂಡ ಪದಕ, ಹನ್ನೆರಡು ಆಳ್ವಾರುಗಳನ್ನು ಒಳಗೊಂಡ ಪದ್ಮಪೀಠ,
ಶಂಕ, ಚಕ್ರ, ಗದೆ, ಶಿರಶ್ಚಕ್ರ, ಅಭಯಹಸ್ತ, ಪಾದಜೋಡಿ ಕರ್ಣಕುಂಡಲ ಸೇರಿದಂತೆ ವಜ್ರ, ಪಚ್ಚೆ,ರತ್ನ ಮುತ್ತುಗಳಿಂದ ಕೂಡಿದ 16 ಬಗೆಯ ಐತಿಹಾಸಿಕ ಆಭರಣಗಳನ್ನುತೊಡಿಸಲಾಗುತ್ತದೆ ಎಂದು ದೇವಾಲಯದ ಪಾರುಪತ್ತೇಗಾರರು ತಿಳಿಸಿದ್ದಾರೆ.

ತ.ನಾಡು ಸರಕಾರದದಿಂದ ಗೌರವ

ರಾಜಮುಡಿಯ ಐತಿಹಾಸಿಕ ಮಹತ್ವವನ್ನು ಗುರುತಿಸಿರುವ ತಮಿಳುನಾಡು ಸರಕಾರ ರಾಜಮುಡಿ ಉತ್ಸವದಂದು ಚೆಲುವನಾರಾಯಣಸ್ವಾಮಿಗೆ ಮಾಲಾ ಮರ್ಯಾದೆ ಸಮರ್ಪಿಸುವ ಸೇವೆ ಮಾಡುತ್ತಾ ಬಂದಿರುವುದು ವಿಶೇಷವಾಗಿದೆ. ರಾಮಾನುಜಾಚಾರ್ಯರಿಗೆ ಗುರುಗಳಾಗಿದ್ದ ಕಾಂಚೀಪುರಂ ಜಿಲ್ಲೆಯ ಐತಿಹಾಸಿಕ ಎಂ ಬಾರ್ ಮತ್ತು ವೈಕುಂಠ ಪೆರುಮಾಳ್ ದೇವಾಲಯದಿಂದ ಮಾಲೆ ಮರ್ಯಾದೆಗಳನ್ನು ರಾಜಮುಡಿಯಂದು ಸೇವ ಕೈಂಕರ್ಯವನ್ನು ಮಾಡುತ್ತ ಬರಲಾಗಿದ್ದು, ಈ ಸಂಬಂಧ ತಮಿಳುನಾಡು ಸರಕಾರ ಆದೇಶ ಹೊರಡಿಸಿದೆ.

ಗೃಹಸಾಲ ತೀರಿಸಲಾಗದೇ ಯೋಧ ಆತ್ಮಹತ್ಯೆ

ಮೈಸೂರು: ಮನೆ ನಿರ್ಮಿಸಲು ಮಾಡಿದ್ದ ಸಾಲ

ತೀರಿಸಲಾಗದೆ ನೇಣು ಬಿಗಿದುಕೊಂಡು ಸೈನಿಕ ಆತ್ಮಹತ್ಯೆಗೆ ಶರಣಾದ ಘಟನೆ ಹುಣಸೂರು ನಗರದ ಹೊಸ ಬಡಾವಣೆಯಲ್ಲಿ ನಡೆದಿದೆ. ನಂಜಾಪುರದ ನಿವಾಸಿ ಎಂ.ಚಂದ್ರಶೇಖರ್ (35) ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಯೋಧ. ಅವರು ಹೊಸ ಬಡಾವಣೆಯಲ್ಲಿ ಎರಡು ವರ್ಷಗಳ ಹಿಂದೆ ಹೊಸದಾಗಿ ಮನೆ ನಿರ್ಮಿಸಿದ್ದರು. ಆ ವೇಳೆ ಬ್ಯಾಂಕ್ ಹಾಗೂ ಸ್ನೇಹಿತರ ಬಳಿ ಸಾಲ ಮಾಡಿದ್ದರು. ಸಾಲ ತೀರಿಸಲಾಗದೆ ಪರದಾಡುತ್ತಿದ್ದರು ಎಂದು ತಿಳಿದು ಬಂದಿದೆ. 1 ತಿಂಗಳ ಹಿಂದೆ ಚಂದ್ರಶೇಖರ್ ರಜೆ ಮೇಲೆ ಮನೆಗೆ ಬಂದಿದ್ದರು.

ವಿಶ್ವವಾಣಿ ಹೊರತಂದಿರುವ ಬಯಲು ಸೀಮೆಯ ಭಗೀರಥ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಕುರಿತ ವಿಶ್ವವಾಣಿ ದೀಪಾವಳಿ ವಿಶೇಷಾಂಕವನ್ನು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್ ಈಶ್ವರಪ್ಪ ಅವರು ಶಿವಮೊಗ್ಗದಲ್ಲಿ ಬಿಡುಗಡೆಗೊಳಿಸಿದರು. ಈ ವೇಳೆ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಕೆ.ಈ.ಕಾಂತೇಶ್, ವಿಶ್ವವಾಣಿ ವಿಭಾಗ ವ್ಯವಸ್ಥಾಪಕ ನಾಗಾರ್ಜುನ ಇದ್ದರು.

ಪ್ರಯಾಣಿಕನಿಗೆ ಬಸ್ ಸಿಬ್ಬಂದಿ ಹಣ ಹಿಂದಿರುಗಿಸಿದರು.

ಮಾನವೀಯತೆ ಮೆರೆದ ಸಿಬ್ಬಂದಿ

ಬೀದರ್: ಪ್ರಯಾಣ ಮಾಡುವಾಗ ಬಸ್‌ನಲ್ಲೇ ಬಿಟ್ಟು ಹೋಗಿದ್ದ 1.60ಲಕ್ಷ ಹಣವನ್ನು ಪ್ರಯಾಣಿಕನಿಗೆ ಮರಳಿ ನೀಡಿ ಕಂಡಕ್ಟರ್ ಮತ್ತು ಚಾಲಕ ಮಾನವೀಯತೆ ಮೆರೆದ ಘಟನೆ ಬೀದರ್‌ನಲ್ಲಿ ನಡೆದಿದೆ. ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾಟಸಾಂಗ್ವಿ ಗ್ರಾಮದ ಬಳಿ ಈ ಘಟನೆ ನಡೆದಿದೆ. 1.60 ಲಕ್ಷ ರೂ. ಬಸ್‌ನಲ್ಲೇ ಬಿಟ್ಟು ಹೋದ ವಿಷಯ ತಿಳಿದು ಕರ್ತವ್ಯ ನಿರತ ಸಾರಿಗೆ ಬಸ್ ನಿರ್ವಾಹಕರಾದ ಸಿದ್ರಾಮ್ ಮತ್ತು ಚಾಲಕರಾದ ಹನೀಫ್ ಗ್ರಾಮಕ್ಕೆ ಹೋಗಿ ಹಣದ ಚೀಲ ಮರಳಿಸಿ ಮಾನವೀಯತೆ ಮೆರೆದಿದ್ದಾರೆ.

ಬಿಹಾರ್ ಚುನಾವಣೆಗೆ ರಾಜ್ಯದಿಂದ ಹಣ ಸಾಗಾಟ ಆರೋಪಕ್ಕೆ ತಿರುಗೇಟು

ಹಣ ಸಾಗಿಸಲು ನಾನು ರಾಘವೇಂದ್ರ ಅಲ್ಲ

ಶಿವಮೊಗ್ಗ: ಆಂಬುಲೆನ್ಸ್‌ನಲ್ಲಿ ಚುನಾವಣೆ ಹಣ

ಸಾಗಿಸಲು ನಾನೇನು ರಾಘವೇಂದ್ರ ಅಲ್ಲ ಎಂದು ಸಚಿವ ಮಧು ಬಂಗಾರಪ್ಪ ಸಂಸದ ಬಿ.ವೈ. ರಾಘವೇಂದ್ರ ಅವರಿಗೆ ತಿರುಗೇಟು ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಬಿಹಾರ್ ಚುನಾ ವಣೆಗೆ ರಾಜ್ಯದಿಂದ ಹಣ ಕಳುಹಿಸ ಲಾಗಿದೆ ಎಂದು ರಾಘವೇಂದ್ರ ಅವರು ಆರೋಪ ಮಾಡಿದ್ದಾ ರಲ್ಲಾ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ರಾಘವೇಂದ್ರ ಅವರ ರೀತಿಯಲ್ಲ, ರಾಘವೇಂದ್ರ ಅವರು ಶಿಕಾರಿಪುರ ಪುರಸಭೆಯಲ್ಲಿದ್ದವರು. ಬಂಗಾರಪ್ಪನವರ ವಿರುದ್ಧ ಗೆಲ್ಲಲು ಅವರಿಗೆ ಯಾವ ಸಾಧನೆ ಇತ್ತು. ಅಲ್ಲದೆ ರಾಘವೇಂದ್ರ ಗೆಲ್ಲಲು ಅವರ ತಂದೆ ಯಡಿಯೂ ರಪ್ಪನವರು ಆಂಬುಲೆನ್ಸ್‌ನಲ್ಲಿ, ಪೊಲೀಸ್ ಜೀಪ್‌ನಲ್ಲಿ ಹಣ ತರಿಸಿದ್ದರು. ಅವರಿಗೆ ಮಾತ್ರ ಈ ಕಲೆಗಳೆಲ್ಲಾ ಗೊತ್ತಾಗಿದೆ. ನಾನು ಬಿಹಾರ ಚುನಾವಣೆಗೆ ಹೋಗಿ ಬಂದಿದ್ದೇನೆ. ಹಾಗಾ ದರೆ ನಾನು ಅಲ್ಲಿಗೆ ಹಣ ತೆಗೆದುಕೊಂಡು ಹೋಗಿದ್ದೇನೆಯೇ ಅಲ್ಲಿಗೆ ಹಣ ತೆಗೆದುಕೊಂಡು ಹೋಗಲು ನಾನೇನು ಲೂಸಾ ಎಂದು ತಿರಗೇಟು ನೀಡಿದರು. ಭಾಗ್ಯಗಳ ಯೋಜನೆಯನ್ನು ಟೀಕಿಸುವ ವಿಜಯೇಂದ್ರ, ರಾಘವೇಂದ್ರ ಅವರಿಗೆ ಗೊತ್ತಿರಲಿ ಅವರ ಮನೆಯ ಕೆಲಸಗಾರರು, ಡ್ರೈವರ್‌ಗಳು, ಗೃಹಲಕ್ಷ್ಮಿ ಮತ್ತು ಇತರೆ ಯೋಜನೆ ಗಳಿಗೆ ಅರ್ಜಿ ಹಾಕಿದ್ದಾರೆ. ಬೇಕಾದರೆ ಅವರ ನಂಬರನ್ನು ಕೂಡ ನಾನು ಕೊಡುತ್ತೇನೆ. ಅವರ ಕೆಲಸಗಾರರ ಕುಟುಂಬಗಳು ಸಹ ಗ್ಯಾರೆಂಟಿ ಯೋಜನೆಗಳ ಪ್ರಯೋಜನವನ್ನು ಪಡೆಯುತ್ತಿದ್ದಾರೆ ಎಂದರು

> ನಾವು ಪ್ರಾರಂಭಿಸಲಿರುವ 800 ಕೆಪಿಎಸ್ ಶಾಲೆಗಳೇ ಆರ್‌ಎಸ್‌ಎಸ್‌ಗೆ ಉತ್ತರವಾಗುತ್ತವೆ. ಆ ಶಾಲೆಗಳಲ್ಲಿ ಮಕ್ಕಳು ಸಂವಿಧಾನವನ್ನು ಓದುತ್ತಾರೆ. ಶಿಕ್ಷಣವನ್ನು ಕಲಿಯುತ್ತಾರೆ. ಶಾಖೆಗಳಲ್ಲಿ ಹೇಳಿಕೊಟ್ಟಿದ್ದನ್ನು ಮರೆಯು ತ್ತಾರೆ. ದೇಶಪ್ರೇಮವೆಂದರೆ ರಾಷ್ಟ್ರಗೀತೆ, ರಾಷ್ಟ್ರಧ್ವಜ ಇವು ಗಳನ್ನು ಪ್ರೀತಿಸುವುದು. ವಿರೋಧಿಸುವುದಲ್ಲ.
> -ಮಧು ಬಂಗಾರಪ್ಪ, ಸಚಿವ

ಕೊಪ್ಪಳ ಜಿಲ್ಲಾ ಗಣಿ, ಭೂವಿಜ್ಞಾನ ಅಧಿಕಾರಿಗಳ ವರ್ಗಾವಣೆ ಕೋರಿ ಸಿದ್ದರಾಮಯ್ಯಗೆ ಬಸವರಾಜ ರಾಯರೆಡ್ಡಿ ಪತ್ರ

ಭ್ರಷ್ಟಾಚಾರಕ್ಕೆ ಮೂಗುದಾರ ಹಾಕಲು ಸಿಎಂಗೆ ಪತ್ರ

ಕೊಪ್ಪಳ: ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಪ್ರಕ

ರಣ ಹೆಚ್ಚುತ್ತಿದ್ದು, ಭ್ರಷ್ಟಾಚಾರಕ್ಕೆ ಸರಕಾರ ಮೂಗುದಾರ ಹಾಕಲು ಮುಂದಾಗಿದೆ. ಲಂಚಗುಳಿತನ ಹಾಗೂ ಅನೇಕ ವರ್ಷದಿಂದ ಇಲ್ಲೇ ಬೀಡುಬಿಟ್ಟ ಅಧಿಕಾರಿಗಳನ್ನು ವರ್ಗಾಯಿಸಿ ಕ್ರಮ ಕೈಗೊ ಳ್ಳಲು ಬಸವರಾಜ ರಾಯರೆಡ್ಡಿ ಅವರು ಸಿಎಂ ಸಿದ್ದ ರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ತುಂಗಭದ್ರಾ, ನದಿ, ಹಿರೇ ಹಳ್ಳದಲ್ಲಿ ಮರಳು ಅಕ್ರಮ ಅವ್ಯಾಹತವಾಗಿದೆ. ನಿಯಂತ್ರಣ ಅಸಾಧ್ಯ ಎಂಬಂತಾಗಿದೆ. ಹಿರೇಹಳ್ಳದಲ್ಲಿನ ಅಕ್ರಮ ಕುರಿತು ಮಾಧ್ಯಮಗಳಲ್ಲಿ ವರದಿ ಆಗುತ್ತಲೇ ಎಚ್ಚೆತ್ತ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದರು. ಬೂದಗುಂಪಾ, ಕೆರೆಹಳ್ಳಿ, ಬಂಡಿಹರ್ಲಾಪುರ ಭಾಗದಲ್ಲಿ ಅಕ್ರಮ ಗ್ರಾನೈಟ್ ಗಣಿಗಾರಿಕೆ ನಡೆಯುತ್ತಿದೆ. ಈ ಬಗ್ಗೆ ದಾಖಲಾದ ದೂರು ಆಧರಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹೆಚ್ಚುವರಿ ನಿರ್ದೇಶಕ ನೇತೃತ್ವದ ತಂಡ ಸ್ಥಳ ಪರಿಶೀಲನೆ ನಡೆಸಿ, ವರದಿ ಸಲ್ಲಿಸಿದೆ.

ಇನ್ನೂ ಕುಕನೂರು ತಾಲೂಕಿನ ತಳಕಲ್ ಗ್ರಾಮದ 9.4 ಎಕರೆ ಬೆಣ್ಣಿಕೆರೆಯಲ್ಲಿ ಹೂಳು / ಮಾರಾಟ ಮಾಡಿ, ರಾಜಧನ ಪಾವತಿಗೆ ಸೂಚಿಸಲಾಗಿದೆ. ಬಳಿಕ ಆದೇಶ ಮಾರ್ಪಡಿಸಿ ಹೂಳನ್ನು ಮಾರಾಟ ಮಾಡದಂತೆ ಆದೇಶಿಸಲಾಗಿದೆ. ಈ ಮೂಲಕ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ತನಿಖೆ ವೇಳೆ ದೃಢಪಟ್ಟಿದೆ. ಈ ಸಂಬಂಧ ಇಲಾಖೆ ನಿರ್ದೇಶಕರಿಗೆ ವರದಿ ಸಲ್ಲಿಕೆಯಾಗಿದ್ದು, ಅಧಿಕಾರಿ ಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡಲಾಗಿದೆ.

ಹಲವು ವರ್ಷದಿಂದ ಬೀಡು ಬಿಟ್ಟ ಅಧಿಕಾರಿಗಳು: ಕೊಪ್ಪಳ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕೆಲ ಅಧಿಕಾರಿಗಳು ಹಲವು ವರ್ಷಗಳಿಂದ ಬೀಡು ಬಿಟ್ಟಿದ್ದಾರೆ. ಕಿರಿಯ ಅಭಿಯಂತರ ನವೀನ್ ಕುಮಾರ್ (12 ವರ್ಷ), ಅಧೀಕ್ಷಕ ಮಲ್ಲಿಕಾರ್ಜುನ (9 ವರ್ಷ), ಪ್ರಥಮ ದರ್ಜೆ ಸಹಾಯಕ ಹರೀಶ ಬಿ.ಜಿ. (18 ವರ್ಷ), ಪ್ರಥಮ ದರ್ಜೆ ಸಹಾಯಕಿ ತ್ರಿವೇಣಿ ಬಸವರಾಜ (9 ವರ್ಷ), ದ್ವಿತಿಯ ದರ್ಜೆ ಸಹಾಯಕಿ ಸುಕನ್ಯಾ ಹೊಸಮನಿ (5 ವರ್ಷ), ಭೂ ವಿಜ್ಞಾನಿಗಳಾದ ಸನಿತ್ ಸಿ. (3 ವರ್ಷ), ನಾಗರಾಜ ಈ. (2 ವರ್ಷ), ಕಿರಿಯ ಅಭಿಯಂತರರಾದ ಸಂಪ್ರಿತಾ ಹಿರೇಮಠ 3 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲರೂ ಭ್ರಷ್ಟಾಚಾರಕ್ಕೆ ಸಹಕಾರ ನೀಡುತ್ತಿದ್ದಾರೆಂದು ದೂರುಗಳು ಸಲ್ಲಿಕೆಯಾಗಿವೆ.

200ಕ್ಕೂ ಹೆಚ್ಚು ಜನರಿಂದ ಮರಳು ಮಾಫಿಯ

ಗಣಿಗಾರಿಕೆ ಅಕ್ರಮ ಕುರಿತು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಸಿಎಂಗೆ ಪತ್ರ ಬರೆದಿದ್ದು, ಸೂಕ್ತ ಕ್ರಮಕ್ಕೆ ಆಗ್ರಹಿಸಿದ್ದಾರೆ. ಕೊಪ್ಪಳದಲ್ಲಿ 85 ಕಿ.ಮೀ. ತುಂಗಭದ್ರಾ ನದಿ ಹರಿಯುತ್ತಿದ್ದು, ಅಪಾರ ಮರಳು ಗಣಿ ಇದೆ. ನಿತ್ಯ 100150 ಟ್ರಿಪ್ ಮರಳು, ಜಲ್ಲಿ ನೆರೆ ಜಿಲ್ಲೆಗಳಿಗೆ ಅನಧಿಕೃತವಾಗಿ ಸಾಗುತ್ತಿವೆ. ಇದರಿಂದ ಸರಕಾರಕ್ಕೆ ಅಪಾರ ರಾಜಧನ ನಷ್ಟವಾಗುತ್ತಿದೆ. ಇಲಾಖೆ ಅಧಿಕಾರಿಗಳು ಶಾಮೀಲಾಗಿ ಭ್ರಷ್ಟಾಚಾರ ನಡೆಸುತ್ತಿರುವ ಬಗ್ಗೆ ದೂರು ಸಲ್ಲಿಕೆಯಾಗಿವೆ. 200ಕ್ಕೂ ಹೆಚ್ಚು ಜನ ಮರಳು ಮಾಫಿಯಾದಲ್ಲಿ ಭಾಗಿಯಾಗಿದ್ದಾರೆ. ಇದರಿಂದ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಿ ಕ್ರಮ ಕೈಗೊಳ್ಳಬೇಕು. ಕಾನೂನು ಅರಿವು ಇಲ್ಲದೇ ಕೆಳ ಹಂತದ ಅಧಿಕಾರಿಗಳ ಮಾತಿನಂತೆ ಅಕ್ರಮ ದಂಧೆಗೆ ಸಹಕರಿಸುತ್ತಿರುವ ಹಿರಿಯ ಭೂ ವಿಜ್ಞಾನಿ ಪುಷ್ಪಲತಾ ಸೇರಿ ಇತರ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಚಿಂಚೋಳಿಯಲ್ಲಿ ಭೂಕಂಪನದ ಅನುಭವ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನ ಶಿರೊಳ್ಳಿ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ಭೂಕಂಪನದ ಅನುಭವವಾದ ಕಾರಣ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಬೆಳಗ್ಗೆ 8 ಗಂಟೆ ಸುಮಾರಿಗೆ ಎರಡು ಸಣ್ಣ ಕಂಪನಗಳು ಸಂಭವಿಸಿದ್ದರಿಂದ ಜನರು ಭಯಭೀತರಾಗಿ ಮನೆ ಬಿಟ್ಟು ಹೊರಗೆ ಓಡಿಬಂದಿದ್ದಾರೆ.

ದೀಪಾವಳಿ ಹಬ್ಬದ ಸಂಭ್ರಮದಲ್ಲಿದ್ದ ಗ್ರಾಮಸ್ಥರು ಈ ಅನಿರೀಕ್ಷಿತ ಘಟನೆಯಿಂದ ಬೆಚ್ಚಿಬಿದ್ದಿದ್ದಾರೆ. ಮೊದಲ ಕಂಪನ ಸುಮಾರು 3 ರಿಂದ 4 ಸೆಕೆಂಡುಗಳವರೆಗೆ ಮುಂದುವರಿದಿದ್ದು, ಈ ವೇಳೆ ಮನೆಗಳಲ್ಲಿದ್ದ ಪಾತ್ರೆಗಳು ಮತ್ತು ವಸ್ತುಗಳು ಅಲುಗಾಡಿ ಜೋರಾಗಿ ಸದ್ದು ಮಾಡಿವೆ. ಮೊದಲ ಕಂಪನದ ಸುಮಾರು 10 ನಿಮಿಷಗಳ ನಂತರ ಮತ್ತೊಮ್ಮೆ ಸಣ್ಣ ಪ್ರಮಾಣದ ಕಂಪನ ಕಂಡುಬಂದಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಘಟನೆಯ ಮಾಹಿತಿ ತಿಳಿದ ತಕ್ಷಣ ಚಿಂಚೋಳಿ ತಾಲೂಕು ಆಡಳಿತ, ಪೊಲೀಸ್ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಪ್ರಾಥಮಿಕ ವರದಿಯ ಪ್ರಕಾರ, ಭೂಕಂಪನದಿಂದ ಯಾವುದೇ ಆಸ್ತಿ-ಪಾಸ್ತಿಗೆ ಹಾನಿಯಾಗಿಲ್ಲ ಮತ್ತು ಯಾರಿಗೂ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ದುಡ್ಡು ಮಾಡುವ ದಂಧೆಯೇ?!

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷದಿಂದ ಟಿಕೆಟ್ ಬಯಸಿದ ವ್ಯಕ್ತಿಯೊಬ್ಬ, ಅದು ಕೈತಪ್ಪಿ ಹೋದ ಕಾರಣಕ್ಕೆ ಆಘಾತಕ್ಕೊಳಗಾಗಿ, ಅಂಗಿ ಹರಿದುಕೊಂಡು ರಸ್ತೆಯಲ್ಲೇ ಹೊರಳಾಡಿ ಗೋಳಾಡಿರುವುದು ವರದಿಯಾಗಿದೆ. ಇಷ್ಟು ಮಾತ್ರವಲ್ಲದೆ, 'ಟಿಕೆಟ್ ಕೊಡಲು 2.7 ಕೋಟಿ ರುಪಾಯಿ ಕೇಳಿದ್ದರು, ಮಕ್ಕಳ ಮದುವೆಗೆಂದು ಕೂಡಿಟ್ಟಿದ್ದ ಹಣವನ್ನೆಲ್ಲಾ ಕೊಟ್ಟರೂ ಅದು ಸಿಗಲಿಲ್ಲ; ಹಣವನ್ನಾದರೂ ಮರಳಿಸಲಿ' ಎಂದು ಆತ ಅಲವತ್ತುಕೊಂಡಿದ್ದಾನೆ. ಈ ಘಟನೆಯ ಸತ್ಯಾಸತ್ಯತೆಯಿನ್ನೂ ಹೊರಬೀಳಬೇಕಿದೆ; ಒಂದೊಮ್ಮೆ ನಿಜವಾಗಿದ್ದಲ್ಲಿ ಅದು ವಿಷಾದನೀಯವೂ ಹೌದು, ಆಘಾತಕಾರಿಯೂ ಹೌದು. ಹೀಗೆ ಟಿಕೆಟ್ ನೀಡುವಾಗಲೇ ದುಡ್ಡನ್ನು ಪೀಕಿಸುವ ಪ್ರವೃತ್ತಿಗೆ ರಾಜಕೀಯವ ಪಕ್ಷಗಳು ಒಡ್ಡಿಕೊಂಡಿರುವುದು ವಿಷಾದಕ್ಕೆ ಕಾರಣವಾಗಿದ್ದರೆ, ಮತ್ತೊಂದೆಡೆ ನೋಟುಗಳನ್ನು ಬಿತ್ತಿ ಚುನಾವಣೆಯಲ್ಲಿ ಗೆದ್ದುಬಿಟ್ಟರೆ, ತರುವಾಯದಲ್ಲಿ ಕಂತೆಕಂತೆಗಟ್ಟಲೆ ನೋಟುಗಳನ್ನು ಗೆಬರಿಕೊಳ್ಳಬಹುದು ಎಂಬ ಚಿತ್ತಸ್ಥಿತಿ ಜನರಲ್ಲೂ ಮಡುಗಟ್ಟಿರುವುದು ಆಘಾತಕಾರಿಯಾಗಿದೆ. ಚುನಾವಣಾ ಕಣದಲ್ಲಿ ಸ್ಪರ್ಧಿಸಿರುವ ಹತ್ತಾರು ಅಭ್ಯರ್ಥಿಗಳ ಪೈಕಿ ಯೋಗ್ಯ ಎನಿಸಿದವನನ್ನು ತಮ್ಮ ಪ್ರತಿನಿಧಿಯಾಗಿ ಚುನಾಯಿಸಲು ಜನರು ತವಕಿಸುತ್ತಾರೆ. ಇದು ಕೈಗೂಡಬೇಕೆಂದರೆ ರಾಜಕೀಯ ಪಕ್ಷಗಳು ಹಾಗೂ ಅದರ ವತಿಯಿಂದ ಸ್ಪರ್ಧಿಸುವವರಲ್ಲಿ 'ಸಚ್ಚಾರಿತ್ರ್ಯ' ಎಂಬುದು ಮನೆಮಾಡಿರಬೇಕು. ಆದರೆ ಪಕ್ಷಗಳೇ ದುಡ್ಡು ಪೀಕಿಸಿ ಟಿಕೆಟ್ ನೀಡಿದರೆ, ಹಾಗೆ ಟಿಕೆಟ್ ಖರೀದಿಸಿದಾತ ಗೆದ್ದರೆ, ಇನ್ನೆಷ್ಟರ ಮಟ್ಟಿಗೆ ಜನಕಲ್ಯಾಣವಾದೀತು, ಅಭಿವೃದ್ಧಿ ಚಟುವಟಿಕೆ ಗಳು ನಡೆದಾವು ಎಂಬುದನ್ನು ನೀವೇ ಊಹಿಸಿ. 'ಇದು ಗೊತ್ತಿರುವಂಥ ವಿಷಯವೇ ಅಲ್ಲವೇ? ಅದಕ್ಯಾಕೆ ಇಷ್ಟು ಭಾವುಕರಾಗಬೇಕು, ಕೆರಳಬೇಕು?' ಎಂದು ತಳ್ಳಿಹಾಕುವಂಥ ಪ್ರಶ್ನೆಯಲ್ಲ ಇದು. ಲೋಕಸಭೆ ಚುನಾವಣೆ ಮತ್ತು ದೇಶದ ಅಷ್ಟೂ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮಾತ್ರವಲ್ಲದೆ, ವಿವಿಧ ಸ್ತರದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನೂ ಪರಿಗಣಿಸಿ ನೋಡಿದರೆ, ನೇಪಥ್ಯದಲ್ಲಿ ಯಾವ ಮಟ್ಟಿಗೆ ಇಂಥ 'ದುಡ್ಡಿನ ವ್ಯವಹಾರ' ನಡೆಯುತ್ತಿರಬಹುದು? ಎಂದು ಲೆಕ್ಕಿಸಬಹುದು. ಛೇ, ಭಾರತ ಇನ್ನೂ ಪ್ರಬುದ್ಧನಾಗಬೇಕಿದೆ...

ಸೊಂಪಾದಕೀಯ

ಭಂಡರಿಗೆ ಇದೇ ತಕ್ಕ ಶಾಸ್ತಿ

ಇದು ಸಾಕಷ್ಟು ತಿಂಗಳ ಹಿಂದಿನ ವಿಷಯ. ಜನರ ಸಹನೆಯ ಕಟ್ಟೆಯೊಡೆದರೆ ಏನಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಇಂದಿನ ಯುವಪೀಳಿಗೆಗೆ ಅಂಟಿರುವ ಹಲವು ಪೀಡೆಗಳಲ್ಲಿ ರಸ್ತೆ ಮೇಲೆ ವೆಹಿಕಲ್‌ನೊಂದಿಗೆ ವೀಲಿಂಗ್ ಮಾಡುವುದು ಕೂಡ ಒಂದು. ಇನ್ನೂ ಮೀಸೆ ಬಾರದ ಹುಡುಗರು ಕೈಯಲ್ಲಿ ಲೈಸೆನ್ಸ್, ತಲೆಯಲ್ಲಿ ಸೆನ್ಸ್ ಇಲ್ಲದಿದ್ದರೂ ತಮ್ಮ ದ್ವಿಚಕ್ರ ವಾಹನಗಳಲ್ಲಿ ರಸ್ತೆಯ ಮೇಲೆ ಸರ್ಕಸ್ ಮಾಡುವುದನ್ನು ನೋಡಿದ್ದೇವೆ. ಇದು ವೀಲಿಂಗ್ ಅಂತಲೇ ಪ್ರಸಿದ್ಧಿ. ಈ ಹುಚ್ಚು ಹಿಡಿದ ಹುಡುಗರಿಗೆ ಐಷಾರಾಮಿ ಸ್ಪೋರ್ಟ್ಸ್ ಬೈಕ್‌ಗಳೇ ಆಗಬೇಕು ಅಂತೇನಿಲ್ಲ. ಮಾಮೂಲಿ ಸ್ಕೂಟರ್ ತೆಗೆದುಕೊಂಡು ಪಡ್ಡೆ ಹುಡುಗರು ರಿಂಗ್ ರೋಡ್, ನೈಸ್ ರೋಡ್‌ಗಳಲ್ಲಿ ಈ ವೀಲಿಂಗ್ ಸರ್ಕಸ್ ಮಾಡುತ್ತಾರೆ. ಇದರಿಂದ ತಮ್ಮ ಜೀವಕ್ಕೂ, ಪರರ ಜೀವಕ್ಕೂ ಅಪಾಯ ಅನ್ನುವುದು ಮಾತ್ರ ಇವರಿಗೆ ಮನವರಿಕೆ ಆಗುವುದಿಲ್ಲ. ವೀಲಿಂಗ್ ಮಾಡುತ್ತಾ ಎಡವಟ್ಟಾದರೆ ಪ್ರಾಣ ಹೋಗೋದು ಅಷ್ಟೇ ಅಲ್ಲ, ಪ್ರಾಣ ಹೋಗದಿದ್ದರೂ ಜೀವನಪೂರ್ತಿ ವೀಲ್‌ಚೇರ್ ಮೇಲೆ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂದರೂ ಬರಬಹುದು. ಆದರೆ ಇಂದಿನ ಕೆಲವು ಯುವಜನರಿಗೆ ಇದರ ಯಾವ ಅರಿವೂ ಇಲ್ಲ. ಇವರು ಒಂದೇ ವೀಲ್ ಮೇಲೆ ತಮ್ಮ ವಾಹನದೊಂದಿಗೆ ಮಾಡುವ ಸರ್ಕಸ್ ನೋಡಿದರೆ ಯಾರಿಗಾದರೂ ಜೀವ ಬಾಯಿಗೆ ಬಂದಂತೆ ಆಗುತ್ತದೆ. ಆದರೆ ಇವರು ಅಷ್ಟೊಂದು ಸ್ಪೀಡ್‌ನಲ್ಲಿ ಅಸಡ್ಡೆಯಿಂದ ಸರ್ಕಸ್ ಮಾಡುವಾಗ ಅವರನ್ನು ತಡೆಯುವ ಸಾಮರ್ಥ್ಯ ಯಾರಿಗೂ ಇರುವುದಿಲ್ಲ. ಜತೆಗೆ ಆ ಸಾಹಸಕ್ಕೆ ಕೈಹಾಕುವುದು ಕೂಡ ಕಷ್ಟದ ಕೆಲಸ. ಆದರೆ ಕೆಲ ತಿಂಗಳ ಹಿಂದೆ ಮಾತ್ರ ನೆಲಮಂಗಲದ ಫ್ಲೈಓವರ್ ಮೇಲೆ ಇಂಥ ವೀಲಿಂಗ್ ಮಾಡುವವರಿಗೆ ತಕ್ಕ ಶಾಸ್ತಿಯಾಯಿತು. ಸಾರ್ವಜನಿಕರ ಕೈಗೆ ಸಿಕ್ಕು ತಮ್ಮ ಬೈಕ್‌ಗಳನ್ನು ಅಲ್ಲೇ ಬಿಟ್ಟು ಓಡಿಹೋದ ಈ ವೀಲರ್‌ಗಳ ಬೈಕ್‌ಗಳು ಎಲ್ಲರ ಕೋಪಕ್ಕೆ ತುತ್ತಾಗಿವೆ. ವೀಲಿಂಗ್ ಮಾಡುವುದರ ಮೇಲೆ ಅದೆಷ್ಟು ದಿನದ ಸಿಟ್ಟಿತ್ತೋ ಏನೋ ಸಾರ್ವಜನಿಕರು ಅವರ ಎರಡು ಬೈಕ್‌ಗಳನ್ನು ಫ್ಲೈ ಓವರ್ ಮೇಲಿಂದ ಕೆಳಕ್ಕೆ ಬಿಸಾಕಿದರು..

ಸಂಪಾದಕರ ಸದ್ಯಶೋಧನೆ

ಲ್ಯಾಂಡಿಂಗ್ ಗೇರ್ ಮಹತ್ವ

ಬೋಯಿಂಗ್ 747 'ವಿಮಾನಗಳ ರಾಣಿ' ಎಂದೇ ಪ್ರಸಿದ್ಧ. ಇದು ವಾಯುಯಾನ ಇತಿಹಾಸದಲ್ಲಿ ಕ್ರಾಂತಿಕಾರಿ ವಿಮಾನ ಎಂಬುದರಲ್ಲಿ ಎರಡು ಮಾತಿಲ್ಲ. ಬೃಹತ್ ಗಾತ್ರ ಮತ್ತು ದೀರ್ಘ-ಶ್ರೇಣಿಯ ಸಾಮರ್ಥ್ಯದಿಂದಾಗಿ, ಈ ವಿಮಾನಕ್ಕೆ ಭೂಮಿಯ ಮೇಲೆ ಸುರಕ್ಷಿತವಾಗಿ ನಿಲ್ಲಲು ಮತ್ತು ಓಡಲು ಅಸಾಧಾರಣವಾದ ಲ್ಯಾಂಡಿಂಗ್ ಗೇರ್ ವ್ಯವಸ್ಥೆಯ ಅಗತ್ಯವಿದೆ. ಈ ಮುಖ್ಯ ಲ್ಯಾಂಡಿಂಗ್ ಗೇರ್ ಕೇವಲ ಚಕ್ರಗಳ ಸಮೂಹವಲ್ಲ. ಇದು ಬಲ, ನಿಖರತೆ ಮತ್ತು ವಿಶ್ವಾಸಾರ್ಹತೆಗಾಗಿ ವಿನ್ಯಾಸಗೊಳಿಸಲಾದ ಎಂಜಿನಿಯರಿಂಗ್‌ನ ಒಂದು ಮಹಾನ್ ಸಾಧನ. ಇದು ವಿಮಾನ ಹಾರಾಟದಲ್ಲಿ ಇಲ್ಲದಿದ್ದಾಗ ಸುಮಾರು ನಾಲ್ಕು ಲಕ್ಷ ಕೆಜಿ ತೂಕವನ್ನು ಸುಲಭವಾಗಿ ಹೊರುವ ಸಾಮರ್ಥ್ಯವನ್ನು ಹೊಂದಿದೆ. ಬೋಯಿಂಗ್ 747ರ ಲ್ಯಾಂಡಿಂಗ್ ಗೇರ್‌ನ ಅತ್ಯಂತ ಗಮನಾರ್ಹ ವೈಶಿಷ್ಟ್ಯವೆಂದರೆ ಅದರ ಹದಿನೆಂಟು ಚಕ್ರಗಳು. ಈ ಬೃಹತ್ ಭಾರವನ್ನು ನಿರ್ವಹಿಸಲು, ಎಂಜಿನಿಯರ್‌ಗಳು ತೂಕವನ್ನು ಸಮವಾಗಿ ವಿತರಿಸಲು ಒಂದು ಸಂಕೀರ್ಣ ವ್ಯವಸ್ಥೆಯನ್ನು ರೂಪಿಸಿದ್ದಾರೆ. ವಿಮಾನದ ರೆಕ್ಕೆಗಳ ಕೆಳಗೆ ಮತ್ತು ದೇಹದ ಮಧ್ಯಭಾಗದಲ್ಲಿ ನಾಲ್ಕು ಸ್ವತಂತ್ರ ಗೇರ್‌ಗಳ ಗುಂಪುಗಳಿವೆ. ಪ್ರತಿಯೊಂದು ಅಸೆಂಬ್ಲಿಯು ನಾಲ್ಕು ಚಕ್ರಗಳನ್ನು ಹೊಂದಿರುತ್ತದೆ. ಈ ಬಹು-ಚಕ್ರ ವ್ಯವಸ್ಥೆಯು ಕೇವಲ ತೂಕವನ್ನು ಬೆಂಬಲಿಸುವುದಲ್ಲದೇ, ಲ್ಯಾಂಡಿಂಗ್ ಮತ್ತು ಟ್ಯಾಕ್ಸಿಂಗ್ ಸಮಯದಲ್ಲಿ ರನ್‌ವೇ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ರನ್‌ವೇಗೆ ಹಾನಿಯಾಗದಂತೆ ತಡೆಯುತ್ತವೆ. ವಿಮಾನದ ಮುಂಭಾಗದಲ್ಲಿ ಎರಡು ಚಕ್ರಗಳನ್ನು ಒಳಗೊಂಡಿರುವ ಮೂಗಿನ (Nose) ಗೇರ್ ಇದೆ. ಇದು ನೆಲದ ಮೇಲಿನ ತಿರುವುಗಳು ಮತ್ತು ದಿಕ್ಕನ್ನು ನಿಯಂತ್ರಿಸಲು ಅತ್ಯಗತ್ಯ. ಚಕ್ರಗಳ ಸಂಖ್ಯೆ ಮತ್ತು ಅವುಗಳ ವ್ಯವಸ್ಥೆ, ವಿಮಾನವನ್ನು ಸುರಕ್ಷಿತವಾಗಿ ಮತ್ತು ಸ್ಥಿರವಾಗಿ ನೆಲದ ಮೇಲೆ ನಿಲ್ಲುವಂತೆ ಮಾಡಲು ಇರುವ ಅತ್ಯಾಧುನಿಕ ವಿನ್ಯಾಸವಾಗಿದೆ. ವಿಮಾನ ಲ್ಯಾಂಡಿಂಗ್ ಆಗುವಾಗ ನೆಲಕ್ಕೆ ಬಲವಾಗಿ ಅಪ್ಪಳಿಸುತ್ತದೆ. ಅಷ್ಟೊಂದು ಭಾರದ ಯಂತ್ರವು ಹೆಚ್ಚಿನ ವೇಗದಲ್ಲಿ ರನ್‌ವೇಯನ್ನು ತಾಗಿದಾಗ ಉಂಟಾಗುವ ಬಲವನ್ನು ನಿಭಾಯಿಸುವುದು ಸಾಮಾನ್ಯ ಸಾಧನದಿಂದ ಸಾಧ್ಯವಿಲ್ಲ. ಇಲ್ಲಿ, ಶಾಕ್ ಅಬ್ಸಾರ್ಬರ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ. ಲ್ಯಾಂಡಿಂಗ್ ಸಮಯದಲ್ಲಿ ಉಂಟಾಗುವ ದೊಡ್ಡ ಆಘಾತವು ವಿಮಾನದಲ್ಲಿ ಒಳಗಿರುವ ಪ್ರಯಾಣಿಕರಿಗೆ ತಿಳಿಯುವುದಿಲ್ಲ. ವಿಮಾನ ನಿಲ್ಲುವುದು ಅದರ ಚಾಲನೆಯಷ್ಟೇ ಮುಖ್ಯ. ಬೋಯಿಂಗ್ 747ರಂಥ ಭಾರಿ ವಿಮಾನವು ಟೇಕಾಫ್ ಸಮಯದಲ್ಲಿ ವಿಫಲವಾದರೆ, ರನ್‌ವೇ ಕೊನೆಗೊಳ್ಳುವ ಮೊದಲು ಅದನ್ನು ನಿಲ್ಲಿಸಲು ಶಕ್ತಿಯುತ ಬ್ರೇಕಿಂಗ್ ಅಗತ್ಯವಿದೆ. ವಿಮಾನದ ಪ್ರತಿ ಚಕ್ರಕ್ಕೂ ಮಲ್ಟಿ-ಡಿಸ್ಕ್ ಕಾರ್ಬನ್ ಬ್ರೇಕ್‌ಗಳನ್ನು ಅಳವಡಿಸಲಾಗಿದೆ. ಈ ಬ್ರೇಕ್‌ಗಳು ಸಾಮಾನ್ಯ ಕಾರು ಬ್ರೇಕ್‌ಗಳಿಗಿಂತ ಹೆಚ್ಚು ಸಂಕೀರ್ಣವಾಗಿದ್ದು, ಘರ್ಷಣೆಯ ಮೂಲಕ ಬೃಹತ್ ಪ್ರಮಾಣದ ಚಲನಶಕ್ತಿಯನ್ನು ಶಾಖವಾಗಿ ಪರಿವರ್ತಿಸುತ್ತವೆ. ಹೆಚ್ಚಿನ ವೇಗದಲ್ಲಿ ಲ್ಯಾಂಡಿಂಗ್ ಮಾಡುವಾಗ ಅಥವಾ ತುರ್ತು ಪರಿಸ್ಥಿತಿಯಲ್ಲಿ ಟೇಕಾಫ್ ರದ್ದುಪಡಿಸಿದಾಗ, ಈ ಬ್ರೇಕ್‌ಗಳು ಅಸಾಮಾನ್ಯ ಪ್ರಮಾಣದ ಶಾಖವನ್ನು ಉತ್ಪಾದಿಸುತ್ತವೆ. ಸಾಮಾನ್ಯ ಕಾರ್ಯಾಚರಣೆಯಲ್ಲಿಯೇ ತಾಪಮಾನವು ಹೆಚ್ಚಿರುತ್ತದೆ, ಆದರೆ 'ರಿಜೆಕ್ಟೆಡ್ ಟೇಕಾಫ್' ಸಂದರ್ಭದಲ್ಲಿ, ಬ್ರೇಕ್‌ನ ತಾಪಮಾನವು ಒಂದು ಸಾವಿರ ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ತಲುಪಬಹುದು. ಈ ತೀವ್ರವಾದ ಶಾಖವು ಬ್ರೇಕ್‌ಗಳಿಗೆ ಮತ್ತು ಟೈರ್‌ಗಳಿಗೆ ಹಾನಿ ಮಾಡುವುದನ್ನು ತಡೆಯಲು ಬ್ರೇಕ್ ಕೂಲಿಂಗ್ ಅತ್ಯಗತ್ಯ. ಬ್ರೇಕ್ ತಂಪಾಗುವವರೆಗೆ ವಿಮಾನವನ್ನು ಪುನಃ ಹಾರಲು ಅನುಮತಿಸಲಾಗುವುದಿಲ್ಲ. ಇದು ಸುರಕ್ಷತೆಯ ಪ್ರಮುಖ ಭಾಗ. ಲ್ಯಾಂಡಿಂಗ್ ಗೇರ್ ಅನ್ನು ವಿಸ್ತರಿಸುವುದು ಮತ್ತು ಹಿಂದಕ್ಕೆ ಎಳೆಯುವ ಪ್ರಕ್ರಿಯೆಯು ಕೇವಲ ಒಂದು ಸ್ವಿಚ್ ಅನ್ನು ಒತ್ತುವುದಲ್ಲ, ಬದಲಿಗೆ ಇದು ಶಕ್ತಿ ಮತ್ತು ನಿಖರತೆಯ ಮಿಶ್ರಣವಾಗಿದೆ. ಬೋಯಿಂಗ್ 747 ಪರಿಣಾಮಕಾರಿ ಹೈಡ್ರಾಲಿಕ್ ವ್ಯವಸ್ಥೆಗಳ ಮೇಲೆ ಅವಲಂಬಿತವಾಗಿದೆ. ಅನಿರೀಕ್ಷಿತ ಹಾನಿ ಅಥವಾ ವೈಫಲ್ಯದ ಸಂದರ್ಭದಲ್ಲಿ, ಗೇರ್ ಅನ್ನು ಗುರುತ್ವಾಕರ್ಷಣೆ ಮತ್ತು ಗಾಳಿಯ ಬಲವನ್ನು ಬಳಸಿಕೊಂಡು ಇಳಿಸುವ ತುರ್ತು ವ್ಯವಸ್ಥೆಗಳು ಸಹ ಇವೆ. ಲ್ಯಾಂಡಿಂಗ್ ಗೇರ್ ವ್ಯವಸ್ಥೆಯು ಅತ್ಯಂತ ವಿಶ್ವಾಸಾರ್ಹವಾಗಿರಬೇಕು, ಏಕೆಂದರೆ ಇದರ ವೈಫಲ್ಯವು ದುರಂತಕ್ಕೆ ಕಾರಣವಾಗಬಹುದು.

ನಿರ್ಬಂಧದ ತೀರ್ಮಾನ; ಲಾಭಕ್ಕಿಂತ ನಷ್ಟವೇ ಹೆಚ್ಚು!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ರಾಜ್ಯದಲ್ಲಿ ಕಳೆದೊಂದು ವಾರದಿಂದ ತೀವ್ರ ಚರ್ಚೆಗೆ ಗ್ರಾಸವಾಗುತ್ತಿರುವ ವಿಷಯ, ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್‌ನ)ಚಟುವಟಿಕೆಗಳನ್ನು ನಿರ್ಬಂಧಿಸುವುದಕ್ಕೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದರ ಕುರಿತಾಗಿದೆ. ಅದರಲ್ಲಿಯೂ ಚಿತ್ತಾಪುರದಲ್ಲಿ ನಡೆಸಬೇಕಿದ್ದ ಪಥ ಸಂಚಲನಕ್ಕೆ ನಿರ್ಬಂಧ ವಿಧಿಸಿದ್ದು, ಪಥ ಸಂಚಲನಕ್ಕೆ ಅವಕಾಶ ನೀಡಬೇಕೆಂದು ಹೈಕೋರ್ಟ್ ಮೊರೆ ಹೋಗಿದ್ದು, ನ.2ಕ್ಕೆ ಅವಕಾಶ ನೀಡಬೇಕೆಂದು ನಿರ್ದೇಶನ ನೀಡಿರುವುದು ನೋಡಿದ್ದೇವೆ. ಈ ಎಲ್ಲ ಹೈಡ್ರಾಮಾದಿಂದ ಯಾರಿಗೆ ಲಾಭ-ನಷ್ಟ ಎನ್ನುವುದು ಈಗಲೂ ಯಕ್ಷಪ್ರಶ್ನೆ.

ಹೌದು, ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗಳಿಗೆ, ಸರಕಾರಿ ಜಾಗದಲ್ಲಿ ಸಂಘ ಪರಿವಾರದ ಕಾರ್ಯಕ್ರಮಗಳನ್ನು ನಡೆಸುವುದಕ್ಕೂ ಮೊದಲು ಕಡ್ಡಾಯ ಅನುಮತಿ ಪಡೆಯಬೇಕು ಎನ್ನುವ ಆದೇಶ ಮಾಡಬೇಕೆಂದು ಪತ್ರ ಬರೆದರು. ಈ ಪತ್ರ ಬರೆದಷ್ಟೇ ವೇಗವಾಗಿ, ಮುಖ್ಯಮಂತ್ರಿಗಳು ತಮಿಳುನಾಡು ಮಾದರಿಯನ್ನು ಕರ್ನಾಟಕದಲ್ಲಿಯೂ ಅನುಸರಿಸಬೇಕೆಂಬ ಆಲೋಚನೆಯನ್ನು ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿ, ಈ ಸಂಬಂಧ ವರದಿ ಸಿದ್ಧಪಡಿಸುವಂತೆ ಸೂಚನೆ ನೀಡಿದರು. ಬಳಿಕ ನಡೆದ ಸಚಿವ ಸಂಪುಟ ಸಭೆಯಲ್ಲಿ 'ಅನುಮತಿ ಕಡ್ಡಾಯ' ಎನ್ನುವ ತೀರ್ಮಾನವನ್ನು ಕೈಗೊಳ್ಳಲಾಯಿತು.

ಸರಕಾರ ಈ ತೀರ್ಮಾನ ಕೈಗೊಳ್ಳುವ ಸಮಯದಲ್ಲಿ 2013ರಲ್ಲಿ ಜಗದೀಶ್ ಶೆಟ್ಟರ್ ಅವರ ಸರಕಾರದ ಅವಧಿಯಲ್ಲಿ ಹೊರಡಿಸಿದ್ದ ಆದೇಶವನ್ನು 'ಟ್ರಂಪ್ ಕಾರ್ಡ್' ರೀತಿ ಬಳಸಿಕೊಂಡಿತ್ತು. ಆದರೆ ಆರೆಸ್ಸೆಸ್‌ನ ಕಾರ್ಯಕರ್ತರು ಹಾಗೂ ಪ್ರಚಾರಕರ ಪ್ರಕಾರ ಯಾವುದೇ ಕಾರ್ಯಕ್ರಮಕ್ಕೂ ಮೊದಲು ಸಂಘ ಅನುಮತಿಯನ್ನು ಈವರೆಗೆ ಪಡೆದುಕೊಂಡೇ ಬಂದಿದೆ. ಮುಂದೆಯೂ ಪಡೆದುಕೊಳ್ಳುತ್ತದೆ. ಸರಕಾರ ಈಗ ಹೊರಡಿಸಿರುವ ಆದೇಶದ ಪಾಲನೆಯನ್ನು ಮೊದಲಿನಿಂದಲೇ ಮಾಡಿಕೊಂಡು ಬರುತ್ತಿರುವಾಗ ನಮ್ಮ ಯಾವ ಕಾರ್ಯಕ್ರಮಗಳಿಗೂ ತೊಂದರೆಯಾಗುವುದಿಲ್ಲ ಎನ್ನುವ ಸ್ಪಷ್ಟತೆಯಲ್ಲಿದ್ದಾರೆ. ಹಾಗಾದರೆ, ಈ ಆದೇಶದಿಂದ ಸರಕಾರಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎನ್ನುವ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ.

ಏಕೆಂದರೆ, ಸಂಘ ಪರಿವಾರಕ್ಕೆ ಬಿಜೆಪಿಯನ್ನು ಮೀರಿದ 'ಶಕ್ತಿ' ಇರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಸಂಘವನ್ನು ಒಪ್ಪುವ ಅನೇಕರು ಬಿಜೆಪಿಯ 'ಒಳ ರಾಜಕೀಯ'ದಿಂದಾಗಿ ಪಕ್ಷದಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಈ ರೀತಿ ಅಂತರ ಕಾಯ್ದುಕೊಂಡವರಲ್ಲಿ ಬಹುತೇಕರು 'ತಟಸ್ಥ'ರಾಗಿದ್ದಾರೆ. ತಟಸ್ಥರಾಗಿದ್ದರೂ, ಆರೆಸ್ಸೆಸ್‌ನೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಹೀಗಿರುವಾಗ ನಿರ್ಬಂಧದ ತೀರ್ಮಾನದಿಂದ ಸಂಘದ ಚಟುವಟಿಕೆಗಳಿಗೆ ಸರಕಾರ ಅಡ್ಡಿಪಡಿಸುತ್ತಿದೆ ಎನ್ನುವ ಕಾರಣಕ್ಕೆ ಕಾಂಗ್ರೆಸ್ ವಿರುದ್ಧ ನಿಲ್ಲಲಿದ್ದಾರೆ.

ರಾಜ್ಯ ಸರಕಾರ ತೆಗೆದುಕೊಂಡಿರುವ ಈ ತೀರ್ಮಾನದಿಂದ ಆರೆಸ್ಸೆಸ್ ವಿರೋಧಿಗಳೆಲ್ಲ ಕಾಂಗ್ರೆಸ್ ಪರವಾಗಿ ನಿಲ್ಲುತ್ತಾರೆ ಎನ್ನುವುದು ನಿಜವಲ್ಲ. ಆದರೆ ಆರೆಸ್ಸೆಸ್ ಪರವಾಗಿರುವವರು ಒಟ್ಟಾಗುವುದು ಸ್ಪಷ್ಟ. ಈ ವಿಷಯದಲ್ಲಿ ಸಂಘದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸಂಘದ ಇತಿಹಾಸದಲ್ಲಿಯೇ, ತನ್ನ ವಿರುದ್ಧದ ಟೀಕೆ-ಟಿಪ್ಪಣಿಗಳಿಗೆ ಪ್ರತಿಕ್ರಿಯಿಸಿರುವ ಉದಾಹರಣೆಯಿಲ್ಲ. ಆದರೆ ಈ ಹಿಂದಿನ ಘಟನಾವಳಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಬಹಿರಂಗವಾಗಿ ಹೇಳಿಕೆ ನೀಡುವುದಿಲ್ಲವಾದರೂ, ತಮ್ಮ ಕಾರ್ಯದ ಮೂಲಕವೇ ಪ್ರತಿಕ್ರಿಯಿಸಿರುವ ನಿದರ್ಶನಗಳಿವೆ. ರಾಜಕೀಯವಾಗಿಯೇ ಪ್ರತಿಕ್ರಿಯೆ ನೀಡಬೇಕು ಎನ್ನುವ ಅನಿವಾರ್ಯತೆ ಸೃಷ್ಟಿಯಾದಾಗಲೆಲ್ಲ, ಚುನಾವಣೆಯ ಸಮಯದಲ್ಲಿ ತಮ್ಮ ಸ್ವಯಂಸೇವಕರನ್ನು ಗ್ರೌಂಡ್ ಲೆವೆಲ್‌ನಲ್ಲಿ ಕೆಲಸ ಮಾಡುವಂತೆ ಮಾಡಿ, ಫಲಿತಾಂಶಗಳನ್ನು ತಲೆಕೆಳಗೆ ಮಾಡಿರುವ ಹತ್ತಾರು ಉದಾಹರಣೆ ನೀಡಬಹುದು. ಕಮ್ಯುನಿಸ್ಟರ ಹಿಡಿತದಲ್ಲಿದ್ದ ತ್ರಿಪುರದಲ್ಲಿ ಬಿಜೆಪಿಯನ್ನು ಸ್ಪಷ್ಟ ಬಹುಮತದಲ್ಲಿ ಗೆಲ್ಲಿಸಿಕೊಂಡು ಬಂದಿದ್ದು, ಮಹಾರಾಷ್ಟ್ರ ಚುನಾವಣೆಯಲ್ಲಿ ಐತಿಹಾಸಿಕ ಸಂಖ್ಯಾಬಲ ಸಿಗುವಂತೆ ಮಾಡಿದ್ದು ಸೇರಿದಂತೆ ಹಲವು ನಿದರ್ಶನಗಳಿವೆ.

ಆರೆಸ್ಸೆಸ್‌ನ ಚಟುವಟಿಕೆಗಳಿಗೆ ನಿರ್ಬಂಧ ಹೇರಬೇಕೆಂಬ ಚರ್ಚೆ ಬರುವುದಕ್ಕೂ 'ದೂರಾಲೋಚನೆ' ಇತ್ತು ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಶತಮಾನೋತ್ಸವ ಸಂಭ್ರಮದಲ್ಲಿರುವ ಆರೆಸ್ಸೆಸ್ ಅನ್ನು ನಿರ್ಬಂಧ ಮಾಡಬೇಕೆಂದು ಚರ್ಚೆ ಆರಂಭಿಸುತ್ತಿದ್ದಂತೆ, ಇದಕ್ಕೆ ಸಂಘ ಪರಿವಾರ ಪ್ರತಿಕ್ರಿಯಿಸುತ್ತದೆ. ಆ ವಿಷಯ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತದೆ. ಇದರಿಂದ ಶತಮಾನೋತ್ಸವದ ಹೊಸ್ತಿಲಿನಲ್ಲಿರುವ ಸಡಗರದಲ್ಲಿ 'ಇರಿಸು-ಮುರಿಸು' ಉಂಟುಮಾಡಬಹುದು ಎನ್ನುವ ಲೆಕ್ಕಾಚಾರ ಅನೇಕರಲ್ಲಿತ್ತು. ಅದಕ್ಕೆ ಪೂರಕವಾಗಿ ತಮಿಳುನಾಡು ಸರಕಾರದ ತೀರ್ಮಾನ, ಕೇರಳದಲ್ಲಿ ಯುವಕನೊಬ್ಬನ ಲೈಂಗಿಕ ಕಿರುಕುಳ ಆರೋಪ ಎನ್ನುವ ವಿಷಯಗಳನ್ನು ಸೇರಿಸಿ ಸಂಘದ ವಿರುದ್ಧ ಬಹುದೊಡ್ಡ ಹೋರಾಟ ನಡೆಸಬಹುದು ಎನ್ನುವ ಆಲೋಚನೆಯಲ್ಲಿಯೇ ಪಕ್ಷದ ಹೈಕಮಾಂಡ್ ಸಹ ಪ್ರಿಯಾಂಕ್ ಅವರಿಗೆ ಒಪ್ಪಿಗೆ ನೀಡಿತ್ತು. ಆದರೆ ನಿರ್ಬಂಧಿಸುವ ಬಗ್ಗೆ ಸಂಪುಟದಲ್ಲಿ ತೀರ್ಮಾನ ಕೈಗೊಂಡರೂ, ಆರೆಸ್ಸೆಸ್‌ನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಹೋಗಲಿ, ಹೆಚ್ಚುವರಿ ಪಥ ಸಂಚಲನ, ಕಾರ್ಯಕ್ರಮಗಳನ್ನು ನಡೆಸುತ್ತಾರೆ, ಅದನ್ನು ನಿರ್ಬಂಧಿಸುವ ಮೂಲಕ ಚರ್ಚೆಗೆ ವೇದಿಕೆ ಸಿದ್ಧಪಡಿಸಿಕೊಳ್ಳಬಹುದು ಎಂದರೆ ಅದಕ್ಕೂ ಅವಕಾಶ ಸಿಗಲಿಲ್ಲ. ಬದಲಿಗೆ ಶತಮಾನೋತ್ಸವದ ನಿಮಿತ್ತ ಏನು ಮಾಡಬೇಕಿತ್ತೋ ಅದನ್ನು 'ಅಚ್ಚುಕಟ್ಟಾಗಿ' ಮಾಡಿ ಮೌನಕ್ಕೆ ಶರಣಾಗಿತ್ತು ಆರೆಸ್ಸೆಸ್. ಚಿತ್ತಾಪುರದಲ್ಲಿ ಅನುಮತಿ ನೀಡಲೇ ಇಲ್ಲ ಎನ್ನುವ ಕಾರಣಕ್ಕೆ ಹೈಕೋರ್ಟ್ ಹೋಗಿ, ನ.2ರಂದು ನಡೆಸುವುದಕ್ಕೆ ಬೇಕಾದ ಕಾನೂನು ರಕ್ಷಣೆಗಳನ್ನು ತಗೆದುಕೊಂಡಿದೆ. ಬದಲಿಗೆ ಆರೆಸ್ಸೆಸ್ ವಿರುದ್ಧ ಯಾರೇ ಪೋಸ್ಟ್ ಮಾಡಿದರೂ, ಅಲ್ಲಿ ತೀವ್ರ ಆಕ್ರೋಶವನ್ನು ಸಾರ್ವಜನಿಕರೇ ಹೊರಹಾಕಿದ್ದು ನೋಡಿ ಹಲವು ಕಾಂಗ್ರೆಸಿಗರಿಗೆ ಇದರ ಸೂಕ್ಷ್ಮತೆ ಅರಿವಿಗೆ ಬಂತು.

ಹಾಗೆ ನೋಡಿದರೆ, ಸಂಘ ಪರಿವಾರದ ವತಿಯಿಂದ ನಡೆಯುತ್ತಿರುವ ಪಥಸಂಚಲನಗಳು ಇದೇ ಮೊದಲಲ್ಲ. ಪ್ರತಿವರ್ಷ ವಿಜಯದಶಮಿಯ ಬಳಿಕ ರಾಜ್ಯಾದ್ಯಂತ ಈ ರೀತಿಯ ಪಥಸಂಚಲನಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಇತಿಹಾಸದಲ್ಲಿ ನಡೆದಿರುವ ಬಹುತೇಕ ಪಥ ಸಂಚಲನ ಶಿಸ್ತು ಹಾಗೂ ಶಾಂತಿಯಿಂದ ಮುಗಿದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇದಿಷ್ಟೇ ಅಲ್ಲದೇ, ಯಾವುದೇ ಪಥಸಂಚಲನಕ್ಕೆ ಮೊದಲು ಸ್ಥಳೀಯ ಆಡಳಿತದ ಅನುಮತಿ ಪಡೆಯಬೇಕೆಂಬ 'ನಿಯಮ'ವನ್ನು ಜಾರಿಗೊಳಿಸಿರುವುದಾಗಿ ಸರಕಾರ ಹೇಳಿಕೊಳ್ಳುತ್ತಿದೆ. ಆದರೆ ಆರೆಸ್ಸೆಸ್ ಮಾತ್ರವಲ್ಲ, ಯಾವುದೇ ಸಂಘಟನೆ ಪಥಸಂಚಲನ ನಡೆಸಬೇಕು ಎಂದರೂ ಈ ಹಿಂದೆಯೂ ಅನುಮತಿ ಪಡೆಯಬೇಕಿತ್ತು, ಈಗಲೂ ಪಡೆಯಬೇಕು, ಮುಂದೆಯೂ ಪಡೆಯಬೇಕು. ಅದೇ ರೀತಿಯಲ್ಲಿ ಸಂಘ ಪರಿವಾರದವರೂ ತಮ್ಮ ಕಾರ್ಯಕ್ರಮ ಅಥವಾ ಪಥಸಂಚಲನದ ಸಮಯದಲ್ಲಿ ಸ್ಥಳೀಯ ಪೊಲೀಸರಿಂದ ಅನುಮತಿ ಪಡೆದಿದ್ದಾರೆ. ಯಾವುದೇ ಅನುಮತಿ ಪಡೆಯುವ ಸಮಯದಲ್ಲಿ ಬೇಕಿರುವ 'ಅಗತ್ಯ' ದಾಖಲೆಗಳನ್ನು ನೀಡಿದ ಬಳಿಕವೇ ಸ್ಥಳೀಯ ಆಡಳಿತವು ಅನುಮತಿಯನ್ನು ನೀಡುವುದು ಎನ್ನುವುದು ಸ್ಪಷ್ಟ. ಆದರೆ ಈ ಬಾರಿ ನಿರ್ಬಂಧದ ನೆಪದಲ್ಲಿ ಆರೆಸ್ಸೆಸ್‌ನ ಪಥಸಂಚಲನಕ್ಕೆ ವಿಶೇಷ ಪ್ರಚಾರವನ್ನು ಕಾಂಗ್ರೆಸ್ಸಿಗರೇ ನೀಡಿದರು ಎನ್ನುವುದು ವಾಸ್ತವ.

ಈಗಾಗಲೇ ರಾಜ್ಯಾದ್ಯಂತ ಆರೆಸ್ಸೆಸ್‌ನ ಪಥಸಂಚಲನ ಮುಕ್ತಾಯವಾಗಿದೆ. ಚಿತ್ತಾಪುರ, ಸೇಡಂ, ಯಡ್ರಾಮಿಯಲ್ಲಿ ಮಾತ್ರ ನ.2ಕ್ಕೆ ನಡೆಸುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ. ನಿರ್ಬಂಧ, ಅನುಮತಿ ನಿರಾಕರಣೆ, ಅಧಿಕಾರಿಯ ಅಮಾನತು ವಿಷಯದಲ್ಲಿ ರಾಜ್ಯಾದ್ಯಂತ ಇಷ್ಟೆಲ್ಲ ಚರ್ಚೆಯಾದರೂ ಆರೆಸ್ಸೆಸ್ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಆದರೆ ಪಥಸಂಚಲನದ ಮೂಲಕ ತನ್ನ ಕಾರ್ಯಕರ್ತರ ಪಡೆಯನ್ನು ತೋರಿಸುವಲ್ಲಿ ಅದು ಯಶಸ್ವಿಯಾಗಿದೆ. ಉದಾಹರಣೆಗೆ ಭಾನುವಾರ ಒಂದೇ ದಿನ ಬೆಂಗಳೂರು ಒಂದರಲ್ಲಿಯೇ ನೂರಕ್ಕೂ ಹೆಚ್ಚು ಭಾಗದಲ್ಲಿ ಪಥಸಂಚಲನವನ್ನು ನಡೆಸಲಾಗಿದೆ. ಇದರಲ್ಲಿ 24 ಸಾವಿರ ಜನರು ಸೇರುತ್ತಾರೆ ಎಂದು ಅಂದಾಜಿಸಲಾಗಿತ್ತು. ಆದರೆ ಸೇರಿದ್ದು ಮಾತ್ರ 34 ಸಾವಿರ ಮಂದಿ!

ಹಾಗೆ ನೋಡಿದರೆ, ಸಂಘ ಪರಿವಾರವನ್ನು ನಿರ್ಬಂಧಿಸುವ ವಿಷಯದಲ್ಲಿ ಕಾಂಗ್ರೆಸ್ ನಾಯಕರು ಪ್ರಿಯಾಂಕ್ ಖರ್ಗೆಯವರನ್ನು ಬೆಂಬಲಿಸಿ ಪ್ರತಿಕ್ರಿಯಿಸಿಲ್ಲ ಎನ್ನುವುದು ಎಷ್ಟು ಸತ್ಯವೋ, ಬಿಜೆಪಿಗರು ಆರೆಸ್ಸೆಸ್ ಪರವಾಗಿ ನಿಲ್ಲಲಿಲ್ಲ ಎನ್ನುವುದೂ ಅಷ್ಟೇ ಸತ್ಯ. ಸಂಘ ಪರಿವಾರದ ಪ್ರಮುಖರು ಈ ವಿಷಯದಲ್ಲಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸಂಘವನ್ನು ಬಲ್ಲ ಎಲ್ಲರಿಗೂ ಗೊತ್ತಿತ್ತು. ಆದರೆ ಬಿಜೆಪಿ ಪಕ್ಷವಾಗಿ, ಈ ವಿಷಯವನ್ನು ರಾಜಕೀಯವಾಗಿ ಬಳಸಿಕೊಳ್ಳಬಹುದಾಗಿತ್ತು. ಆದರೆ ಬಿಜೆಪಿಯ ಬಹುತೇಕ ನಾಯಕರು ಆರೆಸ್ಸೆಸ್‌ನ ನಿರ್ಬಂಧದ ವಿಷಯದಲ್ಲಿ ಸಾಮಾಜಿಕ ಜಾಲತಾಣಗಳಿಗೆ ಸೀಮಿತವಾದರೇ ಹೊರತು, ಈ ವಿಷಯವನ್ನು ಸರಕಾರದ ವಿರುದ್ಧ ಯಾವ ರೀತಿ ಜನಾಕ್ರೋಶವಾಗಿ ಬಳಸಿಕೊಳ್ಳಬಹುದು ಎನ್ನುವ ಬಗ್ಗೆ ಆಲೋಚನೆ ಮಾಡಲಿಲ್ಲ. ಸರಕಾರದ ತೀರ್ಮಾನದಿಂದ ಸಂಘವನ್ನು ರಕ್ಷಿಸಬೇಕು ಎನ್ನುವ ಕಾರಣಕ್ಕೆ ಬಿಜೆಪಿ ಹೋರಾಡಬೇಕಿತ್ತು ಎನ್ನುವುದಕ್ಕಿಂತ, ಕುಸಿದುಹೋಗಿರುವ ಬಿಜೆಪಿ ಸಂಘಟನೆಗೆ 'ಬಲ' ನೀಡುವ ಉದ್ದೇಶದಿಂದಾದರೂ ಈ ವಿಷಯವನ್ನು ಮತ್ತಷ್ಟು ಗಟ್ಟಿಯಾಗಿ ತೆಗೆದುಕೊಳ್ಳಬಹುದಾಗಿತ್ತು. ಆದರೆ ಬಿಜೆಪಿಯ ಬಹುತೇಕ ನಾಯಕರು 'ಟ್ವೀಟ್ ವಾರ್' ನಡೆಸಿ, ಅಲ್ಲಿಗೆ ನಮಗೂ ಈ ಘಟನೆಗೂ ಸಂಬಂಧ ಮುಗಿಯಿತು ಎನ್ನುವ ರೀತಿಯಲ್ಲಿ ನಡೆದುಕೊಂಡರು ಎಂದರೆ ತಪ್ಪಾಗುವುದಿಲ್ಲ.

ಆದರೆ ಒಟ್ಟಾರೆ ಪ್ರಕರಣದಲ್ಲಿ ಇಕ್ಕಟ್ಟಿಗೆ ಸಿಲುಕಿದ್ದು ಮಾತ್ರ ಕಾಂಗ್ರೆಸ್ಸಿಗರು. ಈ ವಿಷಯದ ಸೂಕ್ಷ್ಮತೆ ಅರಿತ ಬಹುತೇಕರು ಆರಂಭದಲ್ಲಿಯೇ ದೂರ ಉಳಿಯಲು ಪ್ರಯತ್ನಿಸಿದರು. ಆದರೆ ಕೆಲವರು ಎಐಸಿಸಿ ಅಧ್ಯಕ್ಷರ ಮಗನಿಂದ ಶುರುವಾಗಿರುವ ಕಾರಣಕ್ಕೆ 'ಹೇಳಿಕೆ'ಗಳಿಗೆ ಸೀಮಿತವಾದರು. ಆದರೆ ಸಂಘದ ವಿರುದ್ಧವಾಗಾಳಿ ಆರಂಭಿಸಿದ್ದ ಪ್ರಿಯಾಂಕ್ ಖರ್ಗೆ ಮಾತ್ರ ಹಿಂದೆ ಹೋಗಲಾಗದ ಸ್ಥಿತಿಯಲ್ಲಿದ್ದಾರೆ ಎನ್ನುವುದು ಸ್ಪಷ್ಟ. ಸಂಘದ ವಿಷಯದಲ್ಲಿ ಕಾಂಗ್ರೆಸ್ಸಿಗರ ನಿಲುವನ್ನು ನೋಡಿದರೆ, ಆರೆಸ್ಸೆಸ್‌ಗೆ ಬೈದರೆ ಗಾಂಧಿ ಕುಟುಂಬದ ಕೃಪೆ ಸಿಗುತ್ತದೆ ಎನ್ನುವ ಆಲೋಚನೆಯಲ್ಲಿ ಅನೇಕರಿದ್ದಾರೆ. ಈ ಕಾರಣಕ್ಕಾಗಿಯೇ, ಶತಮಾನೋತ್ಸವದ ಹೊಸ್ತಿಲಿನಲ್ಲಿ, ಇಡೀ ವರ್ಷ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ ಅದಕ್ಕೆ ಕೌಂಟರ್ ಕೊಡುವ ನಿಟ್ಟಿನಲ್ಲಿ ಪ್ರಿಯಾಂಕ್ ಖರ್ಗೆ ಅವರು ಈ ರೀತಿ ಪತ್ರ ಬರೆದಂತೆ ಮಾಡಿ, 'ಇನ್ನು ಮುಂದೆ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಮತಿ ಕಡ್ಡಾಯ' ಎನ್ನುವ ಆದೇಶವನ್ನು ಮತ್ತೊಮ್ಮೆ ಹೊರಡಿಸುವಂತೆ ನೋಡಿಕೊಂಡಿದ್ದಾರೆ. ಇದರೊಂದಿಗೆ ಸರಕಾರಿ ನೌಕರಿಯಲ್ಲಿರುವವರು ಸಂಘದ ಪಥಸಂಚಲನದಲ್ಲಿ ಭಾಗವಹಿಸದಂತೆಯೂ ನಿರ್ಬಂಧ ಹೇರಿ, ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಇಲಾಖೆಯ ಪಿಡಿಒ ಒಬ್ಬರು ಗಣವೇಷ ಹಾಕಿ, ಪರೇಡ್‌ನಲ್ಲಿ ಭಾಗವಹಿಸಿದ್ದರು ಎನ್ನುವ ಕಾರಣಕ್ಕೆ ಅಮಾನತಿನ ಶಿಕ್ಷೆ ನೀಡಿದ್ದಾರೆ. ಈ ಎಲ್ಲಕ್ಕೂ ಪಕ್ಷದ 'ಒಡ್ಡೋಲಗ'ದಲ್ಲಿ ಆರಂಭದಲ್ಲಿ ಶಹಬಾಸ್‌ಗಿರಿ ಬಂತಾದರೂ, ಬಳಿಕ ಸಾರ್ವಜನಿಕವಾಗಿ ಶುರುವಾದ ಪ್ರತಿರೋಧವು ಕಾಂಗ್ರೆಸ್ಸಿಗರು 'ಮೌನ'ಕ್ಕೆ ಶರಣಾಗುವಂತೆ ಮಾಡಿತ್ತು.

ಆದರೆ ಒಂದಂತೂ ಸತ್ಯ, ಇಷ್ಟೆಲ್ಲ ರಾಜಕೀಯ ಮೇಲಾಟವಾಗುತ್ತಿದ್ದರೂ ನಮಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ 'ಯಥಾ ಪುರಾ ಆಸೀತ್ ತಥಾ ಭವಿಷ್ಯೆ ಅಪಿ ಭವಿಷ್ಯತಿ' ಎನ್ನುವ ತತ್ವದಲ್ಲಿ ಸಂಘ ತನ್ನ ಕಾರ್ಯಕ್ರಮಗಳಿಗೆ ಸಜ್ಜಾಗುತ್ತಿರುವುದು ಕಾಂಗ್ರೆಸ್ ಅನ್ನು ಇಕ್ಕಟ್ಟಿಗೆ ಸಿಲುಕುವಂತೆ ಮಾಡಿರುವುದಂತೂ ಸತ್ಯ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪ್ರಧಾನಿಗೊಂದು ಪತ್ರ

ಗೌರವಾನ್ವಿತ ಪ್ರಧಾನ ಮಂತ್ರಿಗಳೇ, ಆಳವಾದ ರಾಷ್ಟ್ರಪ್ರೀತಿಯೊಂದಿಗೆ ಮತ್ತು ಸಾರ್ವಜನಿಕ ಜವಾಬ್ದಾರಿಯ ಭಾವದಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ. ಭಾರತವು ಆರೋಗ್ಯ, ಮೂಲಸೌಕರ್ಯ, ವೈದ್ಯಕೀಯ ತಂತ್ರಜ್ಞಾನ ಮತ್ತು ವಿಮಾ ಯೋಜನೆಗಳಲ್ಲಿ ಮಹತ್ತರ ಪ್ರಗತಿ ಸಾಧಿಸಿದೆ. ಆದರೆ, ಇಂದು ನಮ್ಮ ಮುಂದಿರುವ ದೊಡ್ಡ ಸವಾಲು ಸಂಪನ್ಮೂಲಗಳ ಕೊರತೆ ಅಲ್ಲ- ಇದು ನೈತಿಕ ಮನಸ್ಸಿನ ಕುಸಿತ ಎಂಬ ಗಂಭೀರ ಪ್ರಶ್ನೆ.

ಆರೋಗ್ಯ ಸೇವೆ ಎಂಬುದು ಸೇವೆಯಾಗಿರಬೇಕಾದ ಸ್ಥಳದಲ್ಲಿ ವ್ಯಾಪಾರವಾಗಿ ಮಾರ್ಪಡಾಗುವ ಅಪಾಯದ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದು ಕಳವಳದ ವಿಷಯ. ನಾನು ಈ ಪತ್ರವನ್ನು ಯಾವುದೇ ವ್ಯಕ್ತಿ ಅಥವಾ ವೃತ್ತಿಯ ವಿರುದ್ಧವಾಗಿ ಅಲ್ಲ, ದೇಶದ ಆರೋಗ್ಯ ವ್ಯವಸ್ಥೆಯನ್ನು ಸಂರಕ್ಷಿಸುವ ನೈತಿಕ ಅನಿವಾರ್ಯತೆಯಿಂದ ಬರೆಯುತ್ತಿದ್ದೇನೆ. ಈ ನಿಟ್ಟಿನಲ್ಲಿ ಒಂದಷ್ಟು ಕಳವಳಕರ ವಾಸ್ತವಾಂಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ಪ್ರಾಯೋಗಿಕ ಅಧ್ಯಯನಗಳ ಪ್ರಕಾರ, ಶೇ.44ರಷ್ಟು ಪ್ರಮುಖ ಶಸ್ತ್ರಚಿಕಿತ್ಸೆಗಳು ಅಗತ್ಯವಿಲ್ಲದವಾಗಿವೆ ಅಥವಾ ನಕಲಿ ದಾಖಲೆಗಳ ಆಧಾರಿತವಾಗಿವೆ. ಕೃತಕ ದಾಖಲಾತಿಗಳು, ಭೂತ ರೋಗಿಗಳು, ಇನ್ಸುರೆನ್ಸ್ ದುರುಪಯೋಗ, ರೆಫರಲ್ ಮತ್ತು ಡಯಗ್ನೋಸ್ಟಿಕ್ ಕಮಿಷನ್ ಪದ್ಧತಿಗಳು ಸಾಮಾನ್ಯವಾಗುತ್ತಿವೆ. ಕೆಲ ಸಂದರ್ಭಗಳಲ್ಲಿ, ನಿಧನರಾದ ರೋಗಿಗಳನ್ನು ಸಹ ಯಂತ್ರಗಳಲ್ಲಿ ಕಾಯ್ದುಕೊಂಡು ಬಿಲ್ ಹೆಚ್ಚಿಸುವ ಘಟನೆಗಳು ವರದಿಯಾಗಿವೆ. ಈ ಎಲ್ಲವುಗಳನ್ನು ನೋಡಿದರೆ ನಮ್ಮ ಆರೋಗ್ಯ ವ್ಯವಸ್ಥೆಯಲ್ಲಿ ನೈತಿಕತೆ ಎಲ್ಲಿದೆ? ಎಂಬ ಪ್ರಶ್ನೆಏಳುತ್ತದೆ. ಇಷ್ಟು ವರ್ಷಗಳಿಂದ ಅಧಿಕೃತ ಸಂಸ್ಥೆಗಳು (NMC, NABH ಮುಂತಾದವು) ಮುಖ್ಯವಾಗಿ ಮೂಲಸೌಕರ್ಯವನ್ನು ಪರೀಕ್ಷಿಸುತ್ತಿವೆ, ಆದರೆ ನೈತಿಕ ನಡೆಗೆ ಯಾವುದೇ ರಾಷ್ಟ್ರೀಯ ದಂಡಾತ್ಮಕ ವ್ಯವಸ್ಥೆ ಇಲ್ಲ.

ದೇಶದ ಸುಸ್ಥಿರ ಮತ್ತು ಮಾನವೀಯ ಆರೋಗ್ಯ ಭವಿಷ್ಯಕ್ಕಾಗಿ, ನಾನು ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ಮನವಿ ಮಾಡುತ್ತೇನೆ:

- ರಾಷ್ಟ್ರೀಯ ವೈದ್ಯಕೀಯ ನೈತಿಕ ಮೇಲ್ವಿಚಾರಣಾ ಇಲಾಖೆಯನ್ನು (Ethical Oversight Wing) NABH / NHA ಅಡಿಯಲ್ಲಿ ಸ್ಥಾಪಿಸಿ, ಈ ಅಧಿಕಾರಗಳನ್ನು ನೀಡಿ: ಆಸ್ಪತ್ರೆಗಳ ನೈತಿಕ ಪರಿಶೀಲನೆ, ಅನೈತಿಕ ಪದ್ಧತಿಯ ತನಿಖೆ, ದೂರುಗಳಿಗೆ ನಿರ್ದಿಷ್ಟ ವೇದಿಕೆ ಮತ್ತು ಶಿಕ್ಷೆ.
- ನೈತಿಕ ತರಬೇತಿ ಮತ್ತು ಜಾಗೃತಿ: ವೈದ್ಯರು, ಆಸ್ಪತ್ರೆಗಳು ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ಸೇವೆಯ ಪ್ರಮಾಣದ ಬದುಕಿನ ಪಾಠ ರೂಪದಲ್ಲಿ ಮರುಶಿಕ್ಷಣ.
- ಸಾರ್ವಜನಿಕ ನಂಬಿಕೆಯನ್ನು ಉಳಿಸುವ ರಾಷ್ಟ್ರಮಟ್ಟದ ಘೋಷಣೆ: ಆರೋಗ್ಯ ವ್ಯವಹಾರವಲ್ಲ, ಅದು ವರ್ತಮಾನದ ಭಾರತಕ್ಕೆ ಮಾನವೀಯ ವಚನ ಎಂಬ ರಾಷ್ಟ್ರೀಯ ಸಂದೇಶ.

ತಾವು ಈ ಬಗ್ಗೆ ವಿಶೇಷ ಕಾಳಜಿ ತೋರಿದಲ್ಲಿ ಮಾತ್ರವೇ, ಅದು ಮುಂದಿನ ದಿಕ್ಕು ತೋರುವ ಬೆಳಕಾಗುತ್ತದೆ. ತಾವು ಹಲವು ದಶಲಕ್ಷ ಜನರಿಗೆ ಆರೋಗ್ಯಪೂರ್ಣ ಜೀವನಕ್ಕೆ ದಾರಿ ತೋರುವ ನಾಯಕರಾಗಿದ್ದಿರಿ. ಭಾರತದ ಆರೋಗ್ಯ ವ್ಯವಸ್ಥೆ ಕೇವಲ ಅಭಿವೃದ್ಧಿಯಿಂದಲ್ಲ, ನೈತಿಕತೆ ಮತ್ತು ಕರುಣೆಯಿಂದ ನಿರ್ಮಾಣವಾಗಬೇಕು. ನನ್ನ ಈ ಮನವಿಯು, ಯಾರನ್ನೂ ದೂಷಿಸಲು ಅಲ್ಲ. ಬದಲಿಗೆ ಮುಂದಿನ ಪೀಳಿಗೆಯ ನಂಬಿಕೆ ಕಳೆದುಹೋಗದಂತೆ ಉಳಿಸಲು ಮಾತ್ರ. ನಿಮ್ಮ ಮಾನ್ಯ ತೀರ್ಮಾನಗಳ ನಿರೀಕ್ಷೆಯಲ್ಲಿ, ದೇಶದ ನಾಗರಿಕನಾಗಿ ಮತ್ತು ಸಾರ್ವಜನಿಕ ಸೇವೆಯನ್ನು ನಂಬಿಕೊಂಡ ವ್ಯಕ್ತಿಯಾಗಿ, ಈ ಪತ್ರವನ್ನು ಬರೆದಿದ್ದೇನೆ.

- ಡಾ. ಪಿ.ಬೋರೇಗೌಡ, ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಕಲ್ಲೇಟಿಗಿಂತ ನಿನ್ನ ಕಣ್ಣೇಟು ಜೋರಾಗಿ ನಡುಗಿದೆ ಗಡಗಡ..!

ಪದಸಾಗರ
ನವೀನ್ ಸಾಗರ್
vveditoped@gmail.com

ನಮ್ಮದೇ ಬರ್ತಡೇ, ಯಾರದ್ದೋ ಮದುವೆಮನೆ, ಇನ್ನೇನೋ ಸಾರ್ವಜನಿಕ ಕಾರ್ಯಕ್ರಮ ಇಂಥದ್ದರ ಮೂರ್ನಾಲ್ಕು ದಿನಗಳ ಸಂಭ್ರಮದ ನಂತರ ದಿಢೀರ್ ಒಂದು ಖಾಲಿ ಭಾವ ಹುಟ್ಟಿಕೊಳ್ಳುತ್ತದೆ. ಮೂರು ದಿನಗಳ ಆಯಾಸ ಅಂದು ಕಾಡಲು ಶುರುವಾಗುತ್ತದೆ. ಮೂರು ದಿನ ಗಡದ್ದಾಗಿ ತಿಂದುಂಡು ತೇಗಿದ್ದಕ್ಕೋ ಏನೋ, ಮನೆಯಲ್ಲಿ ಊಟ ಸೇರದಂತಾಗುತ್ತದೆ. ಪಾರ್ಟಿಯ ಖುಷಿಯಲ್ಲಿ ನಿದ್ದೆಯ ಶೆಡ್ಯೂಲ್ ಬದಲಾದದ್ದಕ್ಕೆ ಸರಿಯಾದ ಹೊತ್ತಿಗೆ ನಿದ್ದೆ ಬಾರದಂತಾಗುತ್ತದೆ. ಮಗ-ಮಗಳು ಹೀಗೆ ಊಟ ತಿಂಡಿ ಮಾಡದೆಯೇ ಡಿಪ್ರೆಸ್ಡ್ ಎಂಬಂತೆ ಇದ್ದುಬಿಟ್ಟಾಗ, ಮನೆಯಲ್ಲಿರುವ ಅಮ್ಮ ಇದಕ್ಕಿಡುವ ಹೆಸರು 'ದೃಷ್ಟಿ'! ಎಲ್ಲ ಅಮ್ಮಂದಿರಿಗೂ ಅವರವರ ಮಕ್ಕಳೆಂದರೆ ಮುದ್ದು, ಅವ್ರು ಹೇಗೇ ಇದ್ದರೂ ಮುದ್ದು. ತಮ್ಮ ಮಕ್ಕಳ ಮೇಲೆ ಯಾರ ಕೆಟ್ಟಕಣ್ಣು ಬೀಳತ್ತೋ ಎಂಬುದೇ ಅವರ ಚಿಂತೆ. ಹೀಗಾಗಿ ಆಯಾಸದಿಂದ ಬರುವ ಜ್ವರಕ್ಕೆ, ಬೇಸರದಿಂದ ಊಟನಿದ್ದೆ ಸೇರದಿರುವುದಕ್ಕೆ, ಇನ್ಯಾವುದೋ ಕಿರಿಕಿರಿ ಮಾಡುವುದಕ್ಕೆ ಎಲ್ಲದಕ್ಕೂ ಅಮ್ಮ ಇಡುವ ಹೆಸರು ದೃಷ್ಟಿ.

ಬಾಲ್ಯದಲ್ಲಿ ಈ ದೃಷ್ಟಿ ತೆಗೆಸಿಕೊಳ್ಳುವುದೊಂದು ಬಹಳ ಇಷ್ಟದ ವಿಚಾರವಾಗಿಬಿಟ್ಟಿತ್ತು. ಕಾರಣ, ಇದು ಒದೆ ತಪ್ಪಿಸಿಕೊಳ್ಳುವ ಮಾರ್ಗವೂ ಆಗಿತ್ತು. ವಿಪರೀತ ರಚ್ಚೆ ಹಿಡಿದು, ಊಟ ತಿಂಡಿ ಮಾಡದೇ ಗಲಾಟೆ ಮಾಡ್ತಾ ಇದ್ದಾಗೆಲ್ಲ ಅಮ್ಮನಿಂದ ಏಟು ಕಾಯಂ. ಆದರೆ ಏಟುಕೊಟ್ಟ ಮರುಕ್ಷಣವೇ ನಮಗಿಂತ ಹೆಚ್ಚು ದುಃಖ ಪಡ್ತಾ ಇದ್ದದ್ದು ಅಮ್ಮ. ಏಟುಕೊಟ್ಟು ಸ್ವಲ್ಪ ಹೊತ್ತಿಗೆ ಈರುಳ್ಳಿ ಸಿಪ್ಪೆ, ಬೆಳ್ಳುಳ್ಳಿ ಸಿಪ್ಪೆ, ಒಣಮೆಣಸಿನ ತೊಟ್ಟು, ಪೊರಕೆ ಕಡ್ಡಿ ಎಲ್ಲ ಒಟ್ಟು ಮಾಡಿ ತರುತ್ತಿದ್ದರು. ಒಂದು ಮರದ ಮಣೆ ಹಾಕಿ ಕೂರಿಸಿ, ದೃಷ್ಟಿ ನೀವಾಳಿಸಲು ಶುರುವಿಡುತ್ತಿದ್ದರು. ಅಳುವಿನಲ್ಲಿ ನಾವು ಉಸಿರು ಏಕುತ್ತಾ ಇದ್ದರೆ, ಅಮ್ಮ ಎಡಗೈ ಮುಷ್ಟೀಲಿ ದೃಷ್ಟಿ ಐಟಮ್ ಹಿಡ್ಕೊಂಡು ಉಲ್ಟಾ ರೌಂಡ್ ತಿರುಗಿಸಲು ಪ್ರಾರಂಭಿಸುತ್ತಿದ್ದರು. ಅದ್ಯಾರ್ಯಾರದ್ದೋ ಹೆಸ್ರೆಲ್ಲ ಹೇಳಿ ಬಿದ್ದಿರೋ ಕಣ್ಣೆಲ್ಲ ಹೋಗ್ಲಿ ಎಂದು ಶಪಿಸಿ, ಕಾಳಿ ಬೋಳಿ ಅಂತೇನೇನೋ ಹೇಳಿ ನಮ್ಮಿಂದ ಥುಥುಥು ಅನ್ನಿಸುತ್ತಿದ್ದರು. ಆಮೇಲೆ ಕೈಲಿದ್ದ ಆ ದೃಷ್ಟಿ ಐಟಮ್‌ಗಳನ್ನು ಒಯ್ದು, ಉರಿಯುತ್ತಿದ್ದ ಅಡುಗೆ ಒಲೆಗೆ ಹಾಕುತ್ತಿದ್ದರು. ಚಟಾಪಟ ಸೌಂಡ್ ಬರ್ತಾ ಇದ್ರೆ, ನೋಡು ಎಷ್ಟೊಂದ್ ದೃಷ್ಟಿ ಆಗಿತ್ತು ಅಂತ ಅಂತಿದ್ರು. ನಂಗೆ ಹೌದೇನೋ ಅನಿಸ್ತಿತ್ತು. ಅದರ ವಾಸನೆ ಅಂತೂ ಸಕತ್ ಟೆಂಪ್ಟಿಂಗ್. ತಿಂದುಬಿಡೋಣ ಅನಿಸುವಷ್ಟು. ಆಮೇಲೆ ಆ ಒಲೆಯಿಂದ ಕಪ್ಪುಮಸಿ ತಂದು ಹಣೆಗೆ ಹಚ್ಚಿಬಿಟ್ರೆ ದೃಷ್ಟಿ ಶಾಸ್ತ್ರ ಫಿನಿಷ್. ಅಷ್ಟೊತ್ತಿಗೆ ಅಮ್ಮ ಕೊಟ್ಟ ಏಟಿನ ಪ್ರಭಾವವೂ ವರ್ಕ್ ಮಾಡಿರ್ತಿತ್ತು. ದೃಷ್ಟಿ ತೆಗೀತಾ ಮಾಡಿರೋ ಮುದ್ದೂ ವರ್ಕ್ ಆಗಿರ್ತಿತ್ತು. ಮನಸ್ಸು ಹಗುರಾಗಿ ಆಡ್ಕೊಳೋಕೋ ಓದ್ಕೊಳೋಕೋ ಸಿದ್ಧವಾಗ್ತಿದ್ವಿ. ಮುಂದಿನ ದಿನಗಳಲ್ಲಿ ಬರ್ತಾ ಬರ್ತಾ, ಕೊಂಚ ತಲೆ ಓಡಿಸೋಕೆ ಶುರು ಮಾಡಿದ್ದೆ. ಹಟ, ಸಿಟ್ಟು, ಗಲಾಟೆ ಮಾಡಿ ಒದೆ ತಿನ್ನುವ ಪರಿಸ್ಥಿತಿ ಬಂದಾಗ, ಅಮ್ಮ ಕೈ ಎತ್ತಿ ಹೊಡೆಯೋಕೆ ಬರ್ತಾ ಇದ್ದ ಹಾಗೇ, ಕೈ ಅಡ್ಡ ಇಟ್ಟು ಈ ದೃಷ್ಟಿಯನ್ನು ಡಿಫೆನ್ಸಿಗೆ ತಂದುಬಿಡ್ತಿದ್ದೆ. ಹೊಡೀಬೇಡ ನಂಗೆ ದೃಷ್ಟಿ ಆಗಿದೆ.. ದೃಷ್ಟಿ ತೆಗೀ, ಸರಿ ಹೋಗಿಬಿಡ್ತೀನಿ ಅಂತ! ಇದು ದೃಷ್ಟಿ ಪುರಾಣ. ಇಂದಿಗೂ ಪುಟ್ಟ ಮಕ್ಕಳಿಗೆ ದೃಷ್ಟಿ ತೆಗೆಯುತ್ತಾ ಇದ್ದರೆ ಆ ಹಳೆ ಅಡುಗೆ ಒಲೆಯಿಂದ ಸೃಷ್ಟಿಯಾಗುತ್ತಿದ್ದ ಶಬ್ದ ಮತ್ತು ವಾಸನೆ ನೆನಪಾಗಿ ನೋಸ್ಟಾಲ್ಜಿಯಾಗೆ ಮನಸ್ಸು ಹಾರುತ್ತದೆ.

ಆದರೆ ಇವತ್ತಿಗೂ ನಂಗೆ ಈ ದೃಷ್ಟಿ/ಕಣ್ಣುದೃಷ್ಟಿ/ಕಾಕದೃಷ್ಟಿ/ಕೆಟ್ಟಕಣ್ಣು ಇವೆಲ್ಲ ನಿಜವೋ ಸುಳ್ಳೋ ಎಂಬ ನಿರ್ಧಾರಕ್ಕೆ ಬರಲಾಗಿಲ್ಲ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಹುಡುಗರು ಹುಡುಗಿಯರು ಕಾಲಿಗೆ ಕಪ್ಪುದಾರ ಕಟ್ಟುವುದನ್ನು ಗಮನಿಸಿದ್ದೆ. ನನಗೂ ಸಾಕಷ್ಟು ಜನ 'ದೃಷ್ಟಿಗಾಗಿ ಕಾಲಿಗೆ ಕಪ್ಪು ದಾರ ಕಟ್ಟು' ಎಂದು ಸಲಹೆ ಕೊಟ್ಟಿದ್ದರು. ಅಂದಿಗೆ ತಮಾಷೆ ಅನಿಸಿತ್ತು. ಕಾಲಿಗೆ ಕಪ್ಪುದಾರ ಕಟ್ಟಿದ್ರೆ ಏನು ಪಯೋಗ ಎಂಬ ಪ್ರಶ್ನೆ ಹುಟ್ಟಿತ್ತು. ಕಟ್ಟುತ್ತಿರುವ ಮನೆಮುಂದೆ ದೃಷ್ಟಿಬೊಂಬೆ ಇಡುತ್ತಾರೆ. ಯಾಕೆ? ಮನೆಗೆ ದೃಷ್ಟಿ ಬೀಳಬಾರದು ಅಂತ. ಮನೆಕಡೆ ಕಣ್ಣು ಹಾಕೋವ್ರ ದೃಷ್ಟಿ ಆ

ಬೊಂಬೆ ಕಡೆ ಹೋಗಲಿ ಎಂಬುದು ಲಾಜಿಕ್. ಆ ನಮ್ಮ ಮೇಲೆ ದೃಷ್ಟಿ ಬೀಳಬಾರದು ಅಂದ್ರೆ, ನಾವು ಆ ಕಪ್ಪು ದಾರವನ್ನು ಢಾಳಾಗಿ ಗೋಚರವಾಗುವಂತೆ ತಾನೆ ಕಟ್ಟಿಕೊಳ್ಳಬೇಕು? ಮಗುವಿಗೆ ದೃಷ್ಟಿ ಬೀಳಬಾರದು ಅಂತ ದೊಡ್ಡ ದೊಡ್ಡ ಕಪ್ಪುಚುಕ್ಕೆಯನ್ನು ಮಗುವಿನ ಹಣೆ ಬದಿಗೆ, ಕೆನ್ನೆ ಮೇಲೆಲ್ಲ ಇಡುತ್ತಾರೆ. ಕಪ್ಪುಚುಕ್ಕೆ ಕಡೆಗೆ ದೃಷ್ಟಿ ಹಾಯಲಿ ಎಂಬುದು ಉದ್ದೇಶವಿರಬಹುದು. ಆದರೆ ವಿಚಿತ್ರ ನೋಡಿ, ಆ ಕಪ್ಪು ಬೊಟ್ಟು ಇಟ್ಟಿದ್ದರಿಂದಲೇ ಮಗು ಇನ್ನೂ ಹೆಚ್ಚು ಆಕರ್ಷಿಸಿಬಿಡುತ್ತದೆ. ಆಗ ದೃಷ್ಟಿಬೊಟ್ಟು ಇಟ್ಟು ಉಪಯೋಗವಾದರೂ ಏನು?

ಈ ಕಾಲಬುಡಕ್ಕೆ ಕಪ್ಪು ದಾರ ಕಟ್ಟಿಕೊಳ್ಳೋದ್ರಿಂದ ನಾವು ಯಾರ ದೃಷ್ಟಿಯಿಂದ ಬಚಾವಾಗೋಕೆ ಸಾಧ್ಯ? ನೋಡೋಕೆ ಚೆನ್ನಾಗಿದೀಯ ಅಂತ ಯಾರಾದರೂ ದಿಟ್ಟಿಸಿದರೆ, ಕಾಲು ನೋಡು ಅಂತ ಹೇಳೋಕಾಗತ್ತಾ? ಪ್ಯಾಂಟು ಸೀರೆ ಇಂಥ ಉದ್ದ ವಸ್ತ್ರ ಧರಿಸಿದಾಗ ಆ ಕಾಲಿನ ದಾರ ಕಾಣೋಕೆ ಚಾನ್ಸೇ ಇಲ್ಲ. ದಾರದಿಂದೇನು ಉಪಯೋಗ? ಇನ್ನು ಮಾಡರ್ನ್ ಹೆಣ್ಮಕ್ಕಳು ಮಿಡಿ, ಮಿನಿ, ಚೆಡ್ಡಿ ಇವೆಲ್ಲ ಧರಿಸೋದ್ರಿಂದ ಕಾಲು, ಕಾಲಲ್ಲಿರೋ ದಾರ ಎಲ್ಲವೂ ಕಾಣುತ್ತದೆ. ಆದರೆ ನುಣುಪಾದ ವ್ಯಾಕ್ಸಿಂಗ್ ಮಾಡಿಸಿರೋ ಬಿಳಿಬಿಳಿ ಕಾಲುಗಳು, ಆ ಕಪ್ಪುದಾರವನ್ನು ನೋಡೋಕೆ ಬಿಡುತ್ತವೆಯಾ? ಕಾಲಿನ ಕಡೆಗೆ ಹುಡುಗರು ಆಕರ್ಷಿತರಾಗುತ್ತಾರೆ. ಆ ದಾರ ಕಟ್ಟಿರೋದ್ರಿಂದ ಕಾಲು ಇನ್ನೂ ಸೆಕ್ಸಿಯಾಗಿ ಕಾಣುತ್ತಿದೆ ಎಂದು ರಸಿಕರು ಮಾತಾಡುತ್ತಾರೆ. ಈಗ ದೃಷ್ಟಿ ಕತೆ ಏನು ಹಾಗಾದ್ರೆ? ವಿನಾಕಾರಣ ಕಾಲಿಗೆ ಸಂಚಕಾರ ತಂದೊಡ್ಡಿದಂತಾಗಲಿಲ್ವೇ?

ದೃಷ್ಟಿಯ ರೀತಿ ರಿವಾಜುಗಳೇ ಅರ್ಥವಾಗುವುದಿಲ್ಲ. ದೃಷ್ಟಿ ದಾರಗಳು, ಬೊಟ್ಟುಗಳು ಎಲ್ಲ ಜನರನ್ನು ಡೈವರ್ಟ್ ಮಾಡಿಸುವ ಸಾಧನಗಳಾ ಅಥವಾ ನೆಗೆಟಿವ್ ಎನರ್ಜಿಯನ್ನು ಕೊಲ್ಲುವ ಸಾಧನಗಳಾ? ಕಪ್ಪು ಎಲ್ಲವನ್ನೂ ಹೀರಿಕೊಳ್ಳುವ ವಸ್ತು. ಹೀಗಾಗಿ ಕಪ್ಪು ಬೊಟ್ಟು, ಕಪ್ಪು ದಾರ ಇವನ್ನೆಲ್ಲ ದೃಷ್ಟಿನಿವಾರಣೆಗೆ ಬಳಸೋದು ಅಂತಾರೆ. ನಮ್ಮ ಮೈಗಂಟಿಕೊಂಡಿರೋ ಆ ಕಪ್ಪುದಾರ, ಬೊಟ್ಟು ನೆಗೆಟಿವ್ ಎನರ್ಜಿ ಹೀರಿಕೊಂಡರೆ ಅದು ಇನ್ನಷ್ಟು ಅಪಾಯವಲ್ಲವೇ? ದಿನವೂ ದಾರ ಬಿಸಾಕಿ ಹೊಸ ದಾರ ಕಟ್ಟಿಕೊಳ್ಳಬೇಕೇ?

ಈ ದೃಷ್ಟಿ ಅನ್ನೋದು ನಿಜವೇ ಆಗಿದ್ದರೆ, ಇಷ್ಟೊತ್ತಿಗೆ ಅಂಬಾನಿ-ಅದಾನಿ ಸರ್ವನಾಶ ಆಗಿಬಿಡಬೇಕಿತ್ತಲ್ಲವಾ? ಮೋದಿಯ ಏಳಿಗೆಗೆ ಕರುಬುವವರು ಒಬ್ಬರಾ ಇಬ್ಬರಾ? ಸಿನಿತಾರೆಯರ ಅಂದಚಂದ ಮೆಚ್ಚುವವರು, ಅಸೂಯೆ ಪಡುವವರು ಅದೆಷ್ಟು ಕೋಟಿ ಜನರಿಲ್ಲ? ಸಚಿನ್ ತೆಂಡೂಲ್ಕರ್‌ಗೆ ದೃಷ್ಟಿ ತಾಗ್ತಾ ಇತ್ತಾ? ಅದ್ಕೇ ಅವ್ರು ಒಂದು ಸೆಂಚುರಿ ಹೊಡೆದ ನಂತರ ಫ್ಲಾಪ್ ಆಗ್ತಾ ಇದ್ನಾ? ದೃಷ್ಟಿ ತಾಗೋದು ನಿಜವೇ ಆಗಿದ್ರೆ, ಅವನ ಕೆರಿಯರ್ ಕೆಲವೇ ದಿನಗಳಲ್ಲಿ ಮುಗಿದುಹೋಗಬೇಕಿತ್ತಲ್ವೇ? ಅವನ ಕೆರಿಯರ್ ಮೇಲ್ಮುಖವೇ ಚಲಿಸುವಂತೆ ನೋಡಿಕೊಳ್ಳೋಕೆ ಪ್ರತಿದಿನ ದೃಷ್ಟಿ ತೆಗೆಸಿಕೊಳ್ತಾ ಇದ್ನಾ? ಮೋದಿ, ರಿಷಬ್ ಶೆಟ್ಟಿ, ಯಶ್, ಸುದೀಪ್ ಇವ್ರೆಲ್ಲ ದಿನಾಲೂ ದೃಷ್ಟಿ ತೆಗೆಸಿಕೊಳ್ತಾರಾ? ದಿನವೂ ಫೇಸ್‌ಬುಕ್ಕಲ್ಲಿ ಇನ್‌ಸ್ಟಾಗ್ರಾಮಲ್ಲಿ ಫೋಟೋ ಹಾಕಿಕೊಳ್ಳೋ, ಸ್ವಪ್ರಶಂಸೆಯ ಪೋಸ್ಟ್ ಹಾಕಿಕೊಳ್ಳೋ ಜನರೆಲ್ಲ ದೃಷ್ಟಿಶಾಪಕ್ಕೆ ಬಲಿಯಾಗ್ತಾ ಇದ್ದಾರಾ? ಹಾಗಿದ್ದಿದ್ದರೆ ಇಷ್ಟೊತ್ತಿಗೆ ಇನ್‌ಸ್ಟಾಗ್ರಾಮ್ ಸ್ಮಶಾನ ಆಗಬೇಕಿತ್ತಲ್ಲವಾ?

ಹಾಗಾದರೆ ದೃಷ್ಟಿ ಅನ್ನೋದೇ ಸುಳ್ಳಾ? ನಿಂಬೆಹಣ್ಣು ಸುಳಿಯೋದು, ಕುಂಬಳಕಾಯಿ ಒಡೆಯೋದು, ಉಪ್ಪುನೀರಲ್ಲಿ ಸ್ನಾನ ಮಾಡೋದು ಇವೆಲ್ಲವೂ ಅರ್ಥಹೀನವಾ? ಇಂಥ ಹಲವಾರು ವಿಚಾರಗಳು ಒಂಥರಾ ಟ್ರಿಕ್ಕಿ. ಒಮ್ಮೆ ನಂಬಿಕೆ ಹುಟ್ಟಿಸುತ್ತವೆ. ಮತ್ತೊಮ್ಮೆ ಇವೆಲ್ಲ ಸುಳ್ಳು ಎಂದನಿಸುತ್ತವೆ. ಅಸಲಿಗೆ ಏನಾಗಿರುತ್ತದೆ? ಸರಳವಾಗಿ ಹೇಳೋದಾದರೆ ಇದೊಂದು ಮನೋವೈಜ್ಞಾನಿಕ ವಿಷಯ. ಯಾರೋ ನಿಮ್ಮನ್ನು ವಿಪರೀತವಾಗಿ ಹೊಗಳುತ್ತಾರೆ. ನೀವು ಹೊಗಳಿಕೆಯ ಹೊನ್ನಶೂಲಕ್ಕೆ ತಲೆಕೊಡುತ್ತೀರಿ. ಹೊಗಳಿಕೆಯಲ್ಲಿ ಮೈಮರೆಯುತ್ತೀರಿ. ಸಹಜವಾಗಿಯೇ ಒಂದು ಎಚ್ಚರಿಕೆಯ ಏಟು ಬೀಳುತ್ತದೆ. ಅದಕ್ಕೆ ನೀವು ಕೊಡಬಹುದಾದ ಹೆಸರು ದೃಷ್ಟಿ.

ಬಹಳ ಕಷ್ಟಪಟ್ಟು ಓದುತ್ತೀರಿ. ಒಳ್ಳೆ ಮಾರ್ಕ್ಸ್ ತೆಗೆಯುತ್ತೀರಿ. ನಿಮ್ಮನ್ನು ಜಾಣ, ಬುದ್ಧಿವಂತ ಎಂದು ಹೊಗಳುತ್ತಾರೆ. ಅಷ್ಟು ದಿನ ಹಾರ್ಡ್‌ವರ್ಕ್ ಮಾಡಿದ ನೀವು ಹೊಗಳಿಕೆಯ ಸೂರಿನಲ್ಲಿ ಕೊಂಚ ರಿಲ್ಯಾಕ್ಸ್ ಆಗಿಬಿಡುತ್ತೀರಿ. ಮುಂದಿನ ಪರೀಕ್ಷೆಯಲ್ಲಿ ಅಂಕಗಳು ಕಮ್ಮಿಯಾಗುತ್ತವೆ. ದೃಷ್ಟಿ ಬಿತ್ತು ಅಂದ್ಕೋತೀರಿ.

ಮಸ್ತಾಗಿ ಜಿಮ್ ವರ್ಕೌಟ್ ಮಾಡಿ, ದೇಹವನ್ನು ಹುರಿಗಟ್ಟಿಸಿರುತ್ತೀರಿ. ಚಳಿಗಾಲದಲ್ಲೂ ಕನಿಷ್ಠ ಬಟ್ಟೆ ಹಾಕಿಕೊಂಡು ಎಲ್ಲರೆದುರು ಸೌಷ್ಠವ ಪ್ರದರ್ಶಿಸುತ್ತೀರಿ. ಸಹಜವಾಗಿಯೇ ಹೊಗಳಿಕೆ ಕೇಳಿಬರುತ್ತದೆ. ಹೊಗಳಿಕೆಯ ಅಲೆಗೆ ಮೈಮರೆತು ಒಂದೋ ಕಮ್ಮಿ ತಿಂದು ಅಥವಾ ಜಾಸ್ತಿ ತಿಂದು ದೇಹದಲ್ಲಿ ಸಣ್ಣ ವ್ಯತ್ಯಾಸವಾದರೂ ನೀವು ಆರೋಪಿಸೋದು ದೃಷ್ಟಿಗೆ!

ಬರೆದ ಲೇಖನವೊಂದಕ್ಕೆ ಅಥವಾ ಪುಸ್ತಕವೊಂದಕ್ಕೆ ಭಾರಿ ಮೆಚ್ಚುಗೆ, ಪ್ರಚಾರ ಎಲ್ಲವೂ ಸಿಗುತ್ತದೆ. ಅದಕ್ಕಿಂತ ಉತ್ತಮವಾದದ್ದು ಬರೆಯುವ ಒತ್ತಡದಲ್ಲಿ ಬರಹ ಹುಟ್ಟದಂತಾಗುತ್ತದೆ. ಅಥವಾ ಮೆಚ್ಚುಗೆಯ ಮಹಾಪೂರದಲ್ಲಿ ಮೈಮರೆತು ಏನೋ ಬರೆದು ಟೀಕೆಗೆ ಗುರಿಯಾಗುತ್ತೀರಿ. ಇದಕ್ಕೂ ಹೊಣೆಮಾಡುವುದು ದೃಷ್ಟಿಯನ್ನೇ.

ಹಣ ಗಳಿಸಿ ಮೆರೆಯುತ್ತಿರುತ್ತೀರಿ. ಜನ ಹೊಗಳಿ ಅಟ್ಟಕ್ಕೇರಿಸುತ್ತಾ ಇರುತ್ತಾರೆ. ಹಣದ ಮೂಲ ಅಕ್ರಮದ್ದಾಗಿರುತ್ತದೆ. ಇಲಾಖೆಯ ಕಣ್ಣು ಬಿದ್ದು ರೇಡ್ ಆಗುತ್ತದೆ. ಕಣ್ಣು ಬಿದ್ದದ್ದು ಐಟಿ ಇಲಾಖೆಯದ್ದು. ನೀವು ಆರೋಪಿಸೋದು ಜನರ ಕೆಟ್ಟ ಕಣ್ಣು ಎಂದು. ಹಣ ಗಳಿಸುವ ಭರದಲ್ಲಿ ಆರೋಗ್ಯದ ಕಾಳಜಿ ಮರೆತಿರುತ್ತೀರಿ. ಹಣ ನಿಮಗೆ ಖ್ಯಾತಿ ತಂದುಕೊಟ್ಟ ಬೆನ್ನಲ್ಲೇ ಆರೋಗ್ಯ ಕೈಕೊಡುತ್ತದೆ. ನೀವು ಗೂಬೆ ಕೂರಿಸೋದು ದೃಷ್ಟಿಯ ಮೇಲೆ.

ಹಾಗಾದರೆ ಕೆಟ್ಟಕಣ್ಣು, ದೃಷ್ಟಿ ಇವೆಲ್ಲ ಸುಳ್ಳಾ? ಹಾಗೆನ್ನಲಾಗುವುದಿಲ್ಲ. ನಿಮ್ಮೆದುರೇ ಯಾರೋ ಕರುಬುತ್ತಾರೆ. ನಿಮ್ಮ ಏಳಿಗೆ ಸಹಿಸದೇ ನೀವು ಹಾಳಾಗಲೆಂದು ಬಯಸುತ್ತಾರೆ. ಎದುರಿಗೆ ಹೊಗಳಿ, ನೀವು ಆಚೆ ಹೋಗುತ್ತಿದ್ದಂತೆಯೇ ಮನಸ್ಸಿನಲ್ಲಿ ಅಸೂಯೆ ಪಟ್ಟುಕೊಳ್ಳುತ್ತಾರೆ. ಅವ್ಯಾವುದಕ್ಕೂ ನಯಾಪೈಸೆ ಕಿಮ್ಮತ್ತಿಲ್ಲ. ಆದರೆ ಅದು ನಿಮ್ಮ ಮನಸಿನ ಮೇಲೆ ಪರಿಣಾಮ ಬೀರುವುದಕ್ಕೆ ನೀವು ಅವಕಾಶ ಕೊಟ್ಟಿರಿ ಅಂದುಕೊಳ್ಳಿ, ಆಗ ಶುರುವಾಗುತ್ತದೆ ಸೋ ಕಾಲ್ಡ್ ದೃಷ್ಟಿಯ ಪರಿಣಾಮ. ಯಾರೋ ನಿಮ್ಮನ್ನು ಶಪಿಸುತ್ತಾರೆ, ಶಪಿಸುತ್ತಲೇ ಇರುತ್ತಾರೆ. ನೆಗೆಟಿವಿಟಿ ಬಿತ್ತುತ್ತಲೇ ಇರುತ್ತಾರೆ. ಅಂಥವರಿಂದ ನೀವು ವಿಚಲಿತರಾದಿರೆಂದರೆ ಅದು ಸೋ ಕಾಲ್ಡ್ ದೃಷ್ಟಿಯಿಂದ ಆಗುವ ಅನಾಹುತ. ಅಕ್ರಮದಿಂದ ಜನಪ್ರಿಯತೆ, ಹಣ ಇತ್ಯಾದಿ ಗಳಿಸಿದ್ದೀರಿ, ಪಾಪಪ್ರಜ್ಞೆ ಕಾಡುತ್ತಿರುತ್ತದೆ, ಭಯ ಕಾಡುತ್ತಿರುತ್ತದೆ. ಅದರ ಪರಿಣಾಮ ದೇಹದ ಮೇಲೆ, ಆಸ್ತಿ-ಅಂತಸ್ತಿನ ಮೇಲೆ ಆಗುತ್ತದೆ. ಅದನ್ನು ದೃಷ್ಟಿ ಮೇಲೆ ಆರೋಪಿಸಿ, ನೀವು ಸರಿಯಿದ್ದೀರೆಂದು ನಿಮ್ಮನ್ನು ನೀವು ನಂಬಿಸಿಕೊಳ್ಳುತ್ತೀರಿ. ದೃಷ್ಟಿ ಎಂಬುದು ದುರ್ಬಲ ಮನಸ್ಸಿನ ಸುತ್ತ ನಡೆಯುವ ಆಟವೇ ಹೊರತು, ಬೇರೇನೂ ಅಲ್ಲ. ಒಬ್ಬರಿಗೆ ಇನ್ನೊಬ್ಬರನ್ನು ಕುಂದಿಸುವ ಅಸ್ತ್ರ, ಮತ್ತೊಬ್ಬರಿಗೆ ಅದು ಎಸ್ಕೇಪಿಸಂ ಅಸ್ತ್ರ. ಕೆಲವರಿಗೆ ಅದು ನಿರಾಳವಾಗಲು ಒಂದು ಸಾಧನ. ನಿಮಗೇನನಿಸುತ್ತೆ ಹೇಳಿ. ಮನೋವೈಜ್ಞಾನಿಕ ಹಾಗೂ ನಂಬಿಕೆಯ ಸುತ್ತ ಇರುವ ಚರ್ಚೆ ಮತ್ತು ಸಂವಾದಗಳಿಗೂ ಈ ಬರಹ ಮುಕ್ತವಾಗಿರುತ್ತದೆ.

ಭಟ್ಟರ್ ಸ್ಕಾಚ್

- **ವಿನಯ್ ಗೊಂದಿಮನೆ, ಕಡೂರು**
ಭಟ್ರೇ, ಇತ್ತೀಚೆಗೆ ಬಿಜೆಪಿ ಭವಿಷ್ಯವನ್ನು ದೇವೇಗೌಡರು ಹೇಳ್ತಾ ಇದ್ದಾರಲ್ಲ?
– **ಹಾಗಾದ್ರೆ ಜೆಡಿಎಸ್ ಭವಿಷ್ಯ ಏನಂತೆ?!**

- **ನೀರಜ್ ಶೆಟ್ಟಿ, ಬೆಂಗಳೂರು**
ಭಟ್ರೇ, ಹುಡುಗಿಯರಿಗೆ ಪಾನಿಪುರಿ ಅಂದ್ರೆ ಏಕೆ ಇಷ್ಟ?
– **ತಲೆ ಮೇಲೆ ಮೊಟಕಿ, ಪೂರ್ತಿ ಮುಳುಗಿಸುವುದೆಂದ್ರೆ ಅವರಿಗೆ ಇಷ್ಟ!**

- **ಕಾವೇರಿ ಬಸವಯ್ಯ, ದಾವಣಗೆರೆ**
ಭಟ್ರೇ, ನಿಮ್ಮ ಪುಸ್ತಕಗಳನ್ನು ಹಿಡಿದು ಹೋಗುವುದು ಪ್ರೆಸ್ಟೀಜ್ ಅಂತಾರಲ್ಲ?
– **ಅದು ನನ್ನ ಕೈ ಹಿಡಿದು ಹೋಗಲು ಸಾಧ್ಯವಾಗದವರ ಸಾಂತ್ವನ!**

- **ಸಂಗೀತಾ ಕಾಡಿನಮನೆ, ಶಿವಮೊಗ್ಗ**
ಭಟ್ರೇ, ಪ್ರಕಾಶ ರೈಯನ್ನು ಪ್ರ'ಕಾಚ' ರೈ ಎಂದು ಲೇವಡಿ ಮಾಡಿದಾಗ ನೀವು ಪ್ರತಿಭಟಿಸಲಿಲ್ಲವೇಕೆ?
– **ಅದನ್ನು ಬಿಟ್ಟಿದ ಮೇಲೆ ಹಾಗೆ ಮಾಡೋಣ ಅಂದ್ಕೊಂಡಿದ್ದೆ!**

- **ನಂದಿನಿ (ಇಮೇಲ್ ಮೂಲಕ)**
ಭಟ್ರೇ, ಭೈರಪ್ಪನವರೂ ಭಟ್ಟರ ಸ್ಕಾಚ್ ಅಭಿಮಾನಿಯಾಗಿದ್ದರಂತೆ, ಹೌದಾ?
– **ಮೋದಿಯವರಿಗೆ ಕನ್ನಡ ಓದಲು ಬರುತ್ತಿದ್ದರೆ, ಕಥೆಯೇ ಬೇರೆ ಇತ್ತು!**

- **ಅನಂತ ಉರಾಳ, ಸಾಗರ**
ಸರ್, ಕೈದಿಗಳು ಬಿಡುಗಡೆಯಾದಾಗ ಸೇಬು ಹಾರ ಹಾಕಿ ಸ್ವಾಗತಿಸುತ್ತಾರಲ್ಲ?
– **ಜೈಲಿಗೆ ಹಾಕುವಾಗ ಒಳಗಿದ್ದವರು ಕನಿಷ್ಠ ಹಾರ ಹಾಕಿ ಸ್ವಾಗತಿಸುವುದಿಲ್ಲವಲ್ಲ ಅಂತ ನಿನ್ನ ತಕರಾರಾ?!**

- **ಲಿಂಗಯ್ಯ ಹಿರೇಮಠ, ಬಾಗಲಕೋಟೆ**
ಸರ್, ಬೆಳಗ್ಗೆ ಎದ್ದು ಸ್ವಾಮೀಜಿ ಮಾತು ಕೇಳಿದರೂ ಮೂಡು ಕೆಡುತ್ತದಲ್ಲ?
– **ನೀನು ಹೋಗಿ ಹೋಗಿ ಆ ನಿಜಗುಣಾನಂದ ಸ್ವಾಮೀಜಿ ಪ್ರವಚನ ಕೇಳಿರಬೇಕು!**

ಬಾಸ್ಟರ್ಡ್ಸ್ ಆಫ್ ಬಾಲಿವುಡ್ ಹುಯಿಲಿನ ಸುತ್ತಮುತ್ತ!

ಬಾಲಿವುಡ್‌ನಲ್ಲಿ ತಮ್ಮ ಮಕ್ಕಳಿಗೇ ಪಟ್ಟ ಕಟ್ಟುತ್ತಾರೆ. ಅವರಿಗೆ ಮಾತನಾಡಲು ಬರಲಿ ಬಿಡಲಿ, ಅವರು ಸ್ಟಾರ್‌ಗಳಾಗಬೇಕು. ಕಷ್ಟಪಡದೆ ಮಿತಿಮೀರಿದ ಹಣವನ್ನ ಸಂಗ್ರಹಿಸಿದ ಈ ತಾರೆಯರು ಒಂದಲ್ಲ ಒಂದು ಬಾರಿ ಹೆಚ್ಚು ಓದಿದವರ ಬಗ್ಗೆ ಲೇವಡಿ ಮಾಡುವುದನ್ನ ನೀವು ಕೇಳಿರುತ್ತೀರಿ. ನಿಜಜೀವನದಲ್ಲೂ ಮತ್ತು ತೆರೆಯ ಮೇಲಿನ ಬದುಕಿಗೂ ಲವಲೇಶವೂ ಸಾಮ್ಯತೆಯಿಲ್ಲದೆ ಇವರನ್ನ ನಾವು ಪೂಜಿಸುತ್ತೇವೆ.

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಇದೇನಿದು, ಲೇಖನದ ಹೆಸರು ಬಾಸ್ಟರ್ಡ್ಸ್ ಆಫ್ ಬಾಲಿವುಡ್? ಎಂದು ಹುಬ್ಬೇರಿಸುವ ಮುಂಚೆ ಹೇಳಿಬಿಡುತ್ತೇನೆ. ಇದು ನಾನು ಹೇಳಿದ್ದಲ್ಲ. ನೆಟ್ ಫ್ಲಿಕ್ಸ್‌ನಲ್ಲಿ ಶಾರುಖ್ ಖಾನ್ ಅವರ ಮಗ ಆರ್ಯನ್ ಖಾನ್ ಅವರ ನಿರ್ದೇಶನದಲ್ಲಿ ಬಂದಿರುವ ಒಂದು ವೆಬ್ ಸಿರೀಸ್. ಇವತ್ತಿನ ಕಾಲಘಟ್ಟದಲ್ಲಿ ಇಂಗ್ಲಿಷ್ ವೆಬ್ ಸಿರೀಸ್‌ಗಳು ಸಭ್ಯವಾಗಿರುತ್ತವೆ. ಹಿಂದಿ ವೆಬ್ ಸಿರೀಸ್ ಎಂದ ತಕ್ಷಣ ಅತ್ಯಂತ ಕೆಟ್ಟ ಪದಗಳ ಬಳಕೆ, ಬೇಕಿಲ್ಲದ ಅಶ್ಲೀಲತೆ ತುರುಕುವುದು ಬಹಳ ಸಹಜ ಎನ್ನುವಂತಾಗಿದೆ. ಬಾಸ್ಟರ್ಡ್ಸ್ ಆಫ್ ಬಾಲಿವುಡ್ ಎನ್ನುವ ವೆಬ್ ಸಿರೀಸ್ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಬಾಲಿವುಡ್ ಮಂದಿಯಲ್ಲಿ ನಡೆಯುವ ಒಳಜಗಳ, ದ್ವೇಷ, ಕಿತ್ತಾಟ, ಪೈಪೋಟಿ, ಎಲ್ಲಕ್ಕಿಂತ ಮುಖ್ಯವಾಗಿ ಸಮಯಸಾಧಕತನವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಇಲ್ಲಿ ಗೆದ್ದವರಿಗಷ್ಟೇ ಮರ್ಯಾದೆ ಎನ್ನುವುದನ್ನು ಸೂಚ್ಯವಾಗಿ ಹೇಳಿದ್ದಾರೆ. ಇಲ್ಲಿ ಬೇರುಬಿಟ್ಟಿರುವ ನೆಪೋಟಿಸಂ ಬಗ್ಗೆ ಕೂಡ ಮಾತು ಬಂದುಹೋಗುತ್ತದೆ. ನೆಪೋಟಿಸಂ ತಪ್ಪು ಅಥವಾ ಸರಿ ಎನ್ನುವುದರ ಬಗ್ಗೆ ಚರ್ಚೆಯಾಗುವುದಿಲ್ಲ. ಅದಿರುವುದು ಸತ್ಯ ಎನ್ನುವುದನ್ನು ತೋರಿಸಲಾಗಿದೆ.

ಕಳೆದ ಎರಡು ದಶಕದಿಂದ ಬಾಲಿವುಡ್ ಭಾರತೀಯತೆಯನ್ನು ಇನ್ನಿಲ್ಲದಂತೆ ಕಲುಷಿತಗೊಳಿಸಿಬಿಟ್ಟಿದೆ. ಇಲ್ಲಿ ಎಲ್ಲವೂ ಓಕೆ, ಸಬ್ ಕುಚ್ ಚಲ್ತಾ ಹೈ ಎನ್ನುವ ರೀತಿಯಲ್ಲಿ ತೋರಿಸುತ್ತ ಬಂದರು. ಒಂದು ತಲೆಮಾರಿನವರು ಇದನ್ನು ಸಹಜವೆನ್ನುವಂತೆ ಒಪ್ಪಿಕೊಂಡು ಬಿಟ್ಟರು. ಸಮಾಜದಲ್ಲಿನ ಮಡಿವಂತಿಕೆ ಅದ್ಯಾವಾಗ ಮಾಯವಾಯ್ತು ಗೊತ್ತಾಗಲೇ ಇಲ್ಲ. ದೃಶ್ಯ ಮಾಧ್ಯಮ ಅತ್ಯಂತ ಶಕ್ತಿಶಾಲಿ ಮಾಧ್ಯಮ. ಅದನ್ನು ಬಳಸಿಕೊಂಡು ನಮ್ಮ ದೇಶದ ಬಗ್ಗೆ ಜನತೆಯಲ್ಲಿ ಹೆಮ್ಮೆ ಬರುವಂಥ ಕೆಲಸವನ್ನು ಬಾಲಿವುಡ್ ಮಾಡಬಹುದಿತ್ತು. ಆದರೆ ಅಲ್ಲಿನ ಜನ ಅವರೇ ಒಪ್ಪಿ ಹೆಸರಿಟ್ಟಿರುವ ವೆಬ್‌ಸಿರೀಸ್ ಜನ. ದೇಶ, ಸಂಸ್ಕಾರ ಇತ್ಯಾದಿಗಳು ಅವರಿಗೆ ಬೇಕಿಲ್ಲ. ಅಲ್ಲೇನಿದ್ದರೂ ಪ್ರತಿ ಶುಕ್ರವಾರದ ಲಾಭ, ನಷ್ಟದ ಚಿಂತೆಯಷ್ಟೆ.

ಬಾಲಿವುಡ್ ನಮ್ಮ ದೇಶದ ಅಸ್ಮಿತೆಯನ್ನ ನಾಶಮಾಡುವ ಎಲ್ಲಾ ಕಾರ್ಯದಲ್ಲಿ ತೊಡಗಿದೆ. ಉದಾಹರಣೆ ನೋಡಿ- ಬಾಯ್‌ಫ್ರೆಂಡ್ ಅಥವಾ ಗರ್ಲ್‌ಫ್ರೆಂಡ್ ಇರುವುದು ಅತಿ ಸಾಮಾನ್ಯ; ಹೀಗೆ ಇಲ್ಲದವರು ಹಳ್ಳಿ ಮುಕ್ಕರು ಎನ್ನುವ ಭಾವನೆಯನ್ನು ಅದು ನಮ್ಮ ಯುವ ಜನತೆಯಲ್ಲಿ ಬಲವಾಗಿ ಬಿತ್ತಿದೆ. ಹೀಗೆ ಬಾಯ್ ಫ್ರೆಂಡ್ ಅಥವಾ ಗರ್ಲ್‌ಫ್ರೆಂಡ್ ಜತೆ ಬ್ರೇಕ್-ಅಪ್ ಮಾಡಿಕೊಳ್ಳುವುದು ಕೂಡ ಅತಿ ಸಾಮಾನ್ಯ. ಮದುವೆಗೆ ಮುಂಚಿನ ಹೆಣ್ಣು ಗಂಡಿನ ಸಂಬಂಧ ತಪ್ಪೇನೂ ಅಲ್ಲ. ಲಿವಿಂಗ್ ರಿಲೇಶನ್ ಕೂಡ ಇಂದು ಸಾಮಾನ್ಯ, ಅದರಲ್ಲಿ ಮಡಿವಂತಿಕೆಯೇನು? ಎಂದು ಉಲ್ಟಾ ಸಮಾಜವನ್ನೇ ಪ್ರಶ್ನಿಸುವ ಸನ್ನಿವೇಶದ ಚಿತ್ರಗಳು. ಹೆಣ್ಣನ್ನ ಅತ್ಯಂತ ಕೆಟ್ಟದಾಗಿ ಕುಣಿಸುವುದು, ಉಪಭೋಗದ ವಸ್ತು ಎನ್ನುವಂತೆ ತೋರಿಸುವುದು ಕೂಡ ಅತ್ಯಂತ ಸಾಮಾನ್ಯವಾಗಿದೆ. ಹೀಗೆ ಗಮನಿಸುತ್ತಾ ಹೋಗಿ ಯಾವುದು ಭಾರತೀಯತೆಯ ದ್ಯೋತಕ ಎಂದು ನಂಬಲಾಗಿತ್ತೋ ಅಂಥ ಎಲ್ಲಾ ನಂಬಿಕೆಗಳನ್ನ ಜೊಳ್ಳು ಎಂದು ಆಡಿಕೊಂಡು ನಗಲಾಗುತ್ತದೆ. ಹಳೆಯ ದಾರಿಯಲ್ಲಿರುವವರನ್ನ ಔಟ್ ಆಫ್ ಫ್ಯಾಷನ್ ಅಥವಾ ಕೆಲಸಕ್ಕೆ ಬಾರದವ ಎನ್ನುವಂತೆ ಹೀಗಳೆಯಲಾಗುತ್ತದೆ. ಒಂದು ಜನತೆಯನ್ನ ಭಾರತೀಯತೆಯಿಂದ ದೂರ ಮಾಡಿ ಬದುಕಲು ಏನು ಮಾಡಿದರೂ ತಪ್ಪಿಲ್ಲ, ಇತರರನ್ನ ಕೊಂದಾದರೂ ಸರಿಯೇ ನಾವು ಬದುಕಿದರೆ ಸಾಕು ಎನ್ನುವ ಪಾಠವನ್ನ ಬಾಲಿವುಡ್ ಹೇಳಿಕೊಡುತ್ತಿದೆ. ಬಾಸ್ಟರ್ಡ್ಸ್ ಆಫ್ ಬಾಲಿವುಡ್‌ನಲ್ಲಿ ಇವುಗಳ ಕಥನವಿದೆ. ಅವರು ಮಾಡುತ್ತಿರುವುದು ತಪ್ಪು ಎನ್ನುವುದರ ಅರಿವಾಗಿದೆ. 'ನಾವು ಬಾಸ್ಟರ್ಡ್ಸ್' ಎಂದು ಅವರನ್ನೇ ಅವರು ಕರೆದುಕೊಳ್ಳುವ ದಾಷ್ಟಿಕತೆ ತೋರಿದ್ದಾರೆ. ಒಟ್ಟಾರೆ ಇಲ್ಲಿ ಇಷ್ಟವಾದದ್ದು ಕೇವಲ ಈ ಒಂದಂಶ ಮಾತ್ರ!

2021ರ ಅಕ್ಟೋಬರ್‌ನಲ್ಲಿ, ಅಂದರೆ ಸರಿಯಾಗಿ ನಾಲ್ಕು ವರ್ಷದ ಹಿಂದೆ ಶಾರುಖ್ ಖಾನ್ ಮಗ ಆರ್ಯನ್ ಖಾನ್ ಡ್ರಗ್ಸ್‌ನೊಂದಿಗೆ ಸಿಕ್ಕಿಬಿದ್ದಾಗ ಈ ಕೇಸ್ ಬಹಳ ದಿನ ನಿಲ್ಲುವುದಿಲ್ಲ. ಆರ್ಯನ್ ಖಾನ್ ನಿಧಾನವಾಗಿ ಜನಮನ್ನಣೆ ಗಳಿಸಿಕೊಳ್ಳುತ್ತಾರೆ ಎನ್ನುವ ಭವಿಷ್ಯವನ್ನು ಬರೆದು ಹಾಗೇ ಇಟ್ಟುಕೊಂಡಿದ್ದೆ. ಏಕೆಂದರೆ ಇಂಥ ಭವಿಷ್ಯವಾಣಿಯನ್ನು ನುಡಿಯಲು ನಾವೇನೂ ತತ್ವಜ್ಞಾನಿಯಾಗಬೇಕಾದ ಅಥವಾ ಕಾಲಜ್ಞಾನಿಯಾಗಬೇಕಾದ ಅವಶ್ಯಕತೆಯಿಲ್ಲ. ಭಾರತದಲ್ಲಿ ಹಣಬಲ, ಹೆಸರಿನ ಬಲವಿದ್ದಾಗ ಇದು ಅತ್ಯಂತ ಸಾಮಾನ್ಯ, ಸಹಜ. ಹೀಗಾಗದೆ ಇದ್ದಿದ್ದರೆ ಮಾತ್ರ ಅದು ಅಸಹಜ.

ಬನ್ನಿ ನಾಲ್ಕು ವರ್ಷ ಹಿಂದಕ್ಕೋಗೋಣ. ಏನಾಯ್ತು ಸ್ವಲ್ಪ ನೋಡೋಣ. ಡ್ರಗ್ಸ್ ಸೇವಿಸುವುದು, ಕೊಂಡುಕೊಳ್ಳುವುದು ಭಾರತದಲ್ಲಿ ಅಪರಾಧ. ಡ್ರಗ್ಸ್ ಸೇವಿಸಿ ಸಿಕ್ಕಿಬಿದ್ದರೆ, ಜತೆಗೆ ದೊಡ್ಡ ಪ್ರಮಾಣದಲ್ಲಿ ಡ್ರಗ್ಸ್ ಖರೀದಿ ಮಾಡಿದ ಸಾಕ್ಷಿ ಸಮೇತ ಸಿಕ್ಕರೆ ಭಾರತದಲ್ಲಿ ಕನಿಷ್ಠ 14 ವರ್ಷ ಜೈಲಿಗೆ ಹೋಗುವ ಸಂಭವ ಹೆಚ್ಚು. ಶಾರುಖ್ ಖಾನ್ ಮಗ ಆರ್ಯನ್ ಖಾನ್ ಡ್ರಗ್ಸ್ ಸೇವನೆ ಮತ್ತು ಖರೀದಿ ಎರಡೂ ವಿಷಯದಲ್ಲೂ ಸಿಕ್ಕಿಬಿದ್ದಿದ್ದಾನೆ. ಸಾಲದಕ್ಕೆ ಕಳೆದ ನಾಲ್ಕು ವರ್ಷದಿಂದ ಚರಸ್ ಸೇವನೆಯಲ್ಲಿ ತೊಡಗಿಕೊಂಡಿರುವುದಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾನೆ. ಅದನ್ನ ವಿಡಿಯೋ ಮಾಡಿಕೊಳ್ಳಲಾಗಿದೆ. ಈ ವಿಷಯ ಮೀಡಿಯಾಗಳಿಗೆ ಕೂಡ ಸಾಕಷ್ಟು ಆಹಾರವಾಗಿದೆ. ಹೊಸ ವಿಷಯ ಏನೆಂದರೆ, ಆತ ದೊಡ್ಡ ಮಟ್ಟದಲ್ಲಿ ಡ್ರಗ್ಸ್ ಖರೀದಿಯನ್ನ ಡಿಜಿಟಲ್ ಪೇಮೆಂಟ್ ಮೂಲಕ ಖರೀದಿಸಿದ್ದಾನೆ. ಅದಕ್ಕೆ ಬಲವಾದ ಸಾಕ್ಷಿಗಳು ಕೂಡ ಸಿಕ್ಕಿವೆ. ಈಗ ಅದನ್ನ ಇಲ್ಲವೆನ್ನಲು ಬರುವುದಿಲ್ಲ. ಹೀಗಾಗಿ ಆರ್ಯನ್ ಕನಿಷ್ಠ 14 ವರ್ಷವಾದರೂ ಜೈಲಿಗೆ ಹೋಗುವುದು ಹೆಚ್ಚು ಕಡಿಮೆ ನಿಕ್ಕಿ. ಒಂದು ಕೆ.ಜಿ. ತನಕ ಸಣ್ಣ ಪ್ರಮಾಣವೆಂದು ಪರಿಗಣಿಸಲಾಗುತ್ತದೆ. ಆ ನಂತರ 20 ಕೆ.ಜಿ.ವರೆಗೆ ದೊಡ್ಡ ಪ್ರಮಾಣವೆಂದು, ಆ ನಂತರ ಕಮರ್ಷಿಯಲ್ ಕ್ರಿಯೆಗಳಿಗೆ ಶೇಖರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಆರು ತಿಂಗಳಿಂದ 10 ವರ್ಷ, 20 ವರ್ಷಗಳವರೆಗೂ ಜೈಲು ಶಿಕ್ಷೆ, ಜತೆಗೆ 10 ಸಾವಿರದಿಂದ ಲಕ್ಷದವರೆಗೆ ಜುಲ್ಮಾನೆ ಕೂಡ ಇರುತ್ತದೆ.



ನಿಮಗೆಲ್ಲಾ ನೆನಪಿರಲಿ, ಜಗತ್ತಿನ ಹಲವು ಮುಸ್ಲಿಂ ದೇಶಗಳಲ್ಲಿ ಡ್ರಗ್ಸ್ ಸೇವನೆಯನ್ನ 'ಆಕ್ಟ್ ಅಗೈನ್ಸ್ಟ್ ಗಾಡ್'- ದೇವರ ವಿರುದ್ಧದ ಕ್ರಿಯೆ ಎಂದು ಪರಿಗಣಿಸಲಾಗುತ್ತದೆ. ತೀರಾ ಇತ್ತೀಚಿನವರೆಗೆ ಮರಣದಂಡನೆಯನ್ನ ನೀಡುತ್ತಿದ್ದರು. ಇಂದಿಗೆ ಅದು ಕಡಿಮೆಯಾಗಿದೆ. ಆದರೆ ಮರಣದಂಡನೆ ವಿಧಿಸಬಾರದು ಎನ್ನುವ ನಿಯಮವೇನಿಲ್ಲ. ಹತ್ತಾರು ವರ್ಷ ಜೈಲುಶಿಕ್ಷೆಯಂತೂ ಪಕ್ಕಾ. ನಮ್ಮಲ್ಲಿ ಎಲ್ಲದಕ್ಕೂ ಪರ-ವಿರೋಧ ಶುರು. ಆದರೆ ಗಮನಿಸಿ, ಇಂಥ ವಿಷಯದಲ್ಲಿ ಪರ ಎನ್ನುವ ಪ್ರಶ್ನೆಯ ಉದ್ಭವಿಸಬಾರದು. ಮಾಡಿರುವುದು ಮಣ್ಣು ತಿನ್ನುವ ಕೆಲಸ, ಅದಕ್ಕೆ ತಕ್ಕ ಶಿಕ್ಷೆಯಾಗಲಿ ಬಿಡಿ. ಇಲ್ಲ ಸ್ವಾಮಿ, ಹೇಳಿ ಕೇಳಿ ಅವರೆಲ್ಲಾ ಬಾಲಿವುಡ್ ಮಂದಿ, ಇವತ್ತು ಅವನ ಮಗ! ನಾಳೆ ನನ್ನ ಮಗ ಅಥವಾ ಮಗಳ ಹೆಸರು ಬರುವುದಿಲ್ಲ ಎನ್ನುವ ಗ್ಯಾರಂಟಿ ಏನು? ಅದಕ್ಕೇ ಸುನಿಲ್ ಶೆಟ್ಟಿಯಂಥ ವ್ಯಕ್ತಿ- ಆರ್ಯನ್ ಖಾನ್ ಬಚ್ಚ, ಅಂದರೆ ಮಗು ಎನ್ನುತ್ತಾನೆ. ಹೃತಿಕ್, ಸಲ್ಮಾನ್, ದೇಶಭಕ್ತಿಯ ಪಾಠ ಹೇಳುವ ರವೀನಾ ಟಂಡನ್ ಎಲ್ಲರೂ ಶಾರುಖ್‌ನ ಮಗನ ಬೆಂಬಲಕ್ಕೆ ನಿಲ್ಲುತ್ತಾರೆ.

ಬಾಲಿವುಡ್‌ನಲ್ಲಿ ಇರುವುದು ನೆಪೋಟಿಸಂ, ಅಲ್ಲೇನಿದ್ದರೂ ತಮ್ಮ ಮಕ್ಕಳಿಗೇ ಪಟ್ಟ ಕಟ್ಟುತ್ತಾರೆ. ಅವರಿಗೆ ಮಾತನಾಡಲು ಬರಲಿ ಅಥವಾ ಬಿಡಲಿ, ಅವರು ಸ್ಟಾರ್‌ಗಳಾಗಬೇಕು. ಕಷ್ಟಪಡದೆ ಮಿತಿಮೀರಿದ ಹಣವನ್ನ ಸಂಗ್ರಹಿಸಿದ ಈ ತಾರೆಯರು ಒಂದಲ್ಲ ಒಂದು ಬಾರಿ ಹೆಚ್ಚು ಓದಿದವರ ಬಗ್ಗೆ ಕೇವಲವಾಗಿ, ಲೇವಡಿ ಮಾಡುವ ಮಾತುಗಳನ್ನ ಆಡುವುದನ್ನ ಕೂಡ ನೀವು ಕೇಳಿರುತ್ತೀರಿ. ನಿಜಜೀವನದಲ್ಲೂ ಮತ್ತು ತೆರೆಯ ಮೇಲಿನ ಬದುಕಿಗೂ ಲವಲೇಶವೂ ಸಾಮ್ಯತೆಯಿಲ್ಲದೆ ಇವರನ್ನ ನಾವು ಪೂಜಿಸುತ್ತೇವೆ. ಅವರಿಗೆ ಪಿತ್ತ ನೆತ್ತಿಗೇರಿ 'ನಮ್ಮನ್ನ ಬಿಟ್ಟರೆ ಇನ್ನ್ಯಾರಿಲ್ಲ' ಎನ್ನುವ ಉಮೇದು ಬೆಳೆಸಿಕೊಳ್ಳುತ್ತಾರೆ. ಮೂಲದಲ್ಲಿ ಬಾಲಿವುಡ್ ಒಂದು ದೊಡ್ಡ ಗ್ಯಾಂಗ್, ಅಲ್ಲಿ ದುಡ್ಡೇ ದೊಡ್ಡಪ್ಪ. ಅವರಲ್ಲಿ ಒಗ್ಗಟ್ಟಿದೆ. ಒಡೆದು, ಹಂಚಿಹೋಗುವುದು ಕೇವಲ ಜನಸಾಮಾನ್ಯ ಮಾತ್ರ. ತನ್ನ ನೆಚ್ಚಿನ ಸ್ಟಾರ್ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ, ಕೊನೆಗೆ ಐಪಿಎಲ್ ಟೀಮ್ ಹೆಸರಿನಲ್ಲಿ ಹೋಳಾಗುವುದು ಜನಸಾಮಾನ್ಯ. ಇವನನ್ನ ಬಳಸಿಕೊಂಡು ದೊಡ್ಡ ಮಟ್ಟದ ಹಣವನ್ನ ಮಾಡುವ ಅವರ ಜೀವನ ಕೂಡ ಅತ್ಯಂತ ನಿಕೃಷ್ಟವಾಗಿದೆ ಎಂದು ಈಗಾಗಲೇ ಸಾಬೀತಾಗಿದೆ.

ಬದುಕನ್ನ ಹಂತ ಹಂತವಾಗಿ ಕಟ್ಟಿಕೊಳ್ಳಬೇಕು. ಆಗ ಅದಕ್ಕೂ ಒಂದು ಬೆಲೆ. ಕಷ್ಟಪಡದೆಯೇ ಅಪ್ಪ-ಅಮ್ಮನ ದುಡ್ಡಿನಲ್ಲಿ ಎಲ್ಲವೂ ಸಿಕ್ಕರೆ ಅದರಲ್ಲಿ ಮಜಾ ಸಿಗುವುದಿಲ್ಲ, ಅದಕ್ಕೆ ಮಜಾ ಹುಡುಕಿ ಹೊರಡುತ್ತಾರೆ, ಇರಲಿ.

'ಶಾರುಖ್‌ನ ಬೆಂಬಲಿಸಿದ ಎಲ್ಲಾ ಬಾಲಿವುಡ್ ಸೆಲೆಬ್ರಿಟಿಗಳನ್ನ ನೆನಪಲ್ಲಿ ಇಟ್ಟುಕೊಳ್ಳಿ, ಅವರ ಚಿತ್ರ ನೋಡಬೇಡಿ, ಅವರಿಗೆ ಬುದ್ಧಿ ಕಲಿಸಿ' ಎನ್ನುವ ಬುದ್ಧಿ ಹೇಳುವ ಕೆಲಸಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ 'ಪಬ್ಲಿಕ್ ಮೆಮೊರಿ ಇಸ್ ವೆರಿ ಶಾರ್ಟ್' ಎನ್ನುವ ಸತ್ಯ ನನಗೆ ತಿಳಿದಿದೆ. ಅದಕ್ಕೂ ಮಿಗಿಲಾಗಿ ಅವರಿಗೆ ತಿಳಿದಿದೆ. ಶಾರುಖ್ ತನ್ನೆಲ್ಲಾ ಶಕ್ತಿಯನ್ನ ಬಳಸುತ್ತಾನೆ. ಅತಿ ಕಡಿಮೆ ಸಜಾ ಕೊಡಿಸುವಲ್ಲಿ ಸಫಲನಾಗುತ್ತಾನೆ. ಜೈಲಿನಲ್ಲಿ ಮಗ ಪಟ್ಟ ಯಾತನೆಯನ್ನ ಕಥೆಯನ್ನಾಗಿಸಿ ಅವನನ್ನೇ ಹೀರೋ ಆಗಿಸಿ ಫಿಲಂ ತೆಗೆಯುತ್ತಾನೆ. ನಾವು 32 ದಂತಗಳನ್ನ ಕಿಸಿದುಕೊಂಡು ನೋಡಿ ಕೃತಾರ್ಥರಾಗುತ್ತೇವೆ. ಹೀಗೆ ಒಬ್ಬ ಆಚರಿಸಿ ಮುಂದಿನ ಪೀಳಿಗೆಯ ಅರಾಧ್ಯ ದೈವವಾಗುತ್ತಾನೆ.

ಏನ್ರೀ, ನೀವು ಇಷ್ಟ ಬಂದ ಹಾಗೆ ಬರೀತಾ ಇದ್ದೀರಾ? ನಾವೇನು ಅಷ್ಟು ನಾಲಾಯಕ್ಕಾ? ಎನ್ನುವ ಪ್ರಶ್ನೆ, ಆಕ್ರೋಶ ನಿಮ್ಮಲ್ಲಿ ಉಂಟಾಗಿದ್ದರೆ ಕ್ಷಮೆ ಇರಲಿ. 'ಮೇರಾ ತೂ ತೀನ್ ಸೊ ದಸ್ ಕ ಪೂಲ್ ಮಾಲಾ ಹೈ, ಔರ್ ಬಾಕಿ ಹೈ' ಎನ್ನುವ ಸಂಜಯ್ ದತ್ತ ಬೇಡವೆಂದರೂ ನೆನಪಿಗೆ ಬರುತ್ತಾನೆ. ಅವನನ್ನೇ ಒಪ್ಪಿಕೊಂಡ ಸಮಾಜವಲ್ಲವೆ ನಮ್ಮದು? ಪಾಪ ನೀವು ನಾಲಾಯಕ್ಕಲ್ಲ ಬಿಡಿ. ನನಗೆ ನೆನಪಿಗೆ ಬಂದಿತು ಬರೆದೆ ಅಷ್ಟೆ. ಆರ್ಯನ್ ಇನ್ನೊಬ್ಬ ಸಂಜು, ಸಲ್ಮಾನ್, ಸೂರಜ್ ಪಂಚೋಲಿ ಆಗದಿರಲಿ. ಕನಿಷ್ಠ ಆರ್ಯನ್‌ಗಾದರೂ ಶಿಕ್ಷೆ ಸಿಗಲಿ.

ಇವತ್ತಿನ ಸನ್ನಿವೇಶಕ್ಕೆ ಬರೋಣ: ಶಾರುಖ್‌ನ ಮಗ ಆರ್ಯನ್‌ಗೆ ಹೆಚ್ಚು ಶಿಕ್ಷೆಯಾಗಿಲ್ಲ. ಆತ ಆರಾಮಾಗಿ ನಿರ್ದೇಶನಕ್ಕೆ ಇಳಿದಿದ್ದಾನೆ. ಇಲ್ಲೂ ಆತ, ತನ್ನನ್ನು ಅಂದಿನ ದಿನದಲ್ಲಿ ಡ್ರಗ್ಸ್‌ನೊಂದಿಗೆ ಹಿಡಿದ ಅಧಿಕಾರಿಯನ್ನು ಬಫೂನನಂತೆ ಚಿತ್ರಿಸಿದ್ದಾನೆ. ಈ ದೇಶದಲ್ಲಿ ಲಕ್ಷಾಂತರ ಜನ ಡ್ರಗ್ಸ್ ಸೇವಿಸುತ್ತಾರೆ. ಎಲ್ಲರನ್ನೂ ಹಿಡಿಯಲು ಸಾಧ್ಯವೇ? ನನ್ನನ್ನು ಮಾತ್ರ ಹಿಡಿದರು. ಏಕೆಂದರೆ ನಾನು ಪ್ರಸಿದ್ಧ ವ್ಯಕ್ತಿಯ ಮಗ. ಹೆಸರು, ಹಣ ಮಾಡಿಕೊಳ್ಳುವ ಉದ್ದೇಶ ಅಧಿಕಾರಿಯದು, ಹೀಗಾಗಿ ನಾನು ಸಿಕ್ಕಿಬಿದ್ದೆ. ಉಳಿದಂತೆ ಡ್ರಗ್ಸ್ ತೆಗೆದುಕೊಳ್ಳುವುದು ಮಹಾಪರಾಧವೇನಲ್ಲ ಎನ್ನುವಂತೆ ಚಿತ್ರಿಸಿದ್ದಾರೆ. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ ಎನ್ನುವುದು ಇದಕ್ಕೇ ಇರಬೇಕು. ಎಷ್ಟಾದರೂ ಅವರೇ ಕರೆದುಕೊಳ್ಳುವಂತೆ ಅವರು ಬಾಸ್ಟರ್ಡ್ಸ್ ಆಫ್ ಬಾಲಿವುಡ್ ಮಂದಿ ನೋಡಿ!

ಹಿಂದುತ್ವ, ರಾಷ್ಟ್ರೀಯತೆ ಮತ್ತು ಫ್ಯಾಸಿಸ್ಟ್ ಕಾಂಗ್ರೆಸ್‌ನ ಆರೋಪಗಳ ಹಿಂದಿನ ಸತ್ಯಾಂಶ

ಸಮರ್ಥನೆ

ಸಿ.ಟಿ. ರವಿ
vveditoped@gmail.com

ಬಿ.ಕೆ.ಹರಿಪ್ರಸಾದ್‌ರವರು, ಪ್ರಿಯಾಂಕ್ ಖರ್ಗೆಯವರು ಸೇರಿದಂತೆ ಕಾಂಗ್ರೆಸ್‌ನ ಕೆಲವು ನಾಯಕರು ಇತ್ತೀಚೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ವಿರುದ್ಧ ಹಲವು ಟೀಕೆಗಳನ್ನು ಮಾಡಿದ್ದಾರೆ. ಆರೆಸ್ಸೆಸ್‌ನ ಉದ್ದೇಶ, ಕಾರ್ಯಶೈಲಿ ಮತ್ತು ಅದರ ಐತಿಹಾಸಿಕ ಪಾತ್ರದ ಕುರಿತು ಅನೇಕ ಆರೋಪಗಳನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಆರೆಸ್ಸೆಸ್‌ನ ನಿಜಸ್ವರೂಪವನ್ನು ಸ್ಪಷ್ಟಪಡಿಸುವುದು ಅತ್ಯಗತ್ಯವಾಗಿದೆ.

- **ರಾಷ್ಟ್ರೀಯತೆ ಮತ್ತು ಹಿಂದುತ್ವದ ಅನನ್ಯ ಸಂಬಂಧ:** ಆರೆಸ್ಸೆಸ್‌ನ ದೃಷ್ಟಿಕೋನದ ಪ್ರಕಾರ, ಭಾರತದ ರಾಷ್ಟ್ರೀಯತೆ ಎಂದರೆ ಕೇವಲ ಕಾನೂನುಬದ್ಧ ಪೌರತ್ವವಲ್ಲ, ಬದಲಿಗೆ ಆಳವಾದ ಸಾಂಸ್ಕೃತಿಕ ಏಕತೆಯ ಅನುಭೂತಿ. ಕಾಶಿಯಿಂದ ರಾಮೇಶ್ವರದವರೆಗೆ, ಕಾಮಾಖ್ಯದಿಂದ ದ್ವಾರಕೆಯವರೆಗೆ ವ್ಯಾಪಿಸಿರುವ ಈ ಭಾವನೆ, ಶತಮಾನಗಳಿಂದಲೂ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದೆ. ಇಲ್ಲಿ ಹಿಂದುತ್ವ ಎಂಬುದು ವಿಭಜನೆಯ ಮಾರ್ಗವಲ್ಲ, ಬದಲಿಗೆ ಸಮಗ್ರ ಏಕೀಕರಣದ ಪಥವಾಗಿದೆ. ಈ ಸಾಂಸ್ಕೃತಿಕ ಸಾರದಲ್ಲಿಯೇ ಭಾರತದ ರಾಷ್ಟ್ರಭಾವನೆ ಅಡಗಿದೆ ಎಂಬುದು ಸ್ಪಷ್ಟ.
- **ವಿಶ್ವಮಾನವ ಧರ್ಮ ಮತ್ತು ಹಿಂದುತ್ವದ ಸಮನ್ವಯ:** 'ವಸುಧೈವ ಕುಟುಂಬಕಂ' (ಜಗತ್ತೇ ಒಂದು ಕುಟುಂಬ) ಮತ್ತು 'ಸರ್ವೇ ಜನಾಃ ಸುಖಿನೋ ಭವಂತು' (ಎಲ್ಲರೂ ಸುಖವಾಗಿರಲಿ) ಎಂಬ ಮಹೋನ್ನತ ಸಿದ್ಧಾಂತಗಳಿಂದ ಪ್ರೇರಿತವಾಗಿರುವ ಹಿಂದೂ ಧರ್ಮವು, ವಿಶ್ವಮಾನವ ಧರ್ಮದ ಮೂಲತತ್ವವನ್ನೇ ಪ್ರತಿಬಿಂಬಿಸುತ್ತದೆ. ಆದ್ದರಿಂದ ಹಿಂದುತ್ವ ಮತ್ತು ವಿಶ್ವಮಾನವ ಧರ್ಮಗಳು ಪರಸ್ಪರ ವಿರೋಧಿಯಲ್ಲ, ಬದಲಿಗೆ ಪೂರಕವಾಗಿವೆ ಎಂದು ಆರೆಸ್ಸೆಸ್ ಪ್ರತಿಪಾದಿಸುತ್ತದೆ.
- **ಅಂಬೇಡ್ಕರ್ ಮತ್ತು ಮತೀಯವಾದದ ಆರೋಪ:** ಡಾ. ಬಿ.ಆರ್.ಅಂಬೇಡ್ಕರ್ ಅವರು ತಮ್ಮ 'ಥಾಟ್ಸ್ ಆನ್ ಪಾಕಿಸ್ತಾನ್' ಎಂಬ ಪ್ರಸಿದ್ಧ ಕೃತಿಯಲ್ಲಿ ಆರೆಸ್ಸೆಸ್‌ನ ಬಗ್ಗೆ ಯಾವುದೇ ನಿರ್ದಿಷ್ಟ ಆರೋಪವನ್ನಾಗಲೀ ಉಲ್ಲೇಖವನ್ನಾಗಲೀ ಮಾಡಿಲ್ಲ. ಇಸ್ಲಾಂ ಹೇಗೆ ವಿಭಜಕ ಸಿದ್ಧಾಂತವನ್ನು ಒಳಗೊಂಡಿದೆ, ಅದು ರಾಷ್ಟ್ರೀಯತೆಗೆ ಹೇಗೆ ಪೂರಕವಾಗಿಲ್ಲ ಮತ್ತು ಮುಸ್ಲಿಮರು ಹೇಗೆ ತಾವೇ ಪ್ರತ್ಯೇಕ ಜನಾಂಗ ಅಂತ ಭಾವಿಸುತ್ತಾರೆ ಅನ್ನುವುದನ್ನು ಅಂಬೇಡ್ಕರ್ ಈ ಕೃತಿಯಲ್ಲಿ ವಿವರಿಸುತ್ತಾರೆ. ಅದು ಕೇವಲ ಮತಧರ್ಮವಲ್ಲ, ಅದು ರಾಜಕೀಯ ಸಿದ್ಧಾಂತವೂ ಹೌದು. ಮುಸ್ಲಿಮರ ನಡೆ-ನಡವಳಿಕೆಯನ್ನು ಅಂಬೇಡ್ಕರ್ ವಿಶ್ಲೇಷಿಸಿ, 'ತಾವು ಪ್ರತ್ಯೇಕ' ಎಂದು ನಂಬುವ ಮುಸ್ಲಿಮರ ಮನೋವೈಜ್ಞಾನಿಕ ಅಂಶವನ್ನು ಎಳೆಎಳೆಯಾಗಿ ಚಿತ್ರಿಸುತ್ತಾರೆ. ಅದನ್ನು ಅಂಬೇಡ್ಕರ್ ಹೇಳುವುದು ಹೀಗೆ: ''ಮುಸ್ಲಿಂ ಜಗತ್ತು, ಈ ಪ್ರಪಂಚವನ್ನು ಎರಡಾಗಿ ನೋಡುತ್ತದೆ, ಒಂದು 'ದಾರುಲ್ ಇಸ್ಲಾಂ', ಮತ್ತೊಂದು 'ದಾರುಲ್ ಹರಬ್'. ಮುಸಲ್ಮಾನರು ತಮ್ಮ ಜಗತ್ತನ್ನು 'ದಾರುಲ್ ಇಸ್ಲಾಂ' ಆಗಿ ನೋಡಿದರೆ, ಮುಸ್ಲಿಮೇತರರನ್ನು 'ದಾರುಲ್ ಹರಬ್' ಆಗಿ ನೋಡುತ್ತಾರೆ ಮತ್ತು ಇದು ನಿರಂತರ ಸಂಘರ್ಷಕ್ಕೆ ನಾಂದಿಯಾಗುತ್ತದೆ''. ತಾನೇ ಸತ್ಯ, ತಾನೇ ಶ್ರೇಷ್ಠ ಎಂಬುದೇ ಫ್ಯಾಸಿಸ್ಟ್ ಮನೋಭಾವ. ಸರ್ವರನ್ನೂ ಒಳಗೊಳ್ಳತಕ್ಕಂಥ 'ಹಿಂದುತ್ವ'ವು ಮತೀಯವಾದ ಹೇಗಾಗುತ್ತದೆ?

'ಕ್ರಾಂತಿಸೂರ್ಯ' ಡಾ. ಬಿ.ಆರ್. ಅಂಬೇಡ್ಕರ್ ಅವರು ಯಾವುದೇ ಸಂದರ್ಭದಲ್ಲೂ ಆರೆಸ್ಸೆಸ್‌ನ ವಿರುದ್ಧವಾದ ಮಾತುಗಳನ್ನಾಡಿಲ್ಲ. ಅಂಬೇಡ್ಕರರು ಯಾವುದರ ಬಗ್ಗೆ ಬಹಳ ಆತಂಕ ವ್ಯಕ್ತಪಡಿಸಿದ್ದರೋ ಅದರ ಕುರಿತಾಗಿ ಕಾಂಗ್ರೆಸ್ಸಿನ ಮಹಾನ್ ನಾಯಕರು ಮೌನವಾಗಿದ್ದು, ಅವರು ಹೇಳದ ವಿಚಾರಗಳನ್ನು 'ಹೇಳಿದ್ದಾರೆ' ಎಂಬಂತೆ ಈ ನಾಯಕರು ಮಾತನಾಡುತ್ತಿರುವುದು ಅಂಬೇಡ್ಕರರಿಗೆ ಮಾಡುವ ಘೋರ ಅಪಮಾನ. ಹಿಂದುತ್ವವನ್ನು ಆರೆಸ್ಸೆಸ್ 'ಎಲ್ಲರನ್ನೂ ಒಗ್ಗೂಡಿಸುವ ಸಾಂಸ್ಕೃತಿಕ ರಾಷ್ಟ್ರೀಯತೆ' ಎಂಬುದಾಗಿ ವಿವರಿಸುತ್ತದೆಯೇ ವಿನಾ, 'ಮತೀಯತೆ' ಎಂಬುದಾಗಿ ಅಲ್ಲ. ''ರಾಷ್ಟ್ರ ಮತ್ತು ಸಮಾಜದ ಬಗೆಗಿನ ತೀವ್ರ ಪ್ರೀತಿಯೇ ಆರೆಸ್ಸೆಸ್‌ನ ಕೆಲಸಕ್ಕೆ ಆಧಾರ'' ಎಂಬ ಸಂಘದ ಹಿಂದಿನ ಸರಸಂಘಚಾಲಕರಾದ ಗುರೂಜಿ ಗೋಳವಲ್ಕರ್ ಅವರ ಮಾತು ಆರೆಸ್ಸೆಸ್‌ನ ಕಾರ್ಯವೈಖರಿ ಮತ್ತು ಮೌಲ್ಯಗಳನ್ನು ಸೂಚಿಸುತ್ತದೆ.

- **ತುರ್ತು ಪರಿಸ್ಥಿತಿ ಮತ್ತು ಆರೆಸ್ಸೆಸ್‌ನ ಪಾತ್ರ:** 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ಅಂದಿನ ಕಾಂಗ್ರೆಸ್ ಸರಕಾರವೇ ಪ್ರಜಾಪ್ರಭುತ್ವ ವಿರೋಧಿ ಸರ್ವಾಧಿಕಾರವನ್ನು ಹೇರಿತ್ತು ಮತ್ತು ಸಂವಿಧಾನ ವಿರೋಧಿಯಾಗಿ ವರ್ತಿಸಿತ್ತು, ಅಂಬೇಡ್ಕರರು ರಚಿಸಿದ ಸಂವಿಧಾನವನ್ನು ಯಾವುದೇ ಚರ್ಚೆಯಿಲ್ಲದೆ ಮನಸೋ ಇಚ್ಛೆ ತಿದ್ದುಪಡಿ ಮಾಡಿತ್ತು. ಕಾಂಗ್ರೆಸ್‌ನ ಸರ್ವಾಧಿಕಾರವನ್ನು ಕಿತ್ತೊಗೆದು, ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವುದಕ್ಕೆಂದು ಆರೆಸ್ಸೆಸ್‌ನ ಲಕ್ಷಾಂತರ ಸ್ವಯಂಸೇವಕರು ಜೈಲಿಗೆ ಹೋದರು, ಗಣನೀಯ ಸಂಖ್ಯೆಯ ಜನರು ಭೂಗತರಾಗಿ ಚಳವಳಿ ಮಾಡಿ ಜನಜಾಗೃತಿಯನ್ನು ಮೂಡಿಸಿದರು. ಕಾಂಗ್ರೆಸ್‌ನ ಸರ್ವಾಧಿಕಾರಿ ಇಂದಿರಾ ಗಾಂಧಿಯವರನ್ನು ಕಿತ್ತೊಗೆದು, ಪ್ರಜಾಪ್ರಭುತ್ವವನ್ನು ಮರುಸ್ಥಾಪನೆ ಮಾಡಿ ಸಂವಿಧಾನವನ್ನು ಉಳಿಸುವ ಕೆಲಸವನ್ನು ಆರೆಸ್ಸೆಸ್ ಮಾಡಿತು. ಇಂಥ ಭವ್ಯ ಇತಿಹಾಸವನ್ನು ಅರಿತುಕೊಳ್ಳದೆ ಆರೆಸ್ಸೆಸ್ ಅನ್ನು 'ಫ್ಯಾಸಿಸ್ಟ್ ಸಂಘಟನೆ' ಎಂದು ಆರೋಪಿಸುವುದು ಐತಿಹಾಸಿಕ ಅನ್ಯಾಯ.
- **ಜಾತಿಭೇದ ನಿರ್ಮೂಲನದೆಡೆಗೆ ಹೆಜ್ಜೆ:** ಆರೆಸ್ಸೆಸ್ ಪ್ರಬಲವಾಗಿರುವ ಕಡೆ ಅಸ್ಪೃಶ್ಯತೆಯ ಆಚರಣೆ ಅಥವಾ ಅಟ್ರಾಸಿಟಿ ಇರುವುದಿಲ್ಲ, ಯಾಕೆಂದರೆ, ಜಾತೀಯತೆ ಹಾಗೂ ಅಸ್ಪೃಶ್ಯತೆಯನ್ನು ಆರೆಸ್ಸೆಸ್ ಪೋಷಿಸುವುದಿಲ್ಲ. ಸ್ವಯಂಸೇವಕರುಗಳ ಮನೆಗಳಲ್ಲಿ ಮತ್ತು ಅವರ ಪ್ರಭಾವವಿರುವ ಕಡೆಗಳಲ್ಲಿ ಅಸ್ಪೃಶ್ಯತೆಯು ಅಕ್ಷರಶಃ ಶೂನ್ಯವಾಗಿರುತ್ತದೆ. ಜಾತಿ ಹಾಗೂ ವರ್ಗಭೇದವಿಲ್ಲದೆ ಕಾರ್ಯನಿರ್ವಹಿಸುತ್ತದೆ ಆರೆಸ್ಸೆಸ್. 1969ರ ವಿಶ್ವ ಹಿಂದೂ ಪರಿಷತ್‌ನ (ವಿಹಿಂಪ) ಸಮ್ಮೇಳನದಲ್ಲಿ ಸೇರಿದ್ದ ಎಲ್ಲಾ ಮಠಾಧಿಪತಿಗಳು, 'ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿ ಯಾವುದೇ ಸ್ಥಾನವಿಲ್ಲ' ಎಂದು ಘೋಷಿಸಿದರು. ವಿಹಿಂಪ ಸ್ಥಾಪನೆಗೂ ಮೊದಲಿನಿಂದಲೂ ಎಲ್ಲಾ ಜಾತಿ-ವರ್ಗದ ಜನರೂ ಆರೆಸ್ಸೆಸ್‌ನ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.
- **ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಿಕೆ:** ಆರೆಸ್ಸೆಸ್‌ನ ಸಂಸ್ಥಾಪಕರೇ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರು ಆರೆಸ್ಸೆಸ್‌ನ ಸ್ಥಾಪನೆಗೂ ಮುನ್ನ ನಾಗಪುರ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು, ಅನುಶೀಲನಾ ಸಮಿತಿಯ ಸದಸ್ಯರಾಗಿ ಕ್ರಾಂತಿಕಾರಿಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಕಾಂಗ್ರೆಸ್ ಆರಂಭಿಸಿದ ಅಸಹಕಾರ ಚಳವಳಿಯಲ್ಲೂ, ಕ್ರಾಂತಿಕಾರಿಗಳ ಹೋರಾಟದಲ್ಲೂ ಆರೆಸ್ಸೆಸ್‌ನ ನೂರಾರು ಸ್ವಯಂಸೇವಕರು ಪಾಲ್ಗೊಂಡಿದ್ದರು. ಇದಕ್ಕೂ ಮಿಗಿಲಾಗಿ ರಾಷ್ಟ್ರವನ್ನು ಬಲಪಡಿಸುವುದೇ ಆರೆಸ್ಸೆಸ್‌ನ ಸ್ಥಾಪನೆಯ ಉದ್ದೇಶವಾಗಿತ್ತು.

ಕಾಂಗ್ರೆಸ್ ಕಡೆಗಣಿಸಿದ ಹಲವಾರು ಕ್ರಾಂತಿಕಾರಿಗಳನ್ನು, ಸಾಮಾಜಿಕ ಏಕತೆ ಮತ್ತು ಸೇವಾಕಾರ್ಯದ ಭಾಗವಾಗಿ 'ಬಾಲಭಾರತಿ'ಯು ಸಮಾಜಕ್ಕೆ ಪರಿಚಯಿಸಿದೆ. ಉದಾಹರಣೆಗೆ ರಾಮಪ್ರಸಾದ್ ಬಿಸ್ಮಿಲ್ಲಾ, ಅಶ್ಫಾಕ್ ಉಲ್ಲಾ ಖಾನ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಚಾಪೇಕರ್ ಸಹೋದರರು, ಸಾವರ್ಕರ್ ಸಹೋದರರು. ಇವರು ಕಾಂಗ್ರೆಸ್ ಕಡೆಗಣಿಸಿದ ನೂರಾರು ಕ್ರಾಂತಿಕಾರಿಗಳಲ್ಲಿ ಕೆಲವರು; ತನ್ನ ನಿತ್ಯಶಾಖೆಗಳಲ್ಲಿ ಅವರ ಕಥೆಗಳನ್ನು ಹೇಳುವ ಮೂಲಕ, ಅವರ ನೆನಪನ್ನು ಸಮಾಜದಲ್ಲಿ ಜೀವಂತವಾಗಿಡುವ ಕಾರ್ಯವನ್ನು ಆರೆಸ್ಸೆಸ್ ಮಾಡಿದೆ.

- **ಗಾಂಧೀಜಿ ಹತ್ಯೆಯ ಆರೋಪ ಮತ್ತು ಸಮಿತಿಗಳ ತೀರ್ಮಾನ:** ಮಹಾತ್ಮ ಗಾಂಧಿಯವರ ಹತ್ಯೆಯ ನಂತರ, 1948 ಮತ್ತು 1975ರಲ್ಲಿ ಆರೆಸ್ಸೆಸ್ ಮೇಲೆ ಕಾಂಗ್ರೆಸ್ ಗಂಭೀರ ಆರೋಪಗಳನ್ನು ಮಾಡಿತು. ಆದರೆ, ಕಪೂರ್ ಕಮಿಷನ್ ಸೇರಿದಂತೆ ಮೂರು ಪ್ರಮುಖ ತನಿಖಾ ಸಮಿತಿಗಳು ಕೂಲಂಕಷ ಪರಿಶೀಲನೆ ನಡೆಸಿದ ನಂತರ, ಗಾಂಧಿಯವರ ಹತ್ಯೆಯಲ್ಲಿ ಆರೆಸ್ಸೆಸ್‌ನ ಪಾತ್ರವೇನೂ ಇಲ್ಲ ಎಂದು ತೀರ್ಮಾನವಾಯಿತು. 1948ರಲ್ಲಿ ವಿಧಿಸಲಾಗಿದ್ದ ನಿಷೇಧವನ್ನು ಕೂಡ ಈ ಹಿನ್ನೆಲೆಯಲ್ಲಿ ತೆಗೆದುಹಾಕಲಾಯಿತು. ಆರೆಸ್ಸೆಸ್‌ನ ವಿರುದ್ಧದ ಆರೋಪಗಳು, ರಾಜಕೀಯ ದುರುದ್ದೇಶದಿಂದ ಹುಟ್ಟಿಕೊಂಡ ಸುಳ್ಳು ಆರೋಪಗಳು ಎಂಬುದನ್ನು ಈ ತನಿಖೆಗಳು ಸ್ಪಷ್ಟಪಡಿಸಿದ್ದರೂ, ಕಾಂಗ್ರೆಸ್ ತನ್ನ ಹಳೆಯ ಚಾಳಿಯಂತೆ ಮತ್ತೆ ಮತ್ತೆ ಸುಳ್ಳು ಹೇಳಿ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವ ವಿಫಲ ಯತ್ನದಲ್ಲಿ ತೊಡಗಿದೆ.
- **ರಾಷ್ಟ್ರ ರಕ್ಷಣೆಯಲ್ಲಿ ಪ್ರಮುಖ ಪಾತ್ರ:** ಪಂಜಾಬ್ ಮತ್ತು ಜಮ್ಮು-ಕಾಶ್ಮೀರದ ಇತಿಹಾಸವನ್ನು ಗಮನಿಸಿದರೆ, ಉಗ್ರರ ಉಪಟಳ ತಪ್ಪಿಸುವಲ್ಲಿ ರಕ್ಷಣಾ ಪಡೆಗಳ ಜತೆ ಆರೆಸ್ಸೆಸ್ ವಹಿಸಿದ ಪಾತ್ರ ಸ್ಪಷ್ಟವಾಗಿ ಗೋಚರಿಸುತ್ತದೆ. 1980ರ ದಶಕದಲ್ಲಿ ಪಂಜಾಬ್‌ನಲ್ಲಿ ಖಲಿಸ್ತಾನಿ ಪ್ರತ್ಯೇಕತಾವಾದವು ಜನರ ಜೀವಕ್ಕೆ ಅಪಾಯವನ್ನುಂಟುಮಾಡುತ್ತಿದ್ದಾಗ, ಆರೆಸ್ಸೆಸ್‌ನ ಸ್ವಯಂಸೇವಕರು ಪೊಲೀಸರಿಗೆ ಮತ್ತು ಸೈನ್ಯಕ್ಕೆ ಮಾಹಿತಿ ಒದಗಿಸಿ, ಭಯೋತ್ಪಾದಕರ ಚಟುವಟಿಕೆಗಳನ್ನು ತಡೆಗಟ್ಟಲು ಸಹಕರಿಸಿದರು. ಇದರಿಂದಾಗಿ ಸಾಮೂಹಿಕ ಹಿಂಸಾಚಾರವನ್ನು ತಡೆಯಲು ಮತ್ತು ಸ್ಥಳೀಯ ಜನರ ಭದ್ರತೆಯನ್ನು ಕಾಪಾಡಲು ಸೈನ್ಯಕ್ಕೆ ಸಾಕಷ್ಟು ನೆರವು ದೊರಕಿತು. ಇದೇ ರೀತಿಯ ಬೆಳವಣಿಗೆಯನ್ನು ಜಮ್ಮು-ಕಾಶ್ಮೀರದಲ್ಲಿಯೂ ಕಾಣುತ್ತೇವೆ. ಭಯೋತ್ಪಾದಕ ಸಂಘಟನೆಗಳ ವಿರುದ್ಧ ಭಾರತೀಯ ಭದ್ರತಾ ಪಡೆಗಳು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ, ಆರೆಸ್ಸೆಸ್‌ನ ಸ್ವಯಂಸೇವಕರು ಉಗ್ರಗಾಮಿಗಳ ಚಲನವಲನದ ಮಾಹಿತಿ ನೀಡಿ ಸೈನ್ಯಕ್ಕೆ ಸಹಾಯ ಮಾಡುವ ಮೂಲಕ ಶಾಂತಿಸ್ಥಾಪನೆಗೆ ಸಹಕಾರ ನೀಡಿದ್ದಿದೆ.
- **ಸಾಮಾಜಿಕ ಏಕತೆ ಮತ್ತು ಸೇವಾಕಾರ್ಯಗಳು:** ಆರೆಸ್ಸೆಸ್ ಕೇವಲ ಯಾವುದೋ ನಿರ್ದಿಷ್ಟ ವಲಯಕ್ಕೆ ಸೀಮಿತಗೊಂಡಿಲ್ಲ; ತನಗೆ ತಳಹದಿಯಾಗಿರುವ ತತ್ವ-ಸಿದ್ಧಾಂತದಿಂದ ಪ್ರೇರಣೆ ಪಡೆದು, ವಿವಿಧ ಸಾಮಾಜಿಕ ವಲಯಗಳ ನಡುವೆ ಸಾಂಸ್ಕೃತಿಕ ಏಕತೆಯನ್ನು ಬೆಳೆಸಲು ಮತ್ತು ಸಂಘರ್ಷಗಳನ್ನು ತಡೆಯಲು ಅದು ಶ್ರಮಿಸುತ್ತದೆ. ಈಶಾನ್ಯ ಭಾರತದ ಅಸ್ಸಾಂ, ಮಣಿಪುರ ಸೇರಿದಂತೆ, ಹಲವು ಪ್ರದೇಶಗಳಲ್ಲಿ ಶಾಂತಿಸ್ಥಾಪನೆಯಲ್ಲಿ ಮಹತ್ವದ ಸಹಕಾರ ನೀಡಿರುವ ಆರೆಸ್ಸೆಸ್, 2024ರ ರಾಷ್ಟ್ರೀಯ ಕಾರ್ಯನಿರ್ವಹಣಾ ಮಂಡಳಿಯ ಸಭೆಯಲ್ಲಿ ಪರಿಸರ ಸಂರಕ್ಷಣೆ, ಸ್ವಾವಲಂಬನೆ ಮತ್ತು ನಾಗರಿಕ ಹೊಣೆಗಾರಿಕೆಗಳನ್ನು ಉತ್ತೇಜಿಸಿದೆ. ರಾಷ್ಟ್ರಭಕ್ತಿಯನ್ನು ಪ್ರಧಾನವಾಗಿ ಇಟ್ಟುಕೊಂಡು ವ್ಯಕ್ತಿಗೆ ಸಂಸ್ಕಾರವನ್ನು ಕೊಡುವ ಕೆಲಸ ಮಾಡುವುದರ ಜತೆಗೆ, ಯುದ್ಧ, ಪ್ರಕೃತಿ ವಿಕೋಪ, ಸಾಂಕ್ರಾಮಿಕ ರೋಗಗಳ ಅಪ್ಪಳಿಕೆ ಮುಂತಾದ ಸಂಕಷ್ಟ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಸೇವಾ ಚಟುವಟಿಕೆಗಳಲ್ಲಿ ನಿರಂತರ ತೊಡಗಿಸಿಕೊಂಡಿದೆ ಆರೆಸ್ಸೆಸ್.
- **ವನವಾಸಿ ಕಲ್ಯಾಣ, ಶಿಕ್ಷಣ ಮತ್ತು ಸಂಸ್ಕಾರ:** ಆರೆಸ್ಸೆಸ್ ಕೇವಲ ಸೈದ್ಧಾಂತಿಕ ಚರ್ಚೆಗಳ ಪರಿಧಿಗೆ ಸೀಮಿತವಾದ ಸಂಘಟನೆಯಲ್ಲ; ಇದು ದೇಶದ ವಿವಿಧ ಸಾಮಾಜಿಕ ವಲಯಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದೆ ಎಂಬುದಕ್ಕೆ ಅದರ ಅಂಗಸಂಸ್ಥೆಯಾದ 'ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮ' ಒಂದು ಜೀವಂತ ನಿದರ್ಶನ. 1952ರಲ್ಲಿ ಸ್ಥಾಪನೆಯಾದ ಈ ಆಶ್ರಮವು, ಭಾರತದ ಅತ್ಯಂತ ಹಿಂದುಳಿದ ಬುಡಕಟ್ಟು ಪ್ರದೇಶಗಳಲ್ಲಿ (ವನವಾಸಿ ಕ್ಷೇತ್ರಗಳಲ್ಲಿ) ಮೌನಕ್ರಾಂತಿಯನ್ನು ನಡೆಸುತ್ತಿದೆ.

ಆರೆಸ್ಸೆಸ್ ಪ್ರಕಾರ, ದೇಶದ ಬುಡಕಟ್ಟು ಸಮುದಾಯಗಳು 'ಅರಣ್ಯವಾಸಿಗಳು' ಅಥವಾ 'ಆದಿವಾಸಿಗಳು' ಮಾತ್ರವಲ್ಲ, ಅವರು ಭಾರತೀಯ ಸಂಸ್ಕೃತಿಯ ಮೂಲಬೇರುಗಳನ್ನು ಕಾಪಾಡಿಕೊಂಡು ಬಂದ ವನವಾಸಿಗಳು (ಅರಣ್ಯದಲ್ಲಿ ವಾಸಿಸುವವರು) ಮತ್ತು ಅನನ್ಯ ರಾಷ್ಟ್ರೀಯ ಚೇತನದ ಭಾಗ. ಅವರ ಸಮಗ್ರ ಅಭಿವೃದ್ಧಿಯು ರಾಷ್ಟ್ರ ನಿರ್ಮಾಣಕ್ಕೆ ಅತ್ಯಗತ್ಯ ಎಂಬ ದೃಷ್ಟಿಕೋನವನ್ನು ಆರೆಸ್ಸೆಸ್ ಹೊಂದಿದೆ. ಶಿಕ್ಷಣದ ಮೂಲಕ ಅಧಿಕಾರ ನೀಡಿಕೆ, ಆರೋಗ್ಯ ಮತ್ತು ಜೀವನ ಭದ್ರತೆ, ಸಾಂಸ್ಕೃತಿಕ ಸ್ವತ್ವದ ಪುನರುಜ್ಜೀವನ, ಕ್ರೈಸ್ತ ಮಿಷನರಿಗಳ ಮತಾಂತರದ ಬೆದರಿಕೆಯನ್ನು ಸಮರ್ಥವಾಗಿ ಎದುರಿಸುವಿಕೆ ಮತ್ತು ವನವಾಸಿಗಳ ವಿಶಿಷ್ಟ ಸಾಂಸ್ಕೃತಿಕ ಸ್ವತ್ವವನ್ನು ಕಾಪಾಡುವಿಕೆ ಮುಂತಾದ ನೆಲೆಗಳಲ್ಲಿ ಆಶ್ರಮ ಶ್ರಮಿಸುತ್ತದೆ ಹಾಗೂ ವನವಾಸಿಗಳ ಹಕ್ಕುಗಳ ರಕ್ಷಣೆ ಮತ್ತು ಗ್ರಾಮ ವಿಕಾಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತದೆ.

- **ವನದಲ್ಲಿ ಅರಳಿದ ಜ್ಞಾನದ ದೀಪ:** 'ಏಕಲ ವಿದ್ಯಾಲಯ' ಅಭಿಯಾನವು 'ಒಬ್ಬ ಗುರು-ಒಂದು ಶಾಲೆ' ಎಂಬ ತತ್ತ್ವದ ಮೇಲೆ ನಿಂತು, ವನವಾಸಿ ಮತ್ತು ಗ್ರಾಮೀಣ ಮಕ್ಕಳಿಗೆ ಬೆಳಕಾಗಿದೆ. ಇದು ಅರಣ್ಯದ ಹೃದಯಭಾಗದಲ್ಲಿ ಮೂಲ ಶಿಕ್ಷಣ, ಆರೋಗ್ಯದ ಅರಿವು ಮತ್ತು ಸ್ವಾವಲಂಬನೆಯ ದೀಕ್ಷೆ ನೀಡುವ ಮಹಾ ಸೇವಾಯಜ್ಞವಾಗಿದೆ. 'ವಿದ್ಯೆಯಿಂದ ರಾಷ್ಟ್ರೋದ್ಧಾರ' ಎಂಬುದು ಇದರ ಧ್ಯೇಯ.
- **ಮೌಲ್ಯದ ಮಂದಾರ 'ರಾಷ್ಟ್ರೋತ್ಥಾನ ಪರಿಷತ್':** ಬೆಂಗಳೂರನ್ನು ಮೂಲನೆಲೆಯಾಗಿ ಹೊಂದಿರುವ ರಾಷ್ಟ್ರೋತ್ಥಾನ ಪರಿಷತ್, ಮೌಲ್ಯಾಧಾರಿತ ಶಿಕ್ಷಣ, ಆರೋಗ್ಯ ಸೇವೆ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಮೂಲಕ ಸಮಾಜದ ನೈತಿಕ ಪುನರುತ್ಥಾನಕ್ಕೆ ಶ್ರಮಿಸುತ್ತಿದೆ. ಇಲ್ಲಿ ಶಿಷ್ಯರಿಗೆ ಜ್ಞಾನವನ್ನಷ್ಟೇ ನೀಡದೆ, ರಾಷ್ಟ್ರಭಕ್ತಿ, ಸಂಸ್ಕಾರ ಮತ್ತು ಸೇವಾ ಮನೋಭಾವದ ಬೀಜವನ್ನು ಬಿತ್ತಲಾಗುತ್ತದೆ. ಇದು ಭವಿಷ್ಯದ ಭಾರತದ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ದಿವ್ಯಸಂಕಲ್ಪವಾಗಿದೆ.
- **ಶಿಸ್ತು, ಶಕ್ತಿ, ಸಮರ್ಪಣೆಯ ಕ್ರೀಡಾಕ್ಷೇತ್ರ:** 'ಕ್ರೀಡಾಭಾರತೀ' ಎಂಬುದು ಕ್ರೀಡೆಯ ಮೂಲಕ ವ್ಯಕ್ತಿತ್ವ, ಶಿಸ್ತು ಮತ್ತು ರಾಷ್ಟ್ರಭಕ್ತಿಯನ್ನು ಬೆಳೆಸುವ ಸಂಸ್ಥೆ. ಇದು ದೇಸಿ ಆಟಗಳು, ಯೋಗ ಮತ್ತು ದೈಹಿಕ ತರಬೇತಿಗಳ ಮೂಲಕ ಯುವಕರಲ್ಲಿ ಶಕ್ತಿ, ಸಹಕಾರ ಮತ್ತು ಸಮರ್ಪಣೆಯ ಮನೋಭಾವವನ್ನು ತುಂಬುತ್ತದೆ. 'ಕ್ರೀಡೆ ಕೇವಲ ಆಟವಲ್ಲ, ಅದು ರಾಷ್ಟ್ರಸೇವೆ' ಎಂಬ ಸಂದೇಶವನ್ನು ಜೀವಂತಗೊಳಿಸುತ್ತದೆ.
- **ಧರ್ಮಸಂವಾದ ಮತ್ತು ಸಾಮಾಜಿಕ ಬಾಂಧವ್ಯ:** ಆರೆಸ್ಸೆಸ್‌ನ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರು ಮುಸ್ಲಿಂ ಸಮುದಾಯದ ಮುಖಂಡರನ್ನು ಭೇಟಿಮಾಡಿ, ಧಾರ್ಮಿಕ ಸಂವಾದ ಮತ್ತು ಸಹಕಾರವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ವಿವಿಧ ಧರ್ಮಗಳ ನಡುವೆ ಶಾಂತಿ ಮತ್ತು ಸಹಿಷ್ಣುತೆಯನ್ನು ಉತ್ತೇಜಿಸುವಲ್ಲಿ ಆರೆಸ್ಸೆಸ್ ತನ್ನ ಪಾತ್ರವನ್ನು ನಿರಂತರವಾಗಿ ನಿರ್ವಹಿಸುತ್ತಿದೆ. ದೇಶದ ಮುಸ್ಲಿಂ ಸಹೋದರರನ್ನು ರಾಷ್ಟ್ರಭಾವನೆ, ಸೌಹಾರ್ದ ಮತ್ತು ಏಕತೆಯ ಮಾರ್ಗದಲ್ಲಿ ಒಗ್ಗೂಡಿಸುವ ವೇದಿಕೆಯಾಗಿದೆ 'ರಾಷ್ಟ್ರೀಯ ಮುಸ್ಲಿಂ ಏಕತಾ ಮಂಚ್'. 'ಮೊದಲು ದೇಶ, ನಂತರ ಧರ್ಮ' ಎಂಬ ಧ್ಯೇಯದೊಂದಿಗೆ ಇದು ದೇಶಭಕ್ತಿ, ಶಿಕ್ಷಣ ಹಾಗೂ ಸಾಮಾಜಿಕ ಸೇವೆಯ ಮೂಲಕ, ಸಂವಿಧಾನ ನಿಷ್ಠೆಯ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸುತ್ತಿದೆ. ಈ ವೇದಿಕೆಯ ಮೂಲಕ ರಾಷ್ಟ್ರಭಕ್ತ ಮುಸ್ಲಿಮರನ್ನು ಸಂಘಟಿಸುವ ಕೆಲಸವು ಆರೆಸ್ಸೆಸ್‌ನಿಂದ ನಡೆಯುತ್ತಿದ್ದು, ಡಾ. ಎಪಿಜೆ ಅಬ್ದುಲ್ ಕಲಾಂ, ಹವಾಲ್ದಾರ್ ಅಬ್ದುಲ್ ಹಮೀದ್, ಬಿಸ್ಮಿಲ್ಲಾ ಖಾನ್, ಹರೇಕಳ ಹಾಜಬ್ಬ, ಇಬ್ರಾಹಿ ಸುತಾರ್ ಅವರಂಥ ರಾಷ್ಟ್ರನಿಷ್ಠ ಮುಸ್ಲಿಮರನ್ನು ಅದು ಪ್ರತಿ ಹಂತದಲ್ಲಿ ಉದಾಹರಣೆಯಾಗಿ ಉಲ್ಲೇಖಿಸುತ್ತದೆ. ದೇಶದ್ರೋಹಿ ಯಾರೇ ಇರಲಿ, ಅವರು ಹಿಂದು ಅಥವಾ ಮುಸ್ಲಿಂ ಆಗಿರಲಿ, ಅವರನ್ನು ವಿರೋಧಿಸುವ ಕೆಲಸವನ್ನು ಎಲ್ಲರೂ ಮಾಡಬೇಕಿದೆ.
- **ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರ:** 'ವಿದ್ಯಾಭಾರತಿ' ಶಾಲೆಗಳ ಮೂಲಕ ಮಕ್ಕಳಿಗೆ ಆರೆಸ್ಸೆಸ್ ಶಿಕ್ಷಣ ಒದಗಿಸುವುದಲ್ಲದೆ, ಕೋವಿಡ್ ಸಾಂಕ್ರಾಮಿಕ ಅಪ್ಪಳಿಸಿದ ಸಂದರ್ಭಗಳಲ್ಲಿ 'ಸೇವಾ ಭಾರತ್'ನ ಮೂಲಕ ಆರೋಗ್ಯ ಮತ್ತು ತುರ್ತು ನೆರವು ಕಾರ್ಯಗಳನ್ನು ದೇಶಾದ್ಯಂತ ನಡೆಸಿದೆ. ಇದು 7.3 ಮಿಲಿಯನ್‌ಗೂ ಹೆಚ್ಚು ಬಡವರಿಗೆ ಆಹಾರ ಮತ್ತು ಮಾಸ್ಕ್ ವಿತರಣೆ, ರಕ್ತದಾನ ಸೇರಿದಂತೆ ವಿವಿಧ ಸೇವೆಗಳನ್ನು ನಿರಂತರವಾಗಿ ನೀಡುತ್ತಾ, ಹಿಂದುಳಿದ ಪ್ರದೇಶಗಳಲ್ಲಿ ಸಹಾಯ ಮಾಡಿದೆ. 'ತಪಸ್' ಎಂಬುದು ರಾಷ್ಟ್ರೋತ್ಥಾನ ಪರಿಷತ್‌ನ ಉಚಿತ ವಸತಿ-ಪ್ರಶಿಕ್ಷಣ ಯೋಜನೆಯಾಗಿದ್ದು, ಪ್ರತಿಭಾವಂತ ಬಡವಿದ್ಯಾರ್ಥಿಗಳಿಗೆ 'ಐಐಟಿ-ಜೆಇಇ' ಸೇರಿದಂತೆ ಉನ್ನತ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುತ್ತದೆ. 'ಸಾಧನಾ' ಎಂಬುದು ಇದೇ ಯೋಜನೆಯ ಹುಡುಗಿಯರ ವಿಭಾಗವಾಗಿದ್ದು, ವೈದ್ಯಕೀಯ ಮತ್ತು ಇತರ ಉನ್ನತ ಕೋರ್ಸ್‌ಗಳಿಗೆ ಸಿದ್ಧಗೊಳ್ಳುವ ವಿದ್ಯಾರ್ಥಿನಿಯರಿಗೆ ವಸತಿ ಮತ್ತು ಶಿಕ್ಷಣದ ನೆರವನ್ನು ನೀಡುತ್ತದೆ.
- **ರಾಷ್ಟ್ರ ಮೊದಲು ಎಂಬ ಪರಿಕಲ್ಪನೆ:** ಕೌಟುಂಬಿಕ ಭಾವನೆಯೊಂದಿಗೆ 'ರಾಷ್ಟ್ರ ಮೊದಲು' ಎಂಬ ಪರಿಕಲ್ಪನೆಯ ಅಡಿಯಲ್ಲಿ ತನ್ನ ಶಾಖೆಗಳ ಮೂಲಕ ಸಂಸ್ಕಾರ ನೀಡುವ ವೇದಿಕೆಯಾಗಿದೆ ಆರೆಸ್ಸೆಸ್. ಇದರ ಶಾಖೆಗಳಲ್ಲಿ ಜಾತಿ-ಮತ-ಧರ್ಮ, ಮೇಲು-ಕೀಳು ಎನ್ನುವ ಭೇದವಿಲ್ಲ. ಅಮೃತ ವಚನಗಳು, ಹಾಡುಗಳು, ಕಥೆಗಳ ಮೂಲಕ ರಾಷ್ಟ್ರಭಕ್ತಿ ಬೆಳೆಸುವ ಕಾರ್ಯ ಇಲ್ಲಿ ನಡೆಯುತ್ತದೆ. ಗಾಂಧೀಜಿ, ಸುಭಾಸ್‌ಚಂದ್ರ ಬೋಸ್, ಡಾ. ಬಿ.ಆರ್. ಅಂಬೇಡ್ಕರ್, ಬ್ರಹ್ಮರ್ಷಿ ನಾರಾಯಣ ಗುರು, ಜ್ಯೋತಿಬಾ ಫುಲೆ, ಕಬೀರ್‌ದಾಸ್, ಗುರುನಾನಕ್, ಬಸವಣ್ಣ, ಕನಕದಾಸ ಹಾಗೂ ಎಪಿಜೆ ಅಬ್ದುಲ್ ಕಲಾಂ ಮುಂತಾದವರ ಹಿತನುಡಿಗಳನ್ನು ಇಲ್ಲಿ ಬೋಧಿಸಲಾಗುತ್ತದೆ. ಕೌಟುಂಬಿಕ ಶೈಲಿಯಲ್ಲಿರುವ, ಪಾರಿವಾರಿಕ ಭಾವನೆಗಳನ್ನು ಬಿತ್ತುವ ಸಂಘಟನೆಯಾಗಿರುವ ಆರೆಸ್ಸೆಸ್ ಎಂಬುದು ಟ್ರಸ್ಟ್ ಅಲ್ಲ, ಸೊಸೈಟಿಯೂ ಅಲ್ಲ ಅಥವಾ ಇದು ರಾಜಕೀಯ ಪಕ್ಷವೂ ಅಲ್ಲ. ಆರೆಸ್ಸೆಸ್‌ನ ವಿರೋಧಿಗಳು ಸುಳ್ಳು ಮತ್ತು ಅಪಪ್ರಚಾರದಿಂದ ಸಾಮಾಜಿಕ ಪರಿವರ್ತನೆಗೆ ತಡೆ ಮಾಡುತ್ತಿದ್ದಾರೆ. ಆರೆಸ್ಸೆಸ್‌ನ ಕಾರ್ಯವೈಖರಿಯು ನಿಸ್ವಾರ್ಥವೂ, ರಾಷ್ಟ್ರಪರವೂ, ಎಲ್ಲರನ್ನೂ ಒಳಗೊಳ್ಳುವಂಥದ್ದೂ ಆಗಿದೆ. ನಾಗಪುರದ ಮೋಹಿತೆವಾಡದಿಂದ ಆರಂಭವಾದ ಆರೆಸ್ಸೆಸ್, ಇಂದಿಗೆ ಕೋಟ್ಯಂತರ ಸ್ವಯಂಸೇವಕರ ಹೃದಯಗಳಲ್ಲಿ ಸ್ಥಳ ಪಡೆದಿದೆ, ವಿದೇಶಗಳಲ್ಲಿಯೂ ಹಿಂದೂ ಸ್ವಯಂಸೇವಕ ಸಂಘದ ಕಾರ್ಯವಿದೆ.

ಫ್ಯಾಸಿಸ್ಟ್ ಮನಸ್ಥಿತಿಯ ಕೆಲ ಕಾಂಗ್ರೆಸ್ಸಿಗರು ಹೇಳುವಂತೆ 'ಹಿಂದೂ ಫ್ಯಾಸಿಸಂ' ಎನ್ನುವುದು ಅಸಾಧ್ಯ: ಏಕೆಂದರೆ ಹಿಂದೂ ಸಂಸ್ಕೃತಿಯು ಬಹುಸಂಸ್ಕೃತಿವಾದಿಯಾಗಿದೆ. ಅಪ್ಪಟ ರಾಷ್ಟ್ರೀಯತೆಗೂ ಫ್ಯಾಸಿಸಂಗೂ/ಫ್ಯಾಸಿಸ್ಟರಿಗೂ ಸಂಬಂಧವಿಲ್ಲ. 'ಒಬ್ಬ ಪ್ರವಾದಿ-ಒಬ್ಬ ದೇವರು-ಒಂದು ಪುಸ್ತಕ'ದ ಮೇಲೆ ನಂಬಿಕೆಯಿಟ್ಟವರು ಫ್ಯಾಸಿಸ್ಟ್ ಆಗುತ್ತಾರೆ. ರಾಷ್ಟ್ರೀಯತೆಯ ಮೇಲೆ, ಬಹುತ್ವದ ಮೇಲೆ ನಂಬಿಕೆಯಿಟ್ಟವರು, ಬಹುತ್ವದ ನಂಬಿಕೆಯಿರುವ ಹಿಂದುತ್ವವನ್ನು ಪ್ರತಿಪಾದಿಸುವವರು ಯಾವತ್ತಿಗೂ ಫ್ಯಾಸಿಸ್ಟ್ ಆಗಲು ಸಾಧ್ಯವಿಲ್ಲ. ಹಿಂದುತ್ವವು ಫ್ಯಾಸಿಸ್ಟ್ ಅಥವಾ ಕಮ್ಯುನಲ್ ಅಲ್ಲ; ಅದು ಸತ್ಯ, ಸದ್ಗುಣ ಮತ್ತು ಪಂಚಭೂತಗಳ ಸಂರಕ್ಷಣೆಯ ಆಧಾರಿತ ಸಾಂಸ್ಕೃತಿಕ ವಿಚಾರಧಾರೆ. 'ಹಿಂದೂ ರಾಷ್ಟ್ರ' ಎಂಬ ಪದವನ್ನೂ, ಅರ್ಥವನ್ನೂ, ಪರಿಕಲ್ಪನೆಯನ್ನೂ ಈ ತತ್ತ್ವದ ಅಡಿಯಲ್ಲಿ ವಿವರಿಸಲಾಗಿದೆ.

- **ಕಾಂಗ್ರೆಸ್ಸಿನ ರಾಜಕೀಯ ವಿದ್ರೋಹ:** 'ಟುಕಡೆ ಗ್ಯಾಂಗ್'ನೊಂದಿಗೆ ಕಾಂಗ್ರೆಸ್ಸಿನ ನಂಟು, ರಾಷ್ಟ್ರದ್ರೋಹದ ನೆರಳು ಇದೆ. ದೇಶದ ಏಕತೆ, ಸಂವಿಧಾನ ಮತ್ತು ಸೇನೆಯ ಪಾವಿತ್ರ್ಯದ ವಿರುದ್ಧ ದನಿಯೆತ್ತುವ, 'ಭಾರತ್ ತೇರಾ ಟುಕಡೆ ಹೋಂಗೆ' ಎಂದು ಕೂಗಿ ರಾಷ್ಟ್ರವಿಭಜನೆಗೆ ಹಾತೊರೆಯುವವರ ಗುಂಪಿನ ಜತೆಗೆ, ರಾಷ್ಟ್ರವಿರೋಧಿ ಶಕ್ತಿಗಳೊಂದಿಗೆ ಕಾಂಗ್ರೆಸ್ ಪಕ್ಷವು ನೇರವಾದ ಸಂಬಂಧವನ್ನು ಹೊಂದಿದೆ. ತನ್ನ ಬೆಂಬಲಿಗರು 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದರೂ ಅದನ್ನು ವಿರೋಧಿಸದ ಕಾಂಗ್ರೆಸ್ಸಿನ ಮೌನ, ವಿದೇಶಗಳಲ್ಲಿ ಭಾರತದ ಮರ್ಯಾದೆಗೆ ಕುಂದುತರುವ ತನ್ನ ಅಧಿನಾಯಕ ರಾಹುಲ್ ಗಾಂಧಿಯವರ ಪರ ವಹಿಸುವ ಅನಿವಾರ್ಯತೆ- ಹೀಗೆ ಹಲವು ವಿಚಾರಗಳು ಕಾಂಗ್ರೆಸ್‌ನಲ್ಲಿರುವ ರಾಷ್ಟ್ರಭಕ್ತಿಯ ಕೊರತೆಯನ್ನು ಅಂಗೈಹುಣ್ಣಿನಷ್ಟೇ ಸ್ಪಷ್ಟವಾಗಿ ತೋರಿಸುತ್ತವೆ. ಜಾತಿ ಜಾತಿಗಳನ್ನು ಎತ್ತಿಕಟ್ಟುವ, ಸಮಾಜವನ್ನು ಒಡೆಯುವ ರಾಜಕಾರಣವು ಕಾಂಗ್ರೆಸ್‌ನ ನೀತಿಯಾಗಿದೆ. ಜನರನ್ನು ಧರ್ಮ, ಜಾತಿ ಮತ್ತು ಮತಗಳ ಮೇಲೆ ವಿಭಜಿಸಿ, ಕೆಲವರ ಮೇಲೆ ತುಷ್ಟೀಕರಣ ನೀತಿಯನ್ನು ಪ್ರಯೋಗಿಸಿ ರಾಜಕೀಯ ಲಾಭ ಮಾಡಿಕೊಳ್ಳಲು ಕಾಂಗ್ರೆಸ್ ಯತ್ನಿಸುತ್ತಿದೆ. ಸಮಾಜದಲ್ಲಿ ಒಗ್ಗಟ್ಟಿನ ಸೇತುವೆ ಕಟ್ಟುವುದಕ್ಕೆ ಬದಲಾಗಿ, ವಿಭಜನೆ ಮತ್ತು ದ್ವೇಷದ ಗೋಡೆ ಕಟ್ಟುವುದೇ ಕಾಂಗ್ರೆಸ್‌ನ ರಾಜಕೀಯ ಹಾದಿಯ ಮೂಲಮಂತ್ರ. ಇಂಥ ದುಷ್ಟ ಇಚ್ಛೆಗಳಿಗೆ ಅಡ್ಡ ನಿಂತಿರುವುದೇ ಆರೆಸ್ಸೆಸ್!

'ಸರ್ವೇ ಜನಾಃ ಸುಖಿನೋ ಭವಂತು' ಎನ್ನುವುದು ಹೇಗೆ ಫ್ಯಾಸಿಸಂ ಆಗುತ್ತದೆ? ತಾನು-ತನ್ನವರು ಮಾತ್ರ ಸುಖ ಪಡಬೇಕು, ಉಳಿದವರು ಹಾಳಾದರೂ ಪರವಾಗಿಲ್ಲ ಎನ್ನುವವರು ಫ್ಯಾಸಿಸ್ಟ್‌ಗಳು. ಎಲ್ಲರೂ ಸುಖವಾಗಿರಬೇಕು ಅನ್ನೋರು ಫ್ಯಾಸಿಸ್ಟ್ ಹೇಗೆ ಆಗುತ್ತಾರೆ? ಆರೆಸ್ಸೆಸ್‌ನ ವಿರುದ್ಧ ಸುಳ್ಳು ಟೀಕೆಗಳ, ಅಪಪ್ರಚಾರದ ಹಿಂದಿರುವ ಮೂಲಕಾರಣ- ಸಂಘದ ಬೆಳವಣಿಗೆಯಿಂದ ದೇಶದ ಯುವಜನರಲ್ಲಿ ಹೆಚ್ಚುತ್ತಿರುವ ದೇಶಭಕ್ತಿಯ ಪ್ರಭಾವ. ಇದರಿಂದಾಗಿ, ತುಷ್ಟೀಕರಣದ ರಾಜಕೀಯ ಮಾಡುತ್ತಿರುವ ಕಾಂಗ್ರೆಸ್‌ಗೆ ಆತಂಕ ಎದುರಾಗಿದೆ. ಈ ಕಾರಣಕ್ಕೆ ಕೆಲ ಕಾಂಗ್ರೆಸ್ಸಿಗರು ಹತಾಶರಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಇಂಥ ಕಾಲಘಟ್ಟದಲ್ಲಿ ಸತ್ಯ, ನಿಷ್ಠೆ ಮತ್ತು ಸಮಾಜಮುಖಿ ಕಾರ್ಯಗಳೊಂದಿಗೆ ಆರೆಸ್ಸೆಸ್ ಜಾಗೃತಿ ಮಾಡುತ್ತಾ, ಸುಳ್ಳು ಆರೋಪಗಳನ್ನು ಬದಿಗೊತ್ತಬೇಕಾಗಿದೆ. ದೇಶದ ಏಕತೆ ಮತ್ತು ಅಭಿವೃದ್ಧಿಗಾಗಿ ನಾವೆಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸುವ ಕಾಲ ಬಂದಿದೆ.

(ಲೇಖಕರು ಬಿಜೆಪಿಯ ವಿಧಾನ ಪರಿಷತ್ ಸದಸ್ಯರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10,Issue:280

ಸಮಾಚಾರ ಸಣ್ಣದಲ್ಲ

ಕಡಲಿಗೆ ಬಿದ್ದ ಸರಕು ವಿಮಾನ: 2 ಸಾವು

ಹಾಂಕಾಂಗ್: ದುಬೈನಿಂದ ಸರಕುಗಳನ್ನು ಹೊತ್ತು ಹಾಂಕಾಂಗ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ನಸುಕಿನ 3.50ರಲ್ಲಿ ಬಂದಿಳಿದ ಎಮಿರೇಟ್ ವಿಮಾನ ಸಂಸ್ಥೆಯ 'ಬೋಯಿಂಗ್ 747' ಸರಕು ಸಾಗಣೆ ವಿಮಾನ ರನ್‌ವೇಯಲ್ಲಿ ಚಕ್ರಗಳು ಜಾರಿದ್ದರಿಂದ ಪಕ್ಕದಲ್ಲೇ ಇದ್ದ ಸಮುದ್ರಕ್ಕೆ ಬಿದ್ದಿದೆ. ರನ್ ವೇಯಿಂದ ಜಾರಿ ಮುನ್ನುಗ್ಗಿದಾಗ ವಿಮಾನ ನಿಲ್ದಾಣದಲ್ಲಿದ್ದ ಗ್ರೌಂಡ್ ಸ್ಟಾಫ್‌ಗಳಿಗೆ ವಿಮಾನ ಡಿಕ್ಕಿಯಾಗಿದ್ದರಿಂದ ನಿಲ್ದಾಣದ ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದಾರೆ. ವಿಮಾನದಲ್ಲಿದ್ದ ಎಲ್ಲಾ 4 ಸಿಬ್ಬಂದಿಗಳನ್ನು ರಕ್ಷಿಸಲಾಗಿದೆ. ನಿಲ್ದಾಣ ಸಿಬ್ಬಂದಿಯಲ್ಲಿ ಒಬ್ಬರನ್ನೂ ರಕ್ಷಿಸಲಾಗಿದೆ. ಮತ್ತೊಬ್ಬರು ನಾಪತ್ತೆಯಾಗಿದ್ದಾರೆ. ತನಿಖೆ ಕಾರಣ ಸರಕು ವಿಮಾನ ಸಮುದ್ರಕ್ಕೆ ಜಾರಲು ಕಾರಣವಾದ ರನ್‌ವೇಯನ್ನು ಸದ್ಯಕ್ಕೆ ಬಂದ್ ಮಾಡಲಾಗಿದೆ ಎಂದು ವಿಮಾನ ನಿಲ್ದಾಣ ಅಧಿಕಾರಿಗಳು ಹೇಳಿದ್ದಾರೆ.

ತೆಲಂಗಾಣ: ಪೊಲೀಸ್ ಹಂತಕ ಎನ್‌ಕೌಂಟರ್

ನಿಜಾಮಾಬಾದ್: ತೆಲಂಗಾಣ ರಾಜ್ಯದ ನಿಜಾಮಾಬಾದ್‌ನ ಸರಕಾರಿ ಜನರಲ್ ಆಸ್ಪತ್ರೆಯಲ್ಲಿ ಸೋಮವಾರ ಬೆಳಗ್ಗೆ ನಡೆದ ಪೊಲೀಸ್ ಎನ್‌ಕೌಂಟರ್‌ನಲ್ಲಿ ರಿಯಾಜ್ ಎಂಬ ರೌಡಿ ಶೀಟರ್ ಹತನಾದ. ಈತ ತೆಲಂಗಾಣ ಪೊಲೀಸ್ ಇಲಾಖೆಯ ಕಾನ್‌ಸ್ಟೆಬಲ್ ಒಬ್ಬರನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ. ಭಾನುವಾರ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿಯುತ್ತಿದ್ದಾಗಲೇ ರಿಯಾಜ್ ಪೊಲೀಸರಿಗೆ ಸಿಕ್ಕಿಬಿದ್ದ. ಈ ಸಂದರ್ಭ ಬಂಧಿಸಲು ಮುಂದಾದ ಪೊಲೀಸರೊಂದಿಗೆ ರಿಯಾಜ್ ಘರ್ಷಣೆಗಿಳಿದು ಗಾಯಗೊಂಡ. ಆ ಬಳಿಕ ಪೊಲೀಸರು ರಿಯಾಜ್ ನನ್ನು ಸರಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಸೋಮವಾರ ಬೆಳಗ್ಗೆ ರಿಯಾಜ್ ತಪ್ಪಿಸಿಕೊಳ್ಳಲು ಯತ್ನಿಸಿ, ಕಾವಲಿಗಿದ್ದ ಕಾನ್‌ಸ್ಟೆಬಲ್‌ನ ಸರ್ವಿಸ್ ಬಂದೂಕನ್ನೇ ಕಸಿದುಕೊಳ್ಳಲು ಪ್ರಯತ್ನಿಸಿದ. ಆಗ, ಆಸ್ಪತ್ರೆ ಸಿಬ್ಬಂದಿ ಮತ್ತು ರೋಗಿಗಳನ್ನು ರಕ್ಷಿಸಲು ಪೊಲೀಸರು ಗುಂಡು ಹಾರಿಸಿದರು. ಈ ಸಂದರ್ಭ ರಿಯಾಜ್ ಸಾವನ್ನಪ್ಪಿದ ಎಂದು ತಿಳಿಸಿದ್ದಾರೆ.

96ಲಕ್ಷ ನಕಲಿ ಮತದಾರ ಸೇರ್ಪಡೆ: ರಾಜ್ ಠಾಕ್ರೆ

ಮುಂಬೈ: ಮಹಾರಾಷ್ಟ್ರದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮುನ್ನ ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಸೋಮವಾರ ಕಿಡಿಕಾರಿದ್ದಾರೆ. ರಾಜ್ಯದಲ್ಲಿ 96 ಲಕ್ಷ ನಕಲಿ ಮತದಾರರನ್ನು ಸೇರ್ಪಡೆ ಮಾಡಲಾಗಿದೆ ಎಂಬ ಮಾಹಿತಿ ಸಿಕ್ಕಿದೆ ಎಂದು ರಾಜ್ ಠಾಕ್ರೆ ಆರೋಪಿಸಿದ್ದಾರೆ. ಇದು ಮಹಾರಾಷ್ಟ್ರ ಮತ್ತು ದೇಶದ ಮತದಾರರಿಗೆ ಮಾಡಿದ ಅವಮಾನ. ನಕಲಿ ಮತದಾರರನ್ನು ತಕ್ಷಣವೇ ಮತದಾರರ ಪಟ್ಟಿಯಿಂದ ತೆಗೆದು ಹಾಕಬೇಕು. ರಾಜ್ಯ ಮತ್ತು ಮುಂಬೈ ಮಹಾನಗರದ ಮತದಾರರ ಪಟ್ಟಿ ಶುದ್ಧವಾಗುವವರೆಗೂ ಮಹಾರಾಷ್ಟ್ರದಲ್ಲಿ ಚುನಾವಣೆ ನಡೆಸಬಾರದು ಎಂದು ಚುನಾವಣಾ ಆಯೋಗವನ್ನು ಒತ್ತಾಯಿಸುವೆ ಎಂದು ಠಾಕ್ರೆ ಹೇಳಿದ್ದಾರೆ. ಶಿವಸೇನೆ(ಉದ್ಧವ್ ಬಣ) ಸಂಸದ ಸಂಜಯ್ ರಾವತ್, ರಾಜ್ ಠಾಕ್ರೆ ಹೇಳಿಕೆ ಬೆಂಬಲಿಸಿದ್ದಾರೆ.

ಹರಳೆಣ್ಣೆ ದೀಪದಲ್ಲಿ ಕಡಿಮೆ ಹೊಗೆ

ಚೆನ್ನೈ: ಬೆಳಕಿನ ಹಬ್ಬ ದೀಪಾವಳಿಯಲ್ಲಿ ಹಲವು ರೀತಿಯ ದೀಪಗಳನ್ನು ಬೆಳಗಿಸಬಹುದು. ಆದರೆ ಹರಳೆಣ್ಣೆ ದೀಪ ಕಡಿಮೆ ಹೊಗೆ ಹೊರಹಾಕುತ್ತದೆ. ಹಾಗಾಗಿ ಹಣತೆ, ದೀಪಗಳಿಗೆ ಹರಳಿನಿಂದ ತೆಗೆದ ಎಣ್ಣೆಯನ್ನು ಬಳಸುವುದೇ ಉಚಿತ. ಎಲ್ಲರೂ ಈ ದೀಪಾವಳಿ ಹಬ್ಬದಲ್ಲಿ ಹರಳೆಣ್ಣೆಯಿಂದಲೇ

ದೀಪವನ್ನು ಬೆಳಗಿಸಿ ಎಂದು ಇಶಾ ಫೌಂಡೇಷನ್ ಮುಖ್ಯಸ್ಥ ಸದ್ಗುರು ಜಗ್ಗಿ ವಾಸುದೇವ್ ಮಹತ್ವದ ಸಂದೇಶ ನೀಡಿದ್ದಾರೆ. ಜನರು ಹಣತೆ ಹಚ್ಚುವುದರ ಜತೆಗೇ ತಮ್ಮೊಳಗಿನ ಬೆಳಕನ್ನು ಉದ್ದೀಪಿಸಿ ಬೆಳಗುವಂತೆ ಮಾಡಬೇಕು ಎಂದೂ ಕಿವಿಮಾತು ಹೇಳಿದ್ದಾರೆ. ದೀಪಾವಳಿ ಆಚರಣೆ ಹಿಂದೆ ವೈಜ್ಞಾನಿಕ ಕಾರಣವೂ ಇದೆ. ಹಬ್ಬದ ಈ ಸಮಯದಲ್ಲಿ ಉತ್ತರ ಗೋಳಾರ್ಧ ಸೂರ್ಯನಿಂದ ದೂರ ಸರಿಯುತ್ತದೆ. ಅದಕ್ಕಾಗಿಯೇ ಹವಾಮಾನ ತಂಪಾಗುತ್ತದೆ ಮತ್ತು ಸೂರ್ಯನ ಬೆಳಕು ಕಡಿಮೆಯಾಗುತ್ತದೆ. ಹಾಗಾಗಿ ಜನರು ಸ್ವಲ್ಪ ಆಲಸ್ಯ, ದಣಿವು, ಮಾನಸಿಕವಾಗಿ ಆತಂಕ ಅನುಭವಿಸುತ್ತಾರೆ. ಹಾಗಾಗಿಯೇ ದೀಪಗಳನ್ನು ಬೆಳಗಿಸುವ ಸಂಪ್ರದಾಯ ಇದಾಗಿದೆ ಎಂದು ಸದ್ಗುರು ವಿವರಿಸಿದ್ದಾರೆ.

{ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್} ಮಾಜಿ ಸಂಸದೆ

ಮಕ್ಕಳು ಪೋಷಕರ ಮಾತು ಕೇಳದೇ ತಮ್ಮಿಷ್ಟದಂತೆ ಅನ್ಯಧರ್ಮದ ಯುವಕ-ಯುವತಿಯನ್ನು ಮದುವೆಯಾಗಲು ಮುಂದಾದರೆ ಪೋಷಕರು ಅಂಥ ಮಕ್ಕಳ ಕಾಲು ಮುರಿಯಬೇಕು. ಮಕ್ಕಳು ಸಂಪ್ರದಾಯ, ನೈತಿಕ ಮೌಲ್ಯ ಅರ್ಥಮಾಡಿಕೊಳ್ಳದಿದ್ದರೆ ಕಟ್ಟುನಿಟ್ಟು ಪಾಠ ಕಲಿಸಬೇಕು. ಮಕ್ಕಳ ಭವಿಷ್ಯ, ಯೋಗಕ್ಷೇಮಕ್ಕಾಗಿ ಕಠಿಣ ಕ್ರಮ ಅಗತ್ಯ.



ಐಎನ್‌ಎಸ್ ವಿಕ್ರಾಂತ್‌ನಲ್ಲಿ ದೀಪಾವಳಿ ಸಂಭ್ರಮ | ಯೋಧರ ಯೋಗಕ್ಷೇಮ ವಿಚಾರಿಸಿ, ಸಿಹಿ ತಿನಿಸಿ ಶುಭ ಕೋರಿದ ಪ್ರಧಾನಿ

ನೌಕಾಪಡೆ ಯೋಧರ ಜತೆ ಪ್ರಧಾನಿ ಮೋದಿ ದೀಪಾವಳಿ

ದೆಹಲಿ: ಮೊದಲ ದೇಶೀ ನಿರ್ಮಿತ, ಭಾರತದ ಬಲು ಶಕ್ತಿಶಾಲಿ ವಿಮಾನವಾಹಕ ಸಮರ ನೌಕೆ 'ಐಎನ್‌ಎಸ್ ವಿಕ್ರಾಂತ್'ನಲ್ಲಿ ಭಾರತೀಯ ನೌಕಾಪಡೆ ಯೋಧರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಈ ವರ್ಷದ ದೀಪಾವಳಿ ಹಬ್ಬವನ್ನು ಬಲು ವಿಶಿಷ್ಟವಾಗಿ ಆಚರಿಸಿ ಸಂಭ್ರಮಿಸಿದರು. ಯೋಧರಿಗೆ ಪ್ರಧಾನಿ ಮೋದಿ ಅವರು ಖುದ್ದು ಸಿಹಿ ತಿನಿಸಿ ಖುಷಿಪಟ್ಟರು.

- **ಕೇಂದ್ರದಲ್ಲಿನ ಎನ್‌ಡಿಎ ಸರಕಾರ ಭಾರತವನ್ನು ಜಗತ್ತಿನ ಅತಿದೊಡ್ಡ ಆಯುಧ ರಫ್ತು ದೇಶವನ್ನಾಗಿಸುವ ಗುರಿ ಹೊಂದಿದೆ.**
- **ಅನಂತ ಶಕ್ತಿಗಳ ಸಾಕಾರವೆನಿಸಿದ ಬೃಹತ್ ಗಾತ್ರದ ಶಕ್ತಿಶಾಲಿ ಯುದ್ಧ ನೌಕೆ 'ಐಎನ್‌ಎಸ್ ವಿಕ್ರಾಂತ್' ನಮ್ಮಲ್ಲಿದೆ.**

ಪ್ರತಿಯೊಬ್ಬರೂ ತಮ್ಮ ಕುಟುಂಬದ ಸದಸ್ಯರೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸಲು ಇಷ್ಟಪಡುತ್ತಾರೆ. ನನಗೂ ಹಾಗೆಯೇ ಅನಿಸುತ್ತದೆ. ಭಾರತ ಮಾತೆಯನ್ನು ಸದಾ ಕಾಲ ಕಾಯುವ ಯೋಧರೇ ನನ್ನ ಕುಟುಂಬ. ಹಾಗಾಗಿಯೇ ನಾನು ಪ್ರತಿ ವರ್ಷದ ದೀಪಾವಳಿಯನ್ನು ನಮ್ಮ ರಾಷ್ಟ್ರವನ್ನು ಸುರಕ್ಷಿತವಾಗಿರಿಸುವ ನಮ್ಮ ಸೈನ್ಯ ಮತ್ತು ಭದ್ರತಾ ಸಿಬ್ಬಂದಿಗಳ ಜತೆಗೇ ಆಚರಿಸುತ್ತೇನೆ ಎಂದು ಪ್ರಧಾನಿ ಮೋದಿ ತುಸು ಭಾವುಕವಾಗಿ ಮಾತನಾಡಿದರು.

ಗೋವಾ ಮತ್ತು ಕಾರವಾರದ ಪಶ್ಚಿಮ ಸಮುದ್ರತೀರದಲ್ಲಿ ನಮ್ಮ ಧೈರ್ಯಶಾಲಿ ನೌಕಾಪಡೆಯ ಸಿಬ್ಬಂದಿಗಳಲ್ಲಿ ಒಬ್ಬನಾಗಲು, ಭಾರತೀಯ ನೌಕಾಪಡೆಯ ಹೆಮ್ಮೆಯ ಹಡಗು ಐಎನ್‌ಎಸ್ ವಿಕ್ರಾಂತ್‌ನಲ್ಲಿ ಅವರೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸಲು ನನಗೆ ಬಹಳ ಸಂತೋಷವಾಗಿದೆ ಎಂದು ಮೋದಿ ಹೇಳಿದರು. ಸೈನಿಕರನ್ನು ಪ್ರೀತಿಯಿಂದ ಮಾತನಾಡಿಸಿದರು. ಸಿಹಿ ತಿಂಡಿಯನ್ನು ಸೈನಿಕರ ಬಾಯಿಗಿರಿಸಿದರು. ಕೆಲವು ಯೋಧರ ಹೆಗಲು ಮುಟ್ಟಿ ಯೋಗ ಕ್ಷೇಮ ವಿಚಾರಿಸಿದರು. ಅವರ ಊರು, ಮನೆ, ಅಪ್ಪ-ಅಮ್ಮ, ಕುಟುಂಬ ಸದಸ್ಯರ ಕುರಿತು ಕೇಳಿ ಮಾಹಿತಿ ಪಡೆದುಕೊಂಡರು. ಕುಟುಂಬದ ಹಿರಿಯರೊಬ್ಬರು ಕಿರಿಯ ಸದಸ್ಯರ ಜತೆಗೂಡಿ ಹಬ್ಬ ಆಚರಿಸಿದಂತೆ ಪ್ರಧಾನಿ ಮೋದಿ ಸಂಭ್ರಮಿಸಿದರು. ನೀವುಗಳೇ ನನ್ನ ಕುಟುಂಬ. ನಿಮ್ಮೊಂದಿಗೆ ಹಬ್ಬ ಆಚರಿಸುತ್ತಿರುವುದು ನನಗೆ ಅತೀವ ಸಂತಸ ತಂದಿದೆ. ನಿಮ್ಮೊಂದಿಗೆ ಉತ್ತಮ ಸಮಯವನ್ನು ಕಳೆದಿದ್ದೇನೆ. ನಿಮಗೆಲ್ಲಾ ಧನ್ಯವಾದ ಎಂದು ಹೇಳಿದರು.

ಭಾರತೀಯ ನೌಕಾಪಡೆಯ ಐಎನ್‌ಎಸ್ ವಿಕ್ರಾಂತ್ ಹಡಗಿನಲ್ಲಿ ಪ್ರಧಾನಿ ಮೋದಿ ದೀಪಾವಳಿ.

ಬ್ರಹ್ಮೋಸ್, ಆಕಾಶ್‌ಗೆ ವಿಶ್ವಾದ್ಯಂತ ಬೇಡಿಕೆ

ಆಪರೇಷನ್ ಸಿಂದೂರ್ ಸಮಯದಲ್ಲಿ ಬ್ರಹ್ಮೋಸ್ ಮತ್ತು ಆಕಾಶ್ ಮೊದಲಾದದ ಭಾರತದ ಕ್ಷಿಪಣಿಗಳು ತಮ್ಮ ಸಾಮರ್ಥ್ಯವನ್ನು ಜಗತ್ತಿನೆದುರು ಸಾಬೀತುಪಡಿಸಿವೆ. ಹಾಗಾಗಿಯೇ ವಿಶ್ವದ ಹಲವು ದೇಶಗಳು ಈ ಕ್ಷಿಪಣಿಗಳನ್ನು ಖರೀದಿಸಲು ಆಸಕ್ತಿ ಹೊಂದಿವೆ ಎಂದು ಪ್ರಧಾನಿ ಮೋದಿ ಹೇಳಿದರು. ನಮ್ಮ ದೇಶದ ಸಶಸ್ತ್ರ ಪಡೆಗಳಲ್ಲಿ ಬಳಸಲಾಗುವ ಯುದ್ಧ ಉಪಕರಣಗಳ ಗಮನಿಸಿರುವೆ. ಈ ಬೃಹತ್ ಯುದ್ಧ ಹಡಗುಗಳು, ಗಾಳಿಗಿಂತ ವೇಗವಾಗಿ ಚಲಿಸುವ ಯುದ್ಧ ವಿಮಾನಗಳು, ಜಲಾಂತರ್ಗಾಮಿಗಳು ಬಹಳ ಶಕ್ತಿಶಾಲಿಯಾಗಿವೆ. ಆದರೆ ಅವುಗಳನ್ನು ನಿಜವಾಗಿಯೂ ಜಗತ್ತಿನೆದುರು ಪ್ರಭಾವಶಾಲಿಯಾಗಿ ತೋರಿಸಿರುವುದು ನಮ್ಮ ಯೋಧರ ಧೈರ್ಯ ಎಂದು ಪ್ರಶಂಸಿಸಿದರು. ಭಾರತೀಯ ಸೇನೆಯ ಮೂರೂ ಪಡೆಗಳ ನಡುವಿನ ಅಸಾಧಾರಣ ಸಮನ್ವಯದಿಂದಾಗಿಯೇ ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಪಾಕಿಸ್ತಾನವನ್ನು ಮಣಿಸಲು, ಸರಾಗವಾಗಿ ಗೆಲುವು ಸಾಧಿಸಲು ಸಾಧ್ಯವಾಯಿತು ಎಂದು ಮೋದಿ ಬಣ್ಣಿಸಿದರು.

ಭದ್ರತಾ ಪಡೆಗಳ ಶೌರ್ಯ-ಸಹಕಾರದಿಂದ ದೇಶದಲ್ಲಿದ್ದ ನಕ್ಸಲರನ್ನು ನಿರ್ನಾಮ ಮಾಡಲಾಗಿದೆ. ನಕ್ಸಲರ ಹಿಡಿತದಲ್ಲಿ ಕೆಂಪಾಗಿದ್ದ ಪ್ರದೇಶಗಳ ಜನರಿಗೆ ಮರಳಿ ಸ್ವಾತಂತ್ರ್ಯ ದೊರಕಿಸಿಕೊಡಲು ಸಾಧ್ಯವಾಗಿದೆ. ದಶಕದ ಹಿಂದೆ ದೇಶದ 125 ಜಿಲ್ಲೆಗಳನ್ನು ನಕ್ಸಲ್ ಪೀಡಿತ ಎಂದು ಹಿಂದಿನ ಸರಕಾರ ಘೋಷಿಸಿತ್ತು. ಆದರೆ ಈಗ ಮಹಾರಾಷ್ಟ್ರ ಮತ್ತು ಛತ್ತೀಸ್‌ಗಢ ರಾಜ್ಯದ ಕೇವಲ 3 ಜಿಲ್ಲೆಗಳಲ್ಲಿ ಮಾತ್ರವೇ ನಕ್ಸಲರ ಚಟುವಟಿಕೆ ಇದೆ. ದೇಶದಲ್ಲಿದ್ದ ನಕ್ಸಲರ ವಿರುದ್ಧ ಶೇ.90ರಷ್ಟು ಯಶಸ್ಸು ಸಾಧಿಸಲಾಗಿದೆ. ನಕ್ಸಲರ ಹಿಂಸಾಚಾರವನ್ನು ದೇಶದಿಂದ ಪೂರ್ಣ ನಿವಾರಿಸುವ ವಿಶ್ವಾಸವಿದೆ. ಅದು ಶೀಘ್ರದಲ್ಲೇ ನೆರವೇರಲಿದೆ.

-ನರೇಂದ್ರ ಮೋದಿ, ಪ್ರಧಾನಿ

ಪ್ರಧಾನಿಗಾಗಿ ಆಪರೇಷನ್ ಸಿಂದೂರ್ ಹಾಡು ಹಾಡಿದ ನೌಕಾಪಡೆ ಸಿಬ್ಬಂದಿ

ತಮ್ಮೊಂದಿಗೆ ಈ ಬಾರಿಯ ದೀಪಾವಳಿ ಹಬ್ಬ ಆಚರಿಸಲು ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಂಡು ಭಾರತೀಯ ನೌಕಾಪಡೆಯ ಬಹುಮುಖ್ಯ ಯುದ್ಧ ನೌಕೆಯಾದ 'ಐಎನ್‌ಎಸ್ ವಿಕ್ರಾಂತ್'ನ ಸಿಬ್ಬಂದಿ ಬಹಳ ಖುಷಿಪಟ್ಟರು. ಅದೇ ಖುಷಿಯಲ್ಲಿ ಪ್ರಧಾನಿ ಮೋದಿ ಅವರಿಗಾಗಿ 'ಕಸಮ್ ಸಿಂದೂರ್ ಕಿ' ಎಂಬ ಹೊಸ ಹಾಡನ್ನು ಬರೆದಿಟ್ಟುಕೊಂಡಿದ್ದ ನೌಕಾಪಡೆಯ ಸಿಬ್ಬಂದಿಗಳೆಲ್ಲರೂ ಒಂದೇ ರಾಗದಲ್ಲಿ ಪ್ರಧಾನಿ ಮೋದಿ ಅವರೆದುರು ಹಾಡಿ ಸಂಭ್ರಮಿಸಿದರು.
ಇದು ಪಹಲ್ಗಾಮ್‌ನಲ್ಲಿನ ಏ.22ರ ಭಯೋತ್ಪಾದಕ ದಾಳಿಗೆ ಪ್ರತಿಕಾರವಾಗಿ ಭಾರತದ ಸೇನಾಪಡೆಗಳು ಒಗ್ಗೂಡಿ ಕೈಗೊಂಡ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ಕುರಿತಾದ ಹಾಡಾಗಿತ್ತು ಎಂಬುದು ಉಲ್ಲೇಖಾರ್ಹ. ಈ ಹಾಡು ಹಾಡಿದ ಐಎನ್‌ಎಸ್ ವಿಕ್ರಾಂತ್ ಯೋಧರ ಸಂಭ್ರಮದ ದೃಶ್ಯ ಜಾಲತಾಣದಲ್ಲಿ ವೈರಲ್ ಆಗಿದೆ.
'ಈ ಸಂಜೆ ಐಎನ್‌ಎಸ್ ವಿಕ್ರಾಂತ್‌ನಲ್ಲಿ ದೀಪಾವಳಿ ಹಬ್ಬರ ಹಿನ್ನೆಲೆಯಲ್ಲಿ ಯೋಧರು ಹಾಡಿದ ಹಾಡು, ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಾನು ಸದಾ ನೆನಪಿಟ್ಟುಕೊಳ್ಳುತ್ತೇನೆ. ಮುಖ್ಯವಾಗಿ ಯೋಧರೇ ರಚಿಸಿ ಹಾಡಿದ ಈ ಹಾಡು ಮಾತ್ರ ಸದಾ ನನ್ನ ನೆನಪಿನಲ್ಲಿ ಉಳಿಯುತ್ತದೆ. ನೌಕಾಪಡೆ ಸಿಬ್ಬಂದಿ ನಿಜವಾಗಿಯೂ ಸೃಜನಶೀಲರು ಮತ್ತು ಬಹುಮುಖ ಪ್ರತಿಭೆಗಳು ಎಂಬುದರಲ್ಲಿ ಅನುಮಾನವೇ ಇಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು 'ಎಕ್ಸ್' ಸಂದೇಶದಲ್ಲಿ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಐಎನ್‌ಎಸ್ ನೌಕಾಪಡೆಯಲ್ಲಿ ಯೋಧರಿಗೆ ಸಿಹಿ ತಿನಿಸಿ ಶುಭ ಕೋರಿದ ಮೋದಿ.

ತಿರುಪತಿ ಮೃಗಾಲಯ: ಹುಲಿ ಸಮೀರ್ ಸಾವು

ತಿರುಪತಿ: ಆಂಧ್ರ ಪ್ರದೇಶದಲ್ಲಿ ದೇಶ-ವಿದೇಶದ ಪ್ರವಾಸಿಗರಿಗೆ ಬಲು ಆಕರ್ಷಣೆಯ ಸ್ಥಳವಾಗಿದ್ದ ಶ್ರೀ ವೆಂಕಟೇಶ್ವರ ವನ್ಯಮೃಗ ಧಾಮದಲ್ಲಿ 19 ವರ್ಷದ ಬಿಳಿ ಹುಲಿ 'ಸಮೀರ್' ಸಾವಿಗೀಡಾಗಿದೆ.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಸಮೀರ್ ಬಹಳ ಕೃಶವಾಗಿದ್ದ. ವೃದ್ಧಾಪ್ಯದ ಕಾರಣ ಸಹಜ ರೀತಿ ಸಾವಿಗೀಡಾದ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅಪರೂಪದ ಬಿಳಿ ಹುಲಿ ಸಮೀರ್ ಸಾವಿಗೆ ಮೃಗಾಲಯದ ಅಧಿಕಾರಿಗಳು, ಸಿಬ್ಬಂದಿ ವರ್ಗ ತೀವ್ರ ನೋವು ತೋಡಿಕೊಂಡಿದ್ದಾರೆ. 2011ರಲ್ಲಿ ಈ ಬಿಳಿ ಹುಲಿಗೆ ಐದು ವರ್ಷ ಆಗಿದ್ದಾಗ ಹೈದರಾಬಾದ್‌ನ ನೆಹರು ವನ್ಯಮೃಗಗಳ ಉದ್ಯಾನದಿಂದ ತಿರುಪತಿಯ ಮೃಗಾಲಯಕ್ಕೆ ತರಲಾಗಿತ್ತು. ವೃದ್ಧಾಪ್ಯದ ಕಾರಣ ಸಮೀರ್ ನತ್ತ ತೀವ್ರ ನಿಗಾ ಇರಿಸಲಾಗಿತ್ತು. 3 ತಿಂಗಳಿಂದ ಅದರ ಆರೋಗ್ಯ ಕ್ಷೀಣಿಸುತ್ತಾ ಬಂದಿತು. ಪರಿಣಾಮ ಸಮೀರ್ ಪೂರ್ಣ ನಿತ್ರಾಣಗೊಂಡ. ಮೃಗಾಲಯದ ಪಶುವೈದ್ಯಕೀಯ ಮತ್ತು ಪಶುಪಾಲನಾ ಸಿಬ್ಬಂದಿಯಿಂದ ದೈನಂದಿನ ಮೇಲ್ವಿಚಾರಣೆ ಮತ್ತು ಕಾಳಜಿಯ ಹೊರತಾಗಿಯೂ, ಸಮೀರ್ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಮೃಗಾಲಯದ ಮೇಲ್ವಿಚಾರಕ ಸೆಲ್ವಂ ಹೇಳಿದ್ದಾರೆ. ತಿರುಪತಿಯ ಪಶು ವೈದ್ಯಕೀಯ ವಿವಿಯ ರೋಗಶಾಸ್ತ್ರಜ್ಞರು ಮರಣೋತ್ತರ ಪರೀಕ್ಷೆ ನಡೆಸಿದ್ದು, ವಯೋಸಹಜ ಕಾಯಿಲೆಗಳೇ ಸಾವಿಗೆ ಕಾರಣ ಎಂಬುದು ದೃಢಪಟ್ಟಿದೆ ಎಂದು ಕ್ಯುರೇಟರ್ ತಿಳಿಸಿದ್ದಾರೆ.

ಭಾರತಕ್ಕೆ ಮತ್ತೊಂದು ಟ್ರಂಪ್ ಟಾರಿಫ್ ಬೆದರಿಕೆ

ಭಾರತ ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವವರೆಗೂ ಸುಂಕ ಹೆಚ್ಚಳ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿವಿಧ ದೇಶಗಳ ಮೇಲಿನ ಸುಂಕ ಸಮರ ಮುಂದುವರೆಸಿದ್ದು, ಭಾರತಕ್ಕೆ

ಮತ್ತಷ್ಟು ದಂಡ ಸುಂಕ ಹಾಕುವ ಬೆದರಿಕೆ ಹಾಕಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಜತೆ ಮಾತನಾಡಿರುವೆ. ಭಾರತ ರಷ್ಯಾದಿಂದ ತೈಲ ಖರೀದಿ ನಿಲ್ಲಿಸಲಿದೆ ಎಂದು ಹೇಳಿದ್ದ ಟ್ರಂಪ್, ತಮ್ಮ ಮಾತು ನಡೆಯುತ್ತಿಲ್ಲ ಎಂಬ ಕಾರಣಕ್ಕೆ ಭಾರತ 'ಮಾಸಿವ್ ಟ್ಯಾರಿಫ್'(ಭಾರೀ ತೆರಿಗೆ) ಪಾವತಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. 'ಏರ್‌ಫೋರ್ಸ್ 1' ವಿಮಾನದಲ್ಲಿ ಸುದ್ದಿ ಗಾರರ ಜತೆ ಮಾತನಾಡಿದ ಟ್ರಂಪ್, ಮೋದಿ ಅವರು ರಷ್ಯಾ ತೈಲ ಖರೀದಿಸುವುದಿಲ್ಲ ಎಂದಿದ್ದರು. ಆದರೆ ಅವರು ಹಾಗೆ ನಡೆದುಕೊಳ್ಳದೆ, ಖರೀದಿ ಮುಂದುವರಿಸಿದ್ದಾರೆ. ಹಾಗಾಗಿ, ಭಾರತದ ಮೇಲೆ ಮತ್ತೆ ದೊಡ್ಡ ಮಟ್ಟದ ತೆರಿಗೆ ವಿಧಿಸಲಾಗುವುದು ಎಂದು ಹೇಳಿದ್ದಾರೆ.

ಟ್ರಂಪ್ ಮತ್ತು ಮೋದಿ ಅವರ ಮಧ್ಯೆ ಇತ್ತೀಚೆಗೆ ಯಾವುದೇ ಮಾತುಕತೆ ನಡೆದಿಲ್ಲ ಎಂದು 3 ದಿನದ ಹಿಂದೆ ಭಾರತ ಸರಕಾರ ಸ್ಪಷ್ಟಪಡಿಸಿತ್ತು. ಈ ಬಗ್ಗೆ ಸುದ್ದಿಗಾರರ ಪ್ರಶ್ನೆ ಮಾಡಿದ್ದಕ್ಕೆ ಪ್ರತಿಕ್ರಿಯಿಸಿದ ಟ್ರಂಪ್, 'ಅವರು ನನ್ನ ಮಾತನ್ನು ನಿರಾಕರಿಸಬಹುದು. ಆದರೆ ಹಾಗೆ ಮಾಡುವುದರಿಂದ ಅವರು ದುಪ್ಪಟ್ಟು ತೆರಿಗೆ ಕಟ್ಟಬೇಕಾಗುತ್ತದೆ. ಆದರೆ, ಅವರು ಅದನ್ನು ಬಯಸುವುದಿಲ್ಲ' ಎಂದು ಹೇಳಿದ್ದಾರೆ. ಟ್ರಂಪ್ ಅವರ ಹೊಸ ಬೆದರಿಕೆಗಳು ಭಾರತ-ಅಮೆರಿಕ ಸಂಬಂಧವನ್ನು ಮತ್ತಷ್ಟು ಸಡಿಲಗೊಳಿಸಬಹುದಾಗಿದೆ. ಅಲ್ಲದೇ, ಹೊಸ ಸವಾಲುಗಳನ್ನು ಸೃಷ್ಟಿಸಬಹುದಾಗಿದೆ. ಆದರೆ, ಭಾರತ ಸರಕಾರ ತನ್ನ ದೇಶವಾಸಿಗಳ ಹಿತದೃಷ್ಟಿಯಿಂದ ಕಡಿಮೆ ಬೆಲೆಗೆ ಸಿಗುತ್ತಿರುವ ತೈಲವನ್ನು ರಷ್ಯಾದಿಂದ ಖರೀದಿಸುವುದನ್ನು ಮುಂದುವರಿಸಲಿದೆ ಎಂಬುದು ಸ್ಪಷ್ಟ.

ದೆಹಲಿ ಅಗ್ನಿಶಾಮಕ ದಳ ರಜೆ ರದ್ದು

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಈ ಬಾರಿಯ ದೀಪಾವಳಿ ಹಬ್ಬ ಆಚರಣೆಗೆ ಹಸಿರು ಪಟಾಕಿ ಮಾರಾಟ ಮತ್ತು ಬಳಸುವುದಕ್ಕೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ದೆಹಲಿ ನಿವಾಸಿಗಳು ಪಟಾಕಿ ಹೊಡೆಯಲು ಸಜ್ಜಾಗಿರುವುದರಿಂದ ದೆಹಲಿ ಅಗ್ನಿಶಾಮಕ ದಳ ಮುನ್ನೆಚ್ಚರಿಕೆ ಕ್ರಮವಾಗಿ ಹೈ ಅಲರ್ಟ್ ಘೋಷಿಸಿದೆ. ಅಗ್ನಿಶಾಮಕ ದಳದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ರಜೆಯನ್ನು ರದ್ದುಗೊಳಿಸಿ ದಿನದ 24 ಗಂಟೆಯೂ ಸೇವೆ ಸಜ್ಜಾಗಿರುವಂತೆ ಸೂಚನೆ ನೀಡಲಾಗಿದೆ. ಕಳೆದ ವರ್ಷದ ದೀಪಾವಳಿಯಲ್ಲಿ ನಿಯಂತ್ರಣ ಕೊಠಡಿಗೆ 200ಕ್ಕೂ ಹೆಚ್ಚು ಬೆಂಕಿ ಅವಘಡದ ತುರ್ತು ಕರೆಗಳು ಬಂದಿದ್ದವು. ದೀಪಾವಳಿ ಹಬ್ಬದ ಸಂದರ್ಭದಲ್ಲಿ ದೆಹಲಿ ನಗರದಲ್ಲಿ ಎಲ್ಲೇ ಬೆಂಕಿ ಅವಘಡವಾದರೂ, ತುರ್ತು ಪರಿಸ್ಥಿತಿ ಎದುರಾದರೂ ಅದನ್ನು ಸಮರೋಪಾದಿಯಲ್ಲಿ ನಿರ್ವಹಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ದೆಹಲಿಯ 100ಕ್ಕೂ ಹೆಚ್ಚು ಸ್ಥಳಗಳಲ್ಲಿ ಮುಂಜಾಗ್ರತೆ ಕ್ರಮವಾಗಿ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಹಿರಿಯ ಅಗ್ನಿಶಾಮಕ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಇಂಡಿಗೊ ಯಾತ್ರಿ ಪವರ್ ಬ್ಯಾಂಕಲ್ಲಿ ಬೆಂಕಿ

ದೆಹಲಿ: ದೆಹಲಿಯಿಂದ ನಾಗಾಲ್ಯಾಂಡ್ ರಾಜ್ಯದ ದಿಮಾಪುರ್‌ನತ್ತ ಹೊರಟಿದ್ದ ಇಂಡಿಗೊ ಏರ್‌ಲೈನ್ಸ್‌ನ 6ಇ 2107 ನಂಬರ್ ವಿಮಾನದೊಳಗೆ ಹಾರಾಟದ ವೇಳೆಯಲ್ಲೇ ಅಗ್ನಿ ಅವಘಡ ಸಂಭವಿಸುವುದು ಸ್ವಲ್ಪದರಲ್ಲೇ ತಪ್ಪಿದೆ. ಪ್ರಯಾಣಿಕರೊಬ್ಬರ ಬಳಿಯಿದ್ದ ಗ್ಯಾಜೆಟ್ ಚಾರ್ಜರ್ 'ಪವರ್ ಬ್ಯಾಂಕ್' ಸಾಧನದಲ್ಲಿ ಸಣ್ಣದಾಗಿ ಬೆಂಕಿಯ ಕಿಡಿ ಕಾಣಿಸಿಕೊಂಡು ಎಲ್ಲರನ್ನೂ ಆತಂಕಕ್ಕೆ ದೂಡಿದೆ. ವಿಮಾನದ ಸಿಬ್ಬಂದಿ ತಕ್ಷಣವೇ ಕ್ರಮ ತೆಗೆದುಕೊಂಡು, ವಿಮಾನವನ್ನು ಮರಳಿ ದೆಹಲಿ ವಿಮಾನ ನಿಲ್ದಾಣಕ್ಕೆ ತಂದಿದ್ದಾರೆ. ವಿಮಾನದ ಸೀಟ್ ಬ್ಯಾಕ್ ಪಾಕೆಟ್‌ನಲ್ಲಿದ್ದ ಸಾಧನವನ್ನು ವಿಮಾನದಿಂದ ಹೊರತೆಗೆಯಲಾಗಿದೆ. ವಿಮಾನ ಹಾಗೂ ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಏರ್‌ಲೈನ್ಸ್ ವಕ್ತಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಗಡಿಯಲ್ಲಿ ಬಿಎಸ್‌ಎಫ್ ಯೋಧೆಯರ ದೀಪಾವಳಿ

ಜೈಸಲ್ಮೇರ್: ರಾಜಸ್ಥಾನದ ಭಾಗದಲ್ಲಿರುವ ಭಾರತ-ಪಾಕಿಸ್ತಾನ ಗಡಿಯಲ್ಲಿ ದೇಶದ ಕಾವಲು ಕಾಯುತ್ತಿರುವ ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ಯೋಧೆಯರೂ ಕುಟುಂಬದಿಂದ ದೂರವಾಗಿದ್ದರೂ 'ದೀಪಾವಳಿ' ಆಚರಿಸುವುದನ್ನು ಮರೆತಿಲ್ಲ.

ಗಡಿ ಕಾಯುವ ಕರ್ತವ್ಯದ ಮಧ್ಯೆಯೇ ಸೋಮವಾರ ರಾತ್ರಿ ಭಾರತ-ಪಾಕಿಸ್ತಾನ ನಡುವಿನ ಅಂತಾರಾಷ್ಟ್ರೀಯ ಗಡಿ ಭಾಗದಲ್ಲಿ ರಾಷ್ಟ್ರಧ್ವಜ ಹಾರಾಡಿಸಿ, ಮೊಂಬತ್ತಿ ಬೆಳಗಿಸಿ, ಪಟಾಕಿ ಸಿಡಿಸಿ, ಸಿಹಿ ಹಂಚಿಕೊಂಡು ತಮ್ಮದೇ ಆದ ರೀತಿಯಲ್ಲಿ ದೀಪಾವಳಿ ಹಬ್ಬವನ್ನು ಆಚರಿಸಿದ್ದಾರೆ.

ಈ ಸಂದರ್ಭ ಬಿಎಸ್‌ಎಫ್ 122 ಬೆಟಾಲಿಯನ್‌ನ ಕಮಾಂಡೆಂಟ್ ಮುಕೇಶ್ ಪನ್ವಾರ್ ಅವರೂ ಯೋಧೆಯರ ಜತೆಗೂಡಿ ದೀಪಾವಳಿ ಆಚರಣೆ ಮಾಡಿದ್ದಾರೆ. ಮನೆ-ಕುಟುಂಬ ಸದಸ್ಯರಿಂದ ಬಹಳ ದೂರದಲ್ಲಿ ಅಂತಾರಾಷ್ಟ್ರೀಯ ಗಡಿಯಲ್ಲಿ ಇದ್ದರೂ, ಸಹೋದ್ಯೋಗಿ ಯೋಧೆಯರ ಜತೆಗೂಡಿದ್ದರಿಂದ ಕುಟುಂಬ ಸದಸ್ಯರ ಜತೆಗೇ ದೀಪಾವಳಿ ಆಚರಿಸಿದಷ್ಟು ಖುಷಿಯಾಯಿತು. ಬಿಎಸ್‌ಎಫ್ ಪ್ರಧಾನ ಕಚೇರಿಯಿಂದ ಪಟಾಕಿ, ದೀಪಗಳು, ಮೊಂಬತ್ತಿ, ಸಿಹಿ ತಿನಿಸು ಸೇರಿದಂತೆ ದೀಪಾವಳಿ ಆಚರಣೆಗೆ ಬೇಕಾದ ವಸ್ತುಗಳನ್ನೆಲ್ಲಾ ನಮಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಮುಕೇಶ್ ಹೇಳಿಕೊಂಡಿದ್ದಾರೆ. ಆಪರೇಷನ್ ಸಿಂದೂರ್ -2 ಕುರಿತು ಸುದ್ದಿಸಂಸ್ಥೆ ಕೇಳಿದ ಪ್ರಶ್ನೆಗೆ, 'ನಮಗೆ ಒಬ್ಬ ಶತ್ರುವಿಗೆ ಒಂದು ಗುಂಡು ಎಂಬಂತೆ ತರಬೇತಿ ನೀಡಲಾಗಿದೆ. ಆಪರೇಷನ್ ಸಿಂದೂರ್-1 ಈಗಲೂ ಜಾರಿಯಲ್ಲಿದೆ. ಅಲ್ಲದೇ, ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ಯೋಜನೆಯಂತೆ ನಡೆದ ಆಪರೇಷನ್ ಸಿಂದೂರ್ -1 ಬಹಳ ಯಶಸ್ವಿಯಾಗಿದೆ. ಶತ್ರುಗಳಿಗೆ ತಕ್ಕ ಪಾಠವನ್ನು ಕಲಿಸಿದೆ. ಹಾಗಾಗಿ ಆಪರೇಷನ್ ಸಿಂದೂರ್ -2 ಕುರಿತು ಸದ್ಯಕ್ಕೆ ಯೋಚಿಸುವ ಅಗತ್ಯವಿಲ್ಲ ಎಂದು ಕಮಾಂಡೆಂಟ್ ಮುಕೇಶ್ ಪನ್ವಾರ್ ಹೇಳಿದರು.

2ನೇ ಹಂತದ ನಾಮಪತ್ರ ಸಲ್ಲಿಕೆಗೆ ಸೋಮವಾರವೇ ಕಡೆದಿನ

ಸೀಟು ಹಂಚಿಕೆ ಬಿಕ್ಕಟ್ಟು: ಪಟ್ಟಿ ವಿಳಂಬ

ಪಟನಾ: ಸೀಟು ಹಂಚಿಕೆ ವಿಚಾರವಾಗಿ ಮಹಾಘಟ ಬಂಧನ್‌ನಲ್ಲಿ ಭಾರೀ ಬಿಕ್ಕಟ್ಟು ಉಂಟಾಗಿದ್ದ ಕಾರಣ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಪಕ್ಷಗಳೆರಡೂ 2ನೇ ಹಂತದ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆಗೆ ಕಡೆ ದಿನವಾದ ಸೋಮವಾರ ಕಡೆ ಕ್ಷಣದಲ್ಲಿ ತಮ್ಮ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸಿವೆ.

ಇಂಡಿಯ ಒಕ್ಕೂಟದೊಳಗೆ ಬಿಕ್ಕಟ್ಟು ಹೆಚ್ಚುತ್ತಿದ್ದು, ಆರ್‌ಜೆಡಿ ಮತ್ತು ಕಾಂಗ್ರೆಸ್ ನಡುವೆ ಸೀಟು ಹಂಚಿಕೆ ಸೂತ್ರ ಅಂತಿಮಗೊಳ್ಳಲು ನಾಮಪತ್ರ ಕಡೆಯ ದಿನದವರೆಗೂ ಅಭ್ಯರ್ಥಿಗಳು ಕಾಯುವಂತಾಯಿತು. 1 ಮತ್ತು 2ನೇ ಹಂತದ ಚುನಾವಣೆ ನಡೆಯಲಿರುವ 243 ಕ್ಷೇತ್ರಗಳಲ್ಲಿ ಆರ್‌ಜೆಡಿ ಪಕ್ಷ 143 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ವೈಶಾಲಿ ಜಿಲ್ಲೆಯ ರಾಘೋಪುರ ವಿಧಾನಸಭಾ ಸ್ಥಾನದಿಂದ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ 61 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಳ್ಳುವುದಕ್ಕೆ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಜತೆಗೆ ಬಹಳ ಹೋರಾಟ ಮಾಡಬೇಕಾಗಿ ಬಂದಿತು ಎನ್ನಲಾಗಿದೆ. ಇದರ ಹೊರತಾಗಿ ಇಂಡಿಯ ಒಕ್ಕೂಟದಿಂದ ಸಿಪಿಐ-ಎಂ 20 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತಿದೆ. ಮುಕೇಶ್ ಸಹಾನಿ ಅವರು 'ವಿಐಪಿ' ಪಕ್ಷ ಉಳಿದ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ಪಡೆದುಕೊಂಡಿದೆ.

ನಾಮಪತ್ರ ವಾಪಸ್ ಗಡು ಅಂತ್ಯ

ಮೊದಲ ಹಂತದಲ್ಲಿ 121 ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದ್ದು, ನಾಮಪತ್ರ ಹಿಂಪಡೆಯಲು ಇದ್ದ ಸಮಯ ಸೋಮವಾರ ಮಧ್ಯಾಹ್ನ 3 ಗಂಟೆಗೆ ಕೊನೆಗೊಂಡಿದೆ. ಭಾನುವಾರ ರಾತ್ರಿ ವೇಳೆಗೆ, ಮೊದಲ ಹಂತದ ಚುನಾವಣಾ ಕಣದಲ್ಲಿ ಒಟ್ಟು 1,375 ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಸ್ವೀಕರಿಸಿ ಪರಿಶೀಲಿಸಿ ಸಕ್ರಮ ಎಂದು ಘೋಷಿಸಲಾಗಿದೆ. ಅದಕ್ಕೂ ಮೊದಲು 4 ನಾಮಪತ್ರಗಳಷ್ಟೇ ತಿರಸ್ಕೃತಗೊಂಡಿವೆ. ನ.6-11ರಂದು ಮತದಾನ ನಡೆದು, ನ.14ರಂದು ಮತ ಎಣಿಕೆ-ಫಲಿತಾಂಶ ಘೋಷಣೆ ಆಗಲಿದೆ.

ಕಾಂಗ್ರೆಸ್-ಆರ್‌ಜೆಡಿ ಪೈಪೋಟಿ

ಪಟನಾ: ಬಿಹಾರ ವಿಧಾನಸಭೆ ಚುನಾವಣೆ ಕಣದಲ್ಲಿ ಕ್ಷೇತ್ರಗಳ ಹಂಚಿಕೆ ವಿಚಾರದಲ್ಲಿಯೇ ಬಹಳ ಗೊಂದಲಕ್ಕೆ ಒಳಗಾಗಿರುವ

ಕಾಂಗ್ರೆಸ್ ಮತ್ತು ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ನಡುವಿಯೇ ಸ್ಪರ್ಧೆ ನಡೆದಿದೆ ಎಂದು ಲೋಕ ಜನಶಕ್ತಿ ಪಕ್ಷದ ನಾಯಕ, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ವ್ಯಂಗ್ಯವಾಡಿದ್ದಾರೆ. ಸೀಟು ಹಂಚಿಕೆಯಲ್ಲೇ ಒಮ್ಮತಕ್ಕೆ ಬಾರದೇ ನಾಮಪತ್ರ ಸಲ್ಲಿಕೆಯ ಕಡೆಯ ದಿನದವರೆಗೂ ಕಿತ್ತಾಡುತ್ತಿರುವ ಕಾಂಗ್ರೆಸ್ ಮತ್ತು ಆರ್‌ಜೆಡಿ ಇನ್ನು ಚುನಾವಣೆ ಗೆಲ್ಲುವುದು ದೂರದ ಮಾತು. ಆ ಎರಡು ಪಕ್ಷಗಳ ನಡುವೆಯೇ ಈಗ ಸ್ಪರ್ಧೆ ಉಂಟಾಗಿದೆ ಎಂದು ಲೇವಡಿಯಾಡಿದ್ದಾರೆ.

5 ಕೋಟಿ ರು. ಮೌಲ್ಯದ ಚೀನಾ ಪಟಾಕಿ ವಶ-4 ಸೆರೆ

ತೂತುಕುಡಿ: ಚೀನಾದಲ್ಲಿ ತಯಾರಾದ ಪಟಾಕಿಯನ್ನು ಭಾರತಕ್ಕೆ ಕಳ್ಳ ಮಾರ್ಗದಲ್ಲಿ ತಂದು ಮಾರಾಟ ಮಾಡುವ ದಂಧೆಗೆ ಡಿಆರ್‌ಐ ಅಧಿಕಾರಿಗಳು ತಡೆ ಒಡ್ಡಿದ್ದಾರೆ. ತಮಿಳುನಾಡು ರಾಜ್ಯದ ತೂತುಕುಡಿ ಬಂದರಿಗೆ ಅಕ್ರಮ ಮಾರ್ಗದಲ್ಲಿ ತರಲಾಗಿದ್ದ 5 ಕೋಟಿ ರು. ಮೌಲ್ಯದ ಚೀನಾ ಪಟಾಕಿಗಳನ್ನು ಕಂದಾಯ ಗುಪ್ತಚರ

ನಿರ್ದೇಶನಾಲಯ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಈ ದಂಧೆಯ ಹಿಂದಿದ್ದ ಪ್ರಮುಖ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ತೂತುಕುಡಿ ಬಂದರಿನಲ್ಲಿ ಡಿಆರ್‌ಐ ಅಧಿಕಾರಿಗಳು ಕಾರ್ಯಾಚರಣೆ ಬಿಗಿಗೊಳಿಸಿದ್ದಾರೆ. ಪಟಾಕಿ ಕಳ್ಳಸಾಗಣೆ ತಡೆಗೆ 'ಆಪರೇಷನ್ ಫೈರ್ ಟ್ರೇಲ್' ಕಾರ್ಯಾಚರಣೆ ಆರಂಭಿಸಿದ್ದಾರೆ. ಎಂಜಿನಿಯರಿಂಗ್ ಸರಕು ಎಂದು ಹೇಳಿಕೊಂಡು ತರಲಾಗಿದ್ದ 40 ಅಡಿ ಉದ್ದದ ಎರಡು ಕಂಟೈನರ್‌ಗಳನ್ನು ತೂತುಕುಡಿ ಬಂದರಿನಲ್ಲಿ ಡಿಆರ್‌ಐ ಅಧಿಕಾರಿಗಳು ತಡೆದು ಪರಿಶೀಲಿಸಿದಾಗ ಎರಡೂ ಕಂಟೈನರ್‌ಗಳಲ್ಲಿ 83,520 ಚೀನೀ ಪಟಾಕಿಗಳು ಪತ್ತೆಯಾಗಿವೆ. ಬಳಿಕ ತೂತುಕುಡಿಯಲ್ಲಿದ್ದ ಆಮದುದಾರನನ್ನು ಬಂಧಿಸಿದ್ದಾರೆ. ಅ ಬಳಿಕ, ತನಿಖೆ ವೇಳೆ ದೊರೆತ ಮಾಹಿತಿ ಮೇರೆಗೆ ಇಬ್ಬರು ಮುಂಬೈ ಮೂಲದವರು ಸೇರಿದಂತೆ ಮೂವರನ್ನು ಚೆನ್ನೈ ಮತ್ತು ತೂತುಕುಡಿಯಲ್ಲಿ ಬಂಧಿಸಲಾಗಿದೆ. ನಾಲ್ವರು ಆರೋಪಿಗಳನ್ನೂ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

2ನೇ ಹಂತ: ಆರ್‌ಜೆಡಿ 143 ಅಭ್ಯರ್ಥಿ ಪಟ್ಟಿ

ಪಟನಾ: ಬಿಹಾರ ವಿಧಾನಸಭೆ ಚುನಾವಣೆಯ 2ನೇ ಹಂತದಲ್ಲಿ ನಾಮಪತ್ರ ಸಲ್ಲಿಕೆಗೆ ಸೋಮವಾರ ಕಡೆದಿನವಾಗಿದೆ. ಆರ್‌ಜೆಡಿ ಪಕ್ಷ 24 ಮಹಿಳಾ ಅಭ್ಯರ್ಥಿಗಳು ಸೇರಿದಂತೆ 143 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಮಾಡಿದೆ. 2ನೇ ಹಂತದಲ್ಲಿ ಚುನಾವಣೆ ನಡೆಯಲಿರುವ 122 ಕ್ಷೇತ್ರಗಳಲ್ಲಿ ಆರ್‌ಜೆಡಿ 143, ಕಾಂಗ್ರೆಸ್ 61, ಸಿಪಿಐ-ಎಂ 20 ಮತ್ತು ಉಳಿದಿರುವ ಕ್ಷೇತ್ರಗಳಲ್ಲಿ ಮುಕೇಶ್ ಸಹಾನಿ ಅವರ ವಿಕಾಸಶೀಲ್ ಇನ್ಸಾನ್ ಪಕ್ಷ ಸ್ಪರ್ಧಿಸಲಿದೆ ಎಂದು ಮಹಾಘಟ ಬಂಧನ್ ಮೂಲಗಳು ತಿಳಿಸಿವೆ. ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ) ಪಕ್ಷ ಅಸಮಾಧಾನಗೊಂಡು 'ಇಂಡಿಯ' ಒಕ್ಕೂಟದಿಂದ ಹೊರ ನಡೆದು, ಈ ಬಾರಿ ಬಿಹಾರ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧೆ ಮಾಡುತ್ತಿದೆ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಹಿಂದಿನಂತೆಯೇ ರಾಘೋಪುರ ಕ್ಷೇತ್ರದಿಂದ ಅದಾಗಲೇ ನಾಮಪತ್ರ ಸಲ್ಲಿಸಿದ್ದಾರೆ.

ಮದ್ಯ ನಿಷೇಧ ರಾಜ್ಯದಲ್ಲೇ 23 ಕೋಟಿ ರು. ಮದ್ಯ!

₹64 ಕೋಟಿ ಮದ್ಯ, ಉಡುಗೊರೆ ವಶ

ಪಟನಾ: 243 ಸದಸ್ಯ ಬಲದ ಬಿಹಾರ ವಿಧಾನಸಭೆಗೆ ಚುನಾವಣೆ ವೇಳಾಪಟ್ಟಿ ಅ.6 ರಂದು ಘೋಷಣೆ ಆದಾಗಿನಿಂದ ಈವರೆಗೆ ಬಿಹಾರ ರಾಜ್ಯದಾದ್ಯಂತ ಚುನಾವಣಾ ಅಧಿಕಾರಿಗಳು ಶೋಧ ಕಾರ್ಯ ಹಮ್ಮಿಕೊಂಡಿದ್ದ ಪರಿಣಾಮ ಮದ್ಯ, ನಗದು, ಮಾದಕ ವಸ್ತುಗಳು ಮತ್ತು ಮತದಾರರಿಗೆ ಹಂಚಲೆಂದು ಸಂಗ್ರಹಿಸಿಟ್ಟಿದ್ದ ಉಚಿತ ಉಡುಗೊರೆ ಸಾಮಗ್ರಿಗಳು ಸೇರಿದಂತೆ 64.13 ಕೋಟಿ ರು. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ರಾಜ್ಯದಲ್ಲಿ 753 ಜನರನ್ನು ಬಂಧಿಸಲಾಗಿದೆ. ಅಲ್ಲದೇ, ಇದೇ ವೇಳೆ 13,587 ಜನರ ವಿರುದ್ಧ ಜಾಮೀನು ರಹಿತ ವಾರಂಟ್‌ಗಳನ್ನೂ ಹೊರಡಿಸಲಾಗಿದೆ ಎಂದು ಹಿರಿಯ ಚುನಾವಣಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಿಹಾರದಲ್ಲಿ ಮದ್ಯ ನಿಷೇಧ ಜಾರಿಯಲ್ಲಿದೆ. ಅಚ್ಚರಿ ಎಂದರೆ, ಹಾಗಿದ್ದೂ 23.41 ಕೋಟಿ ರು. ಮೌಲ್ಯದ ಮದ್ಯ ವಶವಾಗಿದೆ. ಇದಲ್ಲದೇ, 14 ಕೋಟಿ ರು. ಮೌಲ್ಯದ ಮಾದಕ ದ್ರವ್ಯ ಮತ್ತು 16.88 ಕೋಟಿ ರು. ಸೈಕೋಟ್ರೋಪಿಕ್ ಡ್ರಗ್ಸ್ ಮತ್ತು 4.19 ಕೋಟಿ ರು. ನಗದು ಕೂಡಾ ವಶವಾಗಿದೆ ಎಂದು ಅಧಿಕಾರಿಗಳು ಸುದ್ದಿಗಾರರಿಗೆ ಸೋಮವಾರ ತಿಳಿಸಿದ್ದಾರೆ.

ಬಿಹಾರ ಚುನಾವಣೆ ಹಿನ್ನೆಲೆ ಚುನಾವಣಾಧಿಕಾರಿ ಮತ್ತು ಫ್ಲೈಯಿಂಗ್ ಸ್ಕ್ವಾಡ್‌ನಿಂದ ವಾಹನಗಳ ಪರಿಶೋಧನೆ.

ಸಮಾಚಾರ ಸಣ್ಣದಲ್ಲ

ಡಾಲರ್ ಎದುರು ರುಪಾಯಿ ಮೌಲ್ಯ ಏರಿಕೆ

ಮುಂಬೈ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರುಪಾಯಿ ಮೌಲ್ಯವು 9 ಪೈಸೆ ಏರಿಕೆ ಕಂಡಿದೆ. ಡಾಲರ್ ಎದುರು ರುಪಾಯಿಯ ಮೌಲ್ಯವು ₹87.93 ಆಗಿದೆ. ವಿದೇಶಿ ಬಂಡವಾಳದ ಒಳಹರಿವು, ಕಚ್ಚಾ ತೈಲ ಬೆಲೆ ಇಳಿಕೆ ಮತ್ತು ದೇಶಿ ಷೇರುಪೇಟೆ ಸೂಚ್ಯಂಕಗಳ ಏರಿಕೆಯಿಂದ ರುಪಾಯಿ ಮೌಲ್ಯವು ಹೆಚ್ಚಳವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಶುಕ್ರವಾರದ ವಹಿವಾಟಿನಲ್ಲಿ ರುಪಾಯಿ ಮೌಲ್ಯ ₹88.02 ಆಗಿತ್ತು.

ರನ್‌ವೇಯಿಂದ ಜಾರಿದ ವಿಮಾನ: ಇಬ್ಬರ ಸಾವು

ಟರ್ಕಿಯ ಎಸಿಟಿ ವಿಮಾನಸಂಸ್ಥೆಯ ಬೋಯಿಂಗ್ 747 ಸರಕು ಸಾಗಣೆ ವಿಮಾನ ರನ್‌ವೇಯಿಂದ ಜಾರಿ ಸಮುದ್ರಕ್ಕೆ ಬಿದ್ದಿರುವುದು.

ಹಾಂಗ್‌ಕಾಂಗ್: ಹಾಂಗ್‌ಕಾಂಗ್‌ನಲ್ಲಿ ಸರಕು ಸಾಗಣೆ ವಿಮಾನವೊಂದು ಸೋಮವಾರ ಮುಂಜಾನೆ ನಿಯಂತ್ರಣ ತಪ್ಪಿ ರನ್‌ವೇಯಿಂದ ಜಾರಿ ಸಮುದ್ರಕ್ಕೆ ಬಿದ್ದಿದ್ದು, ಘಟನೆಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಟರ್ಕಿಯ ಎಸಿಟಿ ವಿಮಾನ ಸಂಸ್ಥೆಯ ಬೋಯಿಂಗ್ 747 ವಿಮಾನ ದುಬೈನಿಂದ ಹಾಂಗ್‌ಕಾಂಗ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭೂಸ್ಪರ್ಶ ಮಾಡುವ ವೇಳೆ ಈ ಅವಘಡ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನದಲ್ಲಿದ್ದ ನಾಲ್ವರು ಸಿಬ್ಬಂದಿಯನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಥಮಿಕ ವರದಿ ಪ್ರಕಾರ ವಿಮಾನವು ಭದ್ರತಾ ಸಿಬ್ಬಂದಿ ಕಾರಿಗೆ ಡಿಕ್ಕಿ ಹೊಡೆದು ಬಳಿಕ ಸಮುದ್ರಕ್ಕೆ ಬಿದ್ದಿದೆ. ಕಾರಿನಲ್ಲಿದ್ದ ಇಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈತ್ರಿ ಒಪ್ಪಂದ: ಸನೆ ತಾಕೈಚಿ ಹಾದಿ ಸುಗಮ

ಟೋಕಿಯೊ: ಜಪಾನ್‌ನ ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಕ್ಷ (ಎಲ್‌ಡಿಪಿ) ಹಾಗೂ ಅದರ ಮೈತ್ರಿಪಕ್ಷವು ಮೈತ್ರಿ ಒಪ್ಪಂದಕ್ಕೆ ಸೋಮ ವಾರ ಸಹಿ ಹಾಕಿವೆ. ಇದರಿಂದ, ಸನೆ ತಾಕೈಚಿ ಅವರು ದೇಶದ ಮೊದಲ ಮಹಿಳಾ ಪ್ರಧಾನಿಯಾಗುವ ಹಾದಿ ಸುಗಮವಾಗಿದೆ. ಐದನೇ ಪ್ರಧಾನ ಮಂತ್ರಿಯಾಗಿ ತಾಕೈಚಿ ಅವರ ಆಯ್ಕೆ ಕುರಿತು ಕೆಳಮನೆಯಲ್ಲಿ ಮತ ಚಲಾಯಿಸುವ ಕೇವಲ ಒಂದು ದಿನ ಮೊದಲು ಜಪಾನ್ ಇನೋವೇಷನ್ ಪಾರ್ಟಿ (ಜೆಐಪಿ) ಜತೆಗೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಅವರು ಗೆದ್ದರೆ, ಅದೇ ದಿನ ಅಧಿಕಾರ ವಹಿಸಿ ಕೊಳ್ಳಲಿದ್ದಾರೆ. 'ಜಪಾನ್‌ನ ಆರ್ಥಿಕತೆಯನ್ನು ಬಲಪಡಿಸುವ ಮತ್ತು ಭವಿಷ್ಯದ ಪೀಳಿಗೆಗೆ ಜವಾಬ್ದಾರರಾಗಿರುವ ದೇಶವನ್ನಾಗಿ ಮರು ರೂಪಿಸುವ ಪ್ರಯತ್ನಗಳಲ್ಲಿ ನಿಮ್ಮೊಂದಿಗೆ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ' ಎಂದು ತಾಕೈಚಿ ಅವರು ಒಪ್ಪಂದಕ್ಕೆ ಸಹಿ ಹಾಕುವಾಗ ಜೆಐಪಿಯ ಸಹ ಮುಖ್ಯಸ್ಥ ಹಿರೋಫುಮಿ ಯೋಶಿಮುರಾ ಅವರಿಗೆ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಕನಸು ಕಾಣುತ್ತಿರಲಿ: ಖಮೇನಿ

ದುಬೈ: ಇರಾನ್‌ನ ಪರಮಾಣು ಸಾಮರ್ಥ್ಯವನ್ನು ಅಮೆರಿಕ ಧ್ವಂಸಗೊಳಿಸಿದೆ ಎಂಬ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಪಾದನೆಯನ್ನು ಇರಾನ್‌ನ ಪರಮೋಚ್ಚ ನಾಯಕ ಆಯತುಲ್ಲಾ ಅಲಿ ಖಮೇನಿ ತಳ್ಳಿಹಾಕಿದ್ದಾರೆ. ಇರಾನ್‌ನ ಪರಮಾಣು ಕೈಗಾರಿಕೆಯನ್ನು ನಾವು ಸ್ಫೋಟಿಸಿದ್ದೇವೆ ಮತ್ತು ನಾಶಗೊಳಿಸಿದ್ದೇವೆ ಎಂದು ಅಮೆರಿಕ ಅಧ್ಯಕ್ಷ ಅಹಂಕಾರದಿಂದ ಹೇಳುತ್ತಿದ್ದಾರೆ. ಸಂತೋಷ, ಅವರು ಆ ಕನಸು ಕಾಣುತ್ತಲೇ ಇರಲಿ ಎಂದು ಎಕ್ಸ್‌ನಲ್ಲಿ ಖಮಿನೇನಿ ತಿಳಿಸಿದ್ದಾರೆ.

ಮಕ್ಕಳ ಸಾವು ಪ್ರಕರಣ: ನ್ಯಾಯಾಂಗ ಬಂಧನ

ಛಿಂದ್ವಾಡ: ಮಧ್ಯಪ್ರದೇಶದಲ್ಲಿ 20ಕ್ಕೂ ಹೆಚ್ಚು ಮಕ್ಕಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಲಬೆರಕೆ ಕೆಮ್ಮು ಸಿರಪ್ ಕೋಲ್ಡ್ರಿಫ್' ತಯಾರಿಸಿದ ತಮಿಳುನಾಡು ಮೂಲದ ಸಂಸ್ಥೆಯ ಮಾಲೀಕ ಜಿ. ರಂಗನಾಥನ್‌ಗೆ ಸ್ಥಳೀಯ ನ್ಯಾಯಾಲಯವು ಸೋಮವಾರ ನ್ಯಾಯಾಂಗ ಬಂಧನ ವಿಧಿಸಿದೆ. ಸ್ರೇಸನ್ ಫಾರ್ಮಾಸ್ಯುಟಿಕಲ್‌ನ ಮಾಲೀಕ ಡಾ. ಜಿ.ರಂಗನಾಥನ್ ಅವರನ್ನು ಬಂಧಿಸಿದ್ದ ವಿಶೇಷ ತನಿಖಾ ತಂಡವು (ಎಸ್‌ಐಟಿ) ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆದಿತ್ತು. ಪೊಲೀಸ್ ಕಸ್ಟಡಿಯ ಅವಧಿ ಮುಗಿದಿದ್ದರಿಂದ, ರಂಗನಾಥನ್ ಅವರನ್ನು ಪರಸಿಯಾ ಪಟ್ಟಣದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಗೌತಮ್ ಗುರ್ಜರ್ ಮುಂದೆ ಹಾಜರುಪಡಿಸಲಾಯಿತು ಎಂದು ಎಸ್‌ಐಟಿ ಮುಖ್ಯಸ್ಥ ಜಿತೇಂದ್ರ ಸಿಂಗ್ ಜಾಟ್ ತಿಳಿಸಿದ್ದಾರೆ.

---

800 ಕಿ.ಮೀ ವಿಸ್ತರಿತ ಶ್ರೇಣಿಯ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಎರಡು ವರ್ಷದಲ್ಲಿ ಸೇನೆಗೆ ಸೇರ್ಪಡೆ

ಬ್ರಹ್ಮೋಸ್ ಕ್ಷಿಪಣಿ ಸಾಮರ್ಥ್ಯ ಶೀಘ್ರದಲ್ಲೇ ದುಪ್ಪಟ್ಟು

ದೆಹಲಿ: ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ ಪಾಕಿಸ್ತಾನಿಯರ ಎದೆ ನಡುಗಿಸಿದ್ದ ಬ್ರಹ್ಮೋಸ್ ಕ್ಷಿಪಣಿಯ ಸಾಮರ್ಥ್ಯ ಈಗ ಎರಡು ಪಟ್ಟಾಗಲಿದೆ. ಭಾರತದ ನಿಖರ ದಾಳಿ ಸಾಮರ್ಥ್ಯಕ್ಕೆ ದೊಡ್ಡ ಉತ್ತೇಜನ ನೀಡುವ ನಿಟ್ಟಿನಲ್ಲಿ ಹೊಸ 800-ಕಿಲೋ ಮೀಟರ್ ವಿಸ್ತರಿತ ಶ್ರೇಣಿಯ ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿಯನ್ನು ಇನ್ನೆರಡು ವರ್ಷಗಳಲ್ಲಿ ಸೇರ್ಪಡೆಗೊಳಿಸುವ ಯೋಜನೆ ರೂಪಿಸಲಾಗಿದೆ. ಜತೆಗೆ 200 ಕಿಲೋ ಮೀಟರ್‌ಗೂ ಹೆಚ್ಚು ವ್ಯಾಪ್ತಿಯ ಅಸ್ತ್ರ ಏರ್-ಟು-ಏರ್ ಕ್ಷಿಪಣಿಗಳ ಉತ್ಪಾದನೆಯು 2026-27 ರಲ್ಲಿ ಪ್ರಾರಂಭವಾಗುವ ಸಾಧ್ಯತೆಯಿದೆ. ರಕ್ಷಣಾ ಇಲಾಖೆ ಮೂಲಗಳ ಪ್ರಕಾರ, ಮಾರ್ಪಡಿಸಿದ ರಾಮ್‌ಜೆಟ್ ಎಂಜಿನ್ ಮತ್ತು ಇತರ ನವೀಕರಣಗಳೊಂದಿಗೆ 800-ಕಿಮೀ ಬ್ರಹ್ಮೋಸ್ ಕ್ಷಿಪಣಿಯ ಪರೀಕ್ಷೆಗಳು ನಡೆಯುತ್ತಿದ್ದು, 2027ರ ಅಂತ್ಯದ ವೇಳೆಗೆ ಇದು ಸಂಪೂರ್ಣವಾಗಿ ಸಿದ್ಧವಾಗಲಿದೆ.

ಆಪರೇಷನ್ ಸಿಂದೂರ ವೇಳೆ ಬ್ರಹ್ಮೋಸ್ ಪರಾಕ್ರಮ: ಪ್ರಸ್ತುತ ಇರುವ 450-ಕಿಮೀ ವ್ಯಾಪ್ತಿಯ ಬ್ರಹ್ಮೋಸ್ ಕ್ಷಿಪಣಿಗಳು ಶಬ್ದದ ವೇಗಕ್ಕಿಂತ

ಮೂರು ಪಟ್ಟು ವೇಗದಲ್ಲಿ (ಮ್ಯಾಕ್ 2.8) ದಾಳಿ ಮಾಡುವ ಸಾಮರ್ಥ್ಯವನ್ನು ಹೊಂದಿವೆ. ಇವುಗಳನ್ನು ಮೇ ತಿಂಗಳಲ್ಲಿ ನಡೆದ ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ ಸುಖೋಯ್-30 ಎಂಕೆಐ ಯುದ್ಧ ವಿಮಾನಗಳಿಂದ ಉಡಾವಣೆ ಮಾಡಲಾಗಿತ್ತು. ಈ ಕ್ಷಿಪಣಿಗಳು ಪಾಕಿಸ್ತಾನದಲ್ಲಿ ಭಾರೀ ಪ್ರಮಾಣದ ಹಾನಿ ಮಾಡಿದ್ದವು. ಬ್ರಹ್ಮೋಸ್ ಕ್ಷಿಪಣಿಗಳು ಪಾಕಿಸ್ತಾನದ ನಿದ್ದೆಗೆಡಿಸಿತ್ತು. ಮೇ 7 ರಂದು ನಡೆದ ಭಯೋತ್ಪಾದಕ ಕೇಂದ್ರಗಳ ಮೇಲಿನ ದಾಳಿಯ ಸಮಯದಲ್ಲಿ ಪಾಕಿಸ್ತಾನವು 200 ಕಿ.ಮೀ. ಗಿಂತ ಹೆಚ್ಚಿನ ವ್ಯಾಪ್ತಿಯ PL&15 BVRAAM ಗಳೊಂದಿಗೆ ಶಸ್ತ್ರಸಜ್ಜಿತವಾದ ಚೀನಾದ ಮೂಲದ ಜೆ-10 ಗಳ ಬಳಕೆಯಿಂದ ಭಾರತೀಯ ವಾಯುಪಡೆ ಆರಂಭದಲ್ಲಿ ಅನಿರೀಕ್ಷಿತತೆಗೆ ಒಳಗಾಗಿತ್ತು. ಆದಾಗ್ಯೂ, ಸ್ಟ್ಯಾಂಡ್-ಆಫ್ ದೂರದಿಂದ ಉಡಾಯಿಸಲಾದ ಬ್ರಹ್ಮೋಸ್ ಏರ್-ಟು-ಗ್ರೌಂಡ್ ಕ್ಷಿಪಣಿಗಳು ಸಂಪೂರ್ಣ ಯಶಸ್ಸನ್ನು ಕಂಡಿತ್ತು.

800 ಕಿಮೀ ವ್ಯಾಪ್ತಿಯಲ್ಲಿ ಬ್ರಹ್ಮೋಸ್ ದಾಳಿ: ಮೂಲದ ಪ್ರಕಾರ, 800-ಕಿಮೀ ಬ್ರಹ್ಮೋಸ್‌ಗೆ ಸಂಬಂಧಿಸಿದಂತೆ, ರಾಜ್‌ಮೆಟ್ ಎಂಜಿನ್‌ನ ಮಾರ್ಪಾಡುಗಳು ಬಹುತೇಕ ಅಭಿವೃದ್ಧಿಗೊಂಡಿವೆ. ಹೆಚ್ಚಿನ ನಿಖರತೆ, ಸ್ಥಿತಿಸ್ಥಾಪಕತ್ವ ಮತ್ತು ಜ್ಯಾಮಿಂಗ್‌ಗೆ ಪ್ರತಿರೋಧ ಖಚಿತಪಡಿಸಿಕೊಳ್ಳಲು ಅದರ ಆಂತರಿಕ ಇನರ್ಶಿಯಲ್ ನ್ಯಾವಿಗೇಷನ್ ಸಿಸ್ಟಮ್ ಮತ್ತು ಬಾಹ್ಯ ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್‌ಗಳ ಸಂಯೋಜನೆಯ ಪರಿಣಾಮಕಾರಿತ್ವವನ್ನು ಪರೀಕ್ಷಿಸಲು ಇನ್ನೂ ಕೆಲವು ಪರೀಕ್ಷೆಗಳು ಬೇಕಾಗಿವೆ. ಕ್ಷಿಪಣಿ ಮತ್ತು ಲಾಂಚರ್ ಒಂದೇ ಆಗಿರುವುದರಿಂದ, ನೌಕಾಪಡೆ ಮತ್ತು ಸೇನೆಯು ಮೊದಲು 800 ಕಿಮೀ ಕ್ಷಿಪಣಿಯನ್ನು ಸೇರಿಸಿಕೊಳ್ಳಲು ಪ್ರಾರಂಭಿಸುತ್ತವೆ. ವಾಯು-ಉಡಾವಣಾ ಆವೃತ್ತಿಯು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಳ್ಳಬಹುದು. ನೌಕಾಪಡೆಯು ತನ್ನ ಮುಂಚೂಣಿ ಯುದ್ಧನೌಕೆಗಳಲ್ಲಿನ ಅಸ್ತಿತ್ವದಲ್ಲಿರುವ 450-ಕಿಮೀ ಬ್ರಹ್ಮೋಸ್ ಕ್ಷಿಪಣಿಗಳನ್ನು ಸಾಫ್ಟ್‌ವೇರ್ ಮತ್ತು ಫೈರ್ ಕಂಟ್ರೋಲ್ ಸಿಸ್ಟಮ್‌ನ ಗ್ರಾಫಿಕಲ್ ಯೂಸರ್ ಇಂಟರ್‌ಫೇಸ್ ಅನ್ನು ಸ್ವಲ್ಪಮಟ್ಟಿಗೆ ಬದಲಾಯಿಸುವ ಮೂಲಕ 800-ಕಿಮೀ ರೂಪಾಂತರಕ್ಕೆ ನವೀಕರಿಸಬಹುದು.

ಪ್ರಸ್ತಾವಿತ ಇಂಟಿಗ್ರೇಟೆಡ್ ರಾಕೆಟ್ ಫೋರ್ಸ್‌ನಲ್ಲಿ 800-ಕಿಮೀ ಬ್ರಹ್ಮೋಸ್‌ನ ಭೂ ಆವೃತ್ತಿಯು ಸಹ ಒಂದು ಭಾಗವಾಗಲಿದೆ. ಇದರ ಜತೆಗೆ ಪ್ರಳಯ ಬ್ಯಾಲಿಸ್ಟಿಕ್ ಕ್ಷಿಪಣಿಗಳು (400 ಕಿಮೀ ವ್ಯಾಪ್ತಿ) ಮತ್ತು ದೀರ್ಘ-ಶ್ರೇಣಿಯ ಭೂ-ದಾಳಿ ಕ್ರೂಸ್ ಕ್ಷಿಪಣಿಗಳು (ಮೂಲ ನಿರ್ಭಯ್ ಕ್ಷಿಪಣಿಗಳ 1,000 ಕಿಮೀ ವ್ಯಾಪ್ತಿಯ ಉತ್ಪನ್ನಗಳು) ಇರಲಿವೆ.

ಅಸ್ತ್ರ ಕ್ಷಿಪಣಿಗಳಲ್ಲೂ ಮಹತ್ವದ ಪ್ರಗತಿ

ಸಮಾನಾಂತರವಾಗಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಅಸ್ತ್ರ ಮಾರ್ಕ್-2 ಕ್ಷಿಪಣಿಯ ದೃಷ್ಟಿಗೋಚರ ಶ್ರೇಣಿಯನ್ನು ಹಿಂದಿನ 160 ಕಿಮೀ ನಿಂದ 200 ಕಿಮೀ ಗಿಂತ ಹೆಚ್ಚು ಹೆಚ್ಚಿಸುತ್ತಿದೆ. ಪ್ರಸ್ತುತ ಭಾರತೀಯ ವಾಯುಪಡೆ 100 ಕಿಮೀ ವ್ಯಾಪ್ತಿಯ 280 ಕ್ಕೂ ಹೆಚ್ಚು ಅಸ್ತ್ರ ಮಾರ್ಕ್-1 ಕ್ಷಿಪಣಿಗಳನ್ನು ಸೇರ್ಪಡೆಗೊಳಿಸುತ್ತಿದೆ. ಐಎಎಫ್ ಈಗಾಗಲೇ ತನ್ನ ಸುಖೋಯ್-30 ಎಂಕೆಐ ಮತ್ತು ತೇಜಸ್ ಜೆಟ್‌ಗಳಿಗಾಗಿ ಆರಂಭಿಕ 700 ಅಸ್ತ್ರ ಮಾರ್ಕ್-2 ಕ್ಷಿಪಣಿಗಳನ್ನು ಸೇರ್ಪಡೆಗೊಳಿಸುವ ಯೋಜನೆಯನ್ನು ಅಂತಿಮಗೊಳಿಸಿದೆ. ಇದಲ್ಲದೆ, 350 ಕಿಮೀ ವ್ಯಾಪ್ತಿಯನ್ನು ಹೆಚ್ಚಿಸಲು ಘನ-ಇಂಧನ ಡಕ್ಟೆಡ್ ರಾಮ್‌ಜೆಟ್ (ಖಊಕ್ಕು) ಪ್ರೊಪಲ್ಷನ್ ಹೊಂದಿರುವ ಅಸ್ತ್ರ ಮಾರ್ಕ್-3 ಕೂಡ ಅಭಿವೃದ್ಧಿಯ ಹಾದಿಯಲ್ಲಿದೆ, ಆದರೆ ಇದು ಕಾರ್ಯಾಚರಣೆಗೆ ಬರಲು ಮೂರು ವರ್ಷ ಬೇಕಾಗುತ್ತದೆ.

ಒಂದು ವಾರ ವ್ಯಾಪಕ ಮಳೆ ಸಾಧ್ಯತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ ರಾಜ್ಯದಲ್ಲಿ ಮುಂದಿನ ಒಂದು ವಾರ ವ್ಯಾಪಕವಾಗಿ ಮಳೆಯಾಗಲಿದ್ದು, ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಅ.21ರಿಂದ 27ರವರೆಗೆ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು, ಬಹುತೇಕ ಎಲ್ಲಾ ಜಿಲ್ಲೆಗಳಿಗೆ ಹವಾಮಾನ ಇಲಾಖೆಯೆಲ್ಲೋ ಅಲರ್ಟ್ ನೀಡಿದೆ. ಮಂಗಳವಾರ ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಹಾವೇರಿ, ಗದಗ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮಳೆ ಪ್ರಮಾಣ ಅಧಿಕವಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ನಡುವೆ, ಸೋಮವಾರ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಹಲವು ಸ್ಥಳಗಳಲ್ಲಿ ಮಳೆಯಾಗಿದ್ದು, ಉತ್ತರ ಒಳನಾಡಿನಲ್ಲಿ ಒಂದೆರಡು ಸ್ಥಳದಲ್ಲಿ ಮಾತ್ರ ಮಳೆಯಾಗಿದೆ. ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ 8 ಸೆಂ.ಮೀ., ಶಿವಮೊಗ್ಗ ಜಿಲ್ಲೆಯ ಅನವಟ್ಟಿ, ತುಮಕೂರು ಜಿಲ್ಲೆಯ ಕುಣಿಗಲ್, ದಕ್ಷಿಣ ಕನ್ನಡ ಜಿಲ್ಲೆಯ ಶಕ್ತಿನಗರದಲ್ಲಿ

ತಲಾ 7 ಸೆಂ.ಮೀ., ಚಿಕ್ಕಮಗಳೂರು ಜಿಲ್ಲೆಯ ಕಡೂರು, ಕಮ್ಮರಡಿ, ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯಲ್ಲಿ ತಲಾ 6 ಸೆಂ.ಮೀ., ಮಂಡ್ಯ ಜಿಲ್ಲೆಯ ಬೆಳ್ಳೂರು, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಹಾವೇರಿ ಜಿಲ್ಲೆಯ ಹಿರೇಕೆರೂರು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರದಲ್ಲಿ ತಲಾ 5 ಸೆಂ.ಮೀ. ಮಳೆಯಾಗಿದೆ.

ಬೆಂಗಳೂರಲ್ಲಿ ಗುಡುಗು ಸಹಿತ ಮಳೆಯ ಮುನ್ಸೂಚನೆ: ಬೆಂಗಳೂರು ನಗರದಲ್ಲಿಯೂ ಗುಡುಗು ಸಹಿತ ಸಣ್ಣ ಪ್ರಮಾಣದ ಮಳೆಯನ್ನು ನಿರೀಕ್ಷಿಸಲಾಗಿದೆ. ಶೇ. 78ರಿಂದ 100ರಷ್ಟು ಮಳೆಯ ಸಾಧ್ಯತೆ ಇದ್ದು, ಗಾಳಿಯ ವೇಗ ಗಂಟೆಗೆ 13-15 ಕಿ.ಮೀ. ಇರಲಿದೆ. ನಗರದ ಗರಿಷ್ಠ ಉಷ್ಣಾಂಶ 27 ಡಿಗ್ರಿ ಸೆಲ್ಸಿಯಸ್ ಇರಲಿದ್ದು, ಕನಿಷ್ಠ 19 ಡಿಗ್ರಿ ಸೆಲ್ಸಿಯಸ್ ದಾಖಲಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದುರ್ಬಲ ರಾಜ್ಯವಾಗುತ್ತಿರುವ ಪ.ಬಂಗಾಳ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ವಿದ್ಯಾರ್ಥಿನಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಗಳ ಬಗ್ಗೆ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಇಂಥ ಕೃತ್ಯಗಳು ಕಾನೂನು ಸುವ್ಯವಸ್ಥೆಯ ಬಿಕ್ಕಟ್ಟನ್ನು ಹೆಚ್ಚಿಸುತ್ತಿರುವುದರ ಜತೆಗೆ ರಾಜ್ಯವು ಮಹಿಳೆಯರಿಗೆ ಸುರಕ್ಷಿತವಲ್ಲ ಎನ್ನುವಂಥ ಭಯದ ವಾತಾವರಣವನ್ನು ಸೃಷ್ಟಿಸುತ್ತಿವೆ ಎಂದಿದ್ದಾರೆ.

ದುರ್ಗಾಪುರದ ಖಾಸಗಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ಮೇಲೆ ಅಕ್ಟೋಬರ್ 10ರಂದು ಸಾಮೂಹಿಕ ಅತ್ಯಾಚಾರ ನಡೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೋಸ್ ಈ ಹೇಳಿಕೆ ನೀಡಿದ್ದಾರೆ. ದುರ್ಗಾಪುರಕ್ಕೆ ತೆರಳಿ ಸಂತ್ರಸ್ತೆ ಹಾಗೂ ಆಕೆಯ ಪೋಷಕರನ್ನು ಭೇಟಿಯಾಗಿ ಬಂದ ಬಳಿಕ ಮಾಧ್ಯಮದೊಂದಿಗೆ ಮಾತನಾಡಿರುವ ಬೋಸ್, ಪಶ್ಚಿಮ ಬಂಗಾಳವು ದುರ್ಬಲ ರಾಜ್ಯದ ಗುಣಲಕ್ಷಣಗಳನ್ನು ತೋರುತ್ತಿದೆ. ಕಾನೂನು ಇದ್ದರೂ, ಅದರ ಜಾರಿಯಲ್ಲಿ ವಿಫಲ ಕಾಣುತ್ತಿದೆ ಎಂದು ಆರೋಪಿಸಿದ್ದಾರೆ. ಇಂಥ ಬೆಳವಣಿಗೆಯಿಂದ ಯಾವುದೇ ನಾಗರಿಕ ಸಮಾಜಕ್ಕೆ ಒಳಿತಾಗುವುದಿಲ್ಲ. ಒಂದರ ಹಿಂದೆ ಮತ್ತೊಂದರಂತೆ ಈ ರೀತಿಯ ಘಟನೆಗಳು ಮರುಕಳಿಸುತ್ತಿದ್ದರೆ ಯಾರಿಗಾದರೂ ಪಶ್ಚಿಮ ಬಂಗಾಳ ಮಹಿಳೆಯರಿಗೆ ಸುರಕ್ಷಿತ ರಾಜ್ಯವಲ್ಲ ಎಂದೇ ಎನಿಸುತ್ತದೆ ಎಂದಿದ್ದಾರೆ.

ವಿದ್ಯಾರ್ಥಿನಿಯರನ್ನು ರಾತ್ರಿ ವೇಳೆ ಹೊರಗೆ ಕಳುಹಿಸದಂತೆ ವಸತಿ ಕಾಲೇಜುಗಳಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಲಹೆ ನೀಡಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಬೋಸ್, ಮಹಿಳೆಯರು ಯಾವಾಗ ಬೇಕಾದರೂ ಸ್ವತಂತ್ರ್ಯವಾಗಿ ಹೊರಗೆ ಓಡಾಡಲು ಸಾಧ್ಯವಾಗುವಂತಹ ಸಮಾಜವನ್ನು ನಾವು ಪುನರ್‌ನಿರ್ಮಿಸಬೇಕಿದೆ. ಆದರೆ, ನಮ್ಮ ಸಹೋದ್ಯೋಗಿ ನೀಡಿದ ಹೇಳಿಕೆಯನ್ನು ರಾಜಕೀಯಗೊಳಿಸಲು ನಾನು ಬಯಸುವುದಿಲ್ಲ ಎಂದಿದ್ದಾರೆ.

ಪೊಲೀಸರು ನಿಷ್ಪಕ್ಷಪಾತಿಗಳಾಗಿರಲಿ

ಪೊಲೀಸ್ ಇಲಾಖೆಯನ್ನೂ ರಾಜಕೀಯಗೊಳಿಸಲಾಗುತ್ತಿದೆ ಎಂದು ಬೋಸ್ ಕಳವಳ ವ್ಯಕ್ತಪಡಿಸಿದ್ದಾರೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದೇ ಪೊಲೀಸರ ಆದ್ಯ ಕರ್ತವ್ಯ. ಆದರೆ ಬಂಗಾಳದಲ್ಲಿ ಕೆಲವು ಪೊಲೀಸರು ಭ್ರಷ್ಟರಾಗಿದ್ದು, ರಾಜಕೀಯಗೊಂಡಿದ್ದಾರೆ. ಆಡಳಿತ ಪಕ್ಷಗಳ ತಾಳಕ್ಕೆ ತಕ್ಕಂತೆ ಇರದೇ, ಪೊಲೀಸರು ನಿಷ್ಪಕ್ಷಪಾತಿಗಳಾಗಿರಬೇಕು ಎಂದೂ ಬೋಸ್ ಹೇಳಿದ್ದಾರೆ.

ಬಾಲಕಿ ಮೇಲೆ ಪಂಚಾಯಿತಿ ಮುಖ್ಯಸ್ಥನಿಂದ ಅತ್ಯಾಚಾರ

ಶಿಮ್ಲಾ: ಹದಿಮೂರು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಶಿಮ್ಲಾದ ಗ್ರಾಮ ಪಂಚಾಯಿತಿ ಮುಖ್ಯಸ್ಥನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಹೋಗುತ್ತಿದ್ದ ಬಾಲಕಿಯನ್ನು ಸೆ. 21ರಂದು ತಡೆದು, ಆಕೆ ಧರಿಸಿದ್ದ ರುದ್ರಾಕ್ಷಿ ಮಾಲೆ' ಕುರಿತು ವಿಚಾರಿಸಿದ್ದಾನೆ. ಬಳಿಕ, ತನಗೆ ತಂತ್ರ-ಮಂತ್ರ ತಿಳಿದಿದೆ. ಮಂತ್ರಗಳಿಂದ ಮಾಲೆಯನ್ನು ಪವಿತ್ರಗೊಳಿಸಬೇಕು. ಇಲ್ಲದಿದ್ದರೆ ಕುಟುಂಬದ ಸದಸ್ಯರು ಸಾವಿಗೀಡಾಗುತ್ತಾರೆ ಎಂದು ಹೇಳಿ ಬಾಲಕಿಯನ್ನು ಅ.15 ಮತ್ತು 17ರಂದು ಮನೆಗೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯವೆಸಗಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆರೋಪಿ ವಿರುದ್ಧ ಭಾರತೀಯ ನೀತಿ ಸಂಹಿತೆ ಸೆಕ್ಷನ್ 65 ಮತ್ತು ಪೋಕ್ಸೊ ಕಾಯ್ದೆಯಾಡಿ ಅತ್ಯಾಚಾರ ಪ್ರಕರಣ ದಾಖಲಾಗಿದೆ.

ಬೆಂಗಳೂರಿನಿಂದ ಹಂಪಿಗೆ ವಿಮಾನ ಸೇವೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಿಂದ ವಿಶ್ವ ವಿಖ್ಯಾತ ಹಂಪಿಗೆ ನೇರ ವಿಮಾನ ಸೇವೆ ನೀಡಲು ಮುಂದಾಗಿರುವುದಾಗಿ ಪ್ರಾದೇಶಿಕ ಏರ್‌ಲೈನ್ ಸ್ಟಾರ್ ಏರ್‌ಲೈನ್ ಘೋಷಿಸಿದೆ.

ಈ ಮೂಲಕ ಬಳ್ಳಾರಿ ವಿಜಯನಗರ ಜಿಲ್ಲೆಗಳ ಪ್ರವಾಸೋದ್ಯಮ ಹಾಗೂ ವ್ಯಾಪಾರಕ್ಕೆ ಭಾರಿ ದೊಡ್ಡ ಬೆಂಬಲ ದೊರೆಯುವ ಸಾಧ್ಯತೆಯಿದ್ದು, ಪ್ರಮುಖವಾಗಿ ಕನ್ನಡ ರಾಜ್ಯೋತ್ಸವದ ದಿನ ನ.1ರಿಂದಲೇ ವಿಮಾನ ಹಾರಾಟ ಶುರುವಾಗಲಿದೆ. ಹಂಪಿಗೆ ನೇರ ವಿಮಾನ ಸೇವೆ ಕನ್ನಡ ನಾಡಿನ ಇತಿಹಾಸ ಸಾರುವ ಐತಿಹಾಸಿಕ ಪಟ್ಟಣ ಹಂಪಿಗೆ ಸಮೀಪದಲ್ಲೇ ಇರುವ ವಿದ್ಯಾನಗರದ ವಿಮಾನ ನಿಲ್ದಾಣದ ಮೂಲಕ ವಿಮಾನ ಸೇವೆ ಕಾರ್ಯನಿರ್ವಹಿಸಲಿದೆ ಎಂದು ಮಾಹಿತಿ ನೀಡಲಾಗಿದೆ.

ಕಳೆದೊಂದು ತಿಂಗಳಿಂದ ಜೆಎಸ್‌ಡಬ್ಲ್ಯು ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟ ಸ್ಥಗಿತಗೊಳಿಸಿದ್ದು, ಸ್ಥಳೀಯರಲ್ಲಿ ಬೇಸರ ಮೂಡಿಸಿತ್ತು. ಆದರೆ ಈ ಘೋಷಣೆ ಪ್ರಯಾಣಿಕರು ಹಾಗೂ ಸ್ಥಳೀಯರಿಗೂ ನೆಮ್ಮದಿ ನೀಡಿದ್ದು, ಓಡಾಟಕ್ಕೆ ಅನುಕೂಲ ಆಗಲಿದೆ. ಯುನೆಸ್ಕೋ ವಿಶ್ವ ಹೇರಿಟೇಜ್ ತಾಣವಾಗಿ, ಜಗತ್ತಿನ ಮೂಲೆ ಮೂಲೆಯಿಂದ ಪ್ರವಾಸಿಗರನ್ನು ಸೆಳೆಯುವ ನಮ್ಮ ಹಂಪಿಗೆ ಇದೀಗ ವಿಮಾನ ಸೇವೆ ನೇರವಾಗಿ ಸಿಗುತ್ತಿರುವುದು ಕನ್ನಡಿಗರಿಗೆ ಖುಷಿ ಕೊಟ್ಟಿದೆ.

ವಿಮಾನ ಹಾರಾಟದ ಸಮಯ

ನವೆಂಬರ್ 1 ಶನಿವಾರದಿಂದ ತನ್ನ ಸೇವೆಯನ್ನು ಆರಂಭಿಸಲಿರುವ ಬೆಂಗಳೂರು ಟು ಹಂಪಿ ವಿಮಾನವು ಪ್ರತಿದಿನ ಬೆಳಗ್ಗೆ 7.50ಕ್ಕೆ ಬೆಂಗಳೂರಿಂದ ಹಾರಲಿದೆ. ಇನ್ನು 7:50ಕ್ಕೆ ಬೆಂಗಳೂರಿಂದ ಆಕಾಶಕ್ಕೆ ಹಾರುವ ವಿಮಾನ 8.40ಕ್ಕೆ ಹಂಪಿ ಸಮೀಪದ ವಿದ್ಯಾನಗರ ವಿಮಾನ ನಿಲ್ದಾಣ ತಲುಪುತ್ತದೆ. ಹಾಗೆಯೇ ಮರಳಿ ಮತ್ತೆ ಇದೇ ವಿಮಾನ ಬೆಳಗ್ಗೆ 9.10ಕ್ಕೆ ವಿದ್ಯಾನಗರ ನಿಲ್ದಾಣದಿಂದ ಹೊರಟು, 10 ಗಂಟೆಗೆ ಬೆಂಗಳೂರು ತಲುಪುತ್ತದೆ. ವಿಶ್ವವಿಖ್ಯಾತ ತಾಣ ಹಂಪಿಯು ಜೆಎಸ್‌ಡಬ್ಲ್ಯು ವಿದ್ಯಾನಗರ ವಿಮಾನ ನಿಲ್ದಾಣದಿಂದ ಸುಮಾರು 35 ಕಿ.ಮೀ ದೂರದಲ್ಲಿದ್ದು, ಈ ಹಿಂದೆ 150 ಕಿಮೀ ದೂರದ ಹುಬ್ಬಳ್ಳಿಯ ವಿಮಾನ ನಿಲ್ದಾಣ ಬಳಸುವ ಅನಿವಾರ್ಯತೆ ಇತ್ತು. ಆದರೆ ಇದೀಗ ಸಾಕಷ್ಟು ಉಪಯೋಗ ಆಗಲಿದೆ.

ಕೆಸೆಟ್ ಪರೀಕ್ಷೆ ಮುಂದೂಡಲು ಮನವಿ

ಬೆಂಗಳೂರು: ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ -2025 (ಕೆಸೆಟ್- 2025) ಮುಂದೂಡಲು ಕೆಇಎಗೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಮನವಿ ಮಾಡಿದೆ. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಈ ಕುರಿತು ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಪತ್ರ ಬರೆದಿದ್ದು, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ-2025ರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಶಿಕ್ಷಕರು ಕೆಸೆಟ್ ಪರೀಕ್ಷೆಗೆ ಪೂರ್ವಸಿದ್ಧತೆ ಮಾಡಿಕೊಳ್ಳಲು ಸಮಯಾವಕಾಶ ಕಲ್ಪಿಸಿ, ನ.2ರಂದು ನಡೆಯುವ ಕೆಸೆಟ್ ಪರೀಕ್ಷೆಯನ್ನು ಮುಂದೂಡಬೇಕು ಎಂದು ಕೋರಿದ್ದಾರೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ-2025ರ ಗಣತಿ ಕಾರ್ಯವು ರಾಜ್ಯಾದ್ಯಂತ ಅ.4ರಿಂದ ಆರಂಭವಾಗಿದ್ದು, ರಾಜ್ಯ ಸರಕಾರದ ಅಧಿಕಾರಿ-ನೌಕರರು/ಶಿಕ್ಷಕರು ಸಮೀಕ್ಷಾ ಕಾರ್ಯದಲ್ಲಿ ತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಅಂತೆಯೇ, ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವತಿಯಿಂದ ನ.2 ರಂದು ಕೆಸೆಟ್ ಪರೀಕ್ಷೆ ನಿಗದಿಯಾಗಿದೆ.

ಬ್ಯಾಂಕಿಂಗ್ ವಲಯಗಳಲ್ಲಿ ₹50 ಸಾವಿರ ಕೋಟಿ ಎಫ್‌ಡಿಐ



ದೆಹಲಿ: ದೇಶದ ಹಣಕಾಸು ಮತ್ತು ಬ್ಯಾಂಕಿಂಗ್ ವಲಯಗಳಲ್ಲಿ ₹50 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮಾಡುವ ಯೋಜನೆಯನ್ನು ವಿದೇಶಿ ಹೂಡಿಕೆದಾರರು ಕಳೆದ ಕೆಲವು ತಿಂಗಳುಗಳಲ್ಲಿ ಪ್ರಕಟಿಸಿದ್ದಾರೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ. ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಎದುರಾಗುತ್ತಿದ್ದರೂ ಭಾರತವು ಹೂಡಿಕೆಯ ಓಯಸಿಸ್‌ನಂತೆ ಕಾಣುತ್ತಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಇಂದು ಭಾರತವು ಆದ್ಯತೆಯ ಹೂಡಿಕೆ ತಾಣವಾಗಿ ಮುಂದೆಬರುತ್ತಿದೆ ಎಂದು ಹೇಳಿದ್ದಾರೆ. ಅಸ್ಥಿರತೆಯ ಕಾಲಘಟ್ಟದಲ್ಲಿಯೂ ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ಹರಿವು ಚೆನ್ನಾಗಿಯೇ ಇದೆ ಎಂದು ಸಚಿವರು ಎಕ್ಸ್ ಮೂಲಕ ತಿಳಿಸಿದ್ದಾರೆ. ಎಫ್‌ಡಿಐನಲ್ಲಿ ಆಗಿರುವ ಹೆಚ್ಚಳವು ದೇಶದ ಅರ್ಥವ್ಯವಸ್ಥೆಯು ವಿದೇಶಿ ಹೂಡಿಕೆದಾರರಿಗೆ ಹೆಚ್ಚೆಚ್ಚು ಆಕರ್ಷಕವಾಗಿ ಕಾಣುತ್ತಿದೆ ಎಂಬುದನ್ನು ಹೇಳುತ್ತಿದೆ ಎಂದು ಕೂಡ ಅವರು ಅಭಿಪ್ರಾಯಪಟ್ಟಿದ್ದಾರೆ.

ಶೇ.15ರಷ್ಟು ಹೆಚ್ಚಳ

ಏಪ್ರಿಲ್-ಜೂನ್ ಅವಧಿಯಲ್ಲಿ ದೇಶದಲ್ಲಿ ಎಫ್‌ಡಿಐ ಪ್ರಮಾಣವು ಶೇ.15ರಷ್ಟು ಹೆಚ್ಚಾಗಿ 18.62 ಬಿಲಿಯನ್ ಡಾಲರ್‌ಗೆ (ಅಂದಾಜು ₹1.63 ಲಕ್ಷ ಕೋಟಿ) ತಲುಪಿದೆ. ಇದೇ ಅವಧಿಯಲ್ಲಿ ಅಮೆರಿಕದಿಂದ ಆಗಿರುವ ಎಫ್‌ಡಿಐ ಮೊತ್ತವು ಮೂರು ಪಟ್ಟು ಹೆಚ್ಚಾಗಿದೆ

ವಾಯು ಮಾಲಿನ್ಯ ಕಡಿತಗೊಳಿಸುವ ನಿಟ್ಟಿನಲ್ಲೊಂದು ಪ್ರಯತ್ನ | ಹಸಿರು ಪಟಾಕಿ ಬಳಕೆಯತ್ತ ನಗರಗಳ ಒಲವು

ಇದೀಗ ಹಸಿರು ಪಟಾಕಿಯದ್ದೇ ಸದ್ದು

ನರೇಂದ್ರ ಪಾರೆಕಟ್

ದೀಪಾವಳಿ ಎಂದರೆ ಅದು ದೀಪಗಳ ಹಾಗೂ ಪಟಾಕಿಗಳ ಹಬ್ಬ. ಹಾಗಾಗಿ ದೀಪಾವಳಿ ಹಬ್ಬದ ದಿನಗಳಲ್ಲಿ ದೀಪಗಳಿಗೆ ಎಷ್ಟು ಮಹತ್ವ ಇರುತ್ತದೆಯೋ, ಅಷ್ಟೇ ಮಹತ್ವವನ್ನು ಪಟಾಕಿಗಳಿಗೂ ಕೂಡ ಕೊಡುವುದು ಅದೆಷ್ಟೋ ವರ್ಷಗಳಿಂದಲೂ ಬಂದಿರುವ ರೂಢಿ. ಎಷ್ಟೇ ದುಬಾರಿಯಾದರೂ ಕೂಡ ಪಟಾಕಿಗಳನ್ನು ಸಿಡಿಸಿ ಸಂಭ್ರಮ ಪಡುವುದು ದೀಪಾವಳಿ ಹಬ್ಬದ ವಾಡಿಕೆ, ಅದರಲ್ಲೂ ಮಕ್ಕಳಿಗೆ ಪಟಾಕಿ ಸಿಡಿಸುವುದೆಂದರೆ ತುಂಬಾನೇ ಅಚ್ಚುಮೆಚ್ಚು.

ದೀಪಾವಳಿಯ ಪಟಾಕಿ ಸದ್ದು ಒಂದೆಡೆ ಅದನ್ನು ಸಿಡಿಸುವವರ ಮನಸ್ಸಿನ ಖುಷಿಗೆ ಕಾರಣವಾದರೆ, ಮತ್ತೊಂದೆಡೆ ದೀಪಾವಳಿ ಹಬ್ಬದ ವೇಳೆಗೆ ಪಟಾಕಿ ಅನಾಹುತ ಆಗುತ್ತಿರುವ ಸುದ್ದಿಯನ್ನು ನಾವು ಓದುತ್ತಿರುತ್ತೇವೆ. ದೈಹಿಕ ಗಾಯಗಳಷ್ಟೇ ಅಲ್ಲದೇ ಪಟಾಕಿಯಲ್ಲಿ ತುಂಬಿಸಿರುವ ರಾಸಾಯನಿಕ ಮದ್ದಿನಿಂದಾಗಿ ಅವುಗಳಿಂದ ಹೊರ ಹೊಮ್ಮುವ ಹೊಗೆ ಪರಿಸರಕ್ಕೆ ಬಹಳ ಹಾನಿಯನ್ನುಂಟು ಮಾಡುತ್ತದೆ ಎಂಬುವುದು ಹೆಚ್ಚಿನವರಿಗೆ ತಿಳಿದಿರುವ ವಿಚಾರ. ಹಾಗೆಯೇ ಪಟಾಕಿ ಸಿಡಿಯುವಾಗ ಅದರಿಂದ ಬರುವ ದೊಡ್ಡ ಶಬ್ದವು, ತಾತ್ಕಾಲಿಕ ಶ್ರವಣದೋಷ ಅಂದರೆ, ಕಿವಿಗೆ ಸಂಬಂಧಪಟ್ಟ ಸಮಸ್ಯೆ ಮತ್ತು ಶಾಶ್ವತ ಕಿವುಡುತನದಂತಹ ಸಮಸ್ಯೆಗಳನ್ನೂ ಕೆಲವೊಮ್ಮೆ ಉಂಟುಮಾಡಬಲ್ಲದು. ಹೀಗಾಗಿ ಇವೆಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಪಟಾಕಿ ಮಾರುಕಟ್ಟೆಯಲ್ಲಿ ಹೊಸತೊಂದು ಹೆಸರು ಕೇಳಿ ಬರುತ್ತಿದೆ, ಅದೇ ಹಸಿರು ಪಟಾಕಿ.

ಹಸಿರು ಪಟಾಕಿ ಎಂದರೆ ಅದರ ಬಗ್ಗೆ ತಪ್ಪಾಗಿ ಅರ್ಥೈಸುವವರೇ ಹೆಚ್ಚು, ಅದರ ಹೊರಭಾಗಕ್ಕೆ ಸುತ್ತಿದ ಹಾಳೆ ಹಸಿರು ಬಣ್ಣದ್ದು ಎಂದರ್ಥವಲ್ಲ. ಸಾಂಪ್ರದಾಯಿಕ ಪಟಾಕಿಗಳಿಗೆ ಹೋಲಿಸಿದರೆ ಕಡಿಮೆ ವಾಯು ಮಾಲಿನ್ಯ ಮತ್ತು ಶಬ್ದಮಾಲಿನ್ಯವನ್ನು ಉಂಟು ಮಾಡುವ ಪರಿಸರಸ್ನೇಹಿ ಪಟಾಕಿಗಳನ್ನು 'ಹಸಿರು ಪಟಾಕಿ' ಎನ್ನುತ್ತೇವೆ. ಈ ಪಟಾಕಿಗಳು ಸಾಮಾನ್ಯ ಪಟಾಕಿಗಳಿಗಿಂತ ಕಡಿಮೆ ಹಾನಿಕಾರಕ ರಾಸಾಯನಿಕಗಳನ್ನು ಹೊಂದಿರುತ್ತವೆ, ಹಾಗೆಯೇ ಅವುಗಳನ್ನು ಸುಟ್ಟಾಗ ಕಡಿಮೆ ಹೊಗೆ ಮತ್ತು ಕಡಿಮೆ ಶಬ್ದ ಹೊರಬರುತ್ತದೆ. ಬೇರಿಯಂ ನೈಟ್ರೇಟ್, ಸಲ್ಫರ್ ಮತ್ತು ಪೊಟ್ಯಾಸಿಯಮ್ ನೈಟ್ರೇಟ್‌ನಂತಹ ಹಾನಿಕಾರಕ ರಾಸಾಯನಿಕಗಳನ್ನು ಅಂತಹ ಪಟಾಕಿಗಳು ಹೊಂದಿರುವುದಿಲ್ಲ, ಇಲ್ಲವೇ ಅವು ಬಹಳ ಕಡಿಮೆ ಪ್ರಮಾಣದಲ್ಲಿರುತ್ತವೆ. ಹಾಗಾಗಿ ಅವು ಇತರ ಸಾಮಾನ್ಯ ಪಟಾಕಿಗಳಿಗೆ ಹೋಲಿಸಿದರೆ ಗಾಳಿಯಲ್ಲಿ ಹಾನಿಕಾರಕ ಅಂಶಗಳನ್ನು ಕಡಿಮೆ ಪ್ರಮಾಣದಲ್ಲಿ ಸೃಷ್ಟಿಸುತ್ತದೆ ಎಂಬುದಂತೂ ಒಪ್ಪಬೇಕಾದ ವಿಚಾರ.

ಹಸಿರು ಪಟಾಕಿಗಳು ಉರಿಯುವಾಗ ಅವು ನೀರಿನ ಆವಿ ಅಥವಾ ಗಾಳಿಯಂತಹ ಅನಿಲಗಳನ್ನು ಬಿಡುಗಡೆ ಮಾಡುತ್ತವೆ, ಹಾಗೆಯೇ ಅವು ಹೊರಸೂಸುವ ಶಬ್ದವು ಸೀಮಿತವಾಗಿದ್ದು, ಸರಿಸುಮಾರು 110ರಿಂದ 125 ಡೆಸಿಬಲ್‌ಗಳಾಗಿವೆ. ಆದರೆ ಸಾಂಪ್ರದಾಯಿಕ ಪಟಾಕಿಗಳು 160 ಡೆಸಿಬಲ್‌ಗಳವರೆಗಿನ ಶಬ್ದವನ್ನೂ ಉತ್ಪಾದಿಸಬಹುದು.

ಹಸಿರು ಪಟಾಕಿಗಳ ಪತ್ತೆ ಹೇಗೆ?

- ಪಟಾಕಿ ಬಾಕ್ಸ್‌ನಲ್ಲಿ ಬಾರ್‌ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅದು ಹಸಿರು ಪಟಾಕಿಯೇ, ಅಲ್ಲವೇ ಎಂದು ತಿಳಿಯಲು ಸಾಧ್ಯ
- ಪಟಾಕಿ ಬಾಕ್ಸ್ ತೆರೆದು ಅದರೊಳಗೆ ಇರುವ ಲೇಬಲ್ ಅನ್ನು ನೋಡಿ ಅದು ಯಾವ ವಸ್ತುಗಳಿಂದ (ಬ್ಯಾರಿಯಮ್ ನೈಟ್ರೇಟ್ ಮುಂತಾದವುಗಳ ಬದಲಿಗೆ ಇತರ ಸುರಕ್ಷಿತ ವಸ್ತುಗಳು) ತಯಾರಿಸಲ್ಪಟ್ಟಿದೆ ಎಂಬುದನ್ನು ಪರಿಶೀಲಿಸಬಹುದು. ಅದರ ಮೇಲೆ ಹಸಿರು ಪಟಾಕಿಯ ಬಗ್ಗೆ ಇತರ ಮಾಹಿತಿಯೂ ಲಭ್ಯ.
- ಪಟಾಕಿ ಕಂಪನಿಯ ಹೆಸರನ್ನು ಗೂಗಲ್‌ನಲ್ಲಿ ಹುಡುಕಿದರೆ ಹಸಿರು ಪಟಾಕಿಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯ.

ಬೊಟ್ಟು ಮಾಡಬಹುದಾದ ವ್ಯತ್ಯಾಸ: ಸಾಮಾನ್ಯ ಪಟಾಕಿಗಳು ಭಾರ ಲೋಹಗಳ ಸಂಯುಕ್ತಗಳನ್ನು (ಸೀಸ, ಅಲ್ಯೂಮಿನಿಯಂ, ಬೇರಿಯಂ ಇತ್ಯಾದಿ) ಹೊಂದಿರುತ್ತವೆ, ಅವುಗಳನ್ನು ಸಿಡಿಸಿದರೆ ಗಾಳಿ ಮತ್ತು ಆರೋಗ್ಯ ಎರಡಕ್ಕೂ ಅತ್ಯಂತ ಹಾನಿಕಾರಕ. ಜಿಯೋಲೈಟ್ ಮತ್ತು ಕಬ್ಬಿಣದ ಆಕ್ಸೈಡ್‌ನಂತಹ ಬಹುಕ್ರಿಯಾತ್ಮಕ ವಸ್ತುಗಳನ್ನು ಹಸಿರು ಪಟಾಕಿಗಳಿಗೆ ಸೇರಿಸಲಾಗುತ್ತದೆ, ಹಾಗಾಗಿ ಅದು ರಾಸಾಯನಿಕ ಅಂಶವನ್ನು ಕಡಿಮೆ ಮಾಡುವ ಮೂಲಕ ವಿಷಕಾರಿ ಅಂಶವನ್ನು ಹೊರ ಸೂಸುವಿಕೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಸಾಮಾನ್ಯ ಪಟಾಕಿಗಳಿಗೆ ಹೋಲಿಸಿದರೆ, ಹಸಿರು ಪಟಾಕಿಗಳು ಕಡಿಮೆ ಮಾಲಿನ್ಯವನ್ನು ಹರಡುವ ಕಾರಣ ಆರೋಗ್ಯಕ್ಕೂ ಬಹಳಷ್ಟು ಮಟ್ಟಿಗೆ ಸುರಕ್ಷಿತ ಆಯ್ಕೆಯೆಂದು ಪರಿಗಣಿಸಲಾಗುತ್ತದೆ.

ರಾಜ್ಯದಲ್ಲೂ ಹಸಿರು ಪಟಾಕಿಗೇ ಒತ್ತು

ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಪಟಾಕಿ ಬಳಕೆಗೆ ಸಂಬಂಧಿಸಿದಂತೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮಹತ್ವದ ಆದೇಶ ಹೊರಡಿಸಿದೆ. ಪರಿಸರಸ್ನೇಹಿ ಆಚರಣೆಗೆ ಒತ್ತು ನೀಡುವ ಸಲುವಾಗಿ, ಕೇವಲ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಎಂದು ಮಂಡಳಿಯು ರಾಜ್ಯದ ಜನತೆಗೆ ಈ ಬಾರಿ ಸೂಚನೆ ನೀಡಿದೆ.

ಕಡಿಮೆ ಮಾಲಿನ್ಯಮುಕ್ತ ಗುಣ: ಹಸಿರು ಪಟಾಕಿಗಳು ಸಂಪೂರ್ಣವಾಗಿ ಮಾಲಿನ್ಯ ಮುಕ್ತವಲ್ಲ, ಆದರೆ ಅವು ಸಾಮಾನ್ಯ ಪಟಾಕಿಗಳಿಗಿಂತ ಸುಮಾರು 30 ಪ್ರತಿಶತ ಕಡಿಮೆ ವಾಯುಮಾಲಿನ್ಯವನ್ನಷ್ಟೇ ಉಂಟುಮಾಡುತ್ತವೆ ಎಂಬುವುದು ಗಮನಾರ್ಹ ವಿಷಯ. ಈ ಮಾಲಿನ್ಯವು ಮುಖ್ಯವಾಗಿ ಕಣಗಳಿಂದ ಉಂಟಾಗುತ್ತದೆ, ಅಂದರೆ ಅವು ಗಾಳಿಯಲ್ಲಿ ತೇಲುತ್ತಿರುವ ಸಣ್ಣ ಧೂಳಿನ ಕಣಗಳಾಗಿವೆ, ಗಾತ್ರವನ್ನು ಆಧರಿಸಿ ದೇಹದೊಳಕ್ಕೆ ಸೇರಿದಾಗ ಉಸಿರಾಟದ ಸಮಸ್ಯೆಗಳನ್ನು ಹೆಚ್ಚಿಸಬಲ್ಲದು. ಹಾಗಾಗಿ ವಾತಾವರಣಗಳಲ್ಲಿ ಕಡಿಮೆ ಧೂಳಿನ ಕಣಗಳನ್ನು ಸೃಷ್ಟಿಸುವ ಹಸಿರು ಪಟಾಕಿ ಬಳಕೆ ಸ್ವಲ್ಪ ಮಟ್ಟಿಗಾದರೂ ಸುರಕ್ಷಿತ ಎಂಬುದನ್ನು ಎಲ್ಲರೂ ಮನಗಾಣುವುದು ಉತ್ತಮ. ಆ ಕಾರಣಕ್ಕಾಗಿ ಬೆಂಗಳೂರು ಮಹಾನಗರವೂ ಸೇರಿದಂತೆ ದೇಶದ ಇತರ ನಗರಗಳಾದ ದೆಹಲಿ, ಕೋಲ್ಕತ್ತಾ, ಮುಂಬೈಯಲ್ಲೂ ಕಳೆದ ವರ್ಷಗಳಿಗೆ ಹೋಲಿಸಿದರೆ ಸಾಮಾನ್ಯ ಪಟಾಕಿಯ ಸದ್ದಂತೂ ಕಮ್ಮಿ ಆಗಿರುವುದು ಸ್ವಲ್ಪ ಮಟ್ಟಿಗಿನ ಸಮಾಧಾನಕರ ಸಂಗತಿ.

ಸಮಾಚಾರ ಸಣ್ಣದಲ್ಲ

ಮೋದಿ, ರಾಷ್ಟ್ರಪತಿಯಿಂದ ದೀಪಾವಳಿ ಶುಭಾಶಯ

ದೆಹಲಿ: ಪ್ರಧಾನಿ ನರೇಂದ್ರ ಮೋದಿ , ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ದೇಶ ವಿದೇಶಗಳ ಅನೇಕ ನಾಯಕರುಗಳು ಭಾರತೀಯರಿಗೆ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳನ್ನು ಕೋರಿದ್ದಾರೆ.

ಸಾಮಾಜಿಕ ಮಾಧ್ಯಮವಾದ ಎಕ್ಸ್ ಖಾತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ, ದೇಶದ ಜನತೆಗೆ ದೀಪಾವಳಿಯ ಶುಭಾಶಯ ಕೋರಿದರು. ಬೆಳಕಿನ ಹಬ್ಬವು ದೇಶವಾಸಿಗಳ ಜೀವನವನ್ನು ಸಾಮರಸ್ಯ ಮತ್ತು ಸಂತೋಷದಿಂದ ಬೆಳಗಿಸಲಿ. ನಮ್ಮ ಸುತ್ತಲೂ ಸಕಾರಾತ್ಮಕತೆಯ ಚೈತನ್ಯ ಮೇಲುಗೈ ಸಾಧಿಸಲಿ ಎಂದು ಹಾರೈಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೂಡ ದೇಶದ ಜನತೆಗೆ ದೀಪಾವಳಿ ಶುಭಾಶಯಗಳನ್ನು ತಿಳಿಸಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಈ ಹಬ್ಬವು ಬಡವರು ಮತ್ತು ನಿರ್ಗತಿಕರಿಗೆ ಸಹಾಯ ಮಾಡಲು ಮತ್ತು ಬೆಂಬಲಿಸಲು ಎಲ್ಲರಿಗೂ ಅವಕಾಶ ನೀಡುತ್ತದೆ. ಅವರ ಜೀವನದಲ್ಲಿ ಸಂತೋಷವನ್ನು ತರುತ್ತದೆ. ದೀಪಾವಳಿಯನ್ನು ಸುರಕ್ಷಿತವಾಗಿ, ಜವಾಬ್ದಾರಿಯುತವಾಗಿ ಮತ್ತು ಪರಿಸರ ಸ್ನೇಹಿ ರೀತಿಯಲ್ಲಿ ಆಚರಿಸಿ ಎಂದು ಹೇಳಿದ್ದಾರೆ. ಭಾರತದ ಅತ್ಯಂತ ಜನಪ್ರಿಯ ಹಬ್ಬಗಳಲ್ಲಿ ಒಂದಾದ ದೀಪಾವಳಿಯನ್ನು ಬಹಳ ಉತ್ಸಾಹದಿಂದ ಆಚರಿಸಲಾಗುತ್ತದೆ. ಈ ಹಬ್ಬವು ಕತ್ತಲೆಯ ಮೇಲೆ ಬೆಳಕು, ಅಜ್ಞಾನದ ಮೇಲೆ ಜ್ಞಾನ ಮತ್ತು ಕೆಟ್ಟದ್ದರ ಮೇಲೆ ಒಳ್ಳೆಯದರ ವಿಜಯವನ್ನು ಸಂಕೇತಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಬ್ಯಾಂಕಾಕ್‌ನಲ್ಲಿ ಭಾರತೀಯ ವ್ಯಕ್ತಿಯ ಬಂಧನ

ಬ್ಯಾಂಕಾಕ್: ಬ್ಯಾಂಕಾಕ್‌ನ ಸಿಯಾಮ್ ಸ್ಕ್ವೇರ್‌ನಲ್ಲಿ ಪಿಸ್ತೂಲ್ ಆಕಾರದ ವಸ್ತು ತೋರಿಸಿ ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದ ಆರೋಪಿದ ಮೇಲೆ ಭಾರತೀಯ ಮೂಲದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು 41 ವರ್ಷದ ಸಾಹಿಲ್ ರಾಮ್ ಥಡಾನಿ ಎಂದು ಗುರುತಿಸಲಾಗಿದೆ. ಪಾಥುಮ್ ವಾನ್ ಜಿಲ್ಲೆಯ ಸಿಯಾಮ್ ಸ್ಕ್ವೇರ್ ಸೋಯಿ-6ನಲ್ಲಿರುವ ನೊವೊಟೆಲ್ ಬ್ಯಾಂಕಾಕ್ ಹೋಟೆಲ್ ಬಳಿ ಈ ಘಟನೆ ನಡೆದಿದೆ. ವ್ಯಕ್ತಿಯೊಬ್ಬ ಪಿಸ್ತೂಲ್ ಆಕಾರದ ವಸ್ತುವನ್ನು ತೋರಿಸುತ್ತಾ ಭಯ ಹುಟ್ಟಿಸುವ ರೀತಿಯಲ್ಲಿ ವರ್ತಿಸುತ್ತಿದ್ದಾನೆ ಎಂಬ ಮಾಹಿತಿ ಬಂದ ಬಳಿಕ ಪೊಲೀಸರು ಸ್ಥಳಕ್ಕಾಗಮಿಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಯು ಜನಸಂದಣಿ ಇರುವ ಸ್ಥಳಗಳಲ್ಲಿ, ಸಾರ್ವಜನಿಕರತ್ತ ಪಿಸ್ತೂಲ್ ಆಕಾರದ ವಸ್ತುವನ್ನು ತೋರಿಸಿ ಕಿರುಚಾಡಿದ್ದು, ಅದರ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಆರೋಪಿಯ ವರ್ತನೆಯಿಂದ ಹಲವು ಜನರು ಭಯಭೀತರಾಗಿ ಓಡಾಡುತ್ತಿರುವುದನ್ನು ಕಂಡ ಭದ್ರತಾ ಸಿಬ್ಬಂದಿ, ಸ್ಥಳಕ್ಕೆ ಧಾವಿಸಿ ಪೊಲೀಸರು ಬರುವವರೆಗೂ ಪರಿಸ್ಥಿತಿಯನ್ನು ನಿಭಾಯಿಸಲು ಯತ್ನಿಸಿದ್ದಾರೆ.

ಬಿ ಖಾತಾದಿಂದ ಎ ಖಾತಾಗೆ 500ಕ್ಕೂ ಅಧಿಕ ಅರ್ಜಿ ಸಲ್ಲಿಕೆ

ಬೆಂಗಳೂರು: ನಗರದಲ್ಲಿ ಬಿ ಖಾತಾದಿಂದ ಎ ಖಾತಾಗೆ ಪರಿವರ್ತನೆಯಾಗಲು ಈಗಾಗಲೇ ಅರ್ಜಿ ಆಹ್ವಾನಿಸಿದ್ದು, ಒಟ್ಟು 500ಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸಿದ್ದಾರೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾಹಿತಿ ನೀಡಿದ್ದಾರೆ. ಮಂಗಳವಾರದಿಂದ ಬೆಂಗಳೂರು ಒನ್‌ನಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ ದೊರೆಯಲಿದೆ. ಜಿಬಿಎ ಜಾರಿ ಆದ ಬಳಿಕ ಸರಕಾರ ಬಿ ಖಾತೆಗಳಿಗೆ ಎ ಖಾತೆ ಮಾನ್ಯತೆ ನೀಡುವ ಮೂಲಕ ದೊಡ್ಡ ಅನುಕೂಲ ಮಾಡಿಕೊಟ್ಟಿದ್ದು, ಡಿಸಿಎಂ ಡಿಕೆ ಶಿವಕುಮಾರ್ ವೆಬ್‌ಸೈಟ್ ಬಿಡುಗಡೆ ಮಾಡಿ ಎ ಖಾತಾ ಪರಿವರ್ತನೆಗೆ ಅರ್ಜಿ ಆಹ್ವಾನಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅರ್ಜಿ ಹಾಕುವುದಕ್ಕೆ ಐದು ದಿನಗಳ ಅವಕಾಶವನ್ನು ನೀಡಿದ್ದು, 500 ಜನ ಅರ್ಜಿ ಸಲ್ಲಿಕೆ ಮಾಡಿದ್ದಾರೆ. 3 ಸಾವಿರ ಜನ ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ ಎಂದು ತಿಳಿದು ಬಂದಿದ್ದು, ಬಿ ಖಾತಾ ಪರಿವರ್ತನೆಯ ವೆಬ್‌ಸೈಟ್‌ಗೆ ಭೇಟಿ ನೀಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ ಎಂದು ಹೇಳಿದ್ದಾರೆ.

51 ಉದ್ಯೋಗಿಗಳಿಗೆ ಕಾರು ಉಡುಗೊರೆ

ಚಂಡೀಘಢ: ಇಲ್ಲಿನ ಫಾರ್ಮಾ ಕಂಪನಿಯ ಮಾಲೀಕರೊಬ್ಬರು ತಮ್ಮ ಕಂಪನಿಯ ಉದ್ಯೋಗಿಗಳಿಗೆ 51 ಕಾರುಗಳನ್ನು ದೀಪಾವಳಿ ಹಬ್ಬದ ಉಡುಗೊರೆಯಾಗಿ ನೀಡಿದ್ದಾರೆ. ಎಂಐಟಿಎಸ್ ಫಾರ್ಮಾ ಕಂಪನಿಯ ಸ್ಥಾಪಕ, ಅಧ್ಯಕ್ಷ ಎಂ.ಕೆ ಭಾಟಿಯಾ ಅವರು ಸ್ಕಾರ್ಪಿಯೋ ಎಸ್‌ಯುವಿ ಕಾರುಗಳ ಕೀಗಳನ್ನು ತಮ್ಮ ಕಂಪನಿಯ 51 ಉದ್ಯೋಗಿಗಳಿಗೆ ನೀಡಿದ್ದಾರೆ. ಎಂಐಟಿಎಸ್ ಫಾರ್ಮಾ ಕಂಪನಿಯಲ್ಲಿ ಅತ್ಯುತ್ತಮ ಕೆಲಸ ಮಾಡಿದ ಆಯ್ದ 51 ಉದ್ಯೋಗಿಗಳಿಗೆ ಎಂ.ಕೆ ಭಾಟಿಯಾ ಎಸ್‌ಯುವಿ ಕಾರ್‌ಗಳನ್ನು ಉಡುಗೊರೆಯಾಗಿ ಕೊಟ್ಟಿದ್ದಾರೆ. ಈ ಹಿಂದೆಯೂ ಎರಡು ಬಾರಿ ತಮ್ಮ ಕಂಪನಿಯ ಉದ್ಯೋಗಿಗಳಿಗೆ ಕಾರುಗಳನ್ನು ಉಡುಗೊರೆ ನೀಡಿದ್ದರು. ಈ ವರ್ಷವೂ ಸತತ ಮೂರನೇ ಬಾರಿಗೆ ತಮ್ಮ ಕಂಪನಿ ಉದ್ಯೋಗಿಗಳಿಗೆ ಉಡುಗೊರೆ ನೀಡುವುದನ್ನು ಮುಂದುವರಿಸಿದ್ದಾರೆ. ಈ ಮೂಲಕ ಎಂ.ಕೆ ಭಾಟಿಯಾ ಎಲ್ಲರ ಗಮನ ಸೆಳೆದಿದ್ದಾರೆ.

ವಸತಿ ಕಟ್ಟಡದಲ್ಲಿ ಬೆಂಕಿ

ಮುಂಬೈ: ಒಂದು ಅಂತಸ್ತಿನ ವಸತಿ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡು ಬಾಲಕನೋರ್ವ ಸಾವನ್ನಪ್ಪಿದ್ದು, ಮೂವರು ಗಂಭೀರವಾಗಿ ಗಾಯಗೊಂಡ ಘಟನೆ ಮಹಾರಾಷ್ಟ್ರದ ಮುಂಬೈನ ಕಫೆ ಪರೇಡ್ ಪ್ರದೇಶದ ಚಾಲ್‌ನಲ್ಲಿ ಸೋಮವಾರ ನಡೆದಿದೆ. ಕ್ಯಾಪ್ಟನ್ ಪ್ರಕಾಶ್ ಪೇಥೆ ಮಾರ್ಗದಲ್ಲಿರುವ ಶಿವಶಕ್ತಿ ನಗರದ ಚಾಲ್‌ನಲ್ಲಿ ಸೋಮವಾರ ಬೆಳಗ್ಗೆ ಸುಮಾರು 4.15ಕ್ಕೆ ಈ ಘಟನೆ ನಡೆದಿದೆ. ಗಾಯಾಳುಗಳನ್ನು ತಕ್ಷಣ ಸೇಂಟ್ ಜಾರ್ಜ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಲ್ಲಿ 15 ವರ್ಷದ ಯಶ್ ವಿಠ್ಠಲ್ ಖೋಟ್ ಎಂಬ ಬಾಲಕ ಮೃತಪಟ್ಟಿದ್ದಾನೆ ಎಂದು ಬೃಹನ್‌ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶಿವಶಕ್ತಿ ನಗರದ ಚಾಲ್‌ನಲ್ಲಿ ಸೋಮವಾರ ಮುಂಜಾನೆ ನಡೆದ ಬೆಂಕಿ ದುರಂತದಲ್ಲಿ ದೇವೇಂದ್ರ ಚೌಧರಿ (30), ವಿರಾಜ್ ಖೋಟ್ (13) ಮತ್ತು ಸಂಗ್ರಾಮ್ ಕುರ್ನೆ (25) ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಐಸಿಯುಗೆ ದಾಖಲಿಸಲಾಗಿದೆ.

ದೀಪಾವಳಿ ಮೊದಲ ದಿನವೇ ರಾಷ್ಟ್ರ ರಾಜಧಾನಿಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಎಚ್ಚರಿಕೆ

ದೆಹಲಿಯಲ್ಲಿ ಹೆಚ್ಚಿದ ವಾಯುಮಾಲಿನ್ಯ

ದೆಹಲಿ: ಬೆಳಕಿನ ಹಬ್ಬ ದೀಪಾವಳಿ ಮೊದಲ ದಿನವೇ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸೋಮವಾರ ವಾಯು ಮಾಲಿನ್ಯ ಹದಗೆಟ್ಟಿದೆ. ಕಳೆದ ಏಳು ದಿನಗಳಿಂದ ನಿರಂತರವಾಗಿ ಹೆಚ್ಚುತ್ತಿರುವ ವಾಯು ಮಾಲಿನ್ಯ ಸದ್ಯ ಎಕ್ಯೂಐ 400ರ ಗಡಿ ದಾಟಿದೆ. ಮುಂದಿನ ಒಂದು ವಾರದಲ್ಲಿ ಈ ಪ್ರಮಾಣ 600 ಗಡಿ ದಾಟಬಹುದು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಎಚ್ಚರಿಕೆ ನೀಡಿದೆ.

ದೆಹಲಿಯ 38 ಮೇಲ್ವಿಚಾರಣಾ ಕೇಂದ್ರಗಳ ಪೈಕಿ 24 ಕೇಂದ್ರಗಳಲ್ಲಿ ಗಾಳಿಯ ಗುಣಮಟ್ಟ ತುಂಬಾ ಕಳಪೆ ಮಟ್ಟವನ್ನು ದಾಖಲಿಸಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ. ಸೋಮವಾರ ಬೆಳಗ್ಗೆ ಆನಂದ್ ವಿಹಾರ್ ನಗರದಲ್ಲಿ ಅತ್ಯಂತ ವಿಷಕಾರಿ ಗಾಳಿಯನ್ನು ವರದಿ ಮಾಡಿದೆ, ಎಕ್ಯೂಐ 417ರೊಂದಿಗೆ, ಇದು ತೀವ್ರ ಕಳಪೆ ವರ್ಗಕ್ಕೆ ಇಳಿದಿದೆ. ವಜೀರ್‌ಪುರ (364), ವಿವೇಕ್ ವಿಹಾರ್ (351), ದ್ವಾರಕಾ (335), ಮತ್ತು ಆರ್‌ಕೆ ಪುರಂ (323) ಸೇರಿದಂತೆ 12 ನಿಲ್ದಾಣಗಳು ಗಾಳಿಯ ಗುಣಮಟ್ಟವನ್ನು ತುಂಬಾ ಕಳಪೆ ವ್ಯಾಪ್ತಿಯಲ್ಲಿ ವರದಿ ಮಾಡಿವೆ.

ಸಿಪಿಸಿಬಿ ದತ್ತಾಂಶದ ಪ್ರಕಾರ, ಸಿರಿ ಫೋರ್ಟ್, ದಿಲ್ಶಾದ್ ಗಾರ್ಡನ್ ಮತ್ತು ಜಹಾಂಗೀರ್‌ಪುರಿ ಮುಂತಾದ ಇತರ ಪ್ರದೇಶಗಳು 318 ಎಕ್ಯೂಐ ದಾಖಲಿಸಿವೆ. ಪಂಜಾಬಿ ಬಾಗ್ 313, ನೆಹರು ನಗರ 310, ಅಶೋಕ್ ವಿಹಾರ್ 305 ಮತ್ತು ಬವಾನಾ 304ರ ವಾಯು ಗುಣಮಟ್ಟ ಸೂಚ್ಯಂಕವನ್ನು ದಾಖಲಿಸಿವೆ.

ದೆಹಲಿಯಲ್ಲಿ ಮಾಲಿನ್ಯ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ಗ್ರೇಡೆಡ್ ರೆಸ್ಪಾನ್ಸ್ ಆ್ಯಕ್ಷನ್ ಪ್ಲಾನ್ ರಚಿಸಲಾಗಿದೆ. ಆ್ಯಕ್ಷನ್ ಕ್ವಾಲಿಟಿ ಇಂಡೆಕ್ಸ್ 301ರಿಂದ 400ರ ವರೆಗಿನ ಅತ್ಯಂತ ಕಳಪೆ ವರ್ಗಕ್ಕೆ ಸೇರಿದಾಗ ಅದನ್ನು



ಜಾರಿಗೊಳಿಸಲಾಗುತ್ತದೆ.

ಈ ನಿಯಮಗಳ ಪ್ರಕಾರ ಮಾಲಿನ್ಯ ನಿಯಂತ್ರಣಕ್ಕೆ ಬರುವವರೆಗೂ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ನಿಲ್ಲಿಸಬೇಕಾಗುತ್ತದೆ. ಅಗತ್ಯ ಸೇವೆಗಳನ್ನು ಹೊರತುಪಡಿಸಿ ಡೀಸೆಲ್ ಜನರೇಟರ್‌ಗಳ ಬಳಕೆಯನ್ನು ನಿರ್ಬಂಧಿಸಲಾಗುತ್ತದೆ. ಅಂತರ್ ರಾಜ್ಯ ಬಸ್‌ಗಳ ಪ್ರವೇಶವನ್ನು , ಎಲೆಕ್ಟ್ರಿಕ್ ಅಥವಾ ಡೀಸೆಲ್ ಇಂಧನದಕ್ಕೆ ಮಾತ್ರ ಸೀಮಿತಗೊಳಿಸುವುದು. ದೆಹಲಿಯಲ್ಲಿ ಸಾರ್ವಜನಿಕ ಸಾರಿಗೆಯನ್ನು ಬಲಪಡಿಸುವುದು, ಮತ್ತು ಎಲೆಕ್ಟ್ರಿಕ್ ಬಸ್‌ಗಳನ್ನು ಹೆಚ್ಚಿಸುವುದು, ಮೆಟ್ರೊ ಸೇವೆಗಳ ಆಪರೇಷನ್ ಫ್ರೀಕ್ವೆನ್ಸಿಯನ್ನು ಹೆಚ್ಚಿಸುವುದು, ಖಾಸಗಿ ವಾಹನಗಳನ್ನು ತಡೆಯಲು ಪಾರ್ಕಿಂಗ್ ಶುಲ್ಕಗಳನ್ನು ಹೆಚ್ಚಿಸಲಾಗುವುದು ಕೂಡಾ ಸೇರಿವೆ.

ದೆಹಲಿ ಸಿಎಂ ಮನವಿ

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ದೀಪಾವಳಿಯ ಸಂದರ್ಭದಲ್ಲಿ ರಾಷ್ಟ್ರ ರಾಜಧಾನಿಯಲ್ಲಿರುವವರು ಸುಪ್ರಿಂಕೋರ್ಟ್ ಆದೇಶದಂತೆ ಎಲ್ಲರೂ ಹಸಿರು ಪಟಾಕಿಗಳನ್ನು ಮಾತ್ರ ಸಿಡಿಸುವಂತೆ ಮನವಿ ಮಾಡಿದ್ದಾರೆ. ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ, ಪಟಾಕಿಗಳನ್ನು ಬೆಳಿಗ್ಗೆ 6ರಿಂದ 7ರವರೆಗೆ ಮತ್ತು ರಾತ್ರಿ 8ರಿಂದ ರಾತ್ರಿ 10ರವರೆಗೆ ಮಾತ್ರ ಮಾರಾಟ ಮಾಡಲು ಅವಕಾಶವಿರುತ್ತದೆ ಎಂದಿದ್ದಾರೆ. ದೀಪಗಳನ್ನು ಬೆಳಗಿಸುವ ಮೂಲಕ, ರಂಗೋಲಿ ಬಿಡಿಸುವ ಮೂಲಕ ಮತ್ತು ಸಿಹಿತಿಂಡಿಗಳನ್ನು ಹಂಚಿಕೊಳ್ಳುವ ಮೂಲಕ ಸಾಂಪ್ರದಾಯಿಕ ರೀತಿಯಲ್ಲಿ ಬೆಳಕಿನ ಹಬ್ಬವನ್ನು ಆಚರಿಸಲು ಅವರು ರಾಷ್ಟ್ರ ರಾಜಧಾನಿಯ ಜನರಿಗೆ ಅವರು ಕರೆ ನೀಡಿದ್ದಾರೆ.

---

21 ವರ್ಷಗಳ ಹಿಂದಿನ ದರೋಡೆ ಪ್ರಕರಣದ ಹಿನ್ನೆಲೆ

ಜಾರ್ಖಂಡ್: ನಾಮಪತ್ರ ಸಲ್ಲಿಸಿದ ಮರುಕ್ಷಣವೇ ಅಭ್ಯರ್ಥಿ ಬಂಧನ

ರಾಂಚಿ: 21 ವರ್ಷಗಳ ಹಿಂದಿನ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್‌ನ ಗರ್ವಾ ಠಾಣೆಯ ಪೊಲೀಸರು ಸಸಾರಂ ವಿಧಾನಸಭಾ ಕ್ಷೇತ್ರದ ಆರ್‌ಜೆಡಿ (ಸಸಾರಂ ವಿಧಾನಸಭಾ ಕ್ಷೇತ್ರದ) ಅಭ್ಯರ್ಥಿ ಸತ್ಯೇಂದ್ರ ಸಾಹಾ ಅವರನ್ನು ಬಂಧಿಸಿದ್ದಾರೆ.

ಸತ್ಯೇಂದ್ರ ಸಾಹ ಸೋಮವಾರ ನಾಮಪತ್ರ ಸಲ್ಲಿಸಲು ಸಸಾರಂ ಉಪವಿಭಾಗ ಕಚೇರಿಗೆ ಆಗಮಿಸಿದ್ದರು. ನಾಮಪತ್ರ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಾರ್ಖಂಡ್‌ನ ಗರ್ವಾ ಪೊಲೀಸರು 2004ರ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಶ್ವತ ವಾರಂಟ್ ಆಧಾರದ ಮೇಲೆ ಅವರನ್ನು ಬಂಧಿಸಿದ್ದಾರೆ. ರಾಜಕೀಯ ಕೋಲಾಹಲಕ್ಕೆ ಈ ಘಟನೆಯು ಕಾರಣವಾಗಿದ್ದು, ಆರ್‌ಜೆಡಿ ಬೆಂಬಲಿಗರು ಆಕ್ರೋಶ ಹೊರಹಾಕಿದ್ದಾರೆ

ಸತ್ಯೇಂದ್ರ ಸಾಹ್ ಕಾರ್ಗಹರ್ ಪೊಲೀಸ್ ಠಾಣೆ ಪ್ರದೇಶದ ನಿವಾಸಿಯಾಗಿದ್ದು, ಅವರ ವಿರುದ್ಧ ಹಲವಾರು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. 21 ವರ್ಷದ ಹಿಂದಿನ ಪ್ರಕರಣ ಸಂಬಂಧ ಸ್ಥಳೀಯರ ಪೊಲೀಸರ ಜತೆಗೂಡಿ ಜಾರ್ಖಂಡ್ ಪೊಲೀಸರು ಬಂಧಿಸಿದ್ದಾರೆ. ಸದ್ಯದಲ್ಲೇ ಅವರನ್ನು ಗರ್ವಾ ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದಾರೆ.

ಸತ್ಯೇಂದ್ರ ಸಾಹ್ 2010ರ ಚುನಾವಣೆಯಲ್ಲೂ ಅವರು ಸ್ಪರ್ಧಿಸಿದ್ದರು. ಅದಕ್ಕೂ ಮುನ್ನ ತಮ್ಮ ಪತ್ನಿಯನ್ನು ಸಸಾರಂ ಮುನ್ಸಿಪಲ್ ಕಾರ್ಪೊರೇಷನ್‌ನ ಮೇಯರ್ ಚುನಾವಣೆಯಲ್ಲಿ ಕಣಕ್ಕಿಳಿಸಿದ್ದರು. ಸಾಹ್ ಪ್ರಭಾವ ಗಮನಿಸಿದ್ದ ಆರ್‌ಜೆಡಿ ಈ ಬಾರಿ ಹಾಲಿ ಶಾಸಕ ರಾಜೇಶ್ ಗುಪ್ತಾ ಅವರ ಬದಲು ಸತ್ಯೇಂದ್ರ ಸಾಹಾ ಅವರನ್ನು ಕಣಕ್ಕಿಳಿಸಿತ್ತು.

ಕಾಂಗ್ರೆಸ್-ಆರ್‌ಜೆಡಿಯಿಂದ ಪಿತೂರಿ ಎಂದು ಜೆಎಂಎಂ ಆರೋಪ | ಸೀಟು ಹಂಚಿಕೆ ಮಾತುಕತೆ ವಿಫಲ

ಬಿಹಾರ ಚುನಾವಣೆಯಿಂದ ಹಿಂದೆ ಸರಿದ ಜೆಎಂಎಂ

ರಾಂಚಿ: ಜಾರ್ಖಂಡ್‌ನ ಆಡಳಿತಾರೂಢ ಜೆಎಂಎಂ ಸೋಮವಾರ ನೆರೆಯ ಬಿಹಾರ

ವಿಧಾನಸಭಾ ಚುನಾವಣೆಯಿಂದ ಹಿಂದೆ ಸರಿದಿದ್ದು, ತನ್ನ ಮಿತ್ರಪಕ್ಷಗಳಾದ ರಾಷ್ಟ್ರೀಯ ಜನತಾದಳ ಮತ್ತು ಕಾಂಗ್ರೆಸ್‌ನ ರಾಜಕೀಯ ಪಿತೂರಿ ಯಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಜೆಎಂಎಂ ಹಿರಿಯ ನಾಯಕಿ ಸುದಿವ್ಯ ಕುಮಾರ್, ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಜೊತೆಗಿನ ಮೈತ್ರಿಯನ್ನು ತಮ್ಮ ಪಕ್ಷ ಪರಿಶೀಲಿಸುತ್ತಿದೆ ಮತ್ತು ನಂಬಿಕೆ ದ್ರೋಹಕ್ಕೆಗೆ ಸೂಕ್ತ ಉತ್ತರ ನೀಡುತ್ತದೆ ಎಂದು ಹೇಳಿದ್ದಾರೆ. ಹೇಮಂತ್ ಸೋರೆನ್ ನೇತೃತ್ವದ ಪಕ್ಷವು ಬಿಹಾರದಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಮತ್ತು ಸೀಟು ಹಂಚಿಕೆ ಮಾತುಕತೆ ವಿಫಲವಾದ ಕಾರಣ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಚುನಾವಣೆಗೆ ಸ್ಪರ್ಧಿಸುವುದಾಗಿ ಎರಡು ದಿನಗಳ ಹಿಂದಷ್ಟೇ ಘೋಷಿಸಿತ್ತು, ಆದರೆ ಈಗ ಚುನಾವಣಾ ಕಣದಿಂದಲೇ ಹೊರಬಿದ್ದಿದೆ.

ರಾಜಕೀಯ ಪಿತೂರಿಯ ಭಾಗವಾಗಿ ಜೆಎಂಎಂ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಆರ್‌ಜೆಡಿ ಮತ್ತು ಕಾಂಗ್ರೆಸ್ ತಡೆದಿವೆ. ಜೆಎಂಎಂ ಇದಕ್ಕೆ ಸೂಕ್ತ ಉತ್ತರ ನೀಡುತ್ತದೆ ಮತ್ತು ಆರ್‌ಜೆಡಿ ಹಾಗೂ ಕಾಂಗ್ರೆಸ್ ಜೊತೆಗಿನ ತನ್ನ ಮೈತ್ರಿಯನ್ನು ಪರಿಶೀಲಿಸುತ್ತದೆ ಎಂದು ರಾಜ್ಯ ಪ್ರವಾಸೋದ್ಯಮ ಸಚಿವ ಕುಮಾರ್ ಹೇಳಿದ್ದಾರೆ. ನವೆಂಬರ್ 11ರಂದು ಎರಡನೇ ಹಂತದಲ್ಲಿ ಚುನಾವಣೆ ನಡೆಯಲಿರುವ ಚಕೈ, ಧಮ್ದಹಾ, ಕಟೋರಿಯಾ, ಮಣಿಹರಿ, ಜಮುಯಿ ಮತ್ತು ಪಿಪ್ಪೈಂಟಿ ಸ್ಥಾನಗಳಿಗೆ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ಜೆಎಂಎಂ ಶನಿವಾರ ಘೋಷಿಸಿತ್ತು. ಈ ಸ್ಥಾನಗಳಿಗೆ ನಾಮಪತ್ರ ಸಲ್ಲಿಸಲು ಸೋಮವಾರ ಕೊನೆಯ ದಿನವಾಗಿತ್ತು.

ಸೈನಿಕರ ಹತ್ಯೆಯ ನಂತರ ಮುರಿದುಬಿದ್ದ ಕದನ ವಿರಾಮ | ಇಸ್ರೇಲ್ ಸೈನಿಕರ ಹತ್ಯೆಗೆ ಹಮಾಸ್ ಕಾರಣ ಎಂದು ಇಸ್ರೇಲ್‌ನಿಂದ ದೂಷಣೆ

ಗಾಜಾದ ಮೇಲೆ ಇಸ್ರೇಲ್ ದಾಳಿ: 45 ಮಂದಿ ಸಾವು

ಗಾಜಾ: ಕದನ ವಿರಾಮ ಬೆನ್ನಲ್ಲೇ ರಫಾದಲ್ಲಿ ಇಬ್ಬರು ಇಸ್ರೇಲಿ ಸೈನಿಕರ ಹತ್ಯೆಯ ನಂತರ ಗಾಜಾ ಪಟ್ಟಿಯಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಇದು ಇಸ್ರೇಲ್ ಮತ್ತು ಹಮಾಸ್ ನಡುವಿನ ಇತ್ತೀಚಿನ ಕದನ ವಿರಾಮ ಒಪ್ಪಂದವನ್ನು ಅಪಾಯಕ್ಕೆ ಸಿಲುಕಿಸಿದೆ. ಒಂದು ವಾರದ ಹಿಂದೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಕದನ ವಿರಾಮವನ್ನು ಜಾರಿಗೆ ಬಂದಿತು. ಭಾನುವಾರ ಇಸ್ರೇಲಿ ರಕ್ಷಣಾ ಪಡೆಗಳು (ಐಡಿಎಫ್) ಗಾಜಾದಲ್ಲಿ ಹಲವಾರು ವಾಯುದಾಳಿಯನ್ನು ನಡೆಸಿದ್ದು ಇದೀಗ ಪರಿಸ್ಥಿತಿ ಹದಗೆಟ್ಟಿದೆ. ದಕ್ಷಿಣ ನಗರವಾದ ರಫಾದಲ್ಲಿ ಇಬ್ಬರು ಇಸ್ರೇಲಿ ಸೈನಿಕರ ಹತ್ಯೆಗೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಈ ದಾಳಿಗಳನ್ನು ನಡೆಸಿದೆ. ಈ ದಾಳಿಗಳಲ್ಲಿ 45 ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಇಸ್ರೇಲ್ ಸೈನಿಕರ ಹತ್ಯೆಗೆ ಹಮಾಸ್ ಕಾರಣ ಎಂದು ಇಸ್ರೇಲ್ ದೂಷಿಸಿದ್ದರೆ, ಹಮಾಸ್ ಈ ಆರೋಪವನ್ನು ನಿರಾಕರಿಸಿದೆ.

ಮಾರ್ಚ್‌ನಲ್ಲಿ ಸಂವಹನ ಕಡಿತಗೊಂಡಾಗಿನಿಂದ ಈ ಪ್ರದೇಶದ ಹೋರಾಟಗಾರರೊಂದಿಗೆ ಯಾವುದೇ ಸಂಪರ್ಕವಿಲ್ಲ ಎಂದು ಹಮಾಸ್ ಹೇಳಿದೆ. ದಾಳಿಯ ನಂತರ ಇಸ್ರೇಲ್ ಗಾಜಾಗೆ ಪರಿಹಾರ ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಈ ಮಧ್ಯೆ ಅಧ್ಯಕ್ಷ ಟ್ರಂಪ್ ಅವರ ವಿಶೇಷ ರಾಯಭಾರಿಗಳಾದ ಸ್ಟೀವ್

ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಮತ್ತೆ ಆ ಪ್ರದೇಶಕ್ಕೆ ಆಗಮಿಸಿದ್ದಾರೆ. ಆದರೆ ಹಮಾಸ್ ಪ್ರತಿನಿಧಿಗಳು ಕೈರೋದಲ್ಲಿ ಈಜಿಪ್ಟ್ ಮಧ್ಯವರ್ತಿಗಳು ಮತ್ತು ಇತರ ಪ್ಯಾಲೆಸ್ಟೀನಿಯನ್ ಬಣಗಳೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ಚರ್ಚೆಗಳ ಕೇಂದ್ರಬಿಂದು ಟ್ರಂಪ್ ಅವರ 20-ಅಂಶಗಳ ಶಾಂತಿ ಯೋಜನೆಯ ಎರಡನೇ ಹಂತವಾಗಿದೆ. ಇವುಗಳಲ್ಲಿ ಗಾಜಾದಲ್ಲಿ ಅಂತಾರಾಷ್ಟ್ರೀಯ ಪಡೆಗಳ ನಿಯೋಜನೆ, ಇಸ್ರೇಲಿ ಪಡೆಗಳನ್ನು ಕ್ರಮೇಣ ಹಿಂತೆಗೆದುಕೊಳ್ಳುವುದು ಮತ್ತು ಅಂತಿಮವಾಗಿ ಹಮಾಸ್‌ನ ನಿಶ್ಯಸ್ತ್ರೀಕರಣ ಸೇರಿವೆ. ಇತ್ತೀಚಿನ ಹಿಂಸಾಚಾರವು ಎರಡೂ ಕಡೆಯವರನ್ನು ತೀವ್ರವಾಗಿ ಬೆಚ್ಚಿಬೀಳಿಸಿದೆ.

ಯುರೋಪಿಯನ್ ಕೌನ್ಸಿಲ್ ಅನುಮೋದನೆ

ಲಂಡನ್: ಯುರೋಪಿಯನ್ ಆಯೋಗವು ಈ ಹಿಂದೆ ಘೋಷಿಸಿದ ಹೊಸ ಕಾರ್ಯತಂತ್ರದ ಯುರೋಪಿಯನ್ ಯೂನಿಯನ್-ಭಾರತ ಕಾರ್ಯಸೂಚಿ ಕುರಿತಾದ ತೀರ್ಮಾನಗಳನ್ನು ಯುರೋಪಿಯನ್ ಕೌನ್ಸಿಲ್ ಸೋಮವಾರ

ಅನುಮೋದಿಸಿದೆ. ಇದು ಯುರೋಪಿಯನ್ ಒಕ್ಕೂಟ ಮತ್ತು ಭಾರತದ ನಡುವಿನ ಸಂಬಂಧಗಳಿಗೆ ಹೊಸ ಅಧ್ಯಾಯವನ್ನು ಬರೆಯಲಿದೆ.

27 ಸದಸ್ಯರ ಆರ್ಥಿಕ ಗುಂಪಿನ ಸಾಮಾನ್ಯ ರಾಜಕೀಯ ನಿರ್ದೇಶನ ಮತ್ತು ಆದ್ಯತೆಗಳಿಗೆ ಜವಾಬ್ದಾರರಾಗಿರುವ ಬೆಲ್ಜಿಯಂ ಮೂಲದ ಮಂಡಳಿಯು ವರ್ಷದ ಅಂತ್ಯದ ವೇಳೆಗೆ ಭಾರತ-ಯುರೋಪಿಯನ್ ಯೂನಿಯನ್ ಮುಕ್ತ ವ್ಯಾಪಾರ ಒಪ್ಪಂದವನ್ನು ತೀರ್ಮಾನಿಸಲು ಎರಡೂ ಕಡೆಯ ಪ್ರಯತ್ನಗಳನ್ನು ಮುಂದುವರಿಸಿದೆ. ಹೊಸ ಕಾರ್ಯಸೂಚಿಯಲ್ಲಿ ಜಂಟಿ ಸಂವಹನ ಮತ್ತು ಸಮೃದ್ಧಿ ಮತ್ತು ಸುಸ್ಥಿರತೆ, ತಂತ್ರಜ್ಞಾನ ಮತ್ತು ನಾವೀನ್ಯತೆ, ಭದ್ರತೆ ಮತ್ತು ರಕ್ಷಣೆ, ಮತ್ತು ಸಂಪರ್ಕ ಮತ್ತು ಜಾಗತಿಕ ಸಮಸ್ಯೆಗಳನ್ನು ಒಳಗೊಂಡಂತೆ ಯುರೋಪಿಯನ್ ಯೂನಿಯನ್- ಭಾರತ ಸಂಬಂಧಗಳನ್ನು ಗಾಢವಾಗಿಸುವತ್ತ ಈ ಒಪ್ಪಂದವು ಕೆಲಸ ಮಾಡಲಿದೆ. ಸಮತೋಲಿತ, ಮಹತ್ವಾಕಾಂಕ್ಷೆಯ ಹಾಗೂ ಪರಸ್ಪರ ಪ್ರಯೋಜನಕಾರಿ ಮತ್ತು ಆರ್ಥಿಕವಾಗಿ ಅರ್ಥಪೂರ್ಣವಾದ ಮುಕ್ತ ವ್ಯಾಪಾರ ಒಪ್ಪಂದವನ್ನು ತೀರ್ಮಾನಿಸುವ ಪ್ರಯತ್ನಗಳನ್ನು ಕೌನ್ಸಿಲ್ ಸ್ವಾಗತಿಸುತ್ತದೆ. ಇದನ್ನು ಯುರೋಪಿಯನ್ ಆಯೋಗ ಮತ್ತು ಭಾರತ ಸರಕಾರವು ವರ್ಷದ ಅಂತ್ಯದ ವೇಳೆಗೆ ಅಂತಿಮಗೊಳಿಸಲು ಗುರಿ ಹೊಂದಿದೆ ಎಂದು ಕೌನ್ಸಿಲ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಪರಸ್ಪರ ನಂಬಿಕೆ ಮತ್ತು ಗೌರವದ ತತ್ವಗಳ ಆಧಾರದ ಮೇಲೆ ಭದ್ರತೆ ಮತ್ತು ರಕ್ಷಣಾ ವಿಷಯಗಳಲ್ಲಿ ಯುರೋಪಿಯನ್ ಯೂನಿಯನ್ ಮತ್ತು ಭಾರತದ ನಡುವಿನ ನಿಕಟ ಸಹಯೋಗವು ಹೆಚ್ಚು ಸಂಕೀರ್ಣವಾದ ಭೌಗೋಳಿಕ ರಾಜಕೀಯ ದೃಷ್ಟಿಕೋನದ ಹಿನ್ನೆಲೆಯಲ್ಲಿ ನಿರ್ದಿಷ್ಟ ಪ್ರಾಮುಖ್ಯತೆ ಹೊಂದಿದೆ ಎಂಬುದನ್ನು ಯುರೋಪಿಯನ್ ಕೌನ್ಸಿಲ್ ಗಮನಿಸಿದೆ.

ನವೆಂಬರ್ 1 ರಂದು ಪುಸ್ತಕಜಾತ್ರೆ, ಕನ್ನಡ ಬರಹಗಾರರ ಸಮ್ಮಿಲನ

ಸಪ್ನ ಬುಕ್ ಹೌಸ್‌ನಿಂದ ಪುಸ್ತಕ ಜಾತ್ರೆ

ಬೆಂಗಳೂರು: ಸಪ್ನ ಬುಕ್ ಹೌಸ್ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವದ ಹಿನ್ನೆಲೆ ಪ್ರತಿವರ್ಷದಂತೆ ಈ ಬಾರಿಯೂ ನವೆಂಬರ್ 1 ರಂದು ಪುಸ್ತಕಜಾತ್ರೆ ಕನ್ನಡ ಬರಹಗಾರರ ಸಮ್ಮಿಲನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಸಪ್ನ ಬುಕ್‌ಹೌಸ್ ತಿಳಿಸಿದೆ.

ರಿಯಾಯಿತಿ ಮೇಳವನ್ನು ಲೇಖಕಿ, ರಾಜ್ಯಸಭಾ ಸದಸ್ಯೆ ಡಾ.ಸುಧಾಮೂರ್ತಿ ಉದ್ಘಾಟಿಸಲಿದ್ದು, ರಾಷ್ಟ್ರಪ್ರಶಸ್ತಿ ವಿಜೇತ ನಟ ಅನಿರುದ್ಧ ಜತಕರ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಚಿತ್ರನಟಿ ಅಂಕಿತ ಅಮರ್ ದೀಪಾರಾಧನೆಯನ್ನು ನಡೆಸಿಕೊಡಲಿದ್ದು, ಜಾಣಗೆರೆ ವೆಂಕಟರಾಮಯ್ಯ ಉಚಿತ ಕನ್ನಡ ಪುಸ್ತಕ ವಿತರಣೆಯನ್ನು ಮಾಡಲಿದ್ದಾರೆ. ಈ ವೇಳೆ ಕೃತ್ತಿಕಾ ಶ್ರೀನಿವಾಸ್ ಕನ್ನಡ ಗೀತೆಗಳನ್ನು ಹಾಡಲಿದ್ದು, ಎಂ.ಎಸ್ ನರಸಿಂಹ ಮೂರ್ತಿ, ಎಚ್.ಡು.ಡೀರಾಜ್, ವೈ.ವಿ. ಗುಂಡೂರಾವ್ ಹಾಡು ಹರಟೆಯನ್ನು ನಡೆಸಿಕೊಡಲಿದ್ದಾರೆ.

ಈ ವೇಳೆ ವಿಶ್ವವಾಣಿ ಪ್ರಧಾನ ಸಂಪಾದಕ

ವಿಶ್ವೇಶ್ವರ ಭಟ್, ಹಿರಿಯ ಸಾಹಿತಿಗಳಾದ ಡಾ. ಹಂಪನಾ, ಪ್ರೊ.ಮಲ್ಲೇಪುರಂ ಜಿ ವೆಂಕಟೇಶ, ಡಾ. ಟಿ. ಆರ್. ಅನಂತರಾಮ್, ಪ್ರೊ. ಕೆ. ಈ. ರಾಧಾಕೃಷ್ಣ, ರಾ. ನಂ. ಚಂದ್ರಶೇಖರ್, ಡಾ. ಡಿ. ವಿ. ಗುರುಪ್ರಸಾದ್, ಡಾ. ಬೈರಮಂಗಲ ರಾಮೇಗೌಡ, ಡಾ. ಕರೀಗೌಡ ಬೀಚನಹಳ್ಳಿ, ಎಸ್. ಕೆ. ಉಮೇಶ್, ಡಾ. ಹಿ. ಚಿ. ಬೋರಲಿಂಗಯ್ಯ, ಡಾ.ಎಚ್. ಎಲ್. ಪುಷ್ಪ, ಡಾ. ವಸುಂಧರಾ ಭೂಪತಿ, ಡಾ. ಸಂತೋಷ ಹಾನಗಲ್ಲ, ಡಾ. ಪದ್ಮನಿ ನಾಗರಾಜ್ ಸೇರಿದಂತೆ ಹಲವು ಹಿರಿಯ ಹಾಗೂ ಕಿರಿಯ ಸಾಹಿತಿಗಳು, ಕನ್ನಡ ಪರ ಚಿಂತಕರು ಸಮ್ಮಿಲನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಪ್ನ ಬುಕ್ ಹೌಸ್‌ಗೆ 58 ವರ್ಷ

58 ವರ್ಷ ತುಂಬಿರುವ ಸಪ್ನ ಬುಕ್ ಹೌಸ್ ಕನ್ನಡ ನಾಡು ನುಡಿಯನ್ನು ಸಂಭ್ರಮಿಸಲು ಈ ಪುಸ್ತಕ ಜಾತ್ರೆಯನ್ನು ಹಮ್ಮಿಕೊಂಡಿದ್ದು ಕನ್ನಡ ಪುಸ್ತಕಗಳ ಮೇಲೆ ಭಾರಿ ರಿಯಾಯಿತಿ, ಒಂದು ಕನ್ನಡ ಪುಸ್ತಕ ಕೊಂಡರೆ ಇನ್ನೊಂದು ಪುಸ್ತಕವನ್ನು ಉಚಿತವಾಗಿ ನೀಡುವ ಹಾಗೂ ಕಾಂಬೋ ಆಫರ್ ನೀಡುವ ಮೂಲಕ ಕನ್ನಡ ದಿನವನ್ನು ಆಚರಿಸಲಿದೆ. ಕನ್ನಡ ಮಾಸವೆಂದೇ ಗುರುತಿಸುವ ನವೆಂಬರ್ ತಿಂಗಳು ಪೂರ್ತಿ ಕರ್ನಾಟಕದ ವಿವಿಧ ಭಾಗಗಳಲ್ಲಿರುವ 24 ಸಪ್ನ ಪುಸ್ತಕ ಮಳಿಗೆಗಳಲ್ಲಿ ಕನ್ನಡ ಪುಸ್ತಕಗಳ ಮೇಲೆ ವಿಶೇಷ ರಿಯಾಯಿತಿ ಇಡೀ ತಿಂಗಳು ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ದೀಪಾವಳಿ ಹಬ್ಬದಲ್ಲಿ ನಂಬಿಕೆ ಇರುವವರಿಗೆ ಮಾತ್ರ ಶುಭಾಶಯ ಎಂದ ಸ್ಟಾಲಿನ್ ಪುತ್ರ

ಉದಯನಿಧಿ ಸ್ಟಾಲಿನ್ ವಿವಾದಿತ ಹೇಳಿಕೆ

ಚೆನ್ನೈ: ಸನಾತನ ಧರ್ಮದ ವಿರುದ್ಧ ಹೇಳಿಕೆ ನೀಡಿ ದೇಶಾದ್ಯಂತ ವಿವಾದವನ್ನು ಎಬ್ಬಿಸಿದ್ದ ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ಪುತ್ರ ಮತ್ತು

ಡಿಸಿಎಂ ಉದಯನಿಧಿ ಸ್ಟಾಲಿನ್ ಇದೀಗ ಮತ್ತೊಂದು ವಿವಾದವನ್ನು ಸೃಷ್ಟಿಸಿದ್ದಾರೆ. ದೀಪಾವಳಿ ಸಂದರ್ಭದಲ್ಲೂ ವಿವಾದಾತ್ಮಕ ಹೇಳಿಕೆಯನ್ನು ನೀಡಿದ್ದು, ಭಾನುವಾರ ದೀಪಾವಳಿ ಹಿನ್ನೆಲೆಯಲ್ಲಿ ಡಿಎಂಕೆ ಪರವಾಗಿ ಚೆನ್ನೈನಲ್ಲಿ ಉಡುಗೊರೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮಾತನಾಡಿದ ಅವರು, 'ಈ ಹಿಂದೆ ನಾನು ನೀಡಿದ ಹೇಳಿಕೆಗಳಿಂದ ಕೆಲವರು ನನಗೆ ಶುಭಾಶಯ ಹೇಳಬೇಕಾ? ಹೇಳಬಾರದಾ? ಎಂದು ಯೋಚಿಸುತ್ತಿದ್ದರು, ನನಗೆ ಬರೀ ಶುಭಾಶಯ ಅಂತ ಹೇಳಿದ್ದರು, ಆದರೆ ನಾನು ದೀಪಾವಳಿ ಹಬ್ಬದಲ್ಲಿ ನಂಬಿಕೆ ಇರುವವರಿಗೆ ಮಾತ್ರ ಶುಭಾಶಯ ಕೋರುತ್ತೇನೆ' ಎಂದು ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಸಚಿವ ಶೇಖರ್ ಬಾಬು, ಚೆನ್ನೈ ಕಾರ್ಪೊರೇಷನ್ ಮೇಯರ್ ಪ್ರಿಯಾ ರಾಜನ್, ಸಂಸದರಾದ ದಯಾನಿಧಿ ಮಾರನ್ ಮತ್ತು ಡಾ. ವೀರಾಸ್ವಾಮಿ ಹಾಗೂ ಹಲವಾರು ಶಾಸಕರು ಮತ್ತು ಪ್ರಮುಖ ವ್ಯಕ್ತಿಗಳು ಭಾಗವಹಿಸಿದ್ದರು. ಉದಯನಿಧಿ ಹೇಳಿಕೆಗೆ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಿಜೆಪಿ ನಾಯಕಿ ಮತ್ತು ಮಾಜಿ ರಾಜ್ಯಪಾಲೆ ತಮಿಳಿಸೈ ರಾಜನ್‌ರವರು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಮತ್ತು ಉಪಮುಖ್ಯಮಂತ್ರಿ ಉದಯ ನಿಧಿ ಸ್ಟಾಲಿನ್ ಅವರಿಗೆ ದೀಪಾವಳಿ ಶುಭಾಶಯ ಕೋರಿದರು. ಅವರು ಒಪ್ಪುತ್ತಾರೋ ಇಲ್ಲವೋ ಎಂಬುದು ನಮಗೆ ಬೇಡ ಇದು ಹಿಂದೂಗಳ ಹಬ್ಬ ಎಂದು ಹೇಳಿದರು.

'ನೀವು ಇತರ ಧರ್ಮದ ಜನರನ್ನು ಸ್ವಾಗತಿಸುವಾಗ, ಅದು ನಂಬಿಕೆಯುಳ್ಳವರಿಗೆ ಎಂದು ನೀವು ಹೇಳುವುದಿಲ್ಲ. ಆದರೆ ಹಿಂದೂ ಧರ್ಮದ ವಿಷಯಕ್ಕೆ ಬಂದಾಗ, ಅದು ನಂಬಿಕೆಯುಳ್ಳವರಿಗೆ ಎಂದು ನೀವು ಹೇಳುತ್ತೀರಿ. ಉದಯನಿಧಿ ಅವರ ಹೇಳಿಕೆಗಳನ್ನು ನಾನು ಬಲವಾಗಿ ಖಂಡಿಸುತ್ತೇನೆ ಎಂದು ಅವರು ಹೇಳಿದ್ದಾರೆ. ತಮಿಳುನಾಡು ಬಿಜೆಪಿ ವಕ್ತಾರ ಎಎಸ್ ಪ್ರಸಾದ್ ಮಾತನಾಡಿ, 'ಡಿಎಂಕೆ ಹಿಂದೂ ವಿರೋಧಿ ಪಕ್ಷ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಒಮ್ಮೆ ಅಧಿಕಾರಕ್ಕೆ ಬಂದ ನಂತರ, ಪ್ರತಿಯೊಬ್ಬ ನಾಗರಿಕನನ್ನೂ ಸಂಪೂರ್ಣ ಸಮಾನತೆಯಿಂದ ನಡೆಸಿಕೊಳ್ಳುವುದು ಅವರ ಕರ್ತವ್ಯ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸೂಕ್ಷ್ಮವಾಗಿ ರಚಿಸಿದ ಸಂವಿಧಾನವು ಈ ಕಡ್ಡಾಯವನ್ನು ಸ್ಪಷ್ಟತೆಯೊಂದಿಗೆ ಒತ್ತಿಹೇಳುತ್ತದೆ. ಆದರೂ ಡಿಎಂಕೆ ಆಡಳಿತವು ಹಿಂದೂ ಹಬ್ಬಗಳಿಗೆ ಶುಭಾಶಯ ಕೋರುವುದಿಲ್ಲ' ಎಂದು ಕಿಡಿಕಾರಿದರು. 2023ರಲ್ಲಿ, ಉದಯನಿಧಿ ಸ್ಟಾಲಿನ್ ಸನಾತನ ಧರ್ಮವು ಸಾಮಾಜಿಕ ನ್ಯಾಯದ ಕಲ್ಪನೆಗೆ ವಿರುದ್ಧವಾಗಿದೆ ಮತ್ತು ಅದನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳಿ ವಿವಾದವನ್ನು ಹುಟ್ಟು ಹಾಕಿದ್ದರು. ಅವರು ಸನಾತನ ಧರ್ಮವನ್ನು ಡೆಂಗ್ಯೂ ಮತ್ತು ಮಲೇರಿಯಾದಂತಹ ಕಾಯಿಲೆಗಳೊಂದಿಗೆ ಹೋಲಿಸಿದ್ದು ಭಾರೀ ವಿವಾದಕ್ಕೆ ಕಾರಣವಾಗಿತ್ತು.

ವಿಮಾನದಲ್ಲಿ ಪವರ್ ಬ್ಯಾಂಕ್‌ಗೆ ಬೆಂಕಿ

ದೆಹಲಿ: ವಿಮಾನವೊಂದರಲ್ಲಿ ಬೆಂಕಿ ಕಾಣಿಸಿ ಕೊಂಡ ಘಟನೆ ನವದೆಹಲಿಯಲ್ಲಿ ನಡೆದಿದೆ. ದೆಹಲಿ ವಿಮಾನ ನಿಲ್ದಾಣದಿಂದ ದಿಮಾಪುರಕ್ಕೆ ಭಾನುವಾರ ಹೊರಡಲು ಸಿದ್ಧತೆ ನಡೆಸುತ್ತಿದ್ದ ಇಂಡಿಗೋ ವಿಮಾನದಲ್ಲಿ ಪ್ರಯಾಣಿಕರೊಬ್ಬರ ಪವರ್ ಬ್ಯಾಂಕ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅದೃಷ್ಟವಶಾತ್ ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ, ಯಾವುದೇ ಹಾನಿ ಸಂಭವಿಸಿಲ್ಲ. ಪವರ್ ಬ್ಯಾಂಕ್ ನಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ಕ್ಯಾಬಿನ್ ಸಿಬ್ಬಂದಿ ನಂದಿಸಿದ್ದಾರೆ ಎಂದು ಇಂಡಿಗೋ ತಿಳಿಸಿದೆ. 'ದೆಹಲಿಯಿಂದ ನಾಗಾಲ್ಯಾಂಡ್‌ನ ದಿಮಾಪುರಕ್ಕೆ ಅಕ್ಟೋಬರ್ 19ರಂದು ಹೊರಡಲು ಸಿದ್ಧವಾಗುತ್ತಿದ್ದ 6ಇ 2107 ವಿಮಾನದ ಸೀಟ್-ಬ್ಯಾಕ್ ಪಾಕೆಟ್‌ನಲ್ಲಿ ಇಟ್ಟಿದ್ದ ಪ್ರಯಾಣಿಕ ರೊಬ್ಬರ ಪವರ್ ಬ್ಯಾಂಕ್ ನಲ್ಲಿ ಸಣ್ಣ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ. ವಿಮಾನವು ನಿಲ್ದಾಣದಲ್ಲಿ ಟ್ಯಾಕ್ಸಿ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ' ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ತುಮಕೂರಿನ ಬಹುಮುಖಿ ಬಳಗದಿಂದ ಪುಸ್ತಕ ಪ್ರಶಸ್ತಿ | ಮುಂದಿನ ತಿಂಗಳು ಪ್ರಶಸ್ತಿ ಪ್ರದಾನ

ಅಪ್ಪ ಪ್ರಶಸ್ತಿಗೆ ಕೃತಿಗಳ ಆಯ್ಕೆ

ಬೆಂಗಳೂರು: ಉತ್ತಮ ಕೃತಿಗಳನ್ನು ಸಾಹಿತ್ಯಾಸಕ್ತರಿಗೆ ಪರಿಚಯಿಸುವ ಸದುದ್ದೇಶದಿಂದ ತುಮಕೂರಿನ ಬಹುಮುಖಿ ಬಳಗವು 2024ರಲ್ಲಿ

ಪ್ರಕಟವಾಗಿರುವ ಪುಸ್ತಕಗಳಿಗೆ ಕೊಡಮಾಡುವ 'ಅಪ್ಪ ಪ್ರಶಸ್ತಿ'ಗೆ ಮೂವರು ಪ್ರತಿಭಾನ್ವಿತ ಲೇಖಕರ ಪುಸ್ತಕಗಳು ಭಾಜನವಾಗಿವೆ.

ವಿಮರ್ಶಕ ರವಿಕುಮಾರ್ ನೀಹ ಅವರ 'ಅವು ಅಂಗೇ' ದೀಪದ ಮಲ್ಲಿಯವರ 'ಹುಣಸೇ ಚಿಗುರು ಮತ್ತು ಇತರ ಕತೆಗಳು' ಹಾಗೂ ಯುವ ಕಥೆಗಾರ ಕಪಿಲ.ಪಿ ಹುಮನಾಬಾದೆ ಅವರ 'ಬಣಮಿ' ಕೃತಿಗಳು ಆಯ್ಕೆಯಾಗಿವೆ. ಪ್ರಶಸ್ತಿಯು 5 ಸಾವಿರ ರು. ನಗದು ಸೇರಿದಂತೆ ಪ್ರಶಸ್ತಿ ಪತ್ರ, ಹಾಗೂ ಗೌರವ ಸನ್ಮಾನವನ್ನು ಒಳಗೊಂಡಿದೆ.

ಎರಡನೆ ವರ್ಷದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ನವೆಂಬರ್ 16ರಂದು ತುಮಕೂರಿನ ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದು, ಚಿಂತಕರು ಹಾಗೂ ಖ್ಯಾತ ಲೇಖಕರು ಆದ ಡಾ.

ಬಂಜಗೆರೆ ಜಯಪ್ರಕಾಶ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು 'ಅಪ್ಪ ಪ್ರಶಸ್ತಿ' ಸಮಿತಿಯ ಸಂಚಾಲಕ ಹಡವನಹಳ್ಳಿ ವೀರಣ್ಣಗೌಡ ಹಾಗೂ ಸಹ ಸಂಚಾಲಕ ದಂಡಿನಶಿವರ ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖ್ಯಾತ ಬಾಣಸಿಗ ವಿಷ್ಣು ಮನೋಹರ್ ಅವರಿಂದ ಮಹಾರಾಷ್ಟ್ರದ ಅಮರಾವತಿಯಲ್ಲಿ ಹೊಸ ದಾಖಲೆ

25 ತಾಸು: 15,773 ದೋಸೆ ತಯಾರಿಸಿದ ಬಾಣಸಿಗ

ಅಮರಾವತಿ(ಮಹಾರಾಷ್ಟ್ರ): ಇಲ್ಲಿನ ಖ್ಯಾತ ಬಾಣಸಿಗ ವಿಷ್ಣು ಮನೋಹರ್ ಅವರು ನಗರದಲ್ಲಿ ನಿರಂತರವಾಗಿ 25 ಗಂಟೆಗಳಲ್ಲಿ 15,773 ದೋಸೆಗಳನ್ನು ತಯಾರಿಸುವ ಮೂಲಕ ಹೊಸ ವಿಶ್ವದಾಖಲೆ ಸೃಷ್ಟಿಸಿದರು. ಕಳೆದ ವರ್ಷ ವಿಷ್ಣು ಅವರು ನಾಗ್ಪುರದಲ್ಲಿ 24 ಗಂಟೆಗಳಲ್ಲಿ 14,400 ದೋಸೆಗಳನ್ನು ಮಾಡಿ ದಾಖಲೆ ಬರೆದು, ಎಲ್ಲರ ಹುಬ್ಬೇರಿಸಿದ್ದರು.

ಮನೋಹರ್ ಅವರು ಕಳೆದ ಶನಿವಾರ ಬೆಳಿಗ್ಗೆ 7 ಗಂಟೆಗೆ ಅಮರಾವತಿಯ ಗುನ್ವಂತ್ ಲಾನ್‌ನಲ್ಲಿ ತಮ್ಮ 25 ಗಂಟೆಗಳ ದೋಸೆ ತಯಾರಿಸುವ ಕೆಲಸ ಶುರು ಮಾಡಿದ್ದರು. ಭಾನುವಾರ ಬೆಳಿಗ್ಗೆ 6 ಗಂಟೆಯ ಹೊತ್ತಿಗೆ 15,700 ದೋಸೆ ತಯಾರಿಸಿ ತಮ್ಮದೇ ಹಿಂದಿನ ದಾಖಲೆ ಮುರಿದರು. 20 ನಿಮಿಷಗಳ ರೆಫರಿ ಅನುಮೋದಿಸಿದ ಬ್ರೇಕ್‌ನ ನಂತರ ಮನೋಹರ್ ಮತ್ತೆ ಬಿಸಿ ಗ್ರಿಡಲ್‌ನಲ್ಲಿ ಅಡುಗೆ ಮುಂದುವರಿಸಿದರು. ಬೆಳಿಗ್ಗೆ ಪೂರ್ತಿ ಅಮರಾವತಿಯ ಜನರಿಗೆ ತಯಾರಿಸಿದ ದೋಸೆಗಳನ್ನು ಉಚಿತವಾಗಿ ನೀಡಿ ಸತ್ಕರಿಸಿದರು.

ಬೆಳಿಗ್ಗೆ 8 ಗಂಟೆಗೆ ಮನೋಹರ್ ಕೊನೆಯ 15,773ನೇ ದೋಸೆಯನ್ನು ತಯಾರಿಸಿದರು. ಅದರೊಂದಿಗೆ ಅವರ ಹೊಸ ದಾಖಲೆ ಪೂರ್ಣಗೊಂಡಿತು. ಅವರ ತಂಡ ಮತ್ತು ನೆರೆದಿದ್ದ ಜನರು ಜೋರಾದ ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಇಂಡಿಯಾ ವರ್ಲ್ಡ್ ರೆಕಾರ್ಡ್ಸ್‌ನ ಪ್ರತಿನಿಧಿ ಮತ್ತು ತೀರ್ಪುಗಾರರಾದ ಪ್ರವೀಣ್ ರಾವತ್ ಅವರು ಬಾಣಸಿಗ ಮನೋಹರ್ ಅವರಿಗೆ ಪದಕ ಮತ್ತು ಪ್ರಮಾಣಪತ್ರ ನೀಡಿ ಅಧಿಕೃತವಾಗಿ ಅವರ ಸಾಧನೆಯನ್ನು ಪ್ರಕಟಿಸಿದರು.

ಅಮರಾವತಿ ಜನರಿಂದ ಭಾರೀ ಮೆಚ್ಚುಗೆ: ಶನಿವಾರ ಬೆಳಿಗ್ಗೆ ಏಳು ಗಂಟೆಯಿಂದ ವಿಷ್ಣು ಮನೋಹರ್ ದೋಸೆ ತಯಾರಿಸಲು ಪ್ರಾರಂಭಿಸಿದಾಗ, ಅಮರಾವತಿಯ ಜನರು ಬೆಳಗಿನ ಜಾವ 3 ಗಂಟೆಯವರೆಗೂ ಅವುಗಳನ್ನು ಸವಿಯಲು ಸರತಿ ಸಾಲಲ್ಲಿ ನಿಂತರು. ಬೆಳಗ್ಗೆ 3ರಿಂದ 5 ಗಂಟೆಯ ನಡುವೆ ಜನಸಂದಣಿ ಕಡಿಮೆಯಾದರೂ, 5ರಿಂದ ಬೆಳಿಗ್ಗೆ 8 ಗಂಟೆವರೆಗೆ ಜನರ ಉತ್ಸಾಹ ಮತ್ತೆ ಹೆಚ್ಚಿತು ಎಂದು ಮನೋಹರ್ ಹೇಳಿದರು.

ಅಮೆರಿಕದಲ್ಲಿ ಮುಂದಿನ ಪ್ರಯತ್ನ

ಅಮರಾವತಿಯಲ್ಲಿ ತಮ್ಮ ನಾಗ್ಪುರದ ಹಳೆಯ ದಾಖಲೆ ಮುರಿದ ಮನೋಹರ್, ಭವಿಷ್ಯದಲ್ಲಿ ಅಂತಹ ಹತ್ತು ದೋಸೆ ತಯಾರಿಸುವ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವ ಯೋಜನೆಯನ್ನು ಘೋಷಿಸಿದ್ದಾರೆ. ಅವರ ಮುಂದಿನ ದಾಖಲೆಯ ಪ್ರಯತ್ನ ಅಮೆರಿಕದಲ್ಲಿ ನಡೆಯಲಿದೆ. ಅಲ್ಲಿ 26 ಗಂಟೆಗಳ ಕಾಲ ನಿರಂತರವಾಗಿ ದೋಸೆಗಳನ್ನು ಮಾಡುವ ಮೂಲಕ ಮತ್ತೊಂದು ದಾಖಲೆ ಬರೆಯಲು ಸಿದ್ಧತೆ ನಡೆಸುತ್ತಿದ್ದಾರೆ.

ಚಿತ್ತವಿಹಾರ

ಸಾರ್ಥಕ ದೀಪಾವಳಿ

● ಎಚ್. ಆನಂದರಾಮ ಶಾಸ್ತ್ರೀ
ಬೆಂಗಳೂರು

ಶ್ರೀಕೃಷ್ಣ ಪರಮಾತ್ಮನಿಂದ
ನರಕಾಸುರನ ವಧೆಯಾಯಿತೆಂದು,
ಶ್ರೀರಾಮಚಂದ್ರನು
ಅಯೋಧ್ಯೆಗೆ ಮರಳಿದನೆಂದು,
ವಾಮನರೂಪಿ ತ್ರಿವಿಕ್ರಮನಿಂದ
ಬಲಿಯ ಅಹಂಕಾರ ಕಳೆಯಿತೆಂದು,
ಬುವಿಯಲ್ಲಿ ಸುಗ್ಗಿ ಹೊಳೆಯಿತೆಂದು,
ಹಿಗ್ಗಿನಿಂದ ಬೆಳಗಿ ದೀಪ,
ಆಚರಿಸುವ ದೀಪಾವಳಿ
ಅರ್ಥಗರ್ಭಿತ.

ಆದರೆ ಇದೇ ವೇಳೆ,
ನಮ್ಮೊಳಗಿನ ತಾಮಸದ
ಅಂಧಕಾರವನ್ನು ನೀಗಿ,
ಅಹಂಕಾರ ತೊರೆದು
ವಿನಯದೆಡೆಗೆ ಸಾಗಿ,
ಹೃದಯದೊಳಗೆ
ಸಾತ್ವಿಕತೆಯ ದೀಪ ಬೆಳಗಿ,
ಹರುಷ ಭಾವ ಹೊಂದುವ
ದೀಪಾವಳಿಯದುವೆ
ಸಾರ್ಥಕ, ಇದು ಖಚಿತ.

ದೀಪ ಬೆಳಗಲಿ

● ರಮೇಶ ಶಂ. ಮಂಟೂರ
ಮುಳವಾಡ

ದೀಪದ ಹಬ್ಬ ಬಂದಿತು
ಮನೆಗೆ ಸುಗ್ಗಿ ತಂದಿತು.
ಮನೆಯ ತುಂಬ ಬೆಳಕು ಸುರಿದು
ಮನದ ತುಂಬ ಹರುಷ ಹಿಗ್ಗಿ
ಸುಳ್ಳು ಸೋತು ಸತ್ಯ ಗೆದ್ದ
ದೀಪ ಬೆಳಗಲಿ
ಮನದಿ ಹರುಷ ಮೂಡಲಿ.

ಇರುಳು ಕಳೆದು ಬೆಳಕು ಹರಿದು
ಕಷ್ಟ ಸರಿದು ಸುಖವು ಹರಡಿ
ದ್ವೇಷ ಕರಗಿ ಪ್ರೀತಿ ಸುರಿವ
ದೀಪ ಬೆಳಗಲಿ
ಮನದಿ ಹರುಷ ಮೂಡಲಿ.

ಹಣತೆ ಬಣ್ಣ ಗಾತ್ರ ನೂರು
ಜಾತಿ ಧರ್ಮ ಭಾಷೆ ಹಲವು
ದೀಪ ಮನುಜ ಒಂದೆ ಎನುವ
ದೀಪ ಬೆಳಗಲಿ
ಮನದಿ ಹರುಷ ಮೂಡಲಿ.

ವೇಷ ಬೇರೆ ಭಾಷೆ ಬೇರೆ
ರೂಪ ಉಡುಗೆ ತೊಡುಗೆ ಬೇರೆ
ಎಲ್ಲರೊಂದು ಗೂಡಿ ನಡೆವ
ದೀಪ ಬೆಳಗಲಿ
ಮನದಿ ಹರುಷ ಮೂಡಲಿ.

ಎರಡು ದಶಕ ಪೂರೈಸಿದ ಮಾಹಿತಿ ಹಕ್ಕು ಕಾಯಿದೆ

● ಡಾ. ಅಮ್ಮಸಂದ್ರ ಸುರೇಶ್

ಸಾಮಾನ್ಯ ನಾಗರಿಕನೂ ಸಾರ್ವಜನಿಕ ಅಧಿಕಾರಿಗಳಿಂದ ಮಾಹಿತಿ ಪಡೆಯಲು ಅನುವಾಗಲು ಮತ್ತು ಸರಕಾರಗಳನ್ನು ಹೆಚ್ಚು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿಸಲು ಜನಸಾಮಾನ್ಯರಿಗೆ ಅಧಿಕಾರ ನೀಡುವ ಸಲುವಾಗಿ ಜಾರಿಗೆ ತಂದ ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ)ಗೆ ಈಗ ಇಪ್ಪತ್ತರ ಹರೆಯ.

ವಿಶ್ವದ ಅತ್ಯುತ್ತಮ ಪಾರದರ್ಶಕ ಕಾನೂನುಗಳಲ್ಲಿ ಒಂದು ಎಂದು ಪರಿಗಣಿಸಲಾಗಿರುವ ಮಾಹಿತಿ ಹಕ್ಕು ಕಾಯಿದೆ ಅಕ್ಟೋಬರ್ 12, 2005ರಂದು ಜಾರಿಗೆ ಬಂದಿತು. ಇದು ಭಾರತೀಯ ಸಂವಿಧಾನದ 19ನೇ ವಿಧಿಯ ಅಡಿಯಲ್ಲಿ ಬರುವ ಮೂಲಭೂತ ಹಕ್ಕುಗಳಲ್ಲಿ ಒಂದಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಒಂದು ಭಾಗವಾಗಿದೆ. ಕಳೆದ 20 ವರ್ಷಗಳ ಅವಧಿಯಲ್ಲಿ ನಾಗರಿಕ ಸಮಸ್ಯೆಗಳಿಗೆ ಸಂಬಂಧಿಸಿದ ಮಾಹಿತಿ, ಪರಿಸರ ಮಾಲಿನ್ಯ, ಭ್ರಷ್ಟಾಚಾರ ಸೇರಿದಂತೆ ಸಾವಿರಾರು ಪ್ರಕರಣಗಳು ಮಾಹಿತಿ ಹಕ್ಕು ಕಾಯಿದೆಯಡಿ ಹೊರಬಿದ್ದಿವೆ. ಲಕ್ಷಾಂತರ ಸಾರ್ವಜನಿಕರು ದೇಶದಾದ್ಯಂತ ಸರಕಾರಿ ಕಾರ್ಯನಿರ್ವಹಣೆಯಲ್ಲಿನ ಲೋಪ-ದೋಷಗಳನ್ನು ಬಹಿರಂಗಪಡಿಸಲು ಈ ಕಾಯಿದೆಯನ್ನು ಬಳಸುತ್ತಿದ್ದಾರೆ. ಜನರು ಸರಕಾರದ ಆಡಳಿತದೊಂದಿಗೆ ಅರ್ಥಪೂರ್ಣವಾದ ರೀತಿಯಲ್ಲಿ ತೊಡಗಿಸಿಕೊಳ್ಳಲು ಈ ಕಾಯಿದೆ ಅನುವುಮಾಡಿಕೊಡುತ್ತಿದೆ.

ಜನಸಾಮಾನ್ಯರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಕಾಯಿದೆ ಎಂದು ಗುರುತಿಸಲಾಗಿರುವ 'ಆರ್‌ಟಿಐ' ಜಾರಿಯಾಗಿ 20 ವರ್ಷಗಳಾದರೂ ಮಾಹಿತಿ ನಿರಾಕರಣೆ, ಉನ್ನತ ಸ್ತರಗಳಲ್ಲಿ ಹೆಚ್ಚುತ್ತಿರುವ ಬಾಕಿ ಪ್ರಕರಣಗಳು, ಮಾಹಿತಿ ಆಯೋಗಗಳಲ್ಲಿ ಹೆಚ್ಚುತ್ತಿರುವ ಖಾಲಿ ಹುದ್ದೆಗಳ ಸಂಖ್ಯೆ ಸೇರಿದಂತೆ ಹಲವು ವಿಷಯಗಳು ಮಾಹಿತಿ ಹಕ್ಕು ಕಾಯಿದೆಯ ಮೂಲ ಉದ್ದೇಶ ಈಡೇರುವಲ್ಲಿ ಪ್ರಮುಖ ಅಡೆತಡೆಗಳಾಗಿ ಹೊರಹೊಮ್ಮಿವೆ. ಆದರೂ ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ಸುಮಾರು 60 ಲಕ್ಷ ಆರ್‌ಟಿಐ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಹೀಗೆ ಸಲ್ಲಿಕೆಯಾದ ಒಟ್ಟು ಅರ್ಜಿಗಳ ಪೈಕಿ ಶೇ.50ರಷ್ಟು ಪ್ರಕರಣಗಳಲ್ಲಿ ಜನರು ಯಾವುದೇ ಅಡೆತಡೆಯಿಲ್ಲದೆ ಮಾಹಿತಿಯನ್ನು ಪಡೆಯುತ್ತಾರೆ ಎಂಬ ಅಂಶ ಹಲವು ಅಧ್ಯಯನಗಳಿಂದ ಹೊರಬಿದ್ದಿವೆ.

ಆಹಾರ, ಪಿಂಚಣಿ, ಆರೋಗ್ಯ, ನೀರು ಮತ್ತು ನೈರ್ಮಲ್ಯದಂಥ ಹಲವು ಮೂಲಭೂತ ಹಕ್ಕುಗಳ ಕುರಿತು ಮಾಹಿತಿಯನ್ನು ಪಡೆಯುವಲ್ಲಿ ಈ ಕಾಯಿದೆ ನಿಜವಾಗಿಯೂ ಸಹಾಯ ಮಾಡಿದೆ. ಈ ವರ್ಷದ ಜೂನ್ 30ರ ಹೊತ್ತಿಗೆ, 29 ಮಾಹಿತಿ ಆಯೋಗಗಳ (ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳೆರಡೂ) ಮುಂದೆ ಸಲ್ಲಿಸಲಾದ 4 ಲಕ್ಷಕ್ಕೂ ಹೆಚ್ಚು ಮೇಲ್ಮನವಿಗಳು ಮತ್ತು ದೂರುಗಳು ಇನ್ನೂ ಇತ್ಯರ್ಥವಾಗದೆ ಬಾಕಿ ಉಳಿದಿವೆ ಎಂದು ಎಸ್‌ಎನ್‌ಎಸ್‌ಐನ ಮೌಲ್ಯಮಾಪನದಲ್ಲಿ ಉಲ್ಲೇಖಿಸಲಾಗಿದೆ.

ಈ ಕಾಯಿದೆ ಜಾರಿಗೆ ಬಂದ ಒಂದು ವರ್ಷದಲ್ಲಿಯೇ ಶಾಸನಕ್ಕೆ ತಿದ್ದುಪಡಿ ತರುವ ಮೊದಲ ಪ್ರಯತ್ನವನ್ನು ಮಾಡಲಾಯಿತು. ಆದರೆ ಸಾರ್ವಜನಿಕರ ವಿರೋಧದಿಂದಾಗಿ ಈ ಕುರಿತಾದ ಪ್ರಸ್ತಾವನೆಯನ್ನು ಕೈಬಿಡಲಾಯಿತು. ಆದರೂ, ಕಳೆದ ಐದು ವರ್ಷಗಳಲ್ಲಿ ಕಾಯಿದೆಗೆ ಎರಡು ತಿದ್ದುಪಡಿಗಳನ್ನು ಮಾಡಲಾಗಿದೆ. 2019ರಲ್ಲಿ, ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಆರ್‌ಟಿಐ ಮೇಲ್ಮನವಿ ಸಂಸ್ಥೆಗಳ ಮುಖ್ಯಸ್ಥರಾಗಿರುವ ಮಾಹಿತಿ ಆಯುಕ್ತರ ಸಂಬಳ ಮತ್ತು ಸೇವಾ ಷರತ್ತುಗಳನ್ನು ನಿಗದಿಪಡಿಸುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡಲು ಸಂಸತ್ತು ಕಾನೂನನ್ನು ತಿದ್ದುಪಡಿ ಮಾಡಿತು. 2023ರಲ್ಲಿ, ಸಂಸತ್ತು ಡಿಜಿಟಲ್ ವೈಯಕ್ತಿಕ ಮಾಹಿತಿ ರಕ್ಷಣೆ (ಡಿಪಿಡಿಪಿ) ಕಾಯಿದೆಯನ್ನು ಅಂಗೀಕರಿಸಿತು, ಈ ತಿದ್ದುಪಡಿಯು ಸಾರ್ವಜನಿಕ ಹಿತಾಸಕ್ತಿ ಸೇರಿದಂತೆ ಯಾವುದೇ ವಿನಾಯಿತಿ ಇಲ್ಲದೆ ವೈಯಕ್ತಿಕ ಮಾಹಿತಿಯನ್ನು ತಡೆಹಿಡಿಯಲು ಸಾರ್ವಜನಿಕ ಪ್ರಾಧಿಕಾರಗಳಿಗೆ ಅನುಮತಿಸುತ್ತದೆ. ಈ ಎರಡೂ ತಿದ್ದುಪಡಿಗಳು ವ್ಯಾಪಕವಾದ ಪರಿಣಾಮಗಳನ್ನು ಹೊಂದಿವೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ.

ಮಾಹಿತಿ ಹಕ್ಕು ಕಾಯಿದೆಯ ಸೆಕ್ಷನ್ 8(1)ರ ಅನ್ವಯ ನಿರ್ದಿಷ್ಟ ವಿನಾಯಿತಿ ಮತ್ತು ಸಂಸ್ಥೆಗಳನ್ನು ಹೊರತುಪಡಿಸಿ ಯಾವುದೇ ಸರಕಾರದ ಯಾವುದೇ ಇಲಾಖೆಯ ಕಾರ್ಯವಾದರೂ ಆರ್‌ಟಿಐ ವ್ಯಾಪ್ತಿಗೆ ಒಳಪಡುತ್ತದೆ. ಸರಕಾರದ ಕಾಮಗಾರಿಗಳಿಗೆ ಸಂಬಂಧಿಸಿ ಪ್ರಶ್ನೆಗಳಿಗೆ ಉತ್ತರ ಅಥವಾ ಮಾಹಿತಿಯನ್ನು ಪಡೆಯಬಹುದು. ಯಾವುದೇ ಒಂದು ಕಾಮಗಾರಿಯ ಪ್ರತಿ ಹಂತದ ಮಾಹಿತಿಯನ್ನು ಪಡೆಯಬಹುದು. ಸರಕಾರ ಹೊರಡಿಸಿದ ಆದೇಶಗಳ ನಕಲು ಪ್ರತಿಯನ್ನು ಕೇಳಿ ಪಡೆದುಕೊಳ್ಳಬಹುದು. ಸಾರ್ವಜನಿಕರು ತಮ್ಮ ಕುಂದುಕೊರತೆಗಳ ನಿವಾರಣೆಗಾಗಿ ಅರ್ಜಿ ಸಲ್ಲಿಸಿದಾಗ ಸದರಿ ಅರ್ಜಿಯ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದು.

ಭ್ರಷ್ಟ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯಿದೆ ಆತಂಕವನ್ನು ಸೃಷ್ಟಿಸಿರುವುದರಲ್ಲಿ ಎರಡು ಮಾತಿಲ್ಲ. ಸಾಮಾಜಿಕ ಕಾರ್ಯಕರ್ತರು, ಸಾಮಾಜಿಕ ಹೋರಾಟಗಾರರು ಹಾಗೂ ಪತ್ರಕರ್ತರಿಗೆ ಒಂದು ಪ್ರಮುಖ ಅಸ್ತ್ರವಾಗಿರುವುದರಿಂದ ಆರ್‌ಟಿಐ ಕಾಯಿದೆಯಡಿ ಮಾಹಿತಿಯನ್ನು ಬಯಸಿ ಬರುವ ಅರ್ಜಿಗಳು ಸಾವಿರಾರು. ಸರಕಾರದ ವಿವಿಧ ಇಲಾಖೆಗಳಿಂದ ಮಾಹಿತಿ ಪಡೆಯಲು ಮಾಧ್ಯಮಗಳಿಗೆ ಇದು ವರದಾನವಾಗಿದೆ.

ಈ ಕಾಯಿದೆಯ ದುರುಪಯೋಗ ಕೂಡ ಆಗುತ್ತಿದೆ ಎಂಬ ದೂರುಗಳೂ ಕೇಳಿಬರುತ್ತಿವೆ. ಕೆಲವರು ವೈಯಕ್ತಿಕ ಮಾಹಿತಿಗಳನ್ನು ಕೇಳಿ ವ್ಯಕ್ತಿಗಳ ಚಾರಿತ್ರ್ಯಕ್ಕೆ ಹಾನಿಮಾಡುವ ಕೆಲಸಗಳಲ್ಲಿ ತೊಡಗಿದ್ದಾರೆ ಎನ್ನಲಾಗುತ್ತಿವೆ. ಆದರೆ ಆರ್‌ಟಿಐ ಕಾಯಿದೆ ಸೆಕ್ಷನ್ 8(1) (ಜಿ) ಅನ್ವಯ ಯಾವುದೇ ವ್ಯಕ್ತಿಯ ಖಾಸಗಿ ಮಾಹಿತಿಗಳು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸದೇ ಇದ್ದರೆ ಅಥವಾ ಬಯಸಿರುವ ಮಾಹಿತಿಯಿಂದ ವ್ಯಕ್ತಿಯ ಖಾಸಗಿತನಕ್ಕೆ ಭಂಗ ಬರುವಂತಿದ್ದರೆ ಮಾಹಿತಿ ಅಧಿಕಾರಿ ಅಥವಾ ಸಂಬಂಧಿಸಿದ ಮೇಲ್ಮನವಿ ಪ್ರಾಧಿಕಾರಗಳು ಅಂಥ ಮಾಹಿತಿಯನ್ನು ಕೊಡಲು ನಿರಾಕರಿಸಬಹುದು. ಇದಕ್ಕೆ ಪೂರಕವಾಗಿ ಡಿಪಿಡಿಪಿ ಕಾಯ್ದೆಯ ಸೆಕ್ಷನ್ 44(3)ರ ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಹಾಗೂ ಇತರ ವಿಚಾರಗಳನ್ನು ತೆಗೆಯಲಾಗಿದ್ದು ಯಾವುದೇ ವ್ಯಕ್ತಿಯ ಖಾಸಗಿ ಮಾಹಿತಿಗಳನ್ನು ತಡೆಹಿಡಿಯುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ (ಡಿಪಿಡಿಪಿ) ಕಾಯಿದೆ ಇನ್ನೂ ಸಂಪೂರ್ಣವಾಗಿ ಜಾರಿಗೆ ಬರಬೇಕಿದೆ.

ಮಾಹಿತಿ ಹಕ್ಕು ಜಾರಿಗೆ ಬಂದ ನಂತರ ಭ್ರಷ್ಟಾಚಾರ ಪ್ರಕರಣಗಳನ್ನು ಹೊರತೆಗೆಯಲು ಪ್ರಯತ್ನಿಸಿದ ಮಾಹಿತಿ ಹಕ್ಕು ಕಾರ್ಯಕರ್ತರನ್ನು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಬೆದರಿಸುವ ಹಾಗೂ ಕೊಲೆ ಮಾಡುವ ಪ್ರವೃತ್ತಿಗಳೂ ಹೆಚ್ಚಾಗಿ ನಡೆಯುತ್ತಿವೆ. ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ (ಸಿಎಚ್‌ಆರ್‌ಐ) ವರದಿಗಳ ಪ್ರಕಾರ ಕಾಯಿದೆ ಜಾರಿಯಾದಾಗಿನಿಂದ ಪ್ರತಿವರ್ಷ ಮಾಹಿತಿ ಹಕ್ಕು ಕಾರ್ಯಕರ್ತರ ಹತ್ಯೆಗಳು ಅವ್ಯಾಹತವಾಗಿ ನಡೆಯುತ್ತಿವೆ. ಏನೇ ಆಗಲಿ ಮಾಹಿತಿ ಹಕ್ಕು ಕಾಯಿದೆಯು, ಮಾಹಿತಿ ಹಕ್ಕು ಕಾರ್ಯಕರ್ತರು, ಸಾಮಾಜಿಕ ಹೋರಾಟಗಾರರು ಹಾಗೂ ಮಾಧ್ಯಮಗಳಿಗೆ ಒಂದು ಶಕ್ತಿಯುತ ಸಾಧನವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ತುಂಟತನದ ಹಿಂದಿನ ದೊಡ್ಡ ಮನಸ್ಸು

● ಡಾ.ಬಿ.ಆರ್.ಸುಹಾಸ್, ಬೆಂಗಳೂರು

ಸಕಲವಿದ್ಯಾ ಪಾರಂಗತನಾದ ರಾಮಭಕ್ತ ಹನುಮಂತನು ಸಂಗೀತದಲ್ಲೂ ಪರಿಣತನೆಂದು ಹೇಳಲಾಗಿದೆ. ಸಂಗೀತಕ್ಕೆ ಸಂಬಂಧಿಸಿದಂತೆ ಹನುಮಂತನ ಸಾಕಷ್ಟು ದಂತಕಥೆಗಳಿವೆ. ಅದರ ಪೈಕಿ ಒಂದು ಹೀಗಿದೆ:

ಒಮ್ಮೆ, ತನ್ನ ಆಶ್ರಮದಲ್ಲಿದ್ದ ಹನುಮಂತನಿಗೆ ಹತ್ತಿರದಲ್ಲೇ ವೀಣಾವಾದನವಾದ ಸದ್ದು ಕೇಳಿಸಿತು. ಆ ನಾದಮಾಧುರ್ಯಕ್ಕೆ ಮನಸೋತ ಅವನು, ಸಂಗೀತದಲ್ಲಿ ಆಸಕ್ತಿ ತಾಳಿ, ಸಂಗೀತದ ಎಲ್ಲಾ ಪ್ರಕಾರಗಳನ್ನೂ ಕಲಿಯಬೇಕೆಂದು ಮನಸ್ಸು ಮಾಡಿದ. ಹಾಗಾಗಿ, ಆ ವೀಣಾವಾದನ ಬರುತ್ತಿದ್ದ ದಿಕ್ಕಿಗೆ ಓಡಿದ! ಅಲ್ಲಿ ನೋಡಿದರೆ, ದೇವರ್ಷಿ ನಾರದರು ಭಕ್ತಿಯಲ್ಲಿ ಮೈಮರೆತು ವೀಣಾವಾದನ ಮಾಡುತ್ತಿದ್ದರು. ಕೂಡಲೇ ಹನುಮಂತನು ಅವರ ಪಾದಗಳನ್ನು ಹಿಡಿದು, 'ನನಗೆ ದಯವಿಟ್ಟು ಸಂಗೀತ ಕಲಿಸಿ. ನೀವು ಒಪ್ಪುವವರೆಗೂ ನಿಮ್ಮ ಪಾದ ಬಿಡುವುದಿಲ್ಲ' ಎಂದು ಬೇಡಿಕೊಂಡನು. ನಾರದರು ಕೂಡಲೇ ಒಪ್ಪಿಕೊಂಡರು.



ನಾರದರಿಂದ ಸಂಗೀತ ಪಾಠ ಹೇಳಿಸಿಕೊಳ್ಳತೊಡಗಿದ ಹನುಮಂತ, ಕೆಲವೇ ದಿನಗಳಲ್ಲಿ ಸಂಗೀತದ ಸಕಲಾಂಶಗಳಲ್ಲೂ ಪರಿಣತನಾದ. ಎಲ್ಲಾ ರಾಗಗಳನ್ನೂ ಸಿದ್ಧಿಸಿಕೊಂಡ. ಎಲ್ಲಾ ವಾದ್ಯಗಳನ್ನೂ ನುಡಿಸಬಲ್ಲವನಾದ. ಹೀಗೆ ಚೆನ್ನಾಗಿ ಸಂಗೀತ ಕಲಿತ ಹನುಮಂತನನ್ನು ನಾರದರು ಪರೀಕ್ಷಿಸಬಯಸಿದರು. ಅದಕ್ಕಾಗಿ ಅವನಿಗೆ ಕಷ್ಟಕರವಾದ ಒಂದು ರಾಗವನ್ನು ಹಾಡಲು ಹೇಳಿದರು. ಹನುಮಂತನು ಪದ್ಮಾಸನದಲ್ಲಿ ಕುಳಿತು ಸುಶ್ರಾವ್ಯವಾಗಿ ಹಾಡತೊಡಗಿದ. ಅವನ ಹಾಡು ಅದೆಷ್ಟು ಸೊಗಸಾಗಿ, ದಿವ್ಯವಾಗಿತ್ತೆಂದರೆ, ಅದನ್ನು ಕೇಳುತ್ತಾ ನಾರದರು ಮೈಮರೆತು ನಿಶ್ಚಲರಾಗಿಬಿಟ್ಟರು. ಅವರ ದಿವ್ಯದೇಹದ ಒಂದೊಂದು ಅಂಗವೂ ರೋಮಾಂಚನಗೊಂಡಿತು. ಕಂಗಳು ಆನಂದದಿಂದ ಮುಚ್ಚಿಕೊಂಡವು. ಸಂತೋಷದಿಂದ ಅವರು ತಲೆದೂಗತೊಡಗಿದರು. ಕ್ರಮೇಣ, ವೀಣೆಯನ್ನು ಹಿಡಿದಿದ್ದ ಅವರ ಕೈಬಿಗಿ ಸಡಿಲಗೊಂಡು, ವೀಣೆಯು ಅವರ ಕೈಯಿಂದ ಜಾರಿಹೋಯಿತು. ಆದರೆ ಅವರಿಗೆ ಅದು ತಿಳಿಯಲೇ ಇಲ್ಲ!

ಹನುಮಂತನ ಗಾಯನ ಎಷ್ಟು ಶಕ್ತಿಯುತವಾಗಿತ್ತೆಂದರೆ, ಸುತ್ತಲಿನ ಪ್ರಕೃತಿಯೇ ಆನಂದದಿಂದ ಕರಗಿತು. ಅಲ್ಲಿದ್ದ ಪ್ರತಿಯೊಂದು ಕಲ್ಲೂ ಕರಗಿ ನೀರಾಗತೊಡಗಿತು. ಮರಗಳೆಲ್ಲವೂ ಪುಷ್ಪವೃಷ್ಟಿ ಮಾಡಿದವು. ಪ್ರಾಣಿಪಕ್ಷಿಗಳು ಸುತ್ತಲೂ ಕುಳಿತು ಕಣ್ಣುಮುಚ್ಚಿ ಆನಂದದಿಂದ ಆಲಿಸತೊಡಗಿದವು. ಹನುಮಂತನು ಇದಾವುದೂ ತಿಳಿಯದೇ ತನ್ನ ಪಾಡಿಗೆ ತಾನು ಹಾಡುತ್ತಿದ್ದನು.

ಹೀಗೆ ಸ್ವಲ್ಪ ಹೊತ್ತು ಹಾಡಿ, ಅಂತೂ ತನ್ನ ಹಾಡನ್ನು ಮುಗಿಸಿದನು ಹನುಮಂತ. ಆಗ ಸುತ್ತಲಿನ ಪ್ರಕೃತಿ ಪುನಃ ಸಹಜ ಸ್ಥಿತಿಗೆ ಬಂದಿತು. ಪ್ರಾಣಿಪಕ್ಷಿಗಳೆಲ್ಲವೂ ತಮ್ಮ ಪಾಡಿಗೆ ತಾವು ಹೊರಟುಹೋದವು. ಕರಗಿದ್ದ ಕಲ್ಲುಗಳೆಲ್ಲವೂ ಪುನಃ ಗಟ್ಟಿಯಾದವು. ಆಗ ನಾರದರು ಕಣ್ತೆರೆದು ಮಂದಹಾಸ ಬೀರುತ್ತಾ ತಮ್ಮ ವೀಣೆಯನ್ನು ತೆಗೆದುಕೊಳ್ಳಲು ಕೈಚಾಚಿದರು. ಆದರೆ ಅವರ ವೀಣೆ, ಪಕ್ಕದ ಬಂಡೆಯಲ್ಲಿ ಸಿಕ್ಕಿಕೊಂಡುಬಿಟ್ಟಿತ್ತು. ಹನುಮಂತನು ಹಾಡಿದಾಗ, ನಾರದರ ಕೈಯಿಂದ ವೀಣೆಯು ಜಾರಿ ಆ ಬಂಡೆಯ ಮೇಲೆ ಬಿದ್ದು, ಆ ಬಂಡೆಯು ಕರಗಿ ಪುನಃ ಗಟ್ಟಿಯಾದಾಗ, ವೀಣೆಯು ಅದರಲ್ಲಿ ಸಿಕ್ಕಿಕೊಂಡುಬಿಟ್ಟಿತ್ತು. ನಾರದರು ಎಷ್ಟು ಪ್ರಯತ್ನಿಸಿದರೂ ಆ ವೀಣೆಯನ್ನು ಬಿಡಿಸಿಕೊಳ್ಳಲಾಗಲಿಲ್ಲ. ಅವರು ಬೆವರುತ್ತಾ, ತಾವೇ ಹಾಡಿದರು. ಆದರೆ ಹನುಮಂತನಂತೆ ಕಲ್ಲನ್ನು ಕರಗಿಸುವಂತೆ ಹಾಡಲಾಗಲಿಲ್ಲ.

ಕೊನೆಗೆ ಅವರು ಹನುಮಂತನನ್ನು ಪುನಃ ಹಾಡಲು ಕೇಳಿಕೊಂಡರು. ಆದರೆ ಹನುಮಂತನು ತುಂಟನಗೆ ಬೀರುತ್ತಾ ಹಿಂದೇಟು ಹಾಕಿದನು. ನಾರದರು ಅವನ ಹಿಂದೆ ಹೋಗಲು, ಅವನು ವೇಗವಾಗಿ ನಡೆಯತೊಡಗಿದನು. ನಾರದರೂ ಬೇಗಬೇಗನೆ ಅವನ ಹಿಂದೆ ನಡೆಯುತ್ತಾ ಹೋದರು. ಹನುಮಂತನು ಈಗ ವೇಗವಾಗಿ ಓಡತೊಡಗಿದನು. ನಾರದರೂ ಅವನ ಹಿಂದೆ ಓಡಿದರು. ಹನುಮಂತನು ಸುತ್ತಲಿನ ಬೆಟ್ಟ, ಗುಡ್ಡ, ಕಾಡುಗಳಲ್ಲೆಲ್ಲಾ ಓಡಿದನು. ನಾರದರೂ ಅವನ ಹಿಂದೆ ಓಡಿದರು. ಹೀಗೆ ಬಹಳ ಹೊತ್ತು ಕಾಡಿಸಿ ಹನುಮಂತನು ಕೊನೆಗೆ ತನ್ನ ಮೊದಲಿನ ಸ್ಥಳದಲ್ಲಿ ಕುಳಿತನು.

ನಾರದರು ಬಸವಳಿಯುತ್ತಾ ಬಂದು, 'ಯಾಕಪ್ಪಾ ಹೀಗೆ ಮಾಡಿದೆ?' ಎಂದು ಕೇಳಿದರು.

ಅದಕ್ಕೆ ಹನುಮಂತನು ವಿನಯದಿಂದ ಕೈಮುಗಿಯುತ್ತಾ, 'ಗುರುಗಳೇ, ನೀವು ನನ್ನ ಪ್ರಭುವಿನ ಮಹಾಭಕ್ತರು. ಜತೆಗೆ ನನ್ನ ಗುರುಗಳು. ಆದ್ದರಿಂದ, ನಿಮ್ಮ ಪಾದಧೂಳಿ ಈ ಸ್ಥಳದಲ್ಲೆಲ್ಲಾ ಬಿದ್ದು, ಈ ಸ್ಥಳವೆಲ್ಲಾ ಪಾವನವಾಗಲಿ ಎಂದು ಹೀಗೆ ಮಾಡಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ' ಎಂದು ಹೇಳಿ ಹಾಡತೊಡಗಿದನು. ಆಗ ಕಲ್ಲುಗಳು ಪುನಃ ಕರಗಿ ನೀರಾಗಲು, ನಾರದರ ವೀಣೆಯು ಬಿಡುಗಡೆಯಾಗಿ ಅವರು ಅದನ್ನು ಎತ್ತಿಕೊಂಡರು.

ಅನಂತರ ಅವರು, 'ನಿನ್ನ ಸಂಗೀತ ನಿನ್ನ ಒಡೆಯನನ್ನು ಸದಾ ಮೆಚ್ಚಿಸಲಿ' ಎಂದು ಹನುಮಂತನನ್ನು ಆಶೀರ್ವದಿಸಿ ಹೊರಟರು. ಹನುಮಂತನ ದೈವಭಕ್ತಿ, ಗುರುಭಕ್ತಿ, ಗಾಯನಪ್ರತಿಭೆಗಳು ಅವರನ್ನು ಮೂಕವಿಸ್ಮಿತವಾಗಿಸಿದ್ದವು. ಹನುಮಂತನ ತುಂಟತನದ ಹಿಂದೆ ಇಂಥ ದೊಡ್ಡ ಮನಸ್ಸಿದೆ ಎಂದು ಅರಿತು ಅವರು ತಲೆದೂಗಿದರು!

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದಿನದ ನಡುವೆ ಸಿಲುಕಿದ ಮಂತ್ರಿ (3)
4. ಪಾಪ ಮಾಡಿದವರನ್ನು ಶಿಕ್ಷಿಸಲು ಇರುವ ಸ್ಥಳ (3)
6. ಗಣಪತಿಯ ವಾಹನವಾದ ಇಲಿ (3)
7. ಲೀಲಾವತಿಯ ಮನೆ ಹರಾಜು (3)
11. ಪಿಳಿಪಿಳಿ ಕಣ್ಣು ಬಿಟ್ಟ ಶುಕ (2)
12. ಪರರಿಗೆ ಸಿಕ್ಕಿತು ಸಂಬಳ (3)
13. ಮಾಡುವ ಕೆಲಸಕ್ಕೆ ಉಂಟಾದ ವಿಘ್ನ (2)
14. ನಾಡಿನ ದೊರೆ (3)
18. ಪ್ರಲಾಪ, ಅಳುವಿಕೆ (3)
19. ಗಂಡು ಕೋತಿ ಅಥವಾ ಬೆಕ್ಕು (3)
20. ಜೋಡಿ ಅಥವಾ ಜತೆ (3)

ಮೇಲಿಂದ ಕೆಳಕ್ಕೆ

1. ನಾವಿಕರಿಗೆ ದಿಕ್ಕು ತಿಳಿಯಲು ಉಪಯೋಗವಾಗುವ ಯಂತ್ರ (3)
2. ಮಾದರಿಗೆ ಮತ್ತೊಂದು ಹೆಸರು (3)
3. ನೂಲುವ ಒಂದು ಸಾಧನ (3)
4. ಸಂತೋಷ ಅಥವಾ ಆನಂದವಿದು (3)
5. ಕಳವಳಪಡುವಂಥದ್ದು ಏನಿಲ್ಲ, ಇದು ಆಸ್ಥೆ (4)
8. ಬಾಯಿಯ ಜೊಲ್ಲು (4)
9. ನಮ್ಮ ದೇಶಿಯ ಆಟ ಇತ್ತೀಚೆಗೆ ಪ್ರಸಿದ್ಧವಾಗಿದೆ (3)
10. ಉಪಕಾರ ಮಾಡಿದವರಿಗೆ ಕೆಡುಕು ಮಾಡುವುದು (4)
11. ಅಂಗಡಿಗೆ ಸಾಮಾನು ಕೊಳ್ಳಲು ಬಂದವನು (3)
13. ಅವನು ತೋರಿದ ಪ್ರೀತಿ (4)
14. ಏನೋ ಇಲ್ಲದಿರುವಿಕೆ (3)
15. ನೀರಿನಲ್ಲಿ ಹುಟ್ಟುವ ಕಮಲಕ್ಕೆ ಮತ್ತೊಂದು ಹೆಸರು (3)
16. ನಯವಾದ ನಮ್ರತೆ (3)
17. ಮಳೆ ಹನಿಯನ್ನು ಕುಡಿದು ಬದುಕುವುದೆಂದು ನಂಬಲಾಗಿರುವ ಹಕ್ಕಿ (3)

ಸರಿಯುತ್ತರಗಳು

ಎಡದಿಂದಬಲಕ್ಕೆ
1.ದಿವಾನ 4.ನರಕ 6.ಮೂಷಿಕ 7.ಲಿಲಾವು 11.ಗಿಳಿ 12.ಪಗಾರ 13.ಅಡ್ಡಿ 14.ಅರಸ 18.ರೋದನ 19.ಗಡವ 20.ಯಮಕ

ಮೇಲಿನಿಂದಕೆಳಕ್ಕೆ
1.ದಿಕ್ಸೂಚಿ 2.ನಮೂನೆ 3.ತಕಲಿ 4.ನಲಿವು 5.ಕಳಕಳಿ 8.ಲಾಲಾರಸ 9.ಕಬಡ್ಡಿ 10.ಅಪಕಾರ 11.ಗಿರಾಕಿ 13.ಅನುರಾಗ 14.ಅಭಾವ 5.ಸರೋಜ 16.ವಿನಯ 17.ಚಾತಕ

ಧನತ್ರಯೋದಶಿಯ ಮಹತ್ವ

ಒಮ್ಮೆ ಲಕ್ಷ್ಮೀನಾರಾಯಣರು ಲೋಕ ಸಂಚಾರ ಮಾಡುತ್ತಾ ಭೂಮಿಗೆ ಬರುತ್ತಾರೆ. ಭೂಮಿಯಲ್ಲಿ ವಿಹರಿಸುತ್ತಾ ನಾರಾಯಣನು ಮಹಾಲಕ್ಷ್ಮಿಯನ್ನು ಅಲ್ಲಿಯೇ ಒಂದೆಡೆ ನಿಲ್ಲುವಂತೆ ಹೇಳಿ ತಾನೊಬ್ಬನೇ ಮುಂದೆ ಹೋಗುತ್ತಾನೆ. ಯಾವ ಕಾರಣಕ್ಕೂ ನೀನು ಇಲ್ಲಿಂದ ಕದಲಬೇಡ ಎಂದು ಲಕ್ಷ್ಮಿಗೆ ತಾಕೀತು ಮಾಡುತ್ತಾನೆ.

ಆದರೆ, ಚಂಚಲೆಯಾದ ಮಹಾಲಕ್ಷ್ಮಿಯು ನಾರಾಯಣ ಹೊರಟುಹೋದ ನಂತರ ಕುತೂಹಲ ತಡೆಯಲಾಗದೇ ಅಲ್ಲಿಂದ ತಾನೂ ಹೊರಟುಬಿಡುತ್ತಾಳೆ. ಮುಂದೆ ನಡೆಯುತ್ತಾ ನಡೆಯುತ್ತಾ ಒಂದು ಹೊಲಕ್ಕೆ ಬರುತ್ತಾಳೆ. ಅಲ್ಲಿ ಬೆಳೆದ ಕಬ್ಬು ನೋಡಿ ಆಸೆ ಪಟ್ಟು ಅದನ್ನು ಕಿತ್ತು ತಿನ್ನುತ್ತಾಳೆ. ಅಲ್ಲಿ ಬೆಳೆದ ಹೂಗಳನ್ನು ಕಂಡು ಕಿತ್ತು, ಆ ಹೂಗಳಿಂದ ತನ್ನನ್ನು ಸಿಂಗರಿಸಿಕೊಳ್ಳುತ್ತಾಳೆ.

ಆ ಹೊತ್ತಿಗೆ ಅಲ್ಲಿಗೆ ಬರುವ ಮಹಾವಿಷ್ಣು, ತನ್ನ ಮಾತನ್ನು ಮೀರಿ ಬಂದ ಲಕ್ಷ್ಮಿಯನ್ನು ಕಂಡು ಬೇಸರಪಡುತ್ತಾನೆ. ''ದೇವತೆಗಳು ಭೂಮಿಯ ಜನರಿಂದ ಏನಾದರೂ ಪಡೆದರೆ ಅವರೊಡನೆ ಕನಿಷ್ಠ ಹನ್ನೆರಡು ವರ್ಷ ನೆಲೆಸಬೇಕಾಗುತ್ತದೆ. ನೀನು ಇದೇನು ಕೆಲಸ ಮಾಡಿಬಿಟ್ಟೆ?'' ಎಂದು ವಿಷಾದಪಡುತ್ತಾನೆ. ''ನಿಯಮದಂತೆ ನೀನು ಮುಂದಿನ ಹನ್ನೆರಡು ವರ್ಷ ಕಾಲ ಇಲ್ಲೇ ಈ ರೈತನ ಹೊಲದಲ್ಲೇ ನೆಲೆಸಿರಬೇಕು. ನಂತರವಷ್ಟೇ ನೀನು ವೈಕುಂಠಕ್ಕೆ ಮರಳಬಹುದು'' ಎಂದು ಹೇಳಿ ಹೊರಟುಹೋಗುತ್ತಾನೆ. ಅದರಂತೆ ಮಹಾಲಕ್ಷ್ಮಿಯು ಆ ಬಡ ರೈತನ ಹೊಲಮನೆಯಲ್ಲಿಯೇ ಹನ್ನೆರಡು ವರುಷಗಳ ಕಾಲ ನೆಲೆಸಿಬಿಡುತ್ತಾಳೆ.

ಲಕ್ಷ್ಮಿಯು ನೆಲೆನಿಂತ ಸ್ಥಳದಲ್ಲಿ ಬಡತನ ಇರಲು ಸಾಧ್ಯವೇ? ರೈತನ ಹೊಲದಲ್ಲಿ ಬಂಗಾರದ ಬೆಳೆ ತುಂಬಿಹೋಗುತ್ತದೆ. ಆತ ಶ್ರೀಮಂತನಾಗುತ್ತಾನೆ. ಇದಕ್ಕೆಲ್ಲಾ ತನ್ನ ಹೊಲದಲ್ಲಿ ನೆಲೆಸಿರುವ ತಾಯಿ ಲಕ್ಷ್ಮಿಯೇ ಕಾರಣವೆಂದು ಅರಿತು, ಪತ್ನಿಯೊಡನೆ ಆಕೆಯನ್ನು ಉಪಚರಿಸಿ ಪೂಜಿಸುತ್ತಾನೆ. ಹೀಗೆ ಹನ್ನೆರಡು ವರ್ಷಗಳು ಕಳೆದು ಲಕ್ಷ್ಮಿಯು ವೈಕುಂಠಕ್ಕೆ ಮರಳುವ ದಿನ ಬರುತ್ತದೆ. ಸ್ವತಃ ಮಹಾವಿಷ್ಣುವೇ ಅವಳನ್ನು ಕರೆದೊಯ್ಯಲು ಬರುತ್ತಾನೆ. ಆದರೆ ರೈತನೂ ಆತನ ಪತ್ನಿಯೂ ''ಲಕ್ಷ್ಮಿ ನಮ್ಮ ತಾಯಿ, ನಾವು ಆಕೆಯನ್ನು ಕಳುಹಿಸಲಾರೆವು'' ಎಂದು ಹಠ ಹಿಡಿಯುತ್ತಾರೆ.

ಅವರ ವಾತ್ಸಲ್ಯಕ್ಕೆ ಲಕ್ಷ್ಮೀನಾರಾಯಣರು ಕಟ್ಟುಬೀಳುತ್ತಾರೆ. ಕೊನೆಗೆ ಅವರ ಪ್ರೀತಿಗೆ ಮಣಿಯುವ ನಾರಾಯಣ, ''ನಾಳೆ ಆಶ್ವಯುಜ ಕೃಷ್ಣ ತ್ರಯೋದಶಿ. ತನುಮನ ಶುದ್ಧಿಯಿಂದ ಕಳಶದಲ್ಲಿ ಲಕ್ಷ್ಮಿಯನ್ನು ಆವಾಹಿಸಿ ಪೂಜಿಸಿದರೆ ಅವಳು ತನ್ನ ಒಂದಂಶದಿಂದ ಸದಾ ನಿಮ್ಮೊಡನೆ ನೆಲೆಸುತ್ತಾಳೆ. ನಾಳೆಯ ದಿನ ಯಾರೆಲ್ಲರೂ ಶ್ರದ್ಧಾಭಕ್ತಿಯಿಂದ ಲಕ್ಷ್ಮೀಪೂಜೆ ಮಾಡುತ್ತಾರೋ ಅವರ ಸಂಪತ್ತು ವೃದ್ಧಿಯಾಗುತ್ತದೆ'' ಎಂದು ಭರವಸೆ ನೀಡುತ್ತಾನೆ. ಧನತ್ರಯೋದಶಿಯ ದಿನ ಲಕ್ಷ್ಮೀ ಪೂಜೆ ಮಾಡುವ ರೂಢಿ ಶುರುವಾಗಿದ್ದು ಹೀಗೆ ಅನ್ನುತ್ತವೆ ಪುರಾಣ ಕಥೆಗಳು.

ಆದ್ದರಿಂದ, ಲೋಭದಿಂದಲ್ಲದೆ ಪ್ರೇಮದಿಂದ ಲಕ್ಷ್ಮೀದೇವಿಯನ್ನು ಪೂಜಿಸಬೇಕು. ಆಶ್ವಯುಜ ತ್ರಯೋದಶಿಯಂದು ದೀಪದಾನ ಶ್ರೇಷ್ಠವೆನ್ನುತ್ತಾರೆ, ಮಣ್ಣಿನ ಹಣತೆಗಳನ್ನು ಕೊಂಡು ದಾನ ಮಾಡಿದರೆ ಸಣ್ಣಮಟ್ಟದ ಕುಶಲಕಾರ್ಮಿಕರಿಗೂ ಒಂದಷ್ಟು ವ್ಯಾಪಾರವಾಗುತ್ತದೆ. ದೀಪವನ್ನು ದಾನ ಮಾಡುತ್ತಾ ಮತ್ತೊಬ್ಬರ ಜೀವನದಲ್ಲಿ ಬೆಳಕನ್ನು ಹಂಚುವ ಸಂಭ್ರಮವೂ ನಮ್ಮದಾಗುತ್ತದೆ.

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಳ್ಳೆಯ ಮನಸ್ಸಿನಿಂದ ಮನೆಯಲ್ಲಿ ಶುಚಿತ್ವವನ್ನು ಕಾಪಾಡಿಕೊಳ್ಳುತ್ತಾ, ಕಾಲಕಾಲಕ್ಕೆ ಬೇಕಾದ ದಾನ ಧರ್ಮಗಳನ್ನು ಮಾಡುತ್ತಾ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಿದಾಗ ಪ್ರತಿದಿನವೂ ಹಬ್ಬವೇ. ಯಾರ ಮನೆಯಲ್ಲಿ ಅನಗತ್ಯವಾಗಿ ವಸ್ತುಗಳನ್ನು ತುಂಬಿಕೊಂಡಿರುವುದಿಲ್ಲವೋ, ಹಣ ಪೋಲಾಗುವುದಿಲ್ಲವೋ, ಪ್ರಾಮಾಣಿಕತೆಯಿಂದ ಬದುಕುತ್ತಾರೋ ಅಲ್ಲಿ ಲಕ್ಷ್ಮಿ-ಸರಸ್ವತಿ ಇಬ್ಬರ ಕೃಪೆಯೂ ಇರುತ್ತದೆ. ಲಕ್ಷ್ಮಿಯನ್ನು ಪೂಜಿಸುವುದು ಎಂದರೆ ಸಂಪತ್ತನ್ನು ಗೌರವಿಸುವುದು ಎನ್ನುವುದು ನಿಜವಾದರೂ, ಶ್ರಮದ ದುಡಿಮೆಯ ಸಂಪತ್ತು ಮಾತ್ರವೇ ಗೌರವಕ್ಕೆ ಅರ್ಹವಾದುದು. ಆದ್ದರಿಂದ ಶ್ರಮ ಮತ್ತು ಪ್ರಾಮಾಣಿಕವಾಗಿ ಗಳಿಸಿದ ಸಂಪತ್ತನ್ನು ಶ್ರದ್ಧೆಯಿಂದ ಪೂಜಿಸಿ ಪರಿಶ್ರಮಕ್ಕೆ ಬೆಲೆ ಕಟ್ಟೋಣ. ಹೀಗೆ ಮಾಡಿದಾಗ ಧನಲಕ್ಷ್ಮಿ, ವಿದ್ಯಾಲಕ್ಷ್ಮಿ, ಧಾನ್ಯಲಕ್ಷ್ಮಿಯರು ನಮ್ಮೊಡನೆ ಮಾತ್ರವಲ್ಲ, ನಮ್ಮ ಕುಟುಂಬದ ಮುಂದಿನ ಮೂರು ತಲೆಮಾರುಗಳ ಕಾಲವೂ ನೆಲೆಸುವುದು ಖಚಿತ.

ಎಲ್ಲರಿಗೂ ಧನತ್ರಯೋದಶಿಯ ಹಾರ್ದಿಕ ಶುಭಾಶಯಗಳು...

● ವಿದ್ಯಾಶಂಕರ ಶರ್ಮ, ಬೆಂಗಳೂರು

ದೀಪಾವಳಿ ಎಂದಾಗ ಬೆಳಕುಗಳ ಚಿತ್ತಾರ, ಹಣತೆಗಳ ಸಾಲುಗಳ ಮೆರವಣಿಗೆ, ಪಟಾಕಿಗಳ ಸದ್ದಿನ ಜತೆ ಬೆಳಕಿನ ಆಟ. ಬಹು ರಂಜಿತ ಹಬ್ಬ ದೀಪಾವಳಿಗೂ ದೀಪಗಳಿಗೂ ಬಲು ನಂಟು. ಹಾಗೆಂದಾಗ ದೀಪಗಳೆಡೆಗೆ ಸಹಜವಾಗಿ ನಮ್ಮ ಗಮನ ಹರಿಯುತ್ತದೆ. ದೀಪ ಎಂಬುದು ಭಾರತದ ಸಂಸ್ಕೃತಿಯಲ್ಲಿ ಆಶಾಭಾವದ, ಧನಾತ್ಮಕ ಚಿಂತನೆಗಳ, ಹೊಸ ನಿರೀಕ್ಷೆಯ ದ್ಯೋತಕವಾಗಿದೆ. ದೀಪಗಳೆಂದರೆ ನಮಗೆ ಪೂಜ್ಯ ಮತ್ತು ಗೌರವದ ಭಾವ. ದೀಪಗಳ ಸ್ತೋತ್ರಗಳನ್ನು ಕೇಳುವುದು, ಹೇಳುವುದು ಬಾಲ್ಯದ ಸವಿನೆನಪುಗಳ ಬುತ್ತಿಯಲ್ಲಿರುವ ಸಿಹಿ ಸಜ್ಜಿಗೆ. 'ಶುಭಂ ಕುರುತ್ವಂ ಕಲ್ಯಾಣಂ' ಎಂದು ಪ್ರಾರಂಭವಾಗುವ ಸ್ತುತಿಯಲ್ಲಿ ಎಷ್ಟೆಲ್ಲ ಒಳ್ಳೆಯ ಚಿಂತನೆಗಳಿವೆ. ನಮಗೆ ಆರೋಗ್ಯವನ್ನು, ಸಮೃದ್ಧಿಯನ್ನು ಕರುಣಿಸಲಿ ಎಂಬ ಆಶಯವಿದೆ. ಶತ್ರು ಬುದ್ಧಿ ವಿನಾಶವಾಗಲಿ ಎಂಬ ಸಾಲಿನ ಅರ್ಥ ಗಹನವಾಗಿದೆ. ನಮ್ಮೊಳಗಿನ ಅಹಂಕಾರ, ಆಸೆ, ಮೋಹಗಳೆಂಬ ಶತ್ರುಗಳು ತೊಲಗಲಿ ಎಂಬ ಬಿನ್ನಹವಿದೆ. ದೀಪದ ಜ್ಯೋತಿಯಲ್ಲಿ ಪರಮಾತ್ಮನನ್ನು ಕಾಣುವ ಉದಾತ್ತ ಮೌಲ್ಯವಿದೆ. ಸೂರ್ಯನ ಉದಯದಂತೆ ದೀಪವು ನಮ್ಮ ಬಾಳನ್ನು ಬೆಳಗಲಿ, ಎಲ್ಲಿ ದೀಪದ ಬೆಳಕಿದೆಯೋ ಅಲ್ಲಿ ದರಿದ್ರತೆಯು ಇರದು ಎಂಬ ಮಾತಿದೆ. ಮನದ ದರಿದ್ರತೆಯು ದೂರಾಗಲಿ ಎಂಬ ಚಿಂತನೆ ಈ ಸಾಲುಗಳ ಒಳ ಅರ್ಥ.

ದೀಪಾರೋಹಣ ಎಂಬ ಸ್ತುತಿಯಲ್ಲಿ ದೀಪದ ಬಗೆಗೆ ಸತ್ವಯುತ ವಿಚಾರಗಳಿವೆ. ದೀಪ ಬೆಳಗುವುದರಿಂದ ನಮ್ಮ ಪಾಪ ಪರಿಹಾರವಾಗುವುದು, ಅದು ನಮ್ಮ ಅಸಮಾಧಾನದ ಬೆಂಕಿಯನ್ನು ಆರಿಸುವುದು. ದೇವರಿಗೆ ಇಷ್ಟಪ್ರದವಾದ ದೀಪ, ಪಿತೃಲೋಕದಲ್ಲಿ ಇರುವ ನಮ್ಮ ಪೂರ್ವಜರಿಗೆ ಪ್ರಿಯವಾಗಿದೆ. ದೀಪಗಳನ್ನು ಬೆಳಗುವುದರಿಂದ ನಮ್ಮ ಚಿತ್ತವು ಶುದ್ಧಿಯಾಗಿ ನಮಗೆ ದೇವಲೋಕದ ಅನುಗ್ರಹವು ದೊರೆಯುವುದು ಎಂಬ ನಂಬಿಕೆಯನ್ನು ಈ ಸ್ತುತಿಯಲ್ಲಿ ಕಾಣಬಹುದು. ಇವೆಲ್ಲವುಗಳ ಒಟ್ಟೂ ತಾತ್ಪರ್ಯ ಇಷ್ಟೇ- ದೀಪದ ಬೆಳಗುವಿಕೆ ನಮ್ಮಲ್ಲಿರುವ ನಕಾರಾತ್ಮಕ ಗುಣಗಳನ್ನು ಕರಗಿಸಿ ಸಕಾರಾತ್ಮಕ ಚಿಂತನೆಯೆಡೆಗೆ ನಮ್ಮನ್ನು ಕರೆದೊಯ್ಯುತ್ತದೆ.

ದೀಪವನ್ನು ಹೋಲಿಕೆ ಮಾಡಿ ಆಡಿದ ಮಾತುಗಳನ್ನು ಭಗವದ್ಗೀತೆಯಲ್ಲಿ ನಾವು ಕಾಣಬಹುದು. ಭಗವದ್ಗೀತೆಯ ಆರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಹೇಳುತ್ತಾನೆ: 'ಯಥಾ ದೀಪೋ ನಿವಾತಸ್ಥೋ ನೇಙ್ಗತೇ ಸೋಪಮಾ ಸ್ಮೃತಾ । ಯೋಗಿನೋ ಯತಚಿತ್ತಸ್ಯ ಯುಞ್ಜತೋ ಯೋಗಮಾತ್ಮನಃ'. ಹೇಗೆ ಗಾಳಿಯಿಲ್ಲದ ಸ್ಥಳದಲ್ಲಿ ದೀಪವು ನಿಶ್ಚಲವಾಗಿರುವುದೋ ಹಾಗೆಯೇ ಮನಸ್ಸಿನ ನಿಯಂತ್ರಣವನ್ನು ಸಾಧಿಸಿರುವ ಯೋಗಿಯ ಮನವು ಪರಮಾತ್ಮ ತತ್ತ್ವದಲ್ಲಿ ನೆಲೆ ನಿಲ್ಲುವುದು ಎಂಬುದನ್ನು ಹೇಳಲು ದೀಪದ ಉಪಮೆಯನ್ನು ಭಗವಂತನು ಇಲ್ಲಿ ನೀಡಿದ್ದಾನೆ. ದೀಪದ ಬೆಳಕನ್ನು ಇಲ್ಲಿ ಸಮಚಿತ್ತದ ಸ್ಥಿತಿಯನ್ನು ವರ್ಣಿಸಲು ಬಳಸಲಾಗಿದೆ. ಇದೇ ದೀಪದ ಬೆಳಕಿನ ದೃಷ್ಟಾಂತವನ್ನು ಭಗವಂತನ ವಿಶ್ವರೂಪದರ್ಶನದ ವಿವರಣೆಯಲ್ಲಿ 11ನೆಯ ಅಧ್ಯಾಯದಲ್ಲಿ ನೋಡಬಹುದಾಗಿದೆ. ಭಗವಂತನ ಬಾಯಿಯೊಳಗೆ ಎಲ್ಲರೂ ಬೆಳಕಿನೆಡೆಗೆ ಹಾರಿ ಹೋಗುವ ಪತಂಗಗಳ ಪರಿಯಲ್ಲಿ ಪ್ರವೇಶಿಸುತ್ತಿದ್ದಾರೆ ಎಂಬ ಮಾತುಗಳು ದೀಪದ ಹೋಲಿಕೆಯಿಂದ ಭಗವಂತನ ಸರ್ವವ್ಯಾಪಕತ್ವದ ನಿರೂಪಣೆಯಾಗಿದೆ.

ದೀಪವನ್ನು ನಮ್ಮ ಜೀವನಕ್ಕೆ ಹೋಲಿಸಿರುವದನ್ನು ನಾವು ಕವಿತೆಗಳಲ್ಲಿ ಕಾಣಬಹುದು. ಕೆ.ಎಸ್.ನರಸಿಂಹ ಸ್ವಾಮಿಯವರ 'ದೀಪವು ನಿನ್ನದೆ ಗಾಳಿಯು ನಿನ್ನದೆ' ಎಂಬ ಕವಿತೆಯಲ್ಲಿ ಸೃಷ್ಟಿಯ ನಿಯಾಮಕನ ಆಣತಿಯಂತೆ ಇಲ್ಲಿ ಎಲ್ಲವೂ, ನಮ್ಮದೇನಿಲ್ಲ ಎಂಬ ಪರಮ ಸತ್ಯವು ಬಲು ಸುಂದರವಾಗಿ ಹೇಳಲ್ಪಟ್ಟಿದೆ. ದೀಪಕ್ಕೂ ನಮಗೂ ಇರುವ ಒಂದು ಸುಂದರ ಸಂಬಂಧ, ಪಾರಮಾರ್ಥಿಕ ಸತ್ಯ ದರ್ಶನವನ್ನು ಸಾರುವ ಮೂಲಕ ನಮ್ಮ ಗೌರವಾದರಗಳನ್ನು ಪಡೆಯುತ್ತದೆ. ದೀಪಾವಳಿ ಹಬ್ಬದ ಆಚರಣೆಯ ಶುಭ ಸಂದರ್ಭದಲ್ಲಿ ನಮ್ಮ ಮನದ ವೈರಿಗಳ ನಾಶವಾಗಿ ಆರೋಗ್ಯಕರ ಯೋಚನೆಗಳು ನಮ್ಮಲ್ಲಿ ಉದಯಿಸಲಿ. ದೀಪಾವಳಿಯ ಬೆಳಕು ನಮ್ಮ ಹೃದಯವನ್ನು ಬೆಳಗಿ ಸಮಾಧಾನದ, ಸ್ಥಿರ ಚಿತ್ತದ ಬದುಕಿನೆಡೆಗೆ ನಮ್ಮನ್ನು ನಡೆಸಲಿ ಎಂಬ ಸದಾಶಯ ನಮ್ಮೆಲ್ಲರದಾಗಲಿ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

38ನೇ ವಯಸ್ಸಿನಲ್ಲಿ ಪಾಕ್ ಕ್ರಿಕೆಟಿಗನ ಪದಾರ್ಪಣೆ

ರಾವಲ್ಪಿಂಡಿ: ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಭ್ರಷ್ಟಾಚಾರ ವಿರೋಧಿ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ನಿಷೇಧಕ್ಕೊಳಗಾಗಿದ್ದ ಸ್ಪಿನ್ನರ್ ಆಸಿಫ್ ಅಫ್ರಿದಿಗೆ 38ನೇ

ವಯಸ್ಸಿನಲ್ಲಿ ಕ್ರಿಕೆಟ್ ಪದಾರ್ಪಣೆ ಮಾಡುವ ಅದೃಷ್ಟ ಒದಗಿ ಬಂದಿದೆ. ರಾವಲ್ಪಿಂಡಿಯಲ್ಲಿ ಸೋಮವಾರ ಆರಂಭಗೊಂಡ ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದಾರೆ. ಪಾಕಿಸ್ತಾನದ ದೇಶೀಯ ಕ್ರಿಕೆಟ್‌ನಲ್ಲಿ ಸ್ಪಾಟ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಿದ್ದಕ್ಕಾಗಿ ಅಫ್ರಿದಿ ಎರಡು ವರ್ಷಗಳ ಕಾಲ ನಿಷೇಧಕ್ಕೊಳಗಾಗಿದ್ದರು. ಆದರೆ ಶಿಕ್ಷೆಯ ಅವಧಿ ಮುಗಿಯಲು ಇನ್ನೂ ಆರು ತಿಂಗಳು ಇರುವಂತೆಯೇ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಅವಕಾಶ ನೀಡಲಾಗಿದೆ. ಅವರ ಮೇಲಿನ ನಿಷೇಧ ಸಡಿಲಿಸಿದ್ದೇಕೆ ಎಂಬುದನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಬಹಿರಂಗಪಡಿಸಿಲ್ಲ. ಅಫ್ರಿದಿ ಅವರು 2009ರಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ, 57 ಪಂದ್ಯಗಳಲ್ಲಿ 198 ವಿಕೆಟ್‌ಗಳನ್ನು ಪಡೆದಿದ್ದಾರೆ. 60 ಲಿಸ್ಟ್-ಎ ಪಂದ್ಯಗಳಲ್ಲಿ 83 ವಿಕೆಟ್‌ಗಳನ್ನು ಮತ್ತು 85 ಟಿ20 ಪಂದ್ಯಗಳಲ್ಲಿ 78 ವಿಕೆಟ್‌ಗಳನ್ನು ಪಡೆದಿದ್ದಾರೆ.

ಮಹಿಳಾ ವಿಶ್ವಕಪ್: ಸೆಮಿಫೈನಲ್‌ಗೆ ಮೂರು ತಂಡಗಳ ಪ್ರವೇಶ | ಇನ್ನೊಂದು ತಂಡಕ್ಕೂ ಅವಕಾಶ

ಒಂದು ಸ್ಥಾನಕ್ಕಾಗಿ 5 ತಂಡಗಳ ಪೈಪೋಟಿ

ದೆಹಲಿ: ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಸುತ್ತಿನ ಪಂದ್ಯಗಳು ಮುಕ್ತಾಯದ ಹಂತಕ್ಕೆ ಬಂದು ನಿಂತಿದೆ. ಈಗಾಗಲೇ ಲೀಗ್ ಹಂತದಲ್ಲಿ 22 ಪಂದ್ಯಗಳು ಮುಗಿದಿದ್ದು, ಒಟ್ಟು ಎಂಟು ತಂಡಗಳ ಪೈಕಿ ಮೂರು ತಂಡಗಳಾದ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ದ. ಆಫ್ರಿಕಾ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿವೆ. ಇದೀಗ ಉಳಿದ 5 ತಂಡಗಳಾದ ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ತಂಡಗಳ ಪೈಕಿ ಒಂದು ತಂಡವು ಸೆಮಿಫೈನಲ್‌ಗೆ ಅರ್ಹತೆ ಗಿಟ್ಟಿಸಲಿದೆ. ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ತಂಡಗಳ ಗಮನಾರ್ಹ ಪ್ರದರ್ಶನ ನಿಜಕ್ಕೂ ಉಲ್ಲೇಖನೀಯ.

ಈ ಬಾರಿಯ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ತಂಡವು ಭರ್ಜರಿ ಪ್ರದರ್ಶನ ನೀಡುತ್ತಿದೆ. ಆಡಿರುವ 5 ಪಂದ್ಯಗಳಲ್ಲಿ 4 ಗೆಲುವು ದಾಖಲಿಸಿರುವ ಆಸೀಸ್ ಪಡೆ ಒಟ್ಟು 9 ಅಂಕಗಳನ್ನು ಪಡೆದುಕೊಂಡಿದೆ. ಆಸ್ಟ್ರೇಲಿಯಾ-ಲಂಕಾ ನಡುವಿನ ಪಂದ್ಯವು ಮಳೆಯ ಕಾರಣ ರದ್ದಾದ ಕಾರಣ ಎರಡೂ ತಂಡಗಳಿಗೂ ತಲಾ ಒಂದು ಅಂಕ ನೀಡಲಾಗಿತ್ತು. ಅದರಂತೆ ಇದೀಗ 9 ಅಂಕಗಳೊಂದಿಗೆ ಆಸ್ಟ್ರೇಲಿಯಾ ತಂಡವು ಸೆಮಿಫೈನಲ್‌ಗೆ ಪ್ರವೇಶಿಸಿದೆ.

ದಕ್ಷಿಣ ಆಫ್ರಿಕಾ ತಂಡವನ್ನು ಬಗ್ಗು ಬಡಿದು, ಈ ಸಲದ ಮಹಿಳಾ ಏಕದಿನ ವಿಶ್ವಕಪ್ ಅಭಿಯಾನ ಆರಂಭಿಸಿದ ಇಂಗ್ಲೆಂಡ್ ತಂಡವು ಈವರೆಗೆ ಯಾವುದೇ ಪಂದ್ಯವನ್ನೂ ಸೋತಿಲ್ಲ.

ಪಾಕಿಸ್ತಾನದ ವಿರುದ್ಧದ ಪಂದ್ಯವು ಮಳೆಯ ಕಾರಣದಿಂದಾಗಿ ರದ್ದಾಗಿದ್ದರಿಂದ ಒಂದು ಅಂಕ ಪಡೆದಿರುವ ಇಂಗ್ಲೆಂಡ್ ತಂಡವು ಆಡಿರುವ 4 ಪಂದ್ಯಗಳಲ್ಲೂ ಗೆಲುವು ದಾಖಲಿಸಿ 9 ಅಂಕಗಳೊಂದಿಗೆ ಸೆಮಿಫೈನಲ್‌ಗೆ ಪ್ರವೇಶ ಪಡೆದಿದೆ.

ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಸೋತಿದ್ದ ದ.ಆಫ್ರಿಕಾ ಆ ಬಳಿಕ ಒಂದರ ಹಿಂದೆ ಮತ್ತೊಂದರಂತೆ 4 ಪಂದ್ಯಗಳಲ್ಲಿ ಗೆಲುವು ದಾಖಲಿಸಿದೆ. ಆ ಮೂಲಕ ಒಟ್ಟು 8 ಅಂಕಗಳೊಂದಿಗೆ ಸೆಮಿಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ದ. ಆಫ್ರಿಕಾ ತಂಡ ಯಶಸ್ವಿಯಾಗಿದೆ. ಮುಂದಿನ ಪಂದ್ಯಗಳಲ್ಲಿ ಜಯ ಸಾಧಿಸಿ ಯಾವ ತಂಡ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಅಲಂಕರಿಸಲಿದೆ ಎಂದು ಕಾದು ನೋಡಬೇಕಿದೆ.

ಭಾರತಕ್ಕೂ ಅವಕಾಶ ಸಾಧ್ಯತೆ

ಅಕ್ಟೋಬರ್ 23ರಂದು ಮುಂಬೈನಲ್ಲಿ ನಡೆಯುವ ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲೆಂಡ್ ವಿರುದ್ಧ ಮತ್ತು ಅಕ್ಟೋಬರ್ 26ರಂದು ನಡೆಯುವ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಸೋಲಿಸಿದರೆ ಈ ಬಾರಿಯ ಮಹಿಳಾ ವಿಶ್ವಕಪ್ ಸೆಮಿಫೈನಲ್‌ಗೆ ಭಾರತವು ಅರ್ಹತೆ ಪಡೆಯಲಿದೆ. ಭಾರತ ತಂಡ ನ್ಯೂಜಿಲೆಂಡ್ ತಂಡವನ್ನು ಸೋಲಿಸಿದರೂ, ಬಾಂಗ್ಲಾದೇಶ ವಿರುದ್ಧ ಸೋತರೆ, ನ್ಯೂಜಿಲೆಂಡ್ ತಂಡವು ಇಂಗ್ಲೆಂಡ್ ಮತ್ತು ಬಾಂಗ್ಲಾದೇಶ ವಿರುದ್ಧ ಸೋತರೆ ಮತ್ತು ಶ್ರೀಲಂಕಾ ಮತ್ತು ಪಾಕಿಸ್ತಾನ ತಂಡಗಳು ತಮ್ಮ ಉಳಿದ ಎರಡು ಲೀಗ್ ಪಂದ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಪಂದ್ಯ ಗೆಲ್ಲಲು ವಿಫಲವಾದರೆ ಭಾರತವೂ ಈ ಸಲದ ಮಹಿಳಾ ವಿಶ್ವಕಪ್‌ನ ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿದೆ.

ಮಹಿಳಾ ವಿಶ್ವಕಪ್ ಕ್ರಿಕೆಟ್: ಚಾಮರಿ ಅಟಪಟ್ಟು ಅಮೋಘ ಪ್ರದರ್ಶನ

ಬಾಂಗ್ಲಾ ವಿರುದ್ಧ ಲಂಕಾಕ್ಕೆ ಜಯ

ಮುಂಬೈ: ಇಲ್ಲಿ ಸೋಮವಾರ ನಡೆದ ಮಹಿಳಾ ವಿಶ್ವಕಪ್ ಪಂದ್ಯದಲ್ಲಿ ಲಂಕಾ ತಂಡವು ಬಾಂಗ್ಲಾದೇಶವನ್ನು 7 ರನ್‌ಗಳಿಂದ ಸೋಲಿಸಿತು. ಲಂಕಾದ 202 ರನ್‌ಗಳನ್ನು ಬೆಂಬತ್ತಿದ ಬಾಂಗ್ಲಾ ತಂಡವು 9 ವಿಕೆಟ್‌ಗೆ 195 ರನ್ ಗಳಿಸಲಷ್ಟೇ ಶಕ್ತವಾಯಿತು.

ಬಾಂಗ್ಲಾ ಪರ ನಿಗರ್ ಸುಲ್ತಾನ (77) ಮತ್ತು ಶಾರ್ಮಿನ್ ಅಕ್ತರ್ (64) ಮಾತ್ರ ಉತ್ತಮ ಮೊತ್ತ ದಾಖಲಿಸುವಲ್ಲಿ ಶಕ್ತರಾದರು. ಆದರೆ ಬೌಲಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಮಿಂಚಿದ ಲಂಕಾ ನಾಯಕಿ ಚಾಮರಿ ಅಟಪಟ್ಟು ತನ್ನ ತಂಡಕ್ಕೆ ಗೆಲುವನ್ನು ತಂದುಕೊಡುವಲ್ಲಿ ಯಶಸ್ವಿಯಾದರು.

ಶ್ರೀಲಂಕಾದ ಆರಂಭ ಉತ್ತಮವಾಗಿರಲಿಲ್ಲ. ವಿಶ್ಮಿ ಗುಣರತ್ನೆ ಯಾವುದೇ ರನ್ ಗಳಿಸದೆ ಔಟ್ ಆದರು. ಆದರೆ ಆ ಬಳಿಕ ನಾಯಕಿ ಚಮರಿ ಅಟಪಟ್ಟು ಮತ್ತು ಹಸಿನಿ ಪೆರೇರಾ ತಂಡವನ್ನು ಕುಸಿತದಿಂದ ಪಾರು ಮಾಡಿ 72 ರನ್‌ಗಳ ಎರಡನೇ ವಿಕೆಟ್ ಜತೆಯಾಟವನ್ನು ಪ್ರದರ್ಶಿಸಿದರು.

ನಾಯಕಿ ಚಮರಿ ಅಟಪಟ್ಟು 43 ಬಾಲ್‌ಗಳನ್ನು ಎದುರಿಸಿ 46 ರನ್ ಗಳಿಸಿ ಬಾಂಗ್ಲಾ ಬೌಲರ್ ರನೆಯಾ ಖಾತುಮ್ ಅವರಿಗೆ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಹರ್ಷಿತಾ ಸಮರವಿಕ್ರಮ 11 ಬಾಲ್‌ಗಳಲ್ಲಿ ಕೇವಲ 4 ರನ್ ಗಳಿಸಿ ಪೆವಿಲಿಯನ್ ಸೇರಿದರು. ಕವಿಶಾ ದಿಲ್ಹಾರಿ 6 ಬಾಲ್ ಎದುರಿಸಿ 4 ರನ್ ಗಳಿಸಲಷ್ಟೇ

ಶಕ್ತರಾದರು,

ಆ ಬಳಿಕ ನಿಲಾಕ್ಷಿ ಡಿ ಸಿಲ್ವ ಮತ್ತು ಹಸಿನಿ ಪೆರೇರಾ ಮಧ್ಯೆ ಉತ್ತಮ ಜತೆಯಾಟ ಮೂಡಿ ಬಂತು. ಹಸಿನಿ ಡಿ ಸಿಲ್ವ 38 ಬಾಲ್‌ಗಳನ್ನು ಎದುರಿಸಿ 37 ರನ್ ಗಳಿಸುವಲ್ಲಿ ಯಶಸ್ವಿಯಾದರು. ಆ ನಂತರ ಕೀಸ್‌ಗೆ ಬಂದ ಅನುಷ್ಕಾ ಸಂಜೀವನಿ 7 ಬಾಲ್‌ಗಳನ್ನು ಎದುರಿಸಿ 2 ರನ್ ಗಳಿಸಿ ಔಟ್ ಆದರು. ಉದೇಶಿಕಾ ಪ್ರಭೋಧನಿ 37 ಬಾಲ್‌ಗಳನ್ನು ಎದುರಿಸಿದರೂ ಕೇವಲ 8 ರನ್ ಗಳಿಸಿ ತಮ್ಮ ವಿಕೆಟ್ ಕಳೆದುಕೊಂಡರು.

ಶ್ರೀಲಂಕಾ ತಂಡಕ್ಕೆ ಉತ್ತಮ ಮೊತ್ತ ದಾಖಲಿಸುವಲ್ಲಿ ಹಸಿನಿ ಪೆರೇರಾ ನೆರವಾದರು. 99 ಬಾಲ್‌ಗಳನ್ನು ಎದುರಿಸಿದ ಅವರು, 85 ರನ್ ಗಳಿಸಿ ಶೋರ್ನಾ ಅಕ್ತರ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದು ಔಟ್ ಆದರು. ಮಲ್ಕಿ ಮದರಾ 42 ಬಾಲ್ ಎದುರಿಸಿದರೂ ಕೇವಲ 9 ರನ್ ಗಳಿಸಿ ರನೌಟ್ ಆದರು. ಇನೊಕ ರಣವೀರ 4 ಬಾಲ್‌ಗಳಲ್ಲಿ 2 ರನ್ ಗಳಿಸಿ ಅಜೇಯರಾಗುಳಿದರು.

ಕಿವೀಸ್ ವಿರುದ್ಧ ಇಂಗ್ಲೆಂಡ್‌ಗೆ ಜಯ

ಕ್ರೈಸ್ಟ್‌ಚರ್ಚ್: ಇಲ್ಲಿ ಸೋಮವಾರ ನಡೆದ ಟಿ20 ಪಂದ್ಯದಲ್ಲಿ ಅತಿಥೇಯ ನ್ಯೂಜಿಲೆಂಡ್ ತಂಡವನ್ನು ಇಂಗ್ಲೆಂಡ್ ತಂಡವು 65 ರನ್‌ಗಳಿಂದ ಸೋಲಿಸಿ ಸರಣಿಯಲ್ಲಿ ಮುನ್ನಡೆ ಪಡೆದುಕೊಂಡಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿದ ಇಂಗ್ಲೆಂಡ್ ತಂಡವು ನಿಗದಿತ 20 ಓವರ್‌ಗಳಲ್ಲಿ

4 ವಿಕೆಟ್‌ಗಳ ನಷ್ಟಕ್ಕೆ 236 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್ 56 ಎಸೆತಗಳಲ್ಲಿ 85 ರನ್, ನಾಯಕ ಹ್ಯಾರಿ ಬ್ರೂಕ್ 35 ಎಸೆತಗಳಲ್ಲಿ 78 ರನ್ ಸಿಡಿಸಿ ಇಂಗ್ಲೆಂಡ್ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಜಾಕೋಬ್ ಬೆಥೆಲ್ ಕೇವಲ 12 ಎಸೆತಗಳಲ್ಲಿ 24 ರನ್, ಮತ್ತು ಟಾಮ್ ಬ್ಯಾಂಟನ್ 12 ಎಸೆತಗಳಲ್ಲಿ 29 ರನ್ ಗಳಿಸಿ ತಂಡಕ್ಕೆ ಉತ್ತಮ ಕೊಡುಗೆ ನೀಡಿದರು. ಜೋಸ್ ಬಟ್ಲರ್ (4) ಮಾತ್ರ ನಿರಾಶಾದಾಯಕ ಪ್ರದರ್ಶನ ನೀಡಿದರು. ನ್ಯೂಜಿಲೆಂಡ್ ಬೌಲರ್‌ಗಳಲ್ಲಿ ಜೇಮಿಸನ್ 2, ಡಫಿ ಮತ್ತು ಬ್ರೇಸ್‌ವೆಲ್ ತಲಾ ಒಂದು ವಿಕೆಟ್ ಪಡೆದರು. 237 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿದ ನ್ಯೂಜಿಲೆಂಡ್ ಆರಂಭದಿಂದಲೂ ಪರದಾಡಿತು. ನಾಯಕ ಮಿಚೆಲ್ ಸ್ಯಾಂಟ್ನರ್ (36) ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಟಿಮ್ ಸೀಫರ್ಟ್ (39) ಮತ್ತು ಚಾಪ್ಮನ್ (28) ಕೂಡ ನ್ಯೂಜಿಲೆಂಡ್ ಪರ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಆದರೂ ಕಿವೀಸ್ 18 ಓವರ್‌ಗಳಲ್ಲಿ 171 ರನ್‌ಗಳಿಗೆ ಆಲೌಟ್ ಆಯಿತು.

ಬಹುಕಾಲದ ಪ್ರಿಯಕರ ಪಲಾಶ್ ಮುಚ್ಚಲ್ ಜತೆ ಮದುವೆ

ಸ್ಮೃತಿ ಮಂಧಾನಾಗೆ ಕಂಕಣ ಭಾಗ್ಯ

ಮುಂಬಯಿ: ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಸ್ಮೃತಿ ಮಂಧಾನಾ ಅವರ ಮದುವೆ ವಿಚಾರದಲ್ಲಿ ಎದ್ದಿದ್ದ ವದಂತಿಗಳಿಗೆ ಕೊನೆಗೂ ತೆರೆ ಬಿದ್ದಿದೆ. ಸ್ಮೃತಿ ತಮ್ಮ ಬಹುಕಾಲದ ಪ್ರಿಯಕರ, ಸಂಗೀತ ಸಂಯೋಜಕ ಪಲಾಶ್ ಮುಚ್ಚಲ್ ಅವರನ್ನು ಶೀಘ್ರದಲ್ಲಿ ವಿವಾಹ ಆಗಲಿದ್ದಾರೆ. ಈ ಬಗ್ಗೆ ಅವರ ಭಾವಿ ಪತಿ ಅಧಿಕೃತ ಮಾಹಿತಿ ನೀಡಿದ್ದಾರೆ.

ಸ್ಮೃತಿ-ಪಲಾಶ್ ಬಹುಕಾಲದಿಂದ ಜತೆಯಾಗಿ ಕಾಣಿಸಿಕೊಳ್ಳುತ್ತಿದ್ದರು. ಆದರೆ ಈ ಜೋಡಿ ತಮ್ಮ ಮದುವೆ ಬಗ್ಗೆ ಎಲ್ಲಿಯೂ ಅಧಿಕೃತವಾಗಿ ಹೇಳಿಕೊಂಡಿರಲಿಲ್ಲ. ಇದೀಗ ಮದುವೆ ವಿಚಾರ ಅಧಿಕೃತಗೊಂಡಿದೆ. ಇತ್ತೀಚೆಗೆ ಇಂದೋರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಪಲಾಶ್, 'ಸ್ಮೃತಿ ಸದ್ಯದಲ್ಲೇ ಇಂದೋರ್‌ನ ಸೊಸೆ ಆಗಲಿದ್ದಾರೆ' ಎಂದು ತಮ್ಮ ಮದುವೆ ವಿಚಾರವನ್ನು ಬಹಿರಂಗಪಡಿಸಿದ್ದಾರೆ. 29 ವರ್ಷದ ಸ್ಮೃತಿ ಮಂಧಾನಾ ಸದ್ಯ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಬ್ಯುಸಿಯಾಗಿದ್ದು, ಈ ಪಂದ್ಯಾವಳಿ ಮುಕ್ತಾಯದ ಬಳಿಕ ಹಸೆಮಣೆ

ಏರುವ ಸಾಧ್ಯತೆ ಇದೆ.

ಪಲಾಶ್ ಮುಚ್ಚಲ್ ಸಂಗೀತ ನಿರ್ದೇಶಕನಾಗಿ ಬಾಲಿವುಡ್‌ನಲ್ಲಿ ಗುರುತಿಸಿಕೊಂಡಿದ್ದಾರೆ. ಟಿ ಸೀರಿಸ್, ಝೀ ಮ್ಯೂಸಿಕ್‌ಗಾಗಿ ಸುಮಾರು 40ಕ್ಕೂ ಅಧಿಕ ಮ್ಯೂಸಿಕ್ ವಿಡಿಯೋಗಳನ್ನು ಅವರು ಕಂಪೋಸ್ ಮಾಡಿದ್ದಾರೆ. 18ನೇ ವಯಸ್ಸಿನಲ್ಲಿ ಬಾಲಿವುಡ್‌ನ ಅತ್ಯಂತ ಕಿರಿಯ ಸಂಗೀತ ಸಂಯೋಜಕ ಎನಿಸಿ, ಗೋಲ್ಡನ್ ಬುಕ್‌ನಲ್ಲಿ ತಮ್ಮ ಹೆಸರನ್ನು ದಾಖಲಿಸಿದ್ದಾರೆ.

ಭಾರತ ಪ್ರವಾಸದಿಂದ ಹಿಂದೆ ಸರಿದ ಪೋರ್ಚುಗಲ್‌ನ ಫುಟ್ಬಾಲ್ ದೈತ್ಯ

ಕ್ರಿಸ್ಟಿಯಾನೊ ರೊನಾಲ್ಡೊ ಪ್ರವಾಸ ರದ್ದು

ಪಣಜಿ: ಪೋರ್ಚುಗಲ್‌ನ ಫುಟ್ಬಾಲ್ ದಂತಕಥೆ ಕ್ರಿಸ್ಟಿಯಾನೊ ರೊನಾಲ್ಡೊ ಅವರ ಆಟ ಕಣ್ತುಂಬಿಕೊಳ್ಳಲು ಕಾತರದಿಂದ ಕಾಯುತ್ತಿದ್ದ ಭಾರತೀಯ ಫುಟ್ಬಾಲ್ ಅಭಿಮಾನಿಗಳಿಗೆ ತೀವ್ರ ನಿರಾಶೆಯ ಸುದ್ದಿಯೊಂದು ಹೊರಬಿದ್ದಿದೆ. ಭಾರತೀಯ ಕ್ಲಬ್‌ನ ಹಲವಾರು ವಿನಂತಿಗಳ ಹೊರತಾಗಿಯೂ, ಕ್ರಿಸ್ಟಿಯಾನೊ ರೊನಾಲ್ಡೊ ಎಫ್‌ಸಿ ಗೋವಾ ವಿರುದ್ಧದ ಅಲ್-ನಾಸರ್‌ನ ಎಎಫ್‌ಸಿ ಚಾಂಪಿಯನ್ಸ್ ಲೀಗ್ 2 ಪಂದ್ಯಕ್ಕಾಗಿ ಭಾರತಕ್ಕೆ ಪ್ರಯಾಣಿಸುವುದಿಲ್ಲ ಎಂದು ಹೇಳಿದ್ದಾಗಿ ವರದಿಯಾಗಿದೆ.

ಲಿಯೋನೆಲ್ ಮೆಸ್ಸಿ ಮತ್ತು ಅವರ ವಿಶ್ವಕಪ್ ವಿಜೇತ ಅರ್ಜೆಂಟೀನಾ ತಂಡವು ಆಸ್ಟ್ರೇಲಿಯಾ ವಿರುದ್ಧದ ಅಂತಾರಾಷ್ಟ್ರೀಯ ಸೌಹಾರ್ದ ಪಂದ್ಯಕ್ಕಾಗಿ ಭಾರತಕ್ಕೆ ಭೇಟಿ ನೀಡಲು ಸಜ್ಜಾಗಿರುವಾಗಲೇ ಈ ನಿರ್ಧಾರ ಬಂದಿದೆ. ಈ ಹಿಂದೆ ವರದಿಯಾದ ಪ್ರಕಾರ, ಅಕ್ಟೋಬರ್ ತಿಂಗಳಲ್ಲಿ ರೊನಾಲ್ಡೊ ಭಾರತಕ್ಕೆ ಭೇಟಿ ನೀಡಲಿದ್ದು, ಎಫ್.ಸಿ ಗೋವಾ ವಿರುದ್ಧದ ಎಎಫ್‌ಸಿ ಚಾಂಪಿಯನ್ಸ್ ಲೀಗ್ 2 ಪಂದ್ಯವನ್ನು ಆಡುವ ಸಾಧ್ಯತೆ ಇದೆ ಎನ್ನಲಾಗಿತ್ತು. ಇದೀಗ ರೊನಾಲ್ಡೊ, ಎಫ್.ಸಿ ಗೋವಾ ಪಂದ್ಯಕ್ಕಾಗಿ ಭಾರತ ಪ್ರವಾಸವನ್ನು ತಿರಸ್ಕರಿಸಿದ್ದಾರೆ ಎಂದು ತಿಳಿದುಬಂದಿದೆ.

ರೊನಾಲ್ಡೊ ಅಕ್ಟೋಬರ್ 22ರಂದು ಫಟೋರ್ಡಾದ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಗ್ರೂಪ್-ಡಿ ಪಂದ್ಯಕ್ಕಾಗಿ ಅಲ್-ನಾಸರ್ ಪ್ರಯಾಣ ತಂಡದಿಂದ ಹೊರಗುಳಿದಿದ್ದಾರೆ. ಎಫ್.ಸಿ ಗೋವಾದ ಆಡಳಿತ ಮಂಡಳಿಯು ರೊನಾಲ್ಡೊ ಅವರನ್ನು ತಂಡಕ್ಕೆ ಸೇರಿಸಿಕೊಳ್ಳುವಂತೆ ಅಲ್-ನಾಸರ್ ಕ್ಲಬ್‌ಗೆ ಅವರನ್ನು ಒತ್ತಾಯಿಸಿತ್ತು, ಅವರ ಉಪಸ್ಥಿತಿಯು ಪಂದ್ಯದ ಜನಪ್ರಿಯತೆ ಹೆಚ್ಚಿಸುತ್ತದೆ ಎಂದು ಆಶಿಸಿತ್ತು. ಅಲ್-ನಾಸರ್ ತಂಡವು ಸೋಮವಾರ ತಡರಾತ್ರಿ ಗೋವಾಕ್ಕೆ ಆಗಮಿಸಲಿದ್ದು, ಟೂರ್ನಿಯ ಮೂರನೇ ಗುಂಪು ಹಂತದ ಪಂದ್ಯವನ್ನು ಆಡಲಿದೆ.

ವಿಟಾಕೀಸ್

ಯಾರಿಗೂ ಹೇಳ್ಬೇಡಿ ಅಂದ ಚೈತ್ರಾ

ಮೂರು ದಶಕಗಳ ಹಿಂದೆ ಯಾರಿಗೂ ಹೇಳ್ಬೇಡಿ ಸೂಪರ್ ಹಿಟ್ ಆಗಿತ್ತು. ಈಗ ಅದೇ ಶೀರ್ಷಿಕೆಯಲ್ಲಿ ಸಿನಿಮಾವೊಂದು ಸದ್ದಿಲ್ಲದೆ ತೆರೆಗೆ ಬರಲು ಸಿದ್ಧವಾಗಿದೆ. ಕಿಚ್ಚ ಸುದೀಪ್

ಈ ಸಿನಿಮಾದ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದ್ದಾರೆ. ಕಾಮಿಡಿ ಕಿಲಾಡಿಗಳು ಖ್ಯಾತಿಯ ಅಪ್ಪಣ್ಣ ಸ್ನೇಹಿತನಾಗಿ ಮುಖ್ಯ ಪಾತ್ರದಲ್ಲಿ ನಟಿಸಿದ್ದು, ಟೋಬಿ ಮತ್ತು ಸಪ್ತ ಸಾಗರದಾಚೆ ಎಲ್ಲೋ ಸಿನಿಮಾಗಳಲ್ಲಿ ಅಭಿನಯಿಸಿದ್ದ ಚೈತ್ರಾ, ಆಚಾರ್ ನಾಯಕಿ ಬಣ್ಣಹಚ್ಚಿದ್ದು, ಡಾಕ್ಟರ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಶ್ವಿನಿ ಪೊಲೆಪಲ್ಲಿ, ಶರತ್ ಲೋಹಿತಾಶ್ವ, ಶಭಾರೇಶ್, ಕಾರ್ತಿಕ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಇದೊಂದು ಸಂಪೂರ್ಣ ಹಾಸ್ಯಮಯ ಚಿತ್ರವಾಗಿದೆ ಆರಂಭದಿಂದ ಕೊನೆವರೆಗೂ ನಗಿಸುತ್ತಲೇ ಸಾಗುತ್ತದೆ. ನಾನಿಲ್ಲಿ ವಿಡಿಯೊ ಜಾಕಿಯಾಗಿ ಕಾಣಿಸಿಕೊಂಡಿದ್ದು, ಮದುವೆ ಮುಂಚಿನ ಒಂದು ಸಂದರ್ಭದಲ್ಲಿ ಸುಳ್ಳು ಹೇಳಿ ಕಷ್ಟಕ್ಕೆ ಸಿಲುಕುತ್ತೇನೆ. ಅದನ್ನು ಯಾರಿಗೂ ಹೇಳ್ಬೇಡಿ ಎಂದು ಸುಳ್ಳಿನ ಸರಮಾಲೆಯನ್ನೆ ಕಟ್ಟುತ್ತೇನೆ. ಕೊನೆಗೆ ಅದನ್ನು ಮುಚ್ಚಿಡಲು ಹೋದಾಗ ಏನೆಲ್ಲಾ ಅವಾಂತರಗಳು ಆಗುತ್ತದೆ. ಅದರಿಂದ ಹೇಗೆ ಹೊರಗೆ ಬರುತ್ತೇನೆ ಎಂಬುದು ಕಾಮಿಡಿ ಮೂಲಕ ಹೇಳಲಾಗಿದೆ ಎಂಬುದೇ ಸಿನಿಮಾದ ಸಾರಾಂಶ ಎನ್ನುತ್ತಾರೆ ನಿರ್ದೇಶಕರು. ಇದೇ ತಿಂಗಳು ಯಾರಿಗೂ ಹೇಳ್ಬೇಡಿ ಸಿನಿಮಾ ತೆರೆಗೆ ಬರಲಿದೆ. ಶಶಾಂಕ್ ಶೇಷಗಿರಿ ಸಂಗೀತ ನಿರ್ದೇಶನ, ಡೇವಿಡ್ ಆನಂದರಾಜ್ ಛಾಯಾಗ್ರಹಣ, ಶಿವರಾಜ್ ಸಂಭಾಷಣೆ ಕುಂಗುಪು ಚಂದ್ರು, ಸಾಹಸ, ಕವಿರಾಜ್, ಪ್ರಮೋದ್ ಮರವಂತೆ ಸಾಹಿತ್ಯ, ದೀಪಕ್ ಸಂಕಲನ ಈ ಚಿತ್ರಕ್ಕಿದೆ.

ನಟ ಚಂದನ್ ಫ್ಲರ್ಟ್ ಚಿತ್ರವನ್ನು ನಿರ್ದೇಶನ ಮಾಡುವ ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಎವರೆಸ್ಟ್ ಪಿಕ್ಚರ್ಸ್ ಮೂಲಕ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಎ ಪ್ಯೂರ್ ಡವ್ ಸ್ಟೋರಿ ಎಂಬ ಅಡಿಬರಹ ಫ್ಲರ್ಟ್ ಚಿತ್ರಕ್ಕಿದ್ದು, ನಿಮಿಕಾ ರತ್ನಾಕರ್, ನಾಯಕಿಯಾಗಿ ನಟಿಸಿದ್ದಾರೆ. ಈಗಾಗಲೇ ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ನೀ ನನ್ನ ಜೀವ... ಎಂಬ ಹಾಡು ಬಿಡುಗಡೆಯಾಗಿದೆ. ಚಂದನ್ ಹಾಗೂ ಕಿಚ್ಚ ಸುದೀಪ್ ದನಿಯಲ್ಲಿ ಈ ಹಾಡು ಮೂಡಿಬಂದಿದೆ.

ಸದ್ಯ ಈ ಸಿನಿಮಾದ ಟ್ರೇಲರ್ ರಿಲೀಸ್ ಆಗಿದ್ದು ಕಿಚ್ಚ ಸುದೀಪ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ

ಫ್ಲರ್ಟ್‌ಗೆ ಸಾಥ್ ನೀಡಿದ ಸುದೀಪ್

ಶುಭಕೋರಿದರು. ನಾನೂ ಸಹ ಮೊದಲ ಪ್ರಯತ್ನ ಮಾಡಿದಾಗ ಆತಂಕದಲ್ಲೇ ಇದ್ದೆ. ಚಂದನ್ ನಮ್ಮನೆ ಹುಡುಗ, ಆತ ಏನು ಮಾಡಿದರೂ ಇಷ್ಟವಾಗುತ್ತೆ. ಚಂದನ್ ಸಿನಿಮಾ ನಿರ್ದೇಶನ ಮಾಡುತ್ತಾನೆ ಅಂದಾಗ ತುಂಬಾ ಖುಷಿಯಾಯ್ತು. ಈಗಾಗಲೇ ನಾನು ಸಿನಿಮಾನ ನೋಡಿದ್ದೇನೆ. ತುಂಬಾ ಚೆನ್ನಾಗಿ ಮೂಡುಬಂದಿದೆ. ಸಿನಿಮಾದ ಕಥೆ ಚೆನ್ನಾಗಿದೆ, ಎಲ್ಲರಿಗೂ ಹಿಡಿಸಲಿದೆ ಎಂದು ಸುದೀಪ್ ಹೇಳಿದರು.



ಗಗನಾ ಸಾರಿದ ಸಂದೇಶ

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಡಿಡಿಡಿ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಬಿಡುಗಡೆಯಾಗಿವೆ. ಕೆ.ಬಿ.ಮಂಜುನಾಥ್ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಕೆಬಿಎಂ ಪ್ರೊಡಕ್ಷನ್ಸ್‌ನಲ್ಲಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಾಮಾನ್ಯ ಪ್ರಜೆಯಾದವನು ಧೈರ್ಯ ಮಾಡಬೇಕು, ಅಧಿಕಾರಿಗಳು ಧರ್ಮವನ್ನು ಕಾಪಾಡಬೇಕು. ಯೋಧನಾದವನು ದೇಶವನ್ನು ಕಾಪಾಡಬೇಕು. ಇವುಗಳು ಸಮಾಜದ ಮೂರು ಅಂಗಗಳಾಗಿವೆ. ಅದಕ್ಕಾಗಿ ಡಿಡಿಡಿ ಎಂದು ಶೀರ್ಷಿಕೆ ಇಡಲಾಗಿದೆ. ನಾವುಗಳು ಸಮಾಜವನ್ನು ಹೇಗೆ ನೋಡಿಕೊಳ್ಳಬೇಕು. ಅವಘಡಗಳು ಆದಾಗ ಅದನ್ನು ಯಾವ ರೀತಿ ಎದಿರಿಸಬೇಕು

ಎಂಬುದನ್ನು ಹೇಳಲಾಗಿದೆ. ಮಾನವೀಯತೆ, ಪ್ರೀತಿ, ಸಂಬಂಧಗಳ ಬೆಲೆ ಇನ್ನು ಮುಂತಾದವನ್ನು ಐದು ಹಾಡುಗಳಲ್ಲಿ ತೋರಿಸಲಾಗಿದೆ. ಇದು ಸಾರ್ವತ್ರಿಕ ವಿಷಯವಾಗಿರುವುದರಿಂದ ಐದು ಭಾಗಗಳಲ್ಲಿ ಮೂಡಿಬರಲಿದೆ. ಅದಕ್ಕೆ ತಕ್ಕಂತೆ ಚಿತ್ರಕಥೆ ಸಿದ್ಧಪಡಿಸಿದ್ದೇನೆ ಎಂದು ನಿರ್ದೇಶಕರು ತಿಳಿಸಿದರು.

ಅರುಣ್ ವೆಂಕಟರಾಜು ನಾಯಕನಾಗಿ ನಟಿಸಿದ್ದು, ಗಗನಾ ಮಲ್ನಾಡ್ ನಾಯಕಿ ಬಣ್ಣಹಚ್ಚಿದ್ದಾರೆ. ರಘು ಶಿವಮೊಗ್ಗ, ಚಾರ್ಲ್ಸ್ ಟೋನಿ, ಸುರೇಶ್ ಬಾಬು, ಡಿವಿ.ನಾಗರಾಜು, ಸುರೇಶ್‌ಬಾಬು, ರೋಹಿಣಿ ಮುಂತಾದವರು ಅಭಿನಯಿಸಿದ್ದಾರೆ. ಬಹದ್ದೂರ್ ಚೇತನ್ ಕುಮಾರ್, ಗಜೇಂದ್ರ, ಸಂಜಯ್ ಮತ್ತು ಲಕ್ಷ್ಮಿದಿನೇಶ್ ಸಾಹಿತ್ಯದ ಐದು ಗೀತೆಗಳಿಗೆ ಸೂರಜ್ ಜೋಯಿಸ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಎಸ್.ಕೆ.ಮಸ್ತಾನ್ ಷರೀಫ್, ಸಂಕಲನ ಧನುಷ್.ಎಲ್.ಬೇಡಿ ಅವರದಾಗಿದೆ. ಬೆಂಗಳೂರು, ಮಂಗಳೂರು, ಕೊಳ್ಳೆಗಾಲ ಗಡಿಭಾಗದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಸಚಿತ್ ಫಿಲಿಂಸ್‌ನ ನವೆಂಬರ್‌ನಲ್ಲಿ ಸಿನಿಮಾ ತೆರೆಗೆ ಬರಲಿದೆ.

ಸೆಟ್ಟೇರಿದ ರೂಬಿ

ವಸಿಷ್ಠ ಸಿಂಹ ನಾಯಕರಾಗಿ ನಟಿಸಿದ್ದ ಲವ್ ಲಿ ಚಿತ್ರ ನಿರ್ದೇಶಿಸಿದ್ದ ಚೇತನ್ ಕೇಶವ್ ನಿರ್ದೇಶನದ ಎರಡನೇ ಸಿನಿಮಾದ ಶೀರ್ಷಿಕೆ ಬೆಳಕಿನ ಹಬ್ಬ ದೀಪಾವಳಿಯ ಶುಭದಿನದಂದೇ ಅನಾವರಣವಾಗಿದೆ. ಆಶ್ರಯ ಕ್ರಿಯೇಷನ್ಸ್ ಲಾಂಛನದಲ್ಲಿ ಡಾ.ಶಿವೇಗೌಡ ಸಿ.ವೈ ಹಾಗೂ ಚಿಂಗಾರಿ ಬಿ.ಮಹದೇವ್ ನಿರ್ಮಿಸುತ್ತಿರುವ ಈ ಚಿತ್ರದ ಪೋಸ್ಟರ್ ರಿಲೀಸ್ ಆಗಿದೆ. ಐ ಎಮ್ ರೂಬಿ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ನಿರ್ದೇಶಕ ಚೇತನ್ ಕೇಶವ ಅವರೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶಿಸುತ್ತಿದ್ದಾರೆ. ರಂಗಾಯಣದಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸಿರುವ ಆಕಾಶ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಕಿರುತೆರೆಯ ಹಲವು ಧಾರಾವಾಹಿಗಳಲ್ಲಿ ಅಭಿನಯಿಸಿರುವ ಭೂಮಿಕಾ

ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ರಂಗಾಯಣದ ಹಲವು ರಣಗಭೂಮಿ ಪ್ರತಿಭೆಗಳು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅನೂಪ್ ಸೀಳಿನ್ ಸಂಗೀತ ಸಂಯೋಜಿಸಿದ್ದಾರೆ. ಅಶ್ವಿನ್ ಕೆನಡಿ ಛಾಯಾಗ್ರಹಣ, ಮಹೇಶ್ ತೊಗಟ ಸಂಕಲನ, ಪ್ರತಾಪ್ ಕಲಾ ನಿರ್ದೇಶನ, ಡಾ.ಕೆ.ರವಿವರ್ಮ, ದಿಲೀಪ್.ಎಂ.ರಾಜ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಡಿಸೆಂಬರ್‌ನಲ್ಲಿ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ.

ವೀರ್ ಟೀಸರ್ ರಿಲೀಸ್

ಕನ್ನಡದ ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ನಟಿಸಿ ಜೆಕೆ ಎಂದೇ ಖ್ಯಾತಿ ಪಡೆದಿರುವ ಕಾರ್ತಿಕ್ ಜಯರಾಮ್ ಅಭಿನಯದ ದಿ ವೀರ್ ಸಿನಿಮಾದ ಟೀಸರ್ ರಿಲೀಸ್ ಆಗಿದೆ. ಈ ಟೀಸರ್‌ನ ಝಲಕ್ ಕುತೂಹಲ ಹೆಚ್ಚಿಸಿದೆ. ದಿ ವೀರ್ ಟೀಸರ್ ಭರ್ಜರಿ ಆ್ಯಕ್ಷನ್‌ನಿಂದ ಗಮನಸೆಳೆಯುತ್ತಿದೆ. ನಿರ್ದೇಶಕರು ಎಲ್ಲಿಯೂ ಕಥೆಯ ಗುಟ್ಟು ಬಿಟ್ಟು ಕೊಡದೇ ಟೀಸರ್ ಕಟ್ ಮಾಡಿದ್ದಾರೆ. ಜೆಕೆ ನಾಯಕನಾಗಿ ನಟಿಸಿದ್ದು, ಸಿಕ್ಸ್ ಪ್ಯಾಕ್ಸ್ ಅವತಾರದಲ್ಲಿ ಸಖತ್ ಖದರ್ ತೋರಿಸಿದ್ದಾರೆ.

ಆರ್.ಲೋಹಿತ್ ನಾಯಕ್, ದಿ ವೀರ್ ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಹಿಂದೆ ಜೆಕೆ ನಟಿಸಿದ್ದ ಐರಾವನ್ ಸಿನಿಮಾದಲ್ಲಿಯೂ ಲೋಹಿತ್ ಕಾರ್ಯನಿರ್ವಹಿಸಿದ್ದರು. ಈ ದಿ ವೀರ್ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಚಿತ್ರದಲ್ಲಿ ಪ್ರಣತಿ ನಾಯಕಿಯಾಗಿ ಬಣ್ಣಹಚ್ಚಿದ್ದು, ರೋಚಿತ್ ಖಳನಾಗಿ ಅಭಿಬಯಿಸಿದ್ದಾರೆ. ಮಂಜು ಪಾವಗಡ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ದಿ ವೀರ್ ಸಿನಿಮಾದ ಹಾಡುಗಳಿಗೆ ಎಂ.ಬಿ.ಧ್ರುವ ಸಂಗೀತ ಸಂಯೋಜಿಸಿದ್ದಾರೆ. ದೇವೇಂದ್ರ ಛಾಯಾಗ್ರಹಣ, ಆರ್ಯನ್ ಗೌಡ ಸಂಕಲನ, ಶಂಕರ್ ರಾಮನ್ ಹಾಗೂ ನಾಗಾರ್ಜುನ್ ಪ್ರಕಾಶ್ ಸಂಭಾಷಣೆ ಈ ಚಿತ್ರಕ್ಕಿದೆ. ಜಯಶ್ರೀನಿವಾಸನ್, ಜಯಶ್ರೀನಿವಾಸನ್ ಮತ್ತು ವಿಶಾಲ್ ತೇಜ್ ದಿ ವೀರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.